ಓಂ

॥ ಶ್ರೀ ಸಿದ್ಧಲಿಂಗಾಯನಮಃ ॥

ನಿರಂಜನ ದರ್ಪಣ

ಮತ್ತು

ಎಡೆಯೂರ ಸ್ಥಳ ಪುರಾಣ

ಸಂಗ್ರಾಹಕರು :

M. P. ನಂಜಪ್ಪಯ್ಯ.

ಪ್ರಕಾಶಕರು :

ಸೆಟ್ಟಿಹಳ್ಳಿ ಸಾ॥ S. V. ಮರುಳಪ್ಪಯ್ಯ,

ಕಲ್ಲುಸಾದರಹಳ್ಳಿ ಪೋಸ್ಟು, ಅರಸೀಕೆರೆ ಮಾರ್ಗ.

ಬೆಲೆ ಎರಡು ರೂಪಾಯಿಗಳು.

॥ ಶ್ರೀ ಸಿದ್ಧಲಿಂಗಾಯನಮಃ ॥

ನಿರಂಜನ ದರ್ಪಣ

ಮತ್ತು

ಎಡೆಯೂರ ಸ್ಥಳ ಪುರಾಣ

ಸಂಗ್ರಾಹಕರು:

N. M. P. ನಂಜಪ್ಪಯ್ಯ

ಪ್ರಕಾಶಕರು:

ಸೆಟ್ಟಿಹಳ್ಳಿ ಸ್ತಾ॥ S. V. ಮರುಳಪ್ಪಯ್ಯ,

ಕಲ್ಲುಸಾದರಹಳ್ಳಿ ಪೋಸ್ಟು, ಅರಸೀಕೆರೆ ಮಾರ್ಗ.

ಬೆಲೆ ಎರಡು ರೂಪಾಯಿಗಳು.

ಮುನ್ನುಡಿ

ನಿರಂಜನ ವಂಶ ದರ್ಪಣವು

ವಿನಂತಿಗಳು

ಇದನ್ನು ಸರ್ಕಾರದವರು ಟೆಂಪಲ್ ಆಕ್ಟಿಗೆ ಲಗಾವ್ ಮಾಡಿದ್ದು ಅದರಂತೆ ಆಚರಣೆಗೆ ತಂದು ಆ ಕಾನೂನು ಪ್ರಕಾರ ವ್ಯವಹಾರ ನಡೆಸುತ್ತಾ ಅನಂತ ಕಿರುಕುಳ ಕೊಡುತ್ತಿರುವುದರಿಂದ, ಈ ಸ್ಥಳವೆಂತಾದ್ದು, ಇದರ ಪರಂಪರೆಯೇನು, ಇದರ ಮಹತ್ವವೆಂತಾದ್ದು. ಇವರು ಧರ್ಮೋದ್ಧಾರಕ್ಕಾಗಿ ಅವತಾರವೆತ್ತಿ ಇಡೀ ಭಾರತದಲ್ಲಿ ಪಾದಚಾರಿಗಳಾಗಿ ಅನೇಕ ವಿರಕ್ತರೊಡನೆ ಸಂಚಾರ ಮಾಡಿ ಮಹತಿಗಳನ್ನು ತೋರಿಸಿ, ಎಲ್ಲಾ ಕಡೆಯಲ್ಲೂ ಅದರ ಗಣಾಧೀಶರನ್ನು ಧರ್ಮೋದ್ಧಾರಕ್ಕಾಗಿ ಸ್ಥಾಪಿಸಿ ಎಡಿಯೂರಿಗೆ ಬಂದು ಶಿಲಾ ಲೇಖ ಹಾಕಿಸಿ ತಮ್ಮ ಉತ್ತರಾಧಿಕಾರವನ್ನು ಕೊಟ್ಟು ನಿರ್ವಿಕಲ್ಪ ಸಮಾಧಿಸ್ಥ ರಾದದ್ದು ಅಲ್ಲಿಂದ ಮೂಲ ಗದ್ದುಗೆಯ ಆಚರಣೆ ಅಪ್ರಾಕೃತ ವೀರಶೈವ ಅಷ್ಟಾ ವರಣ ಪಂಚಾಚಾರ ಷಟ್‌ಸ್ಥಲಯುಕ್ತವಾದ ಯಾವ ಪ್ರಕಾರ ಸೇವೆ ನಡೆದು ಮುಂದುವರಿದಿದೆ. ಈ ಸ್ಥಳದಲ್ಲಿ ಬಹುದಿನಗಳಿಂದ ಯಾವ ಯಾವ ಕುಂದು ಕೊರತೆಗಳು ಬಂದು, ಈ ಸ್ಥಾನ ಯಾವ ಸ್ಥಿತಿಗೆ ಬಂದಿದೆ ಎಂಬುದನ್ನೆಲ್ಲಾ ಸಮಗ್ರವಾಗಿ ಈ ಮುಂದೆ ಉದಹರಿಸುವ ಶಾಸ್ತ್ರಾಧಾರಗಳಿಂದ ಕ್ರೋಢೀಕರಿಸಿ ಹೈಕೋರ್ಟಿಗೆ ಹಾಕಿರುವ 8—10—64ರ 1831ನೇ ರಿಟ್ಟಿಗಾಗಿ ವಿಷದ ಪಡಿಸಬೇಕಾಗಿರುವುದರಿಂದ ಧರ್ಮಾಭಿಮಾನಿಗಳಾದ ಸಮಾಜ ಬಾಂಧವರು ಶಿವಯೋಗ ಪುಂಗದವರು ಶ್ರಮಹಿಸಿ ಪರಾಂಬರಿಸಿ, ತಮ್ಮ ತಮ್ಮ ಸದಭಿ ಪ್ರಾಯುವನ್ನು ಕೊಡಿಸಬೇಕೆಂದು ವಿನಂತಿಗಳು. ಇದನ್ನು ಸಾರ್ವಜನಿಕರ ಅನುಭವಕ್ಕೂ ಬಿಡಲಾಗಿದೆ.

ಇದಕ್ಕೆ ಉಪಯೋಗಿಸಿರುವ ದಾಖಲಾತಿಗಳು :—

1. ಸಿದ್ಧೇಶ್ವರ ಪುರಾಣ.
2. ಸಿದ್ಧೇಶ್ವರ ವಚನ.
3. ತಾಡವಾಲೆಯ ಸಾಂಗತ್ಯ
4. ಚನ್ನಬಸವ ಪುರಾಣ.
5. ಶತವತ್ರಯ
6. ಸದಾಚಾರ ಸಂಗ್ರಹ.
7, ಶೂನ್ಯ ಸಂಪಾದನೆ.
8. ಬಸವತತ್ವ ರತ್ನಾಕರ.
9. ವೀರಶೈವಾನಂದ ಚಂದ್ರಿಕೆ, ವಾದಕಾಂಡ,
10. ನಿರಂಜನ ವಂಶ ರತ್ನಾಕರ
11. ಕವಿಚರಿತೆ.
12. ವೀರಶೈವಾಮೃತ ಮಹಾಪುರಾಣ.
13. ಸಿದ್ಧಾಂತ ಶಿಖಾಮಣಿ.
14. ಮಠದಲ್ಲಿರುವ ಶಿಲಾಲೇಖ.
15. ಮಹಾರಾಜರ 1818 ಮತ್ತು 1823 ಸನ್ನದುಗಳು.
16. ಇತರ ಒರಿಜನಲ್ ರಿಕಾರ್ಡುಗಳು.

ಇದರ ಮುದ್ರಣ ಕಾರ್ಯವು ಆರ್ಥಿಕ ತೊಂದರೆಗಳಿಂದ ವಿಘ್ನ ಬಂದು ಮುಂದುವರಿಸಲಿಕ್ಕೆ ಅವಕಾಶ ತಪ್ಪಿದ ವಿಶಯವನ್ನು ಅರಿಕೆ ಮಾಡಲಾಗಿ ಅರಸೀಕೆರೆ ತಾಲ್ಲೂಕ್, ಹಾರನಹಳ್ಳಿ ಕೋಡೀಮಠದ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಶ್ರೀ ಶ್ರೀ ನೀಲಲೋಚನ ಶಿವಯೋಗಿಗಳು ಒಂದು ನೂರು ರೂಪಾಯಿಗಳನ್ನೂ, ಮತ್ತು, ಕಡೂರ್ ತಾಲ್ಲೂಕ್ ಶೆಟ್ಟಿಹಳ್ಳಿ

ನಿಜಸ್ವರೂಪದಿ ಬಂದ ಆತ್ಮರುಗಳ ಕಾಲಕಾಮರಿಗೆ ವಶವ ಮಾಡಿ, ಅವರ ಸುಖ ದುಃಖ ಮೋಕ್ಷಂಗಳ ಹೊದ್ದದೆ ಯಂತ್ರವಾಹಕನಾಗಿ ಆಡಿಸುತ್ತಿರ್ಪನಾ ಪರಶಿವಲಿಂಗವು. ಅಂತಪ್ಪ ಆತ್ಮರುಗಳೊಳಗೆ ಜನ್ಮದ ಕಡೆಗಂಡು, ಶಿವ ಸಂಸ್ಕಾರವೊದಗಿ ದೇಹಭಾವಕ್ಕೆ ಹೇಸಿ, ಸಂಸಾರವಿಮೋಚನಮಂ ಮಾಡಿ ಗುರೂಪಾಸ್ತಿಯಂ ಮಾಡುತ್ತಿರಲು, ಆ ಪರಶಿವಲಿಂಗದಿ ಗುರುವಾಗಿ ಬಂದು ತ್ರಿವಿಧದೀಕ್ಷೆಯಿಂದ ಮಲತ್ರಯಂಗಳ ಕಳೆದು ದೀಕ್ಷಿಸಿ ರಕ್ಷಿಸಿದ; ಲಿಂಗ ಸ್ವರೂಪವಾಗಿ ಬಂದು ಕರಸ್ಥಲವಲ್ಲಿ ಪೂಜೆಗೊಂಡು ರಕ್ಷಿಸಿದ. ಜಂಗಮ ಸ್ವರೂಪವಾಗಿ ಬಂದು ಅಂತರಂಗ ಬಹಿರಂಗದಲ್ಲಿ ಭರಿತನಾಗಿ ಬೋಧಿಸಿ ಶಿಕ್ಷಿಸಿ ರಕ್ಷಿಸಿದ. ಪ್ರಸಾದವ ಕರುಣಿಸಿ ತನ್ನೊಡನೆ ಕೂಡಿಕೊಳುತಿರ್ಪನು. ಆ ನಿಃಕಲ ಪರಶಿವಲಿಂಗವು. ಆ ನಿಃಕಲ ಪರಶಿವನ ಸಚ್ಚಿದಾನಂದ ಸ್ವರೂಪವೆನಿಸಿದ ಬಸವಣ್ಣ ಚನ್ನಬಸವಣ್ಣ ಪ್ರಭುದೇವರೇ ಗುರುಲಿಂಗ ಜಂಗಮ ಸ್ವರೂಪವಾಗಿ ಸಕಲ ಜಗತ್ ಪಾವನವಾಗಿ ಮರ್ತ್ಯಕ್ಕೆ ಅವತರಿಸಿದರು. ಇಂತೀ ಗುರುಲಿಂಗ ಜಂಗಮ ಮೂರುತಿ. ಆ ನಿಃಕಲ ಪರಶಿವಲಿಂಗ ತಾನೇ. ಆ ಪರಶಿವಲಿಂಗವು ಜಗಹಿತಾರ್ಥವಾಗಿ ಮೂಜಾಗಿ ಮರ್ತ್ಯಕ್ಕೆ ಅವತರಿಸಿದರೆ ಇದೇನು ಕಾರಣ ಮರ್ತ್ಯಕ್ಕೆ ಬಂದಿರೆಂದು ಸಂಕಲ್ಪಿಸಿ, ಶಾಪದಿಂದ ಬಂದರೆಂದು ಅವನಾನೊಬ್ಬ ನುಡಿವುತಿದ್ದಾನು. ಅವನು ಇಪ್ಪತ್ತೆಂಟು ಕೋಟಿ ನರಕವಲ್ಲಿ ರವಿಶಶಿವುಳ್ಳನ್ನ ಬರ ನರಕವನನುಭವಿಸುತಿರ್ಪನು. ಅಂತಲ್ಲದೆ ಜಗಹಿತಾರ್ಥವಾಗಿ ನಾಲ್ಕು ಯುಗಂಗಳಲ್ಲಿ ಅವತರಿಸಿದರೆಂಬುದಕ್ಕೆ ಪ್ರಭುದೇವರ ಚನ್ನಬಸವೇಶ್ವರ ದೇವ ಸ್ವಯಂ ವಚನವೇ ಸಾಕ್ಷಿ ಅದೆಂತೆಂತೊಡೆ.

ಕೃತಯುಗದಲ್ಲಿ ಜಗಹಿತಾರ್ಥವಾಗಿ ಬಂದು ದೇವಾಂಗನೆಂಬ ಗಣೇಶ್ವ ನಾಗಿ ಆರಾಧಿಸುವಲ್ಲಿ, ಭಕ್ತಿಕಾರಣ ಸ್ಥೂಲಕಾಯನೆಂಬ ಜಂಗಮವಾಗಿ ಬಂದ ಲಿಂಗಾರ್ಚನೆಯಮಾಡಿ ಹೋದನು. ತ್ರೇತಾಯುಗದಲ್ಲಿ ಜಗಹಿತಾರ್ಥವಾ ಘಂಟಾಕರ್ಣನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ. ಭಕ್ತಿಕಾರ ಶೂನ್ಯಕಾಮನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು ದ್ವಾಪರಯುಗದಲ್ಲಿ ಜಗಹಿತಾರ್ಥವಾಗಿ ವೃಷಭನೆಂಬ ಗಣೇಶ್ವರನಾಗಿ ಬಂದ ಆರಾಧಿಸುವಲ್ಲಿ, ಭಕ್ತಿಕಾರಣ ಅನುಮಿಷನೆಂಬ ಜಂಗಮನಾಗಿ ಬಂದು ಲಿಂಗ ರ್ಚನೆಯ ಮಾಡಿಹೋದನು. ಕಲಿಯುಗದಲ್ಲಿ ಜಗಹಿತಾರ್ಥವಾಗಿ ಬಸ

ನೆಂಬ ಗಣೇಶ್ವರನಾಗಿ ಬಂದು ಗುರು, ಲಿಂಗ, ಜಂಗಮ ಪಾದೋದಕ ಪ್ರಸಾದದ ಹಾದಿಯನೆಲ್ಲರಿಗೆ ತೋರಿ ಆರಾಧಿಸುವಲ್ಲಿ, ಭಕ್ತಿಕಾರಣ ಪ್ರಭುವೆಂಬ ಜಂಗಮ ನಾಗಿ ಲಿಂಗಾರ್ಚನೆಯಮಾಡಿ ಬಂದ ಇಂತಿ ಪರಶಿವಲಿಂಗವು ತನ್ನ ಲೀಲಾ ವಿನೋದಕ್ಕೆ ದೇವಭಕ್ತನೆಂಬ ಉಭಯನಾಮ ಧರಿಸಿದ ಕ್ರಿಯಾಂಗವನರಿ ಯದೆ ಪಾಪದಿಂದ ಬಂದರೆಂದು ಸಂಕಲ್ಪಿಸಿ ನುಡಿವವರಿಗೆ ನಾಯಕ ನರಕ ತಪ್ಪದು. [ಶೂ. ಸಂ. ಪು. ೨.೩]

ಶ್ರೀಮನ್ನೃಪ ಶಾಲಿವಾಹನ ಶಕ ವರುಷ ಏಳುನೂರ ಏಳನೆಯ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ೧೧ ಮಂಗಳವಾರ ಉದಯ ೨೫ ಗಳಿಗೆ ವೇಳೆ ಯಲ್ಲಿ ಶ್ರೀ ಬಸವರಾಜೇಂದ್ರರು ಕಲ್ಯಾಣಪುರವಂ ಬಿಟ್ಟು ಕೃಷ್ಣಾಮಲಾಪ ಹಾರಿ ಈ ಎರಡು ನದಿಗಳು ಸಂಗಮವಾದ ಕಪ್ಪಡಿ ಸಂಗಮಕ್ಷೇತ್ರದಲ್ಲಿ ಶ್ರೀ ಸಂಗಮೇಶ್ವರ ಲಿಂಗದಲ್ಲಿ ನಿರಂಜನ ಜಂಗಮಮುಖದಿಂದ ಐಕ್ಯರಾದರು.

ಈ ಶ್ರೀ ಬಸವೇಶ್ವರನ ಭಕ್ತಿಗೋಸ್ಕರವಾಗಿ ಶ್ರೀಮನ್ಮಹಾಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು ಸೊನ್ನಲಿಗೆಯಿಂದ ಸಿದ್ಧರಾಮೇಶ್ವರ ದೇವರು ಸಮೇತವಾಗಿ ಶ್ರೀಮತ್ ಕಲ್ಯಾಣ ನಗರಕ್ಕೆ ಚಿತ್ತೈಸಿ ಅಲ್ಲಿರ್ದ ಬಸವೇಶ್ವರ ಮುಂತಾದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ ಗುರುಗಳಾಗಿ ಸಕಲ ಪ್ರಥಮರಿಂದ ಪೂಜೆಯನ್ನು ಕೈಗೊಂಡು ಶೂನ್ಯ ಸಿಂಹಾಸನವನ್ನು ಏರಿ ಆಮೇಲೆ ಸವಾಲಕ್ಷ ಪರ್ವತದಲ್ಲಿ ಇದ್ದ ಮುನಿಗಳಿಗೆ ಮೋಕ್ಷಮಾರ್ಗವನ್ನು ಇತ್ತು ಆ ಬಳಿಕ ಕಂಚಿ, ಕಾಳಹಸ್ತಿ, ಪೊನ್ನಾಂಬಲ ಮುಂತಾದ ಸಕಲ ಕ್ಷೇತ್ರಗಳ ನೋಡುವ 12. ವರುಷ ದೇಶಾಟನವನ್ನು ಗೈದು ಅನಂತರ ಕಲ್ಯಾಣಪುರದಲ್ಲಿ ಇರ್ದ ಶ್ರೀ ಬಸ ವೇಶ್ವರ ಮುಂತಾದ ಸಕಲ ಪ್ರಥಮರಿಗೆ ನಿಜಲಿಂಗೈಕ್ಯಭಾವವನ್ನು ತೋರಿ ಶ್ರೀಶೈಲ ಪರ್ವತದ ಕದಳಿ ಬನದಲ್ಲಿ ನಿರ್ವಯವಾದರು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಅಲ್ಲಮಪ್ರಭು ಶ್ರೀ ಚನ್ನಬಸವ ರಾಜೇಂದ್ರರ ಬಳಿವಿಡಿದು ಬಂದ ಗುರುಪರಂಪರೆಯಾದ ಶಿವಾನುಭಾವ ಚರಂತಿಗೆ ಪಟ್ಟರಾಗುತ ಬಂದ ಗುರುಗಳ ವಿವರ :—

ಮೂರುಸಾವಿರ ವಿರಕ್ತರಿಗೂ ಏಳುನೂರು ಚರಮೂರ್ತಿಗಳಿಗೂ ಮೇಲೆ ಹೇಳಿದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಅಲ್ಲಮಪ್ರಭು ಚನ್ನಬಸವ

ರಾಜೇಂದ್ರರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಕಾರಣಕರ್ತರಾದ ಶ್ರೀ ಸೊನ್ನಲಾಪುರದ ಸಿದ್ಧರಾಮೇಶ್ವರ ಸ್ವಾಮಿಗಳವರ ತರುವಾಗದಲ್ಲಿ ದಕ್ಷಿಣ ದಿಗ್ಭಾಗ ಕರ್ನಾಟಕ ದೇಶ ಮೈಸೂರು ರಾಜಧಾನಿಗೆ ಸೇರುಸಟ್ಟ ಕಾವೇರಿ ತೀರದ ಪ್ರಾಂತದಲ್ಲಿ ಇರುವ ಐವಳ್ಳಿ ಮಠಾಧೀಶ್ವರನಾದ ಪಂಚಮ ಗಣನಾಥನ ವಂಶಜರಾದ ವಾಣಿಜರೆಂಬ ಹರದರಿಂದ ನಿರ್ಮಿತವಾದ ವಾಣಿಜ್ಯಪುರವೆಂಬ ಹರವನಹಳ್ಳಿ ದೇವಭಕ್ತರ ಭಕ್ತಿಯಲ್ಲಿ ಇರ್ದ ವಾಣಿಜ್ಯಪುರ ಶೂನ್ಯಸಿಂಹಾಸನಕ್ಕೆ ಕಾರಣಕರ್ತೃಗಳಾದ ಶಿವಾನುಭಾವ ಚರಂತಿಗೆ ಪಟ್ಟದ ಅನಾದಿ ಗಣನಾಥ, ಇವರಿಂದ ಆದಿಗಣವರ, ಇವರಿಂದ ನಿರ್ಮಾಯ ಗಣನಾಥ, ಇವರ ಶಿಷ್ಯ ನಿರಂಜನ ಸ್ವಾಮಿಗಳು, ಇವರಿಂದ ಜ್ಞಾನಾನಂದರೆಂಬ ಚರಮೂರ್ತಿಗಳು, ಇವರ ತರುವಾಯ ಆತ್ಮಗಣವರರು. ಇವರಿಂದ ಅಧ್ಯಾತ್ಮರೆಂಬ ಸ್ವಾಮಿಗಳು, ಇವರಿಂದ ರುದ್ರಮುನಿ ಸ್ವಾಮಿಗಳು, ಇವರ ತರುವಾಯ ಬಸವಪ್ರಭು ಸ್ವಾಮಿಗಳು, ಇವರಿಂದ ಆದಿಲಿಂಗಸ್ವಾಮಿಗಳು, ಇವರ ತಶ್ಚಾತ್ ಚನ್ನವೀರ ರಾಜೇಂದ್ರರು, ಇವರಿಂದ ಗೋಸಾಲ ಯತೀಶ್ವರ ಸ್ವಾಮಿಗಳು, ಇವರಿಂದ ಶಂಕರಾಚಾರ್ಯ ಸ್ವಾಮಿಗಳು, ಇವರ ತರುವಾಯ ದಿವ್ಯಲಿಂಗ ಸ್ವಾಮಿಗಳು. ಇವರ ಶಿಷ್ಯರು ಗೋಸಾಲಿ ಶ್ರೀ ಚನ್ನಬಸವರಾಜೇಂದ್ರರು, ಇವರ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಕರ್ತೃಗಳಾದ ಶ್ರೀ ತೋಂಟದ ಸಿದ್ಧಲಿಂಗ ದೇಶಿಕೇಂದ್ರರು, ಇವರಿಂದ ನಿರಕ್ಷರ ಬೋಳು ಬಸವೇಶ್ವರ ಸ್ವಾಮಿಗಳು, ಇವರಿಂದ ಗುಮ್ಮಳಾಪುರದ ಗಡ್ಡದ ಸಿದ್ಧವೀರಣ್ಣಸ್ವಾಮಿಗಳು, ಇವರ ತರುವಾಯ ಗೂಳೂರ ಗುರುಸಿದ್ಧರಾಜೇಂದ್ರರು, ಇವರಿಂದ ಗಗನದಾರ್ಯ ಸ್ವಾಮಿಗಳು. ಇವರ ಶಿಷ್ಯರು ಶ್ರೀ ಕಟ್ಟಿಗಿಹಳ್ಳಿ ಸಿದ್ಧವೀರ ಸ್ವಾಮಿಗಳು ಇವರು.

(ನಿರಂಜನ ವಂಶರತ್ನಾಕರ ೨ನೆಯ ಭಾಗ ಪುಟ ೧ ರಿಂದ ೨)

ಶ್ರೀ ಬಸವಣ್ಣನವರ ಅನಂತ ಕೃತಿಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಅವರು ಮಾಡಿರುವ ಉಪಕಾರವು ಅಪಾರವಾದುದಾಗಿದೆ. ಈ ವಿಷಯವನ್ನು ಕನ್ನಡ ನಾಡಿನ ಪಂಡಿತರೆಲ್ಲರೂ ಮುಕ್ತಕಂಠದಿಂದ ಬಸವಣ್ಣನವರನ್ನು ಪ್ರಶಂಸಿಸುತ್ತಿರುವರು. ಕನ್ನಡ ಕುಲಪುರೋಹಿತರಾದ ಶ್ರೀಮಾನ್ ಆಲೂರು ವೆಂಕಟರಾಯರು, ಬಿ.ಎ., ಎಲ್ ಎಲ್.ಬಿ., ಇವರು ತಮ್ಮ 'ಕರ್ಣಾಟಕ ವೈಭವ'ದಲ್ಲಿ ಶ್ರೀ ಬಸವಣ್ಣನವರು ಕನ್ನಡ ವಾಙ್ಮಯದ ಉದ್ಧಾರಕರಲ್ಲ, ಭಾಷಾಜನ

ರೆಂಬ ಸ್ಪಷ್ಟವಾಗಿ ಬರೆದಿರುವವರಲ್ಲಿ ಅತಿಶಯೋಕ್ತಿಯೇನೂ ಇರುವದಿಲ್ಲ. ಅತ್ಯಂತ ನಿಜವಾದ ಮಾತಾಗಿರುತ್ತದೆ. ಶ್ರೀ ಬಸವಣ್ಣನವರು ಕನ್ನಡ ಸಾಹಿತ್ಯ ಪುರುಷರಾಗಬೇಕೆಂಬುವ ಉದ್ದೇಶದಿಂದ ಈ ಕಾರ್ಯವನ್ನು ಕೈಗೊಂಡವರಲ್ಲ. ಅವರ ಮುಖ್ಯ ಉದ್ದೇಶವು ಮಾತೃಭಾಷೆಯಲ್ಲೇ ಸಾಮಾನ್ಯ ಜನಗಳಿಗೂ ಕೂಡ ಧರ್ಮದ ಬೋಧೆಯಾಗಬೇಕೆಂಬುವುದು ಅವರ ಮಹತ್ತರವಾದ ಉದ್ದೇಶ ವಾಗಿದ್ದಿತು. "ಏಕಕೃತ ಫಲದ್ವಯನ್ಯಾಯ"ದಂತೆ ಈ ಕಾರ್ಯವು ಅವರಿಗೆ ಸಾಧಿಸಿತೆಂದು ಹೇಳಬಹುದು. ಅಂದರೆ ಒಂದೇಟಿಗೆ ಎರಡು ಫಲ- ಇದರಿಂದ ಕನ್ನಡ ಸಾಹಿತ್ಯದ ಪ್ರಚಂಡತರವಾದ ಬೆಳವಣಿಗೆಯೂ ಆಯಿತು. ಅವರ ಧರ್ಮಪ್ರಚಾರವಂತಹ ಶ್ರೇಷ್ಠ ಕಾರ್ಯವೂ ಇದರಿಂದ ಸಾಧಿಸಿದಂತಾಗಿ ಏಕಕಾಲದಲ್ಲಿ ಎರಡು ಕಾರ್ಯಗಳಾದಂತಾದವು.

ವಚನ ವಾಙ್ಮಯವಂತಹ ಒಂದು ದೊಡ್ಡ ವಾಙ್ಮಯವನ್ನು ರಚಿಸಿದರು. ಆದ್ದರಿಂದ ಆ ವಾಙ್ಮಯಕ್ಕೆ ಬಸವಣ್ಣನವರೇ ಮೂಲಪುರುಷರು ಅಥವಾ ವಚನ ವಾಙ್ಮಯಾಚಾರ್ಯರಾದ ಬಸವಣ್ಣನವರಿಗಿಂತ ಮೊದಲು ಕೆಲವರು ವಚನಗಳನ್ನು ಬರೆದರೂ ಬಸವಣ್ಣನವರೇ ಅವರ ಮೂಲಕ್ಕೆ ಕಾರಣಪುರುಷ ರಾದರು. ರಘುರಾಜನಿಗಿಂತ ಪೂರ್ವದಲ್ಲಿ ಅವನ ತಂದೆ ದಿಲೀಪನೂ, ದಿಲೀಪನ ತಂದೆ ಇಕ್ಷ್ವಾಕು, ಮನೂ ಮೊದಲಾದವರಿದ್ದರೂ ರಘುವಂಶವೆಂದೇ ಹೆಸರಾ ಯಿತು. ಇದಕ್ಕೆ ಕಾರಣವಿಷ್ಟೇ ಇರುವದು ರಘು ಪ್ರಬಲನಾದ ರಾಜ ನಾದನು. ದಿಲೀಪನು ವಸಿಷ್ಠನ ನಂದಿನಿಯ ಸೇವೆಮಾಡಿ ಪುತ್ರನನ್ನು ಪಡೆದು ಕೊಂಡನು. ಆ ಕಾಲಕ್ಕೆ ದಿಲೀಪನು ವಸಿಷ್ಠನನ್ನು ಕುರಿತು—

ಶ್ರೀ ಭಗವಾನ್ ಬುದ್ಧದೇವರು ತಮ್ಮ ಧರ್ಮಪ್ರಚಾರ ಮಾಡಲಿಕ್ಕೆ ತಮ್ಮ ಮಾತೃಭಾಷೆಯಾದ ಪಾಲಿಯ ಭಾಷೆಯಲ್ಲಿಯೇ ಧರ್ಮಗ್ರಂಥಗಳನ್ನು ಬರೆದು ಉಳಿದವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಅವರ ತರುವಾಯ ಬಸವಣ್ಣನವರೇ ತಮ್ಮ ಮಾತೃಭಾಷೆಯಲ್ಲಿ ಧಾರ್ಮಿಕ ಗ್ರಂಥಗಳನ್ನು ಬರೆದವ ರಾಗಿರುತ್ತಾರೆ. ಸಂಸ್ಕೃತದಲ್ಲಿ ಬರೆದ ಗ್ರಂಥಗಳೇ ಸಾಮಾನ್ಯವಾದುವುಗಳೆಂದೂ, ಉಳಿದ ಭಾಷೆಯಲ್ಲಿ ಬರೆದವುಗಳಿಗೆ ಆ ಕಾಲದಲ್ಲಿ ಜನಗಳು ಮಹತ್ವವನ್ನು ಕೊಡುತ್ತಿರಲಿಲ್ಲ ಎಂಬ ಭಾವನೆಯೂ ಇದ್ದಿತು. ಅದನ್ನು ತಪ್ಪಿಸಿ ಪ್ರಾಂತಿಕ ಭಾಷೆಗಳಲ್ಲಿ ಧಾರ್ಮಿಕ ಗ್ರಂಥಗಳನ್ನು ಬರೆಯುವ ಸಾಹಸವನ್ನು ಯಾರೂ

ಮಾಡಿರಲಿಲ್ಲ. ಆದ್ದರಿಂದ ದಕ್ಷಿಣ ಹಿಂದೂಸ್ಥಾನದಲ್ಲಿ ಮೊದಲನೆಯ ಗೌರವವು ಶ್ರೀ ಬಸವಣ್ಣನವರಿಗೆ ಸಲ್ಲಿತು. ಕರ್ನಾಟಕವು ಎಲ್ಲ ಧರ್ಮಗಳ ತವರೂರಾದರೂ ಯಾವ ಆಚಾರ್ಯರೂ ತಮ್ಮ ಧರ್ಮಗ್ರಂಥಗಳನ್ನು ಕನ್ನಡದಲ್ಲಿ ಬರೆದಿ ಸ್ಸ್ಯಲಿಗೆಯಾಗುತ್ತದೆಂಬ ಭಾವನೆಯೂ ಕೆಲವರಲ್ಲಿದ್ದಿತು. ಆ ಪರಂಪರೆಯನ್ನೇ ಅವರು ಅನುಕರಣಮಾಡುತ್ತ ಬಂದಿದ್ದರು. ಅವನ್ನು ತಪ್ಪಿಸಿದ ಕೀರ್ತಿಯು ಬಸವಣ್ಣನವರಿಗೆ ಬಂದಿತು. [ಬ. ರ. ಪುಟ 400]

ಶ್ರೀ ಚನ್ನಬಸವಣ್ಣನವರು :—

ನಮ್ಮ ಆಯ್ಯರ ವಚನಜ್ಞಾನದ ನೆಲೆಯು ತೆಗೆದಿರಿಸಿತ್ತು, ನಮ್ಮ ಆಯ್ಯ ವಚನ ಮದಮಾತ್ಸರ್ಯಾದಿ ಅರಿಷಡ್ವರ್ಗ ಸಪ್ತಾವೆಸ್ಯಾ ಪಂಚೇಂದ್ರಿಯ ದ ವಾಯುಗಳ ಇಚ್ಛೆಗೆ ಹರಿವ ಮನವಸ್ವಸ್ಥವಾಗಿ ನಿಲಿಸಿತ್ತು. ಇಂತಪ್ಪ ಆಯ್ಯ ವಚನಭಂಡಾರವ ನಮ್ಮ ಪ್ರಭುದೇವರು ಮುಖ್ಯರಾದ 220 ಅಮರ ಗಣಂಗಳ ಅಸಂಖ್ಯಾತ ಪುರಾತನರು ಪ್ರಥಮ ಗಣಂಗಳು ಹೇಳಿಕೇಳಿ ಕೊಂಡಾಡಿಹ ಕಾರಣ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಸರ್ವಸುಖವ ಸೂರೆಗೊಂಡು ಸ್ವಯಂ ಲಿಂಗವಾದರು. ಇಂತಪ್ಪ ಪುರಾತನರ ವಚನಂಗಳಂ ಎರಡಿಲ್ಲದೆ ಕೊಂಡಾ ತನುಮನ ಧನವ ಎರದರಿಲ್ಲದೆ ಸಮರ್ಪಿಸುವ ಭೃತ್ಯರ ಭೃತ್ಯ ನಾನೆ ಆಳಿನಾಳಯ್ಯ ನಾನು. [ಬ. ರ. ಪುಟ 401]

ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ, ಹಿಂದಿನ ಬಿಹಾರ ರಾಜ್ಯಪಾಲರು, ಎಂ.ಎ., ಎಲ್ಎಲ್.ಬಿ., ಹಿಂದೂಸ್ಥಾನದ ಘಟನಾ ಸಮಿತಿಯ ಸಭಾಸದರು, ಇವರು ತಮ್ಮ 'ವಚನಶಾಸ್ತ್ರ ರಹಸ್ಯ' ಎಂಬ ಗ್ರಂಥದ ಭಾಗ ೨, ಪುಟ ೪೨ ರಲ್ಲಿ ಈ ಮುಂದೆ ಕಂಡಂತೆ ಬರೆದಿರುತ್ತಾರೆ :—

ಕನ್ನಡ ವಾಙ್ಮಯದ ದೃಷ್ಟಿಯಿಂದ ಕೂಡಿ ವಚನಶಾಸ್ತ್ರವು ಕರ್ನಾಟಕ ದಲ್ಲಿ ಬಹಳ ಮಹತ್ವದ ಕಾರ್ಯವನ್ನು ಮಾಡಿದೆ ಎಂದು ಒಪ್ಪಬೇಕಾಗುವುದು. ವಚನಕಾರರು ಒಂದು ಪ್ರತ್ಯೇಕವಾದ ಗದ್ಯರಚನೆಯ ರೀತಿಯನ್ನು ರೂಢಿಯಲ್ಲಿ ತಂದಿರುವರು. ಸಾಹಿತಿಗಳೆಲ್ಲ ಪದ್ಯರೂಪದಿಂದಲೇ ಬರೆಯುತ್ತಿರುವ ಕಾಲದಲ್ಲಿ ವಚನಕಾರರು ಅತ್ಯುಚ್ಚ ಮಾನವೀ ವಿಚಾರಗಳನ್ನೂ, ಭಾವಗಳನ್ನೂ, ಗದ್ಯದಲ್ಲಿ

ಬಹಳ ಸುಲಭ ಬಾಲಬೋಧೆ ಗದ್ಯದಲ್ಲಿ ವ್ಯಕ್ತಗೊಳಿಸಿ ಅಂಥ ಭಾವಗಳನ್ನು ಅತ್ಯಂತ ಒಲವುಳ್ಳ ತಿಳಿಗನ್ನಡದ ಗದ್ಯದಲ್ಲಿ ಪ್ರಕಟಿಸುವುದು ಶಕ್ಯವು ಎಂಬುವನ್ನು ಸಿದ್ಧಮಾಡಿ ತೋರಿಸಿದರು.

ಈಗ್ಯೂ ವಚನಗಳು ಕನ್ನಡದಲ್ಲಿ ಗದ್ಯಶೈಲಿಯ ಮಾದರಿಯಾಗಿ ಕಂಗೊಳಿಸುವವು. ಪೂರ್ವದ ಚಂಪೂ ಗ್ರಂಥದಲ್ಲಿರುವ ಗದ್ಯ ಕೆಲವು ರಚನೆಗಳನ್ನು ಕುರಿತು ಬರೆದ ಟೀಕೆಯಲ್ಲಿಯ ಗದ್ಯ. ಇವುಗಳಿಗಿಂತ ಬೇರೆ ಬಗೆಯ ಹೆಚ್ಚು ಶ್ರೇಷ್ಠವಾದ ಶೈಲಿಯಲ್ಲಿ ವಚನಗಳು ಬರೆಯಲ್ಪಟ್ಟಿರುವವು. ಸ್ವಲ್ಪವೇ ಶಬ್ದಗಳಲ್ಲಿ ಬಹಳ ಮತ್ತು ಗೂಢವಾದ ಅರ್ಥವನ್ನು ವ್ಯಕ್ತಮಾಡುವ ವಚನದ ಸಂಕ್ಷೇಪ ಶಕ್ತಿ, ವಚನದ ರಚನೆಯಲ್ಲಿರುವ ಒಂದು ಬಗೆಯ ತಾಳಪ್ರಾಸ ಮತ್ತು ಪ್ರಮಾಣಬದ್ಧತೆ. ಯಥಾಯೋಗ್ಯ ಶಬ್ದಗಳನ್ನು ಉಪಯೋಗಿಸುವ ಕೌಶಲ್ಯ, ವಿಚಾರ ವ್ಯಕ್ತಿಯಲ್ಲಿ ಸಾಧಿಸಿದ ಸಮತೂಕ, ತಿಳಿಗನ್ನಡ ಶಬ್ದದ ಕುಶಲ ಬಳಿಕೆ ಈ ಮುಂತಾದ ಗುಣಗಳು ವಚನ ವಾಙ್ಮಯದಲ್ಲಿ ಪರಮಾವಧಿಯನ್ನು ಮುಟ್ಟಿವೆಯೆಂದು ಹೇಳಲಿಕ್ಕೆ ಯಾವ ಪ್ರತ್ಯವ್ಯಾಯವೂ ಇಲ್ಲ.

[ಬ. ರ. ಪುಟ 402]

ಹನ್ನೆರಡನೆಯ ಶತಮಾನದ ವೇಳೆಗೆ ಪರಿಸ್ಥಿತಿ ವ್ಯತ್ಯಾಸವಾಯಿತು. ಸುಮಾರು ಕ್ರಿ. ಶ. ೧೧೬೦ರ ವೇಳೆಗೆ ಪ್ರಸಿದ್ಧಿಗೆ ಬಂದ ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹಾದಿಯನ್ನು ಹಾಕಿಕೊಟ್ಟರು. ಈತನ ಉದ್ದೇಶವು ಮತಪ್ರಚಾರವೇ ಹೊರತು ಕಾವ್ಯರಚನೆಯಲ್ಲ. ಆದರೆ ಜನತೆಯಲ್ಲಿ ಯಾವ ಪ್ರಚಾರವಾಗಬೇಕಾದರೂ ಅವರಿಗೆ ತಿಳಿಯುವ ಸುಲಭ ಭಾಷೆಯ ಲಲಿತ ಮಾರ್ಗದಲ್ಲಿಯೇ ಆಗಬೇಕೆಂಬುವನ್ನು ಅರಿತ ಬಸವಣ್ಣನವರು ತನ್ನ ಧರ್ಮ ಬೋಧೆಯೆಲ್ಲವನ್ನೂ ವಚನಗಳೆಂಬ ಸಾಮಾನ್ಯ ಜನರಿಗೂ ಅರ್ಥವಾಗುವ ಕಾವ್ಯರೀತಿಯಲ್ಲಿ ರಚಿಸಿದರು. ಈ ವಚನಗಳು ಸುಂದರವೂ, ಮನಮೋಹಕವೂ ಆಗಿವೆ. ಆದ್ದರಿಂದ ಮತಪ್ರಚಾರಕ್ಕೆ ಹೊರಟ ಬಸವಣ್ಣನಿಂದ ಸಾಹಿತ್ಯಾಭಿವೃದ್ಧಿಯು ವಿಶೇಷವಾಗಿ ಆಯಿತು. [ಬಸವರತ್ನಾಕರ, ಪುಟ 403]

"ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೇ ? ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೇ ? ಮುನ್ನಿನ ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರನೇನೆಂಬೆ ಕೂಡಲ ಸಂಗಮದೇವಾ."

ದೇವರ ಪ್ರೀತಿಯ ಪಡೆಯುವ ಮಾರ್ಗವನ್ನು ಕೇಳಿ :—

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ! ಇದೇ ಅಂತರಂಗದಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ."

[ಬಸವತತ್ವ ರತ್ನಾಕರ, ಪುಟ 405]

ನಮಃಶ್ರೀ ವರ್ಧಮಾನಾಯ । ವಿಶ್ವವಿದ್ಯಾವಭಾಸಿನೇ ।
ಸರ್ವಭಾಷಾ ಮಯೀ ಭಾಷಾ । ಅವೃತ್ತಾಯನ್ಮುಖಾಂಭುಜಾತ್ ।

ಎಂಬ ಮಂಗಳ ಶ್ಲೋಕದಿಂದ ಭಗವದ್ವಾಣಿಯೇ ಕರ್ಣಾಟಕ ಶಬ್ದವೃಂದಕ್ಕೆ ಮೂಲವೆಂದು ಉದ್ಘೋಷಿಸಿರುವನು. ಈ ರೀತಿಯಲ್ಲಿ ಕರ್ಣಾಟಕ ಭಾಷೆಯ ಭಗವದ್ವಾಣೀ ಮೂಲವೆಂದು ಸೂಚಿಸಿ, ಈ ಶಬ್ದಗಳು ಅನುಶಾಸನಕ್ಕೆ ತಕ್ಕವು ಅಂದರೆ ವ್ಯಾಕರಣಶಾಸ್ತ್ರದಿಂದ ಉತ್ಪತ್ತಿಪೂರ್ವಕವಾಗಿ, ಸಾಧ್ವಸಾಧು ವಿವೇಚನಪೂರ್ವಕವಾಗಿ ಪ್ರಯೋಗಾರ್ಹವಾಗಿರುವವೆಂದು "ಅತಃ ಶಬ್ದಾನು ಶಾಸನಮಾರಭ್ಯತೇ" ತೇಷಾಂ ಶಬ್ದಾನಾಂ ಕರ್ಣಾಟಕಾನಾಂ ಎಂಬ ಮೂಲ ಸೂತ್ರಗಳಿಂದ ಹೇಳುತ್ತಾನೆ.

ಅದಿರಲಿ ; ವಾಡಿಕೆಯಾಗಿ ಸಂಸ್ಕೃತವೆಂದೆನಿಸಿಕೊಂಬ ಗೀರ್ವಾಣ ವಾಣಿ ಯಲ್ಲಿ ಏಕೆ ಅಲ್ಲಿ ಮನುವಚನಗಳನ್ನು ಹೇಳಲಿಲ್ಲ ? ಎಂದು ಕೆಲವರು ಆಕ್ಷೇಪಿ ಸುವರು. ಸಂಸ್ಕೃತ ಭಾಷೆಯಲ್ಲಿ ಹೇಳಿದ ವೇದಾಗಮೋಪನಿಷತ್ತುಗಳ ಯಥಾರ್ಥವನ್ನು ಅರಿಯದೆ ಕಂಡವರು ಕಂಡಂತೆ ಅರ್ಥಮಾಡಿದ್ದರಿಂದ ಬಹ ಆಯಾಸದಿಂದ ತತ್ವವು ತಿಳಿಯಬಹುದಾಗಿದೆ. ಅಲ್ಪಕಾಲದಲ್ಲಿಯೇ ಅನೇ ಹೊರೆಗಳನ್ನು ಮಾಡುತ್ತಿರುವ ಭಕ್ತಿಪರಿಪ್ಲುತಮಾನಸರಾದ ಮುಮುಕ್ಷುಗಳಿ ಸುಲಭವಾಗಿ ಧರ್ಮರಹಸ್ಯದ ಬೋಧವಾಗಬೇಕೆಂಬ ಬುದ್ಧಿಯಿಂದ ಅಲ್ಲಮನ ವಚನಗಳನ್ನು ಕನ್ನಡದಲ್ಲಿ ರಚಿಸಿದನು. ಕನ್ನಡದಲ್ಲಿ ಹೇಳುವುದರಿಂದ ಧರ್ಮ ತತ್ವಗಳ ಪರಿಚಯವು ಬಹು ಜನಕ್ಕಾಯಿತು. ಅವರೆಲ್ಲರೂ ಕೃತಾರ್ಥರಾದರು ಅತ್ಯುತ್ತಮವಾದ ಕನ್ನಡ ತಾಯ್ನುಡಿಯಿಂದ ಧರ್ಮರಹಸ್ಯವನ್ನು ಬೋಧಿಸು

ವಚನಗಳನ್ನು, ಬಹಳ ಮಂದಿ ಶರಣರು ಬರೆಯುವ ಸುಯೋಗ ಪ್ರಭುವು ಕನ್ನಡವಲ್ಲಿ ಬೋಧಿಸದಿದ್ದರೆ ಬರುತ್ತಿರಲಿಲ್ಲ. ಕನ್ನಡದಲ್ಲಿ ಬೆಸಸಿದುದರಿಂದ ಕರ್ಣಾಟಕವು ಧರ್ಮಭೂಮಿಯಾಯಿತು. [ಒ. ತ. ರ. ಪುಟ 408]

ಪುಣೆಯಲ್ಲಿ ತಾರೀಖು ೨೫೭-೧೯೪೩ ರಲ್ಲಿ ಕೂಡಿದ ಹೊರನಾಡಿನ ಕನ್ನಡಿಗರ ಸ್ನೇಹ ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್, ಇವರು ತಮ್ಮ ಭಾಷಣದಲ್ಲಿ :—

ಈಗಿರುವ ಪರಿಸ್ಥಿತಿಯೆಂದರೆ ಕನ್ನಡವನ್ನು ಬೆಳೆಯಿಸಬೇಕೋ ಇಲ್ಲವೇ ಏಕಮೇವಾದ್ವಿತೀಯವೆಂದು ಹಿಂದಿಯನ್ನು ಇಡಿಯ ಹಿಂದೂಸ್ಥಾನದ ಭಾಷೆಯನ್ನಾಗಿ ಮಾಡಿ ಅದನ್ನೇ ನಾವು ಕಲಿತು, ಅದರಲ್ಲಿಯೇ ನಾವು ಬೆರತು ಬೆಳೆದು ಆ ಹಿಂದಿಯಲ್ಲಿಯೇ ನಮ್ಮ ಸಾಹಿತ್ಯವನ್ನು ಹಬ್ಬಿಸಬೇಕೋ ಎಂಬುವದೊಂದು ಈಗಿನ ತುರುತಿನ ಸಮಸ್ಯೆಯಾಗಿದೆ. ಮರಾಠಿಯಲ್ಲಿಯೂ ಆಳವಾದ ಸಾಹಿತ್ಯವಿದೆ, ಬೆಳೆದು ಬಂದ ಸಂಸ್ಕೃತಿ ಇದೆ. ಅವರೆಲ್ಲರೂ ಮರಾಠಿಯನ್ನು ಮರೆತು ಹಿಂದಿ ಭಾಷೆಯನ್ನು ಅಪ್ಪುವರೋ ಅದರಂತೆ ಕನ್ನಡನಾಡು, ನುಡಿ, ಸಾಮ್ರಾಜ್ಯ, ವೈಭವ, ಸಂಸ್ಕೃತಿ, ಜನಾಂಗ ಇವೆಲ್ಲವುಗಳನ್ನೂ ಮರೆಯಲಿಕ್ಕೆ ನಮಗೆ ಶಕ್ಯವಿದೆಯೆ ? ಉಳಿದ ಸಾಹಿತ್ಯವನ್ನು ಓದಬೇಕೆಂದಾಕ್ಷಣ ತಾಯ್ನುಡಿಯನ್ನು ಮರೆಯಬೇಕೆಂದಲ್ಲ ಅಥವಾ ತಾಯ್ನುಡಿಯನ್ನು ಮುಂದಕ್ಕೆ ತರಲಿಕ್ಕೆ ಯತ್ನಿಸಿದಾಕ್ಷಣ ಅನ್ಯನುಡಿಗಳನ್ನು ದ್ವೇಷಿಸಿದಂತೆಯೂ ಅಲ್ಲ.

[ಒ. ರ. ಪುಟ 409]

ಅದೆಂತೆಂದೊಡೆ ಪ್ರಭುದೇವರು ಸಿದ್ಧರಾಮಯ್ಯದೇವರು ಬಸವರಾಜದೇವರ ಮಹಾತ್ಮೆಯಂ ಕೊಂಡಾಡಲು ಪರಮಾನಂದದೊಳೋಲಾಡುತ್ತ ಬರುತ್ತಿರಲತ್ತ ಅಖಂಡಾದ್ವಯ ನಿತ್ಯಾನಿರವಯ ನಿಶೂನ್ಯವಪ್ಪ ನಿಃಕಲ ಪರಶಿವನ ಸ್ಥೂಲತತ್ವವೇ ಮರ್ತ್ಯಲೋಕದಲ್ಲಿ ಜಗಹಿತಾರ್ಥವಾಗಿ ಬಸವೇಶ್ವರ ನಾಮದಿಂದವತರಿಸಿ ಷಡ್‌ದರ್ಶನ ಷಣ್ಮತ, ಷಟ್‌ಸಮಯಗಳಿಂದ ವೀರಶೈವ ಸದ್ಭಕ್ತಿ ಮುಸುಳಿನೆರಲಾ ಶಿವಭಕ್ತಿಯನ್ನುದ್ಧರಿಸಿ ಸರ್ವಾಚಾರವನಿಂಬುಗೊಂಡು ಕಲ್ಯಾಣಪಟ್ಟಣದಲ್ಲಿ ಗುರುಲಿಂಗ ಜಂಗಮ ಭಕ್ತಿಯ ಮಾಡುತ್ತಾ ನಿತ್ಯಾವೆಂಬತ್ತೆಂಟು ಪವಾಡಂಗಳಂ ಜಯಿಸುತಿರ್ಪ-ಬಸವೇಶನೆಂತಾದೊಡೆ. [ಒ. ರ. ಪುಟ 411]

ಶ್ರೀ ಪ್ರಭುದೇವರು

"ಒಳಗೆ ನೋಡಿಹೆನೆಂದರೆ ಒಳಗೆ ನೋಡಲಿಲ್ಲ, ಹೊರಗೆ ನೋಡಿಹೆನೆಂದರೆ ಹೊರಗೆ ನೋಡಲಿಲ್ಲ. ಜ್ಞಾನವೆಂತುಂಟೋ ? ಬಳೆಯ ಬೀಸಿ ಕೊಲ್ಲುವ ಮನೆಯಲ್ಲಿ ಸತ್ತರೆ ಏನು ಅಳುವಿರೋ ಗುಹೇಶ್ವರಾ"

[ಬ. ರತ್ನಾಕರ, ಪುಟ 419]

"ಅಯ್ಯಾ, ಶ್ರೀ ಗುರುಲಿಂಗ ಜಂಗಮದ ಕರುಣಾಕಟಾಕ್ಷೆಯಿಂದ್ಯುತ್ಪತ್ತ್ಯವಾಗಿ ನಿರ್ಮಾಯ ಕಂಥೆಯ ಧರಿಸಿದ ಶಿವಶರಣಗೆ ಅನಂತಲೀಲೆಯಲ್ಲಿ ಬೆಂಬತ್ತಿ ಬಂದ ಮಹಾಪಾಪವೇ ಒಂದು ರೂಪಾಗಿ ಮಾಯಾ ಜಡಜೀವಶರೀರವ ಧರಿಸಿ, ಪರಿಪರಿಯಿಂದ ನಿಂದೆ ಕುಂದು ಅಪಮೃತ್ಯುಗಳು ಬಂದು ತಟ್ಟಿದಲ್ಲಿ ಅರ್ತಿತಾವಧಾನ ಸುಖದುಃಖಗಳು ಬಂದು ಸೋಂಕಲೊಡನೆ ಶಿವಶರಣನು ತನ್ನಧ್ಯಾತ್ಮಾಜ್ಞಾನದಿಂದರಿಯ ನೋಡಿಡಲ್ಲಿ ಈ ಮಾಯಾ ಜಡ ಜೀವಾತ್ಮರ ಮಧ್ಯದಲ್ಲಿ ಅಣುವಿಗಣುವಾಗಿ ಮಹತ್ತಿಂಗೆ ಮಹತ್ತಾಗಿ ಆ ಜೀವನೆಂಬ ವಿಧಿಗೆ ಸ್ತುತಿ, ನಿಂದೆ, ಪುಣ್ಯ, ಪಾಪ, ಸಂಕಲ್ಪ, ವಿಕಲ್ಪವೆಂಬ ಕುಟಿಲ ವ್ಯವಹಾರವ ಕಲ್ಪಿಸಿ ಆ ಜೀವನಿಂದ ಭಕ್ತಗಣಂಗಳಲ್ಲಿ ಅಷ್ಟಾವರಣಭರಿತನಾಗಿ ದೇಹಾಭಿಮಾನದ ಹಸಿವು, ತೃಷೆ, ನಿದ್ರೆ, ಆಲಸ್ಯ, ಸಂಗವೆಂಬ ಕಾಲಕಾಮರ ಪಾಶದಲ್ಲಿ ಬೀಳದೆ ಭವಿ ಭಕ್ತನೆಂಬುವ ವಿಚಾರವನರಿಯದೆ ನಿಃಕಳಂಕ ಪರಬ್ರಹ್ಮ ಪರಶಿವನಲ್ಲಿ ಸದಾ ಸನ್ಮಾರ್ಗಿಯಾಗಿ ಸುಸಂಗಿಗಳಿಂದ ಶ್ರದ್ಧಾತುರ ಪರಿಣಾಮದಲ್ಲಿ ಬಂದು ತಟ್ಟಿದ ಪರಿಣಾಮ ಪಾದೋದಕ ಪ್ರಸಾದದಲ್ಲಿ ಲೋಲುಪ್ತರಾಗಿ ತಮ್ಮ ನಡೆನುಡಿಗಳಲ್ಲಿ ದ್ಯಾತ್ಮಾಜ್ಞಾನದಿಂದ ವಿಚಾರಿಸಿ ತತ್ವಮಾಡುವಂಥವನಿಂದ ನಿಲುಗಡೆಯ ಅಹಿಂಸಾ ದಿಕ್ಷೆಯಿಂ ಉಂಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ."

[ಬಸವತತ್ವ ರತ್ನಾಕರ, ಪುಟ 424]

ಒಡೆಯರುಳ್ಳಾಳಿಂಗೆ ಕೋಡಿಲ್ಲ ಕಾಣಿರೊ; ಊರನ್ನಾದೆ ಅಡವಿ ಎನ್ನದೆ ಆಳನರಿಸಿ ಬರ್ಪ ಆಳಿದರುಂಟೆ ? ಜೋಳ್ವಾಳಿಂದ ಬಿಜ್ಜಳಂಗೆ ಆಳಾದರೇನು ? ವೇಳವಾಳಿಂಗೆ ಕೂಡಿಕೊಂಡಿಪ್ಪ ಕೂಡಲ ಸಂಗನುದೇವಾ."

ಹೀಗೆ ವಚನವನ್ನು ಹೇಳುತ್ತ ಸಂತೋಷದಿಂದಿರುವ ಸಮಯದಲ್ಲಿ ಹಾಲಿನ ಸ್ವಾಮಿಗಳೆಂಬುವರು ಕಲ್ಯಾಣಪಟ್ಟಣದಿಂದ ಬಸವೇಶ್ವರನನ್ನು ಹುಡುಕಿ ಕೊಳ್ಳುತ್ತಾ ಒಂದೇ ಉಸಿರಿನಿಂದ ಓಡಿಬಂದಕಾರಣ ಅವರ ಮೈಯಲ್ಲಿ ಬೆವರು ಬಿಟ್ಟಿದ್ದಿತು. ಬಸವ, ಬಸವ ಎಂದು ಗಾಬರಿಯಿಂದ ಕೂಗಲು, ಬಸವಣ್ಣ ನವರು ಎದ್ದು ಅವರಿಗೆ ನಮಸ್ಕಾರ ಮಾಡಿದರು. ಶ್ರೀ ಗುರುವೇ, ನನ್ನನ್ನು ಹುಡುಕಿಕೊಳುತ್ತಾ ತಾವು ಇಷ್ಟು ಕಷ್ಟಪಟ್ಟುಕೊಂಡು ಬರಬಹುದೇ ? ಎಂದು ಅನ್ನಲು, ಬಸವಣ್ಣನವರೇ, ರಾಜನು ಮಾಡಿದ ವೃತ್ತಾಂತವನ್ನೆಲ್ಲಾ ಕೇಳಿ ನಮಗೆಲ್ಲ ಸಹಿಸಲಸಾಧ್ಯವಾದ ವ್ಯಸನವಾಗಿರುತ್ತದೆ. ಒಂದೇ ಕ್ಷಣದಲ್ಲಿ ಈ ರಾಜನನ್ನು ಧ್ವಂಸಮಾಡಿಬಿಟ್ಟೇನು. ಆದರೆ ಬಸವಣ್ಣನವರ ಅಹಿಂಸಾ ತತ್ವವು ನಮ್ಮ ಮುಂದೆ ಬಂದು ನಿಲ್ಲುತ್ತದೆ ಮತ್ತು ತಾವು ಜ್ಞಾನಕ್ರಿಯೆಗಳ ಉಚ್ಚ ನೀಚವು ಲೋಕದ ಜನರಿಗೆ ತಿಳಿಯಬೇಕೆಂದು ಹೇಳುವಕಾರಣ ಸುಮ್ಮನೆ ಇರುತ್ತೇವೆ. ಶಿವಭಕ್ತ ಸಮುದಾಯವೆಲ್ಲ ತಮ್ಮ ವರ್ತಮಾನವನ್ನು ತಿಳಿದು ಕೊಂಡು ಬರಲು ನನ್ನನ್ನು ಕಳುಹಿಸಿರುತ್ತದೆ ಎಂದು ಹೇಳಿದರು. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡಮೇಲೆ, ಸ್ವಾಮಿಗಳೇ, ತಾವು ಶಿವಾರ್ಚನೆ ಯನ್ನು ಮಾಡಿರಿ ಎಂದು ಬಸವಣ್ಣನವರು ಹೇಳಲು, ಎಲೈ ಬಸವೇಶ್ವರನೇ, ನಮ್ಮ ಹಾಲಿನ ನೇಮವು ನಿಮಗೆ ಗೊತ್ತೆ ಇದೆ. ಈ ಕಾಡಿನಲ್ಲಿ ಹೇಗೆ ಅನುಕೂಲವಾಗುವುದು ? ತಾವೇನೂ ಕಾಳಜಿ ಮಾಡಬೇಡಿರಿ, ನೋಡೋಣ ವೆಂದು ಸ್ವಾಮಿಗಳು ಉತ್ತರ ಕೊಟ್ಟರು. ಆದರೆ ಬಸವಣ್ಣನವರಿಗೆ ಆ ಮಾತು ಸರಿಬರಲಿಲ್ಲ. ಆಗ ಅವರು, ಮೊದಲು ಅಯ್ಯನವರು ತಂದ ಆಕಳಿನ ಕೆಚ್ಚಲಿ ನಲ್ಲಿ ಶಿವಶಿವ ಎಂದು ಕೈಯಾಡಿಸಲು, ಕ್ಷೀರವು ಸುರಿಯಲಾರಂಭಿಸಿತು. ಆ ಕ್ಷೀರವನ್ನು ತೆಗೆದುಕೊಂಡು ಸ್ವಾಮಿಗಳ ಶಿವಾರ್ಚನೆಗೆ ವ್ಯವಸ್ಥೆಯನ್ನು ಮಾಡಿದರು. [ಬ. ರ. ಪುಟ 451 ರಿಂದ 452]

ಪ್ರಾರಂಭಿಸಿದ ಕಾರ್ಯವನ್ನು ಯಾರು ಕೊನೆಗಾಣಿಸಿ ಯಶಸ್ವಿಗಳಾಗು ತ್ತಾರೋ ಅವರೇ ಜಗತ್ತಿನಲ್ಲಿ ತೇಜಃಪುಂಜರಾಗಿ ಕೀರ್ತಿಶಾಲಿಗಳಾಗುತ್ತಾರೆ. ಅವರು ಜನರ ನಾಲಿಗೆಯ ತುದಿಯಲ್ಲಿ ಯಾವಾಗಲೂ ನಲಿದಾಡುತ್ತಲಿರುತ್ತಾರೆ. ಅವರ ಕೀರ್ತಿಯು ಅಚ್ಚಳಿಯದೆ ಉಳಿಯುವದು. ಹಿಡಿದ ಕಾರ್ಯಗಳನ್ನು ವಿಘ್ನಗಳಿಗೆ ಹೆದ್ದರದೆ ಅದನ್ನು ಕೊನೆಗಾಣಿಸುವುದಕ್ಕೆ ಕ್ರಿಯಾಯೋಗವೆಂದು

ಹೆಸರು. ಅದೊಂದು ದೊಡ್ಡವರಿಗೆ ನಿತ್ಯದ ಮಹಾವ್ರತವಾಗಿ ಪರಿಣಮಿಸು ವುದು. ಧೈರ್ಯವಾಗಲೀ, ಕೈಗೊಂಡ ಕಾರ್ಯದಲ್ಲಿ ನಿಷ್ಠೆ ಇಲ್ಲದೆ ಹೋದ ಅಂತಹ ಮಹತ್ಕಾರ್ಯಗಳು ಕೊನೆಗೊಳ್ಳಲಾರವು. ಮನುಷ್ಯನು ಒಂದು ಕಾರ್ಯವನ್ನು ಹಿಡಿದನೆಂದರೆ ತನ್ಮಯವಾಗಿ ನಿಷ್ಠೆಯಿಂದ ಅದನ್ನು ಕೊನೆ ಗಾಣಿಸಬೇಕಾಗುತ್ತದೆ ಇಲ್ಲದಿದ್ದರೆ ಅವನು ಅದರಲ್ಲಿ ಅಯಶಸ್ವಿಯಾಗಿ ಲೋಕದ ಜನರೆದುರಿಗೆ ಅಪಕೀರ್ತಿಯನ್ನು ಹೊಂದುವನು. ದೊಡ್ಡದೊಡ್ಡ ಲೋಕೋಪಕಾರಗಳಾದ ಕಾರ್ಯಗಳನ್ನು ಮಾಡಿದವರೇ ಶ್ರೇಷ್ಠರಾದ ಚರಿತ್ರ ನಾಯಕರಾಗಿರುತ್ತಾರೆ. ಇಂತಹ ಮಹತ್ಕಾರ್ಯವನ್ನು ಕೈಗೊಂಡು ಅದರಲ್ಲಿ ಯಶಸ್ವಿಗಳಾಗಿ ಭೂಮಂಡಲದಲ್ಲಿ ಪ್ರಸಿದ್ಧರಾದ ಮಹಾಪುರುಷರಲ್ಲಿ ಬಸವಣ್ಣ ನವರೊಬ್ಬರಾಗಿರುತ್ತಾರೆ. ಅವರು ಮುಖ್ಯವಾಗಿ ಭೂಲೋಕದಲ್ಲಿ ಕ್ಷೀಣವಾಗಿ ಹೋಗಿದ್ದ ಶಿವಭಕ್ತಿಯನ್ನು ಉದ್ಧಾರ ಮಾಡುವುದಕ್ಕೆ ಅವತರಿಸಿದರೆಂಬುವುದು ಅನೇಕ ಐತಿಹಾಸಿಕ ಸಂಗತಿಗಳಿಂದ ತಿಳಿದುಬರುತ್ತದೆ. ಬಸವಣ್ಣನವರು ತಾವು ಹಿಡಿದ ವ್ರತಗಳಲ್ಲಿ ಯಶಸ್ವಿಗಳಾಗಿರುತ್ತಾರೆ. ಅವರು ಪ್ರತಿಜ್ಞಾಪೂರ್ವಕವಾಗಿ ತಮ್ಮ ಕಾರ್ಯಗಳನ್ನು ಕೊನೆಗಾಣಿಸಿರುತ್ತಾರೆ. [ಬ. ತ. ರ. ಪುಟ 456]

ಪ್ರಾಣ ಮತ್ತು ಇಂದ್ರಿಯ ವರ್ಗಗಳಲ್ಲಿ ನನ್ನದು ಇರುತ್ತವೆಂದು ತಿಳಿಯುವುದು ಶುದ್ಧ ಭ್ರಮಾತ್ಮಕವಾಗಿರುತ್ತದೆ. ಆದ್ದರಿಂದ ದೇಹೇಂದ್ರಿಯಗಳ ಮಮಕಾರವನ್ನು ಬಿಟ್ಟು ಪಂಚಪ್ರಾಣಗಳನ್ನು ಮತ್ತು ಮನಸ್ಸನ್ನು ಲಿಂಗದಲ್ಲಿ ಯೋಜಿಸುವುದೇ ಪ್ರಾಣಲಿಂಗಿಯ ಸ್ಥಲವು. [ಬ. ರ. ಪುಟ 492]

"ಭಕ್ತನಾದಡೆ ತನುಮನಧನದಾಸೆಯಳಿದಿರಬೇಕು. ಮಹೇಶ್ವರನಾದೊಡೆ ಪರಧನ ಪರಚಿಂತೆ ಪರಾಂಗನೆಯರ ಎಡೆಯಾಟದೀಳಿದಿರಬೇಕು. ಪ್ರಸಾದಿ ಯಾದಡೆ ಸುಖ ರುಚಿಯವಗ್ರಹವಂ ಮರೆದು ಪ್ರಸಾದ ಘಟವಳಿದಿರಬೇಕು. ಪ್ರಾಣಲಿಂಗಿಯಾದಡೆ ಘಟದಾಶೆಯ ತೊರೆದು ಪ್ರಾಣಲಿಂಗದೊಳಗೆ ಬೆರೆಸಿ ಬೇರಿಲ್ಲದಿರಬೇಕು. ಶರಣನಾದರೆ ಸತಿರತಿಯ ಸಂಘವಳಿದು ಲಿಂಗಕ್ಕೆ ತಾ ಸತಿಯಾಗಿರಬೇಕು. ಲಿಂಗೈಕ್ಯನಾದಡೆ ಆಪ್ಯಾಯದೆಡೆಯಡಗಿ ಸುಖದುಃಖಮು ತಾಳದೆ ನಿರ್ಭ್ರಾಂತನಾಗಿರಬೇಕು. ಮಾತಿನ ಮಾಲೆಯಲ್ಲಿ ಸಿಲುಕುವುದೇ ಶಿವಾಚಾರ ? ಇಂತೀ ಷಟ್‌ಸ್ಥಲವಾದಿಸಿಯೂ ಅಳವಡದು ಸೊಡ್ಡಳದೇವನು ಷಟ್‌ಸ್ಥಲದ ಭಕ್ತಿಯನ್ನು ಬಸವಣ್ಣಂಗೆ ಮೂರ್ತಿಯಮಾಡಿದರು.

ಮತ್ತೊಬ್ಬ ಶರಣರು :—

"ಭಕ್ತಂಗೆ ವಿಶ್ವಾಸ್, ಮಹೇಶ್ವರಂಗೆ ನೈಷ್ಠೆ, ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ, ಐಕ್ಯಂಗೆ ಕುರುಹು ಗೊಂಬುವುದಕ್ಕೆ ಮುನ್ನವೇ ನಿರಾಳ. ಇಂತೀ ಷಟ್‌ಸ್ಥಲ ಭೇದ ಎನ್ನಯ್ಯ ಪ್ರಿಯ ನಿಷ್ಕಳಂಕಿ ಮಲ್ಲಿಕಾರ್ಜುನಾ." [ಬ. ತ. ರತ್ನಾಕರ, ಪುಟ 504]

ಶ್ರೀಮನ್ನಿರಂಜನ ಜಗದ್ಗುರುಗಳಾದ ಅಲ್ಲಮಪ್ರಭುವರೇಣ್ಯರು ಶೂನ್ಯ ಸಿಂಹಾಸನಾಧೀಶ್ವರರು, ಶಿವಾನುಭವ ಮಂಟಪದ ಅಧ್ಯಕ್ಷರು. ಷಟ್‌ಸ್ಥಲ ಜ್ಞಾನಚಾರಿತ್ರ, ಶೂನ್ಯಸಂಪಾದನೆ, ಮಂತ್ರಗೋಪ್ಯ, ಸೃಷ್ಟಿಯ ವಚನ, ಬೆಡಗಿನ ವಚನ, ಮಂತ್ರ ಮಹಾತ್ಮ್ಯ, ಕಾಲಜ್ಞಾನ ವಚನ ಹೀಗೆ ಏಳು ಗ್ರಂಥಗಳನ್ನು ಬರೆದಿರುತ್ತಾರೆ. ಇವರು ಹಿಂದೂಸ್ಥಾನದಲ್ಲಿ ಸುಪ್ರಸಿದ್ಧರಾದ ಕೆಲವು ಯೋಗಿಗಳ ಮಾಲಿಕೆಯಲ್ಲಿರುತ್ತಾರೆ. ಇವರಲ್ಲಿ ಹಠಯೋಗ ಪ್ರದೀಪಿಕೆ ಯಲ್ಲಿ ಯೋಗಿಗಳ ಮಾಲಿಕೆಯನ್ನು ಮಾಡಿದ್ದೂ, ಅದರಲ್ಲಿ ಪ್ರಭುಗಳ ಹೆಸರೂ ಇದ್ದು ಸ್ವಾತ್ಮಾರಾಮಯೋಗೀಂದ್ರರಿಂದ ರಚಿಸಲ್ಪಟ್ಟಿರುತ್ತದೆ. ಇದಕ್ಕೆ ಹಿಂದೀ ಟೀಕೆ ಇದ್ದು, ಮಥುರಾದಲ್ಲಿ ಅಚ್ಚಾಗಿರುತ್ತದೆ.

ವೀರಶೈವ ಕವಿಗಳೆಲ್ಲ ಇವರನ್ನು ಪರಮಹರ್ಷದಿಂದ ಕೊಂಡಾಡಿರುತ್ತಾರೆ. ಇವರು ಮಾಯಾಕೋಲಾಹಲರೂ, ವಿರಕ್ತಶಿಖಾಮಣಿಗಳೂ ಆಗಿರುತ್ತಾರೆ. ಇವರ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ಪ್ರಭುಲಿಂಗಾಲೀಲಾ ಈ ಗ್ರಂಥವು ಕನ್ನಡ, ಸಂಸ್ಕೃತ, ತೆಲುಗು, ಮರಾಠಿ, ದ್ರಾವಿಡ ಹೀಗೆ ಐದು ಭಾಷೆಗಳಲ್ಲಿರುತ್ತದೆ. ಇದು ಅಲ್ಲದೆ ಪ್ರಭುದೇವರ ಪುರಾಣ, ಪ್ರಭುನಟನ ತಾರಾವಳಿ, ಪ್ರಭುಚರಿತ್ರೆ, ಪ್ರಭುಗೀತೆ, ಪ್ರಭುಲಿಂಗ ಕಂದ, ಅಲ್ಲಮವ್ಯೋಮ ಮೊದಲಾದವುಗಳು ಮುಖ್ಯವಾಗಿವೆ. ಇವರು ಸುಪ್ರಸಿದ್ಧ ಯೋಗಿಗಳಿದ್ದಂತೆ ಒಳ್ಳೇ ಜ್ಞಾನಿಗಳೂ ಆಗಿದ್ದರು. ಇವರು ಬರೆದ ವಚನಗಳು ಬಹಳ ಶ್ರೇಷ್ಠ ತರಗತಿಗಳಾಗಿರುತ್ತವಲ್ಲದೆ, ಉಕ್ಕಿನ ಕಡಲೆಯಂತಿರುತ್ತವೆ. ಅಂದರೆ ಅವುಗಳ ಭಾವವು ಬಹಳ ಕ್ಲಿಷ್ಟವಾಗಿರುತ್ತವೆ. ಇವರ ಬಗ್ಗೆ ಗುಮ್ಮಳಾಪುರದ ಶಿಷ್ಠ ಲಿಂಗದೇವರು-ನಿತ್ಯ ನಿರ್ಮಲಸ್ವರೂಪ, ಶಿವಶರಣ ಹೃತ್ಕಮಲಕರ್ಣಿಕಾವಾಸಿ ಮತ್ತು ಮಘಮಘಾಯಮಾನ, ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗಾಂಗ

ಲೇಪ, ಗುರುಲಿಂಗಜಂಗಮ, ಪ್ರಸಾದಪಾದೋದಕಾದಿ ಅಷ್ಟಾವರಣ ಪ್ರತಿಷ್ಠಾ ಪನಾಚಾರ್ಯ ಭಕ್ತ, ಮಹೇಶ ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯಾ ಷಟ್‌ಸ್ಥಲ ಚಕ್ರವರ್ತಿ, ಬಸವ, ಚನ್ನಬಸವರಾಜ ಪ್ರಾಣನಾಯಕ, ಪರು ಶ್ರೀ ವೀರಶೈವಾಚಾರ ಶಿರೋರತ್ನ, ಶ್ರೀ ವೀರಶೈವಾಚಾರ ಪ್ರಥಮ ನಾಯಕ ಶ್ರೀ ವೀರಶೈವಾಚಾರ್ಯ ದೀಕ್ಷಾಚಾರ್ಯ, ಮರ್ತ್ಯಲೋಕಪಾವನ ಕಾರಣಾ ತಾರ, ಅಸುವಿಷ ಶ್ರೀ ಶರಣಾಂಭೋಜಕರ್ಣಿಕಾವಾಸ, ಗುಹೇಶ್ವ ನಾಮಾಮೃತ ಸ್ವೀಕಾರಸಂತುಷ್ಟ ಶ್ರೀಮತ್ಸಕಲ ಜಗದಾಚಾರ್ಯರುಮ ಅಲ್ಲಮಪ್ರಭುದೇವರು. ಹೀಗೆಯೇ ಇವರ ಬಗ್ಗೆ ಅನೇಕ ಜನ ಕವಿಗಳು ವಿ ರೀತಿಯಿಂದ ಸನ್ಮಾಸಿರುತ್ತಾರೆ. ಇಂತಹ ಮಹಾಯೋಗಿಗಳೂ, ಜ್ಞಾನಿಗಳ ಆದ ಪ್ರಭುದೇವರು ಬಸವಣ್ಣನವರ ಬಗ್ಗೆ ಏನು ಕಾಣಿಕೆ ಕೊಟ್ಟಿರುತ್ತಾರೆಂ ದನ್ನು ನೋಡೋಣ. [ಬ. ರ. ಕ. ಪುಟ 533]

ಶ್ರೀ ಸಿರಂಸನ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಮತ್ತು ಅವ ಮುಂದಿನ ಕೆಲವರು ಶ್ರೀ........ ಶ್ರೀ....... ಗಳು.

ಶ್ರೀ ಅಲ್ಲಮಪ್ರಭು ಸ್ವಾಮಿಗಳು ಕಲ್ಯಾಣದಲ್ಲಿ ಅನೇಕ ಮಹಿಮೆ ಮಾಡಿ ೫೬ ದೇಶಂಗಳ ದೇಶಾಂತರವ ಮಾಡಿ ಸವ್ವಾಲಕ್ಷ ಪರ್ವತದಲ್ಲಿ ಇ ಮುನಿಗಳಿಗೆ ಜ್ಞಾನೋಪದೇಶವಂ ಮಾಡಿ ಅವರಿಗೆ ಮುಕ್ತಿಯಂ ಕೊಟ್ಟು ಸ ದೇಶಂಗಳಲ್ಲಿ ಇರುವ ಭಕ್ತ ಮಹೇಶ್ವರರಿಗೆ ಷಟ್‌ಸ್ಥಳ ಜ್ಞಾನೋಪದೇಶ ಮಾಡುತ ವೀರಶೈವ ಮತವ ಉದ್ಧರಿಸಿ ೧೨ ವರ್ಷವಿರ್ದ ಆಮೇಲೆ ಕಲ್ಯಾಣಕ್ಕೆ ದಯಮಾಡಿಸಿ ಬಸವೇಶ್ವರನ ಭಕ್ತಿಗೋಸ್ಕರ ಶೂನ್ಯಸಿಂಹಾಸನವೇರಿ ಚ ವೇಶ್ವರ ಮುಂತಾದ ಸಕಲ ಪ್ರಥಮರಿಂಪೂಜೆಯಂ ಕೈಗೊಂಡು ಸಕಲರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಕೊಟ್ಟು ಲಕ್ಷದ ಮೇಲೆ ತೊಂಬತ್ತಾರು ಸಾ ಗಣಂಗಳ ಪೈಕಿ ಷಟ್‌ಸ್ಥಲ ಬ್ರಹ್ಮಿಗಳಾದ ೧೨ ಸಾವಿರ ವಿರಕ್ತರಿಗೆ ಗುರುಗಳಾ ಇದ್ದು ಶೂನ್ಯಸಿಂಹಾಸನ ಶಿಖಾಶೈಲ ತಾವು ಸಿದ್ಧರಾಮೇಶ್ವರ ಮುಂತಾ ಸಕಲ ಪ್ರಮಥರಿಗೆ ಬೋಧಿಸಿದ ಮಂತ್ರ ಗೋಪ್ಯವಿರಡೆಂಬತ್ತು ಕೋ ವಚನಗಳ ಸಂಗ್ರಹಿಸಿದ ಶಿವಾನುಭಾವ ಪುಸ್ತಕವನ್ನು ಶ್ರೀ ಬಸವೇಶ್ವರ ಮುಂತಾದ ಸರ್ವ ಪ್ರಮಥರ ಮುಂದಿಟ್ಟುಕೊಂಡು ನಮ್ಮ ನಿರಂಜನ ಸೂತ್ರಕ್ಕೆ

ಸೇರಿದ ೧೨ ಸಾವಿರ ಷಟ್‌ಸ್ಥಲಬ್ರಹ್ಮಿಗಳಾದ ವಿರಕ್ತಗಣಂಗಳಿಗೆ ಮೂಲ ಗುರುಗಳಾಗಿ ಇರುವುದೆಂದು ನಿರೂಪಿಸಿ ಶ್ರೀ ಚನ್ನಬಸವೇಶ್ವರರಿಗೆ ಸದರಿ ನಾಲ್ಕು ವಸ್ತುಗಳನ್ನು ಕೊಟ್ಟು ತನ್ನ ಶಿವಾನುಭಾವ ಚರಂತಿಗೆ ಪಟ್ಟವನ್ನು ನೇಮಿಸಿ ಸಕಲ ಪ್ರಮಥರಿಗೆ ಆಶೀರ್ವಾದವ ಕೊಟ್ಟು ಆಮೇಲೆ ಶ್ರೀ ಶೈಲಕ್ಕೆ ದಯ ಮಾಡಿಸಿ ಅಲ್ಲಿ ಗೋರಕ್ಷನಾಥ ಅಕ್ಕಮಹಾದೇವಿಯರು ಮುಂತಾದ ಅನೇಕ ಶಿವಯೋಗಿಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮುಕ್ತಿಮಾರ್ಗವಿತ್ತು ತಾವು ಶ್ರೀ ಶೈಲವ ಮಲ್ಲಿಕಾರ್ಜುನ ಕದಳೀಬನದಲ್ಲಿ ತನ್ನ ಜ್ಯೋತಿರ್ಮಯ ಲಿಂಗವಾದ ಗೋಹೇಶ್ವರನಲ್ಲಿ ನಿರ್ವಯಲಾದರು. ಇವರು ನಿರ್ವಯಲಾದ ಸ್ಥಲ ಶ್ರೀಶೈಲದ ಕದಳಿಬನದಲ್ಲಿ ಇರುವ ಮಠದಲ್ಲಿ ಇರುತ್ತದೆ. ಆ ಮಠ ಶ್ರೀಶೈಲದ ಪಾತಾಳಗಂಗೆ ಇರುವ ಬೆಟ್ಟದ ಮೇಲೆ ನಿಂತು ನೋಡಿದರೆ ಈ ಹೊತ್ತಿಗೂ ಪ್ರತ್ಯಕ್ಷವಾಗಿ ಕಾಣಿಸುತ್ತದೆ. ಆ ಮಠದಲ್ಲಿ ಷಟ್‌ಸ್ಥಲ ಜ್ಞಾನಿಗಳಾದ ಗಣಂಗಳು ಇರುತ್ತಾರೆ. ಆ ಮಠಕ್ಕೆ ಹೋದೆವು ಎಂದರೆ ಹಾದಿ ಸಿಕ್ಕುವುದಿಲ್ಲ.

೧. ಬಸವೇಶ್ವರರು

ಈ ಜಗದ್ಗುರುಗಳಾದ ಶೂನ್ಯಸಿಂಹಾಸನಾಧೀಶ್ವರರಾದ ಅಲ್ಲಮಪ್ರಭು ಸ್ವಾಮಿಗಳವರು ನಿರ್ವಯಲಾದ ವರ್ತಮಾನವು ಶ್ರೀ ಬಸವೇಶ್ವರದೇವರು ಕೇಳಿ ಆ ಕೂಡಲೆ ಚನ್ನಬಸವೇಶ್ವರ ಮುಂತಾದ ಸಕಲ ಪ್ರಮಥರ ಕರೆಸಿ ಪ್ರಭು ಪಂಶೀಭೂತರಾದ ೧೨ ಸಾವಿರ ಷಟ್‌ಸ್ಥಲಬ್ರಹ್ಮಿಗಳಾದ ವಿರಕ್ತರುಗಳು ಸಹಿತ ಪ್ರಭುದೇವರ ಅನುಭವಮಂಟಪದಲ್ಲಿ ಶಿವಜ್ಞಾನದಿಂ ಮೂರ್ತವಮಾಡಿ ಮುಂದೆ ಆಗುವ ಅಘಾಂತರವ ತನ್ನ ಜ್ಞಾನದೃಷ್ಟಿಯಿಂದ ತಿಳಿದು ಸರ್ವರಿಗೂ ಸೂಚಿಸಿ ತಾವು ಗಣಪರ್ವವಂ ಮಾಡಿ ರಕ್ತಾಕ್ಷಿನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ಮಂಗಳವಾರ ಉದಯದ ಇಪ್ಪತ್ತೈದು ಗಳಿಗೆಯೊಳ ಬಸವನತಿ ಲೀಲೆಯಿಂ ಕಪ್ಪಡಿ ಸಂಗಮೇಶ್ವರ ಲಿಂಗದಲ್ಲಿ ಐಕ್ಯವಾಗಲು, ಹಡಪದಪ್ಪಣ್ಣ ನೀಲಲೋಚನೆಯು ಈ ಈರ್ವರು ತಮ್ಮಿಷ್ಟಲಿಂಗದಲ್ಲಿ ಐಕ್ಯವಾದರು.

"ಗ" ಪ್ರತಿ

ಬಸವಣ್ಣನವರು ಕಲಿಶಕ ೩೯೬೫ನೆ ವಿಕ್ರಮ ಸಂವತ್ಸರದಲ್ಲಿ ಕಲ್ಯಾಣಕ್ಕೆ ಚಿತ್ತೈಸಿದರು. ಇವರು ೩೬ ವರುಷ ಪ್ರಧಾನಪಟ್ಟವಂ ಆಳಿ ಕಲಿಶಕ

೪೦೦೧ ವರುಷವೆಂಬ ರಾಕ್ಷಸನಾಮ ಸಂವತ್ಸರವಲ್ಲಿ ಕಪ್ಪಡಿ ಸಂಗಮನಾಥದಲ್ಲಿ ಅಡಕವಾದರು.

೨. ಚೆನ್ನಬಸವ ರಾಜೇಂದ್ರರವರು

ಅನಂತರ ಬಿಜ್ಜಳರಾಯನು ಬಸವೇಶ್ವರನ ಪ್ರಧಾನಪಟ್ಟವಂ ಚನ್ನಬಸವೇಶ್ವರರಿಗೆ ಕಟ್ಟಲು ತಾವು ಬಿಜ್ಜಳರಾಯನ ರಾಜಕಾರ್ಯವಂ ನಡೆಸುತ್ತಾ ಲಕ್ಷದಮೇಲೆ ತೊಂಬತ್ತಾರುಸಾವಿರ ಗಣಸಮೂಹಕ್ಕೆ ತೃಪ್ತಿಪಡಿಸುತ್ತಾ ಚನ್ನ ನಂಜಯ್ಯ, ಕುದುರೆ ಶಾಂತಯ್ಯ, ಕೋಲುಶಾಂತಯ್ಯ ಮುಂತಾದ ೧೨ ಸಾವಿ ಷಟ್‌ಸ್ಥಲ ಬ್ರಹ್ಮಿಗಳಾದ ವಿರಕ್ತರಿಗೆ ಗುರುಗಳಾಗಿ ನಿತ್ಯಾನಂದಿಧ್ವಜ ವ್ಯಾಸ ತೋಳು ಮುಂತಾದ ೭೨ ಬಿರುದುಗಳೊಡನೆ ಉತ್ಸಹಂಗೊಳ್ಳುತ್ತಾ ಕಲ್ಯಾಣದಲ್ಲಿ ಅನೇಕ ಮಹಿಮೆಗಳ ತೋರುತ್ತಾ ಒಂದು ದಿನಸ ಮುಂದೆ ಆಗುವ ಸೂಚನಾರ್ಥವ ತಿಳಿದು ಇಗವರುಳ ಪ್ರಭುದೇವರ ಅನುಭವಮಂಟಪದಲ್ಲಿ ಸೂಚಿಸಿ ತಾವು ಉಳುವಿಗೆ ದಯಮಾಡಿಸುನಾಗ್ಗೆ ಸದರಿ ತಮ್ಮ ಶಿವಾನುಭವ ಪುಸ್ತಕವನ್ನು ಸಿದ್ಧರಾಮೇಶ್ವರನಿಗೆ ಕೊಟ್ಟು ಉಳುವಿಗೆ ಹೋಗಲು.

"ಗ" ಪ್ರತಿ

೧. ಎರಡನೆಯ ಶಿವಾನುಭಾವ ಚರಂತಿಗೆ ಪಟ್ಟಕ್ಕೆ ಶ್ರೀ ಚನ್ನಬಸವ ರಾಜೇಂದ್ರರು ಅಧಿಪತಿಗಳಾಗಿ ಅಲ್ಲಮಪ್ರಭು ಸ್ವಾಮಿಗಳವರ ಸೂತ್ರಿಕರಾಗಿ ಪ್ರಭುಸ್ವಾಮಿಗಳವರ ಶೂನ್ಯಸಿಂಹಾಸನಕ್ಕೆ ಕಾರಣಕರ್ತರಾಗಿ ಜಗದ್ಗುರುಗಳೆನಿಸಿಕೊಂಡು ರುದ್ರಮುನಿಸ್ವಾಮಿಗಳು ಮುಂತಾದ ಎಲ್ಲ ಪ್ರಮಥ ಗಣ ಸಮೂಹದಲ್ಲಿ ಇರುವ ಕಾಲದಲ್ಲಿ ಸಿದ್ಧರಾಮೇಶ್ವರನಿಗೆ ದೀಕ್ಷೆಯಂ ಮಾಡುವಾಗ್ಗೆ ಚನ್ನಬಸವೇಶ್ವರರೇ ಗುರುಗಳಾಗಿ, ಪ್ರಭುವೇ ಸಾಕ್ಷಿ ಜಂಗಮವಾಗಿ ಕಿನ್ನರಿ ಬ್ರಹ್ಮಯ್ಯಗಳೇ ಕ್ರಿಯಾಮೂರ್ತಿಗಳಾಗಿ ದೀಕ್ಷೆಯನ್ನಿತ್ತು ೧೨ ಸಾವಿರ ವಿರಕ್ತರು ಮುಂತಾದ ಎಲ್ಲ ಪ್ರಮಥ ಗಣಸಮೂಹದಲ್ಲಿ ಶಿವಾನುಭಾವವನ್ನು ಮಾಡುತ್ತಾ ಸುಖಿಗಳಾಗಿ ಅನುಭವ ಮಂಟಪದಲ್ಲಿ ಇದ್ದರು.

೨. ಕಲ್ಯಾಣಪಟ್ಟಣದಲ್ಲಿ ಚನ್ನಬಸವಣ್ಣನವರು ಶೂನ್ಯಸಿಂಹಾಸನಕ್ಕೆ ಅಧಿಪತಿಗಳಾಗಿ ವೀರಶೈವ ಮತೋದ್ಧಾರಕರಾಗಿ ಗುರುಲಿಂಗ ಜಂಗಮ ದಾಸೋಹದೊಡನೆ ಸಕಲ ಬಿರುದುಗಳಿಂದ ಉತ್ಸಹಂಗೊಳ್ಳುತ್ತಾ ಪ್ರಧಾನ

ಪಟ್ಟವಂ ನಡೆಸುತ್ತಾ ಇರಲಾಗಿ, ಬಿಜ್ಜಳ ಅರಸು ಎಂಬ ರಾಜನು ತನ್ನ ಕಾಲಕ್ಕೆ ಸರಿಯಾಗಿ ದುರ್ಬುದ್ಧಿ ಹುಟ್ಟಿ ಹರಳಯ್ಯ ಮಧುವಯ್ಯಗಳೆಂಬ ಶರಣರನ್ನು ಎಳೆಹಟ್ಟೆಯಂ ಕಟ್ಟಿ ಎಳಸಲಿಕ್ಕೆ ಪ್ರಯತ್ನವನ್ನು ಪಟ್ಟದ್ದರಿಂದ ಇಂಥ ಉತ್ಪಾತವನ್ನು ಕಣ್ಣಿಂದ ನೋಡಬಾರದು. ಚನ್ನಬಸವರಾಜೇಂದ್ರರು ಈ ಕಾಲಸೂಚನೆಯನ್ನು ತಮ್ಮ ದಿವ್ಯಜ್ಞಾನದಿಂದ ನೋಡಿ ಪ್ರಮಥ ಗಣ ಸಮೂಹಕ್ಕೆ ಸೂಚಿಸಿ ಆ ಮೇಲೆ ಪ್ರಮಥ ಗಣಂಗಳ ಮುಂದಿಟ್ಟುಕೊಂಡು ತಮ್ಮ ಶಿವಾನುಭವ ಚರಂತಿಗೆ ಪುಸ್ತಕವನ್ನು ರುದ್ರಮುನಿಸ್ವಾಮಿಗಳಿಗೆ ಕೊಟ್ಟು ಗಣಪರ್ವದ ಉದ್ದಿಶ್ಯ ಹೋಗುತ್ತೇನೆ ಎಂದು ಬಿಜ್ಜಳರಾಯನಿಗೆ ತಿಳಿಸಿ ಅನಂತರ ಮಲ್ಲೂಖಾನನೆಂಬ ವಜೀರ ಇವನ ಕಡೆಯಿಂದ ೧೨ ಸಾವಿರ ದಂಡು ತೆಗೆದುಕೊಂಡು ಗಣಪರ್ವವಂ ಮಾಡಿ ಎಲ್ಲ ಗಣಸಮೂಹದೊಡನೆ ಉಳುವಿಗೆ ದಯಮಾಡಿಸುತ್ತಾ ಇರುವಲ್ಲಿ ಈ ಸಂಗತಿಯು ಬಿಜ್ಜಳರಾಯನಿಗೆ ತಿಳಿದು ತನ್ನ ದಂಡು ಮಾರ್ಬಲವಂ ತೆಗೆದುಕೊಂಡು ಉಗ್ರ ಕೋಪದಿಂದ ಬೆನ್ನಹತ್ತಿ ಬರುವ ಕಾಲದಲ್ಲಿ ಹಿರಿಯ ಹೆಗ್ಗಡತಿ ಹೊನ್ನಮ್ಮನ ಚಾವಡಿ ಬಳಿಯಲ್ಲಿ ಜಗದೇವಮಲ್ಲ ಬಮ್ಮಯ್ಯಗಳೆಂಬ ಶರಣರು ಪಂಜುಗಾರರಾಗಿ ಶಿವಶರಣರ ದ್ರೋಹಿಯಾದ ಬಿಜ್ಜಳ ಅರಸನನ್ನು ಇರಿಯುತ್ತೇವೆ ಎಂದು ಮೂರುವೇಳೆ ಸಾರಿ ರಾಕ್ಷಸನಾಮ ಸಂವತ್ಸರದ ಕಾರ್ತಿಕ ಶುದ್ಧ ೧೫ ಮಂಗಳವಾರ ನಿಶಾ ರಾತ್ರಿಯಲ್ಲಿ ಬಿಜ್ಜಳನ ಸಂಹರಿಸಿ ಬುಧವಾರ ಉದಯ ಮೂಡುತ ಕಲ್ಯಾಣ ಪಟ್ಟಣವಂ ಬಿಟ್ಟು ದಯಮಾಡಿಸಿದರು.

೩. ಸಿದ್ಧರಾಮೇಶ್ವರ

“ಕ” ಪ್ರತಿ

ಶ್ರೀ ಸಿದ್ಧರಾಮೇಶ್ವರನು ತಮ್ಮ ಗುರುಗಳಾದ ಶ್ರೀ ಚನ್ನಬಸವೇಶ್ವರನು ಬೋಧಿಸಿದ ಕರಣಹಸುಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪ್ರಭು ದೇವರ ಮಂತ್ರಗೋಪ್ಯ, ಎರಡೆಂಬಂತ್ತೆಂಟುಕೋಟಿ ವಚನ ಸಂಗ್ರಹಿಸಿದ ಶಿವಾನುಭವ ಪುಸ್ತಕನ್ನು ರುದ್ರಮುನಿಸ್ವಾಮಿಗಳು ಮುಂತಾದ ಸಕಲ ಗಣ ಸಮೂಹನ್ನು ಮುಂದಿಟ್ಟುಕೊಂಡು ತಮ್ಮ ಶಿಷ್ಯರಾದ ಅನಾದಿ ಗಣೇಶ್ವರನೆಂಬ

ವರಿಗೆ ಕೊಟ್ಟು ತಾವು ಬಿಲ್ಲೇಶಬ್ರಹ್ಮಯ್ಯ ಮುಂತಾದ ಶಿವಶರಣ
ಮೋಕ್ಷವಂ ಕೊಟ್ಟು ಶಿವಮತವನ್ನು ಉದ್ಧಾರವನ್ನು ಮಾಡಿ ಸೊನ್ನಲಾಪುರ
ಅನೇಕ ಮಹಿಮೆಗಳ ಮಾಡಿ ಆ ಸ್ಥಲದಲ್ಲಿ ತಾವು ಕಟ್ಟಿಸಿದ ಕೆರೆಯ ತಟ
ಮಠವನ್ನು ಕಟ್ಟಿಸಿ ಆ ಮಠದಲ್ಲಿ ಯೋಗಸಮಾಧಿಯಂ ತೆಗೆಸಿ ಶಿವಯೋ
ದೊಡನೆ ಪೂರ್ದವ ಮಾಡಿದರು. ತೋರುಗಡ್ಡುಗೆ ಸದರಿ ಸ್ಥಳದಲ್ಲಿ ಇರುತ್ತ
ಇದಕ್ಕೆ ಸದರಿ ಸಿದ್ಧರಾಮೇಶ್ವರಸ್ವಾಮಿಗಳ ವಿಷಯ ನಿರೂಪಿಸಿದ ಸಿದ್ಧರಾಮೆ
ಶ್ವರನ ಪುರಾಣವೇ ಸಾಕ್ಷಿ.

"ಗ" ಪ್ರತಿ

ಶ್ರೀ ನಿರಂಜನ ರುದ್ರಮುನಿಸ್ವಾಮಿಗಳು ಮಾಡಿದ ನಿರ್ಣಯ ಇನ
ಶಿವಾನುಭವ ಪಟ್ಟದವರಾದ ರುದ್ರಮುನಿಸ್ವಾಮಿಗಳವರು, ಚನ್ನಬಸವೇಶ
ದೇವರು ಮುಂತಾದ ಸಕಲ ಗಣರು ಉಳವಿಗೆ ಹೋಗುವಾಗ್ಗೆ ಆ ಗಣಂ
ಪೈಕಿ ಕೆಲವರು ಮರ್ತ್ಯದಲ್ಲಿ ಇಚ್ಛಾ ಇದ್ದ ಗಣಂಗಳು ಕಲ್ಯಾಣದಲ್ಲಿ ನಿಂತ
ಕೆಲವರು ತಮ್ಮ ಇಚ್ಛೆ ಇದ್ದಕಡೆಗೆ ಚಿತ್ತೈಸಿದರು, ಈ ಗಣಸಮೂ
ದೊಡನೆ ರುದ್ರಸ್ವಾಮಿಗಳವರು ಕಲ್ಯಾಣ ತ್ರಿಪುರಾಂತಕ ಕೆರೆಯ ತಟ್ಟೆಯಲ್ಲಿ
ಲಿಂಗದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಅಲ್ಲಿರ್ದು ಇನ್ನು ಮು
ಈ ಮರ್ತ್ಯದಲ್ಲಿ ಚಾತುರ್ಯ ಹೆಚ್ಚಿ ಭಕ್ತಿಚರನಾಗಿ ಗುರುಲಿಂಗ ಜಂಗಮ
ನಂಬಿಗೆ ಇಲ್ಲದೆ ಸಾವಿರಕ್ಕೊಬ್ಬ ಬಲಭಕ್ತ ಕೋಟಿಗೊಬ್ಬ ಶರಣ ಹೀಗೆ ಸ್ತ್ರ
ನಿಂದೆಗಳು ಹೆಚ್ಚಾಗುತ್ತವೆ. ಇನ್ನು ಈ ಲೋಕದಲ್ಲಿರಬಾರದೆಂದು ಈ ಗ
ಸಮೂಹದ ವಂಶಿಕರಾದ ಗಣಂಗಳಲ್ಲಿ ಮರ್ತ್ಯದಲ್ಲಿ ಪೂಜ್ಯಾಪೂಜ್ಯಾ ವಿಶೇ
ವಾಗಬೇಕೆಂದು ಗುರುಸ್ಥಲದ ಶಕ್ತಿ ಹಿಡಿದ ೧೨ ಸಾವಿರ ಜಂಗಮವು ಶಿಕ್ಷೆ
ಕಾರಣರು. ಶಂಖಗಿಳಲು ಮುಂತಾದ ಮುದ್ರೆಗಳು ಹಿಡಿದ ಅತೀಶ, ಘನಲಿ
ವಟು. ಚರಂತಿ, ಮಹಂತು, ಕೂಡಿದ ಲಿಂಗಸ್ಥಲದವರು ಆರುಸಾವಿರ ದೀಕ್ಷೆ
ಕಾರಣರು. ಸದರೀ ಮುದ್ರೆಗಳು ಸ್ಥಾವರವಾದಕಾರಣ ಇವುಗಳ ಹಿಡಿ
ಬಾರದೆಂದು ನಿರಾಭಾರ ವೀರಶೈವವುಳ್ಳ ಜಂಗಮಸ್ಥಲದ ವಿರಕ್ತರು ಪ್ರಣ
ಸಂಬಂಧವಾದ ಶಿವಾನುಭವ ಪುಸ್ತಕವ ಧರಿಸಿ ಜೋಳಮಸ್ತಕ ತೋಳಿಗಾಧ
ಮುಂತಾದ ಪಂಚಮುದ್ರೆಗಳುಳ್ಳ ನೂರುಸಾವಿರ ವಿರಕ್ತದೇಸಿಕರೇ ಮೋಕ್ಷ

ಕಾರಣರಾಗಿ ಆಚರಿಸುವುದು. ಇವರೊಳಗೆ ೬೩ ಪುರಾತನರ ಕಾಯಕವ ಧರಿಸಿದ ಜಂಗಮವು ದುಂಡಗಪ್ಪರ ಪಹರೆಗಂಟೆ ಕೂಗಿನ ಮಾರಯ್ಯ, ಮುಗ್ಧಸಂಗಯ್ಯ, ದೀಪದ ಕಾಯಕ, ಬಿಬ್ಬಿಮುಳ್ಳ ಹಾವುಗೆ, ಶಸ್ತ್ರ ಮುಂತಾದ ಕಾಶೀ ಧರಿಸಿದವರು ಕಲಿಖ್ಯಾತರು ಮುಂತಾದ ಟಕ್ಕೀ ಕಾಯಕದವರು ಹಾಂಗು ವಸ್ತ್ರ ವಿಭೂತಿ ಗಣಾಚಾರಿ, ಮಠಪತ್ತಿ, ಭಂಡಾರಿ, ಸ್ಥಾವರ ಪೂಜಾರಿ ಕಂಬಿ ಮುಂತಾದವರು; ಸಮ್ಮೇಳದಯ್ಯಗಳು ಇವರೆಲ್ಲರೂ ರೂಪಕ್ಕೆ ಯೋಗ್ಯರಲ್ಲದೆ ಪೂಜ್ಯಕ್ಕೆ ಯೋಗ್ಯರಲ್ಲವು. ಆದಕಾರಣ ರೂಪಿಗೆ ನಮಸ್ಕಾರ, ಅಪ್ಯಾಯನಕ್ಕೆ ಅನ್ನ ಕೊಡಬೇಕು ಎಂದು ನಿರ್ಣಯಿಸಿ ಅದೇ ಗುಡ್ಡದಲ್ಲಿ ಮಠದೊಳಗೆ ಗವಿಯಂ ಮಾಡಿಸಿ ಅದರಲ್ಲಿ ಯೋಗಸಮಾಧಿ ತೆಗೆಸಿ ಆ ಮಠದ ಸುತ್ತ ಸಾವಿರ ಬಿಲ್ವವೃಕ್ಷಗಳ ಹಾಕಿಸಿ ತಾವು ಯೋಗಸಮಾಧಿಯಲ್ಲಿ ಮೂರ್ತವ ಮಾಡಿದರು. ಇವರ ತೋರಗದ್ದುಗೆ ಕಲ್ಯಾಣದ ತ್ರಿಪುರಾಂತಕ ಕೆರೆಯ ದಂಡೆಯಲ್ಲಿರುವ ಮರಿದೇವರ ಗುಡ್ಡದಲ್ಲಿ ಇರುತ್ತದೆ.

೪. ಅನಾದಿ ಗಣೇಶ್ವರ ಸ್ವಾಮಿಗಳು

"ಕ" ಪ್ರತಿ

೪ನೆಯ ಶಿವಾನುಭವ ಚರಂತಿಗೆ ಪಟ್ಟದ ಅನಾದಿ, ಗಣೇಶ್ವರಸ್ವಾಮಿಗಳು ಚನ್ನಸಂಜಯ್ಯ, ಕುದುರೆಶಾಂತಯ್ಯ, ಕೋಲಶಾಂತಯ್ಯ, ಮಂಚದ ಶಾಂತಯ್ಯ ಮುಂತಾದ ಗಣಸಮೂಹದೊಡನೆ ಸಕಲ ದೇಶಂಗಳ ಸಂಚರಿಸುತ್ತಾ ಶಿವಭಕ್ತರುಗಳಿಗೆ ಷಟ್‌ಸ್ಥಳ ಜ್ಞಾನೋಪದೇಶವಂ ಮಾಡುತ್ತಾ ವೀರಶೈವ ಮತವ ಉದ್ಧರಿಸಿ ತಾವು ಶ್ರೀಶೈಲಕ್ಕೆ ದಯಮಾಡಿಸಿ ಆ ದಾರಿಯಲ್ಲಿ ಮಲ್ಲಿಕಾರ್ಜುನ ಭ್ರಮರಾಂಬೆ ಇವರ ಪ್ರಸನ್ನತೆಯಿಂದ ಮಠವನ್ನು ಮಾಡಿಸಿ ಆ ಮಠದಲ್ಲಿ ಲಿಂಗಪೂಜೆ, ಜಂಗಮ ದಾಸೋಹದೊಡನೆ ಪರ್ವತ ಸಿಂಹಾಸನದ ವೀರಭಿಕ್ಷಾವತಿ ಪಟ್ಟಾಧ್ಯಕ್ಷರಿಗೆ ಕ್ರಿಯಾಮೂರ್ತಿಗಳಾಗಿ ಅಲ್ಲಿರುವ ಭಕ್ತ ಮಾಹೇಶ್ವರರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡುತ್ತಾ ಕೆಲವುದಿವಸ ರುದ್ರಮುನಿದೇವರು ಶಿಷ್ಯ ಮುಕ್ತಿಮುನಿದೇವರ ಭಕ್ತಿಯೊಳು ಇರ್ದು ಕಡೆಗೆ ತಮ್ಮಂತು ಶಿವಾನುಭವ ಚರಂತಿಗೆಯಂ ಆದಿಗಣವರನಿಗೆ ಕೊಟ್ಟು ಶಿರಿಶೈಲದ ಮಠದಲ್ಲಿ ಯೋಗಸಮಾಧಿಯಲ್ಲಿ ಮೂರ್ತವ ಮಾಡಿ ನಿರ್ವಯವಾದರು. ಇವರ ತೋರುಗದ್ದುಗೆ ಶ್ರೀಶೈಲದಲ್ಲಿ ಇರುತ್ತದೆ.

೫. ಆದಿಗಣೇಶ್ವರರು

"ಕ" ಪ್ರತಿ

ಇವರ ಶಿಷ್ಯರಾದ ಆದಿಗಣೇಶ್ವರನು ಮುಕ್ತಿಮುನಿದೇವರ ಶಿಷ್ಯ ದಿಗಂ ಮುಕ್ತಿ ಮುನಿದೇವರ ಭಕ್ತಿಯೋಳು ಮಲದೇಶಕ್ಕೆ ದಯಮಾಡಿಸಿ ಆ ದೇ ಮುಂತಾದ ಸಕಲದೇಶವಂ ಸಂಚರಿಸಿ ಅಲ್ಲಿರುವ ಭಕ್ತಗಣಂಗಳಿಗೆ ಷಟ್ಸ್ಥ ಜ್ಞಾನೋಪದೇಶವನ್ನಿತ್ತು ಪಾವನವ ಮಾಡಿ ತಾವು ಸಮುದ್ರತೀರೆ ಗೋ ಎಂಬ ಪುರವಂ ಕಟ್ಟಿಸಿ ಆ ಪುರದಲ್ಲಿ ಗೋಹೇಶ್ವರ ಲಿಂಗವನ್ನು ಪ್ರತಿಷ್ಠಿ ತಾವು ಅ ಸ್ಥಲದಲ್ಲಿ ಲಿಂಗಪೂಜೆ ಜಂಗಮ ದಾಸೋಹದೊಡನೆ ಕೆಲವು ದಿ ಇರ್ದು ಆ ಪಟ್ಟಣವ ಮ್ಲೇಂಛರು ಕೈವಶಮಾಡಿಕೊಳ್ಳಲು, ಆ ಕಾ ಆ ದೇವಾಲಯದ ಕದವ ಬಂದುಮಾಡಿಸಿ ಈ ಸ್ಥಲಕ್ಕೆ ಮುಂದೆ ಪ್ರಭು ಪ ಭೂತರಾದ ವಿರಕ್ತಜಂಗಮವು ಬಂದಾಗ್ಗೆ ಈ ದೇವಾಲಯದ ಬಾಗಿಲ ತೆ ಲಿಂಗದ ಪೂಜೆ ಆಗಲಿ ಈ ಪಟ್ಟಣದಲ್ಲಿ ಇರುವ ಭವಿಗಳು ನಾಶವಾಗಲಿ ಎಂ ಕುರುಹು ಇಟ್ಟು ಅಲ್ಲಿಂದ ಗೋಕರ್ಣಕ್ಕೆ ದಯಮಾಡಿಸಿ ಅಲ್ಲಿರುವ ಮ ಬಲೇಶ್ವರನ ದೇವಾಲಯದಲ್ಲಿ ಇರ್ದು ಶಿವಭಕ್ತಿಯನ್ನು ಅಲ್ಲಿರುವ ಜನ ತಿಳಿಸಿ ಅಲ್ಲಿಂದ ಉಡುಪಿ, ಸುಬ್ರಹ್ಮಣ್ಯ, ಧರ್ಮಸ್ಥಳ, ನೀಲಗಿರಿಬೆಟ್ಟ, ಪ ಯಾಳ ಮುಂತಾದ ದೇಶಂಗಳ ಸಂಚರಿಸಿ ಅಲ್ಲಿದ್ದ ಶಿವಭಕ್ತರುಗಳಿಗೆ ಷಟ್ಸ್ಥ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವಿತ್ತು, ಆ ಬಳಿಕ ಕಾವೇರಿ ಸಮೀಪ ತಲಕಾಡ ಸೀಮೆಯಲ್ಲಿ ಇರುವ ಒಂದು ಬೆಟ್ಟಕ್ಕೆ ಪ್ರಭುಸ್ವಾಮಿ ಬೆಟ್ಟವೆಂತ ಹೆಸರಿಟ್ಟು, ಅಲ್ಲಿ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಆ ಸೀಮೆ ಭಕ್ತರ ಭಕ್ತಿಯೊಡನೆ ಲಿಂಗಪೂಜೆ ಜಂಗಮ ದಾಸೋಹವ ಮಾಡುತ ಸಮೂಹದ ಪೈಕಿ ನಿರ್ಮಾಯ ಗಣೇಶ್ವರರೆಂಬುವರಿಗೆ ತಮ್ಮ ಶಿವಾನು ಚರಂತಿಗೆಯಂ ಕೊಟ್ಟು ಗೋವೆಯಲ್ಲಿ ಬಯಲಾದರು. ಇವರು ಬಯಲ ಲಿಂಗದಾಲಯವು ಈಗ ಹಾಲಿ ಇದೆ.

೬. ನಿರ್ಮಾಯ ಗಣೇಶ್ವರರು

ಇವರ ಬಳಿಯಲ್ಲಿದ್ದ ಗಣಸಮೂಹದ ಪೈಕಿ ಮಾದೇಶ್ವರರೆಂಬ ವಿರಕ್ತರು ತಮ್ಮ ಗುರುಗಳಾದ ನಿರ್ಮಾಯ ಗಣನಾಥರು ತಮ್ಮ ಶಿವಾನು

ಚರಂತಿಗೆ ಪಟ್ಟವನ್ನು ನಿರಂಜನ ಗಣನಾಥನಿಗೆ ಮಾಡಲು, ಈ ಮನಸ್ತಾಪದಿಂದ ಗುರುಗಳಿಗೆ ಹೇಳದೆ ೩-೪ ಬೆಟ್ಟಗಳ ದಾಟಿ ಒಂದು ಬೆಟ್ಟದಲ್ಲಿ ಹೋಗಿ ವಾಸವ ಮಾಡಲು, ಅವರನ್ನು ಕರೆದುಕೊಂಡು ಬರುವುದಕ್ಕೆ ತಾವು ಮೂರ್ತಮಾಡುವ ಬಸವನನ್ನೂ ತಮ್ಮ ಲಿಂಗಪೂಜೆಯ ಕಾಲದಲ್ಲಿ ಹೆಡೆ ಎತ್ತಿಕೊಂಡು ಇರುವಂಥ ಸರ್ಪನನ್ನೂ ಕಳುಹಿಸಿ, ಆಮೇಲೆ ಕೆಲವು ಗಣಂಗಳನ್ನೂ ಕಳುಹಿಸಿದರೂ ಮಾದೇಶ್ವರನು ಬಾರದೆ ನಿರ್ವಯವಾದದ್ದನ್ನು ಕೇಳಿ ತಾವು ನಿರ್ವಯವಾದರು. ಇವರ ತೋರಗದ್ದುಗೆ ಶಂಭುಲಿಂಗನ ಬೆಟ್ಟದ ಸಮೀಪವಾದ ಪ್ರಭುಸ್ವಾಮಿಗಳ ಬೆಟ್ಟದಲ್ಲಿ ಇರುತ್ತದೆ. ಸದರೀ ಮಾದೇಶ್ವರನು ಬಯಲಾದ ಬೆಟ್ಟಕ್ಕೆ ಮಾದೇಶ್ವರ ಬೆಟ್ಟವೆನ್ನುತ್ತಾರೆ. ಸದರಿ ಗುರುಗಳು ಕಳುಹಿಸಿದ ಬಸವನು ಹೋದ ಹಾದಿಗೆ ಬಸವನ ಹಾದಿ ಎನ್ನುತ್ತಾರೆ. ಸರ್ಪ ಹೋದ ಹಾದಿಗೆ ಸರ್ಪನ ಹಾದಿ ಎನ್ನುತ್ತಾರೆ. ಈ ಹೊತ್ತಿಗೂ ಮಾದೇಶ್ವರ ಬೆಟ್ಟದಲ್ಲಿ ವರುಷಕ್ಕೆ ೨ ವೇಳೆ ಜಾತ್ರೆ ಆಗುತ್ತದೆ.

೭. ನಿರಂಜನ ಸ್ವಾಮಿಗಳು

೭ನೆಯ ಶಿವಾನುಭವ ಚರಂತಿಗೆ ಪಟ್ಟದ ನಿರಂಜನ ಸ್ವಾಮಿಗಳು ತಮ್ಮ ಗಣಸಮೂಹದಲ್ಲಿ ಇರ್ದ ನೂರ ಒಂದು ವಿರಕ್ತರೊಡನೆ ದೇಶದಲ್ಲಿ ಸಂಚರಿಸಿ ಶಿವಮತವ ಉದ್ಧಾರವನ್ನು ಮಾಡಿ ಭಕ್ತಮಾಹೇಶ್ವರರಿಗೆ ಷಟ್‌ಸ್ಥಲ ಜ್ಞಾನ ಬೋಧೆಯನ್ನು ಮಾಡಿ ಮೋಕ್ಷ ಮಾರ್ಗವನ್ನು ಕೊಡುತ್ತ, ಆ ದೇಶದ ಪ್ರಾಂತ ದಲ್ಲಿರುವ ಒಂದು ಬೆಟ್ಟಕ್ಕೆ ನೂರೊಂದು ಸ್ವಾಮಿ ಬೆಟ್ಟವೆಂತ ಹೆಸರಿಟ್ಟು ಅಲ್ಲಿ ಮಠವನ್ನು ಕಟ್ಟಿಸಿ ಆ ಮಠದಲ್ಲಿ ಆ ದೇಶಭಕ್ತ ಮಾದೇಶ್ವರರ ಭಕ್ತಿಯೊಡನೆ ಕೆಲವುಕಾಲ ಇದ್ದು ತಮ್ಮ ಗಣಸಮೂಹದ ಪೈಕಿ ಜ್ಞಾನಾನಂದ ಮುನೀಶ್ವರ ಸ್ವಾಮಿಗಳಿಗೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಮಾಡಿ ಅದೇ ಬೆಟ್ಟದಲ್ಲಿ ಬಯಲಾದರು. ಇವರ ತೋರಗದ್ದುಗೆ ನೂರೊಂದಯ್ಯನ ಬೆಟ್ಟದಲ್ಲಿ ಇರುತ್ತದೆ.

೮. ಜ್ಞಾನಾನಂದ ಸ್ವಾಮಿಗಳು

೮ನೆಯ ಶಿವಾನುಭಾವದ ಚರಂತಿಗೆ ಪಟ್ಟದ ಜ್ಞಾನಾನಂದ ಸ್ವಾಮಿಗಳು ಅದೇ ಮಠದಲ್ಲಿಯೇ ತಮ್ಮ ಗಣಸಮೂಹದೊಡನೆ ಲಿಂಗಪೂಜೆ ಜಂಗಮ

ದ್ದಾಸೋಹ ಮಾಡುತ್ತಾ ಆ ದೇಶದಲ್ಲಿ ತಮ್ಮ ಕಡೆಯಿಂದ ಗಣಗಳ ಕಳುಹಿಸಿ ಕಾಣಿಕೆಗಳ ತರಿಸಿಕೊಳ್ಳುತ್ತಾ ಅನಾಚಾರದಲ್ಲಿ ಇದ್ದ ಶಿವಭಕ್ತರನ್ನು ಆಚಾರದಲ್ಲಿ ತರುತ್ತಾ, ತಿರುಗಿಬಿದ್ದವರ ಕಡೆಯಿಂದ ಅಪರಾಧ ಕಾಣಿಕೆ ತರಿಸುತ್ತಾ, ಬಂದ ಭಕ್ತಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಮೋಕ್ಷಮಾರ್ಗವನ್ನು ಕೊಡುತ್ತಾ ತಾವು ಕೆಲವು ಕಾಲದಲಿರ್ದು ಆಮೇಲೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಆತ್ಮಗಣೇಶ್ವರನಿಗೆ ಕೊಟ್ಟು ಬಯಲಾದರು. ಇವರ ತೋಕ ಗದ್ದುಗೆ ನೂರೊಂದುಸ್ವಾಮಿ ಬೆಟ್ಟದಲ್ಲಿ ಇರುತ್ತದೆ.

೯. ಆತ್ಮಗಣನಾಥರು

೯ನೆಯ ಶಿವಾನುಭಾವ ಚರಂತಿಗೆ ಪಟ್ಟದ ಆತ್ಮಗಣನಾಥರೆಂಬ ಸ್ವಾಮಿಗಳು ತಮ್ಮ ಗಣತಿಂಥಿಣಿ ಸಹಿತವಾಗಿ ಕಂಚಿ, ಕಾಳಹಸ್ತಿ, ಚಿದಂಬರ, ತಿರುಣಾಮಲೆ, ಕುಂಭಕೋಣ ಮುಂತಾಗಿ ಚೋಳದೇಶದಲ್ಲಿ ಸಂಚರಿಸುತ್ತಾ ಅರುಣಾಚಲಕ್ಕೆ ದಯಮಾಡಿಸಿ ಅಲ್ಲಿರುವ ಕೂಗು ನಮಶ್ಶಿವಾಯ, ಗುರು ನಮಶ್ಶಿವಾಯ ಎಂಬ ಗಣಂಗಳಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ಅದೇ ತಿರುಣಾಮಲೆಯಲ್ಲಿ ಮಠವನ್ನು ಮಾಡಿಸಿ ಆ ಮಠದಲ್ಲಿ ಲಿಂಗಪೂಜೆ ಜಂಗಮದಾಸೋಹಗಳ ಮಾಡುತ್ತಾ ಆ ದೇಶದ ಭಕ್ತರುಗಳು ಶರಣಾಗತರಾದವರನ್ನು ರಕ್ಷಿಸುತ್ತಾ ದುರ್ಜನರ ಶಿಕ್ಷಿಸುತ್ತ, ತಮ್ಮ ಕಡೆಯಿಂದ ಶಾಖಾಚಾರಮೂರ್ತಿಗಳ ಕಳುಹಿಸಿ ಕಾಣಿಕೆ ಎತ್ತಿಸಿ ತರಿಸುತ್ತಾ ಅದೇ ಕ್ಷೇತ್ರದಲ್ಲಿ ಇರ್ದು ಆ ಬಳಿಕ ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಅಧ್ಯಾತ್ಮ ಗಣನಾಥಂಗೆ ಮಾಡಿ ಅಲ್ಲಿಯೇ ಬಯಲಾದರು. ಇವರ ತೋರಗದ್ದುಗೆ ತಿರುಣಾಮಲೆಯಲ್ಲಿ ಇರುತ್ತದೆ. ಇವರ ಶಾಖಾಗಣಂಗಳಾದ ಕೂಗು ನಮಶ್ಶಿವಾಯ ಗುರು ನಮಶ್ಶಿವಾಯ ಇವರ ಮಠಗಳು ತಿರುವಣ್ಣಾಮಲೆ ಚಿದಂಬರದಲ್ಲಿ ಇರುತ್ತವೆ.

೧೦. ಅಧ್ಯಾತ್ಮ ಗಣೇಶ್ವರರು

೧೦ನೆಯ ಶಿವಾನುಭವ ಚರಂತಿಗೆ ಪಟ್ಟದ ಅಧ್ಯಾತ್ಮ ಗಣೇಶ್ವರ ಸ್ವಾಮಿಗಳು. ತಮ್ಮ ಗಣಸಮೂಹದೊಡನೆ ಚೋಳದೇಶವಂ ಸಂಚರಿಸುತ್ತಾ ಪೆನುಗೊಂಡೆ, ಹೆಂಡೆ, ಅನಂತಪುರ, ಬುಕ್ಕಾಪಟ್ಟಣ, ನಂದಿ, ಮಹಾನಂದಿ ಮುಂತಾದ ಚೋಳದೇಶದಲ್ಲಿ ಇರುವ ವೈಷ್ಣವ, ಜೈನ ಮುಂತಾದವರನ್ನು

ಶಾಸ್ತ್ರಮುಖದಿಂದ ಗೆದ್ದು ಆ ದೇಶಗಳಲ್ಲಿ ತಿರುಗಿ ಬಿದ್ದ ಜನರಿಗೆ ಬಹಿಷ್ಕಾರ ವನ್ನು ಕೊಟ್ಟು ಶರಣಾಗತರಾದವರ ಕಡೆಯಿಂದ ಅಪರಾಧ ಕಾಣಿಕೆ ತೆಗೆದು ಕೊಳ್ಳುತ್ತಾ ಶ್ರೀಶೈಲಕ್ಕೆ ದಯಮಾಡಿಸಿ ಆ ಕ್ಷೇತ್ರದಲ್ಲಿ ಕೆಲವು ದಿವಸ ಇದ್ದು ಆಮೇಲೆ ತಮ್ಮ ಗಣಸಮೂಹದ ಪೈಕಿ ರುದ್ರಮುನಿಸ್ವಾಮಿಗಳಿಗೆ ತಮ್ಮ ಶಿವಾನು ಭಾವ ಚರಂತಿಗೆ ಪಟ್ಟವನ್ನು ಮಾಡಿ ತಾವು ನಿರ್ವಯಲಾದರು. ಇವರ ತೋರು ಗದ್ದುಗೆ ಶ್ರೀಶೈಲದಲ್ಲಿ ಇರುತ್ತದೆ.

೧೧. ಶ್ರೀ ರುದ್ರಮುನೀಶ್ವರರು

೧೧ನೆಯ ಶಿವಾನುಭಾವ ಚರಂತಿಗೆ ಪಟ್ಟದ ಶ್ರೀ ರುದ್ರಮುನೀಶ್ವರರು ಭಕ್ತಿ ಜ್ಞಾನ ವೈರಾಗ್ಯವುಳ್ಳ ಘನವೀರಶೈವ ಭಾವದಿಂದ ಗಣಸಮೂಹದೊಡನೆ ದೇಶಂಗಳ ಸಂಚರಿಸುತ್ತ ಹೊಯ್ಸಳ ದೇಶಕ್ಕೆ ದಯಮಾಡಿಸಿ ಆ ದೇಶದಲ್ಲಿ ಇರುವ ಹಳೆಯಬೀಡು, ವೇಲಾಪುರ, ಸೋಸಲೆ, ಚನ್ನರಾಯಪಟ್ಟಣ, ಆನೆ ಗೊಂದಿ, ವಿದ್ಯಾನಗರ, ಪಂಪಾಕ್ಷೇತ್ರ, ಕುಮಾರಸ್ವಾಮಿ ಮುಂತಾದ ದೇಶಂಗಳ ಲ್ಲಿರುವ ಭಕ್ತರಿಗೆ ಷಟ್‌ಸ್ಥಲ ಜ್ಞಾನೋಪದೇಶವಂ ಮಾಡಿ ವಿದ್ಯಾನಗರ ಮುಂತಾದ ದೇಶಗಳಲ್ಲಿರುವ ವೀರಣ್ಣ ಒಡೆಯರವರು, ಕರಸ್ಥಲದ ನಾಗಿದೇವರು, ಗುರುಬಸವದೇವರು, ಬಾಲಲಿಂಗಣ್ಣ, ಬತ್ತಲೇಶ್ವರ, ಬಿಲ್ಲಾಶಾಂತಯ್ಯ ಮುಂತಾದ ನೂರೊಂದು ವಿರಕ್ತರಿಗೆ ಗುರುಗಳಾಗಿ ಪ್ರೌಢದೇವೇಂದ್ರನೆಂಬ ರಾಜನ ಭಕ್ತಿಯೊಡನೆ ಕೆಲವು ದಿವಸ ವಿದ್ಯಾನಗರದಲಿದ್ದು ಆ ದೇಶದಲ್ಲಿ ಕಾಣಿಕೆಯಂ ಎತ್ತಿಸುತ್ತ ತಿರುಗಿಬಿದ್ದವರ ಶಿಕ್ಷಿಸಿ ಶರಣಾಗತರಾದವರ ರಕ್ಷಿಸಿ ಅಪರಾಧ ಕಾಣಿ ಕೆಯಂ ಒಪ್ಪಿಸಿಕೊಂಡು ಲಿಂಗಪೂಜೆ ಜಂಗಮದಾಸೋಹದೊಡನೆ ದೇಶಗಳ.... ....(ಮೇಲೆ ರುದ್ರಮುನಿಸ್ವಾಮಿಗಳ ಎಂಬ ಹೆಸರಿನ ಕೆಳಗೆ ಗೀಟು ಹಾಕಲ್ಪಟ್ಟಿದೆ. ಇದರ ಕಾರಣವು ಗೊತ್ತುಮಾಡಲ್ಪಡಬೇಕಾಗಿದೆ.) "ಕ" ಪ್ರತಿಯಲ್ಲಿ ನಿರಂಜನ ಶ್ರೀ || || ಗಳ ವಿಚಾರವು ಮೇಲೆ ಕಂಡ ಪ್ರಕಾರ ಇದ್ದಷ್ಟನ್ನು ಮುದ್ರಿಸಿ ಇದೆ. ಈ ಪ್ರತಿಯಲ್ಲಿ ಒಂದು ಕಡೆಯಲ್ಲಿ ಬರೆಯಲ್ಪ ಟ್ಟಿರುವ ಶ್ರೀ ಅಲ್ಲಮಪ್ರಭುಪರಂಪರೆಯ ಪಟ್ಟಿಯಲ್ಲಿ ೧೧ನೆಯ ರುದ್ರ ಮುನೀಶ್ವರರು, ಅವರಿಂದ ೧೨ ಬಸವಪ್ರಭುಸ್ವಾಮಿಗಳು, ಅವರಿಂದ ೧೩ ಆದಿಲಿಂಗೇಶ, ಬಳಿಕವರಿಂದ ೧೪ ಚನ್ನವೀರೇಶ, ಇವರ ನಂತರ ೧೫ ಗೋಸಲ

ಘುತೀಶ, ಇವರಿಂದ ೧೬ ಶಂಕರೇಶ, ಇವರಿಂದ ೧೭ ದಿವ್ಯಲಿಂಗೇಶ, ಇವರಿಂದ ೧೮ ಶ್ರೀ ಚನ್ನಬಸವೇಶ, ಇವರಿಂದ ೧೮ ಶ್ರೀ ಚನ್ನಬಸವೇಶ, ಇವರ ಕರಸಂಜನಿತ ೧೮ ತೋಂಟಪ ಸಿದ್ಧಲಿಂಗೇಶಸ್ವಾಮಿಗಳು" ಹೀಗೆ ಬರೆದಿರುತ್ತಾರೆ.

(ಶ್ರೀ ನಿರಂಜನ ರತ್ನಾಕರ ೩ ನೆಯ ಭಾಗ ೧೧೯ ರಿಂದ ೧೨೯)

ಗೋಸಲ ಚೆನ್ನಬಸವೇಶ್ವರ ಗದ್ದುಗೆಯಸ್ಥಾನ ನಿರ್ದೇಶ

ಸಂಗ್ರಾಹಕರು :—ಎಸ್. ಎಂ. ಪಿ. ನಂಜಪ್ಪಯ್ಯನವರು,
ತೋಂಟದ ಶ್ರೀ ಸಿದ್ಧಲಿಂಗೇಶ್ವರ ಮಠ, ಎಡೆಯೂರು.

ಕ್ರಮಗೊಳಿಸಿ ಬರೆದವರು :—ಸಂಗಣ್ಣ ಕುಪ್ಪಸ್ತ ಅವರು, ಗದಗ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಜನಿಸಿದ ಬಸವಾದಿ ಶರಣರ ಅಧ್ಯಾತ್ಮಸಾಧನೆ ಅಖಂಡ ಮಾನವಜನಾಂಗಕ್ಕೆ ಅಮೂಲ್ಯವಾದ ಕಾಣಿಕೆ. ದೇಶ, ಭಾಷೆ, ಜನಾಂಗ, ಲಿಂಗ, ಕಾಲತೀತವಾದ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಆದರ್ಶವನ್ನು ಬೀರಿದವರು ಅವರು.

ಇದೇ ಉಚ್ಚಸಂಪ್ರದಾಯದಲ್ಲಿಯೇ ಹದಿನೈದು ಶತಮಾನದಲ್ಲಿ ಬೆಳಗಿ ಬಾಳಿದವರು ತೋಂಟದ ಸಿದ್ಧಲಿಂಗ ಯತಿಗಳು. ಹಾಗೂ ಅವರ ಸಂಗಡಿಗರಾದ ನೂರೊಂದು ಮಂದಿ ವಿರಕ್ತರು.

ಮಹಾಪುರುಷರು ತುಳಿದ ನೆಲ ಪಾವನ. ಅಂಥವರು ನಮ್ಮ ಕನ್ನಡ ನಾಡಿನಲ್ಲಿ ತಮ್ಮ ತಮ್ಮ ಭಾಗದಲ್ಲಿ ಜನ್ಮ ತಳೆದಿದ್ದಾರೆ. ಅದು ಸಂಬಂಧಿಸಿದವರಿಗೆ ಮತ್ತಿಷ್ಟು ಹೆಮ್ಮೆಯ ಮಾತು. ಅದರಂತೆ ಅವರ ಲಿಂಗಮಯವಾದ ದೇಹವು ಯಾವ ನೆಲದಲ್ಲಿ ಸ್ಥಾನವನ್ನು ಪಡೆಯುವದೋ ಆ ಸ್ಥಾನವು ನಿರಂತರ ಯಾತ್ರಾಸ್ಥಳವಾಗಿ ಆ ನೆಲಕ್ಕೊಂದು ಐತಿಹ್ಯದ ಮಹತ್ವ ಪ್ರಾಪ್ತವಾಗುವುದು.*

---

* ಲಿಂಗವಂತ ಧರ್ಮದಲ್ಲಿ ಸ್ಥಾವರಾದಿ ಲಿಂಗಪೂಜೆಗಳು ಮಾನ್ಯವಲ್ಲ. ಶಿವಯೋಗಿಗಳ ಹಾಗೂ ಶಿವಶರಣರ ಸಮಾಧಿ ಸ್ಥಳಗಳು 'ಲಿಂಗದೇವರು' ಎಂಬ ಅಭಿಧಾನದಿಂದ ಪೂಜಾಸ್ಥಾನವೆನಿಸಿರುತ್ತವೆ. ಉದಾಹರಣೆಗೆ : ಸೊಲ್ಲಾಪುರದ ಸಿದ್ಧರಾಮೇಶ್ವರ, ಕೊಟ್ಟೂರು ಬಸವೇಶ್ವರ, ಕಲ್ಬುರ್ಗಿ ಶರಣಬಸವೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ಬೆಟ್ಟದಮಾದೇಶ್ವರ ಮಹಲಿಂಗಪುರದ ಮಹಲಿಂಗೇಶ್ವರ, ಗುಬ್ಬಿ ಚೆನ್ನಬಸವೇಶ್ವರ ಮೊದಲಾದುವನ್ನು ಸ್ಮರಿಸಬಹುದು.—ಸಂಪಾದಕ.

ಲಿಂಗಾಯತರಲ್ಲಿ ಗುರುವಿಗೊಂದು ಮಹತ್ವದ ಸ್ಥಾನವಿದೆ. ವಿರಕ್ತ ಸಂಪ್ರದಾಯದಲ್ಲಿಯಂತೂ ಗುರುಕರ ಸಂಜಾತನೇ ನಿಜವಾದ ಪುತ್ರನು. ದೇಹಸಂಬಂಧ ಬಂಧುಗಳಿಬ್ಬರೂ ನಿಮಿತ್ತ: ಬಂಧುಗಳು. ಹೀಗಿರುವಾಗ ಮಹಾನುಭಾವಿಗಳಾದ, ದೈವೀಗುಣಗಳುಳ್ಳ ಶ್ರೀ ತೋಂಟದ ಸಿದ್ಧಲಿಂಗೇಶ್ವರನ ಗುರುಗಳಾದ ಗೋಸಲ ಚೆನ್ನಬಸವೇಶ್ವರದೇವರಿಗೆ ಜನತೆಯ ಮನದಲ್ಲಿ ಒಂದು ಉಚ್ಚ ಸ್ಥಾನವಿದೆ ಎಂದು ಹೇಳಬೇಕಿಲ್ಲ. ಇಂತಹ ಮಹಿಮರ ಜೀವನದ ಪ್ರತಿ ಘಟನೆಯೂ ಐತಿಹಾಸಿಕ ಮಹತ್ವದ್ದಾಗಿರುವುದರಿಂದ ಅವರು ಎಲ್ಲಿ ನಿರ್ವಾಣವನ್ನೈದಿದರೆಂಬ ವಿಷಯುವು ಮಹತ್ವದ್ದು. ಇವರ ಸಮಾಧಿಯು ಎಲ್ಲಿ ಆಯಿತೆಂದು ನಿಚ್ಚಳವಾಗಿ ಹೇಳುವ ಇವರ ಸಮಕಾಲೀನ ಯಾವ ಪ್ರಮಾಣವೂ ಇರದ್ದರಿಂದಲೋ ಮತ್ತಾವುದೇ ಕಾರಣದಿಂದಲೋ ಗೋಸಲ ಚೆನ್ನಬಸವೇಶ್ವರ ದೇವರು ನಿರ್ವಾಣವನ್ನೈದಿದ ಸ್ಥಾನದ ಬಗೆಗೆ ಕೆಲವು ಭಿನ್ನಾಭಿಪ್ರಾಯಗಳು ಕೇಳಿಬರುತ್ತಿವೆ. ಪ್ರಕೃತ ಚೆನ್ನಬಸವೇಶ್ವರರ ಗದ್ದುಗೆಯು ಗುಬ್ಬಿಯಲ್ಲಿದೆ ಎಂಬುದು ಕೆಲವರ ಮತವಾಗಿದೆ. ಪರಸ್ಪರರು ತಮ್ಮ ತಮ್ಮ ಅಭಿಪ್ರಾಯಕ್ಕೆ ಪೋಷಕವಾಗಿ ಕೊಡುವ ಕಾರಣಗಳನ್ನು ವಿವೇಚಿಸುವಾ.

1. ಸಿದ್ಧಗಂಗೆಯಲ್ಲಿ ತಪಸ್ಸನ್ನು ಮಾಡುತ್ತಿದ್ದ ಗೋಸಲ ಚೆನ್ನಬಸವೇಶ್ವರ ದೇವರನ್ನು, ಗುಬ್ಬಿಯ ಮಲ್ಲಣಾರ್ಯರು ಪ್ರಾರ್ಥಿಸಿ ಗುಬ್ಬಿಗೆ ಕರೆದುಕೊಂಡು ಬಂದು ಅವರ ಶಿಷ್ಯನಾಗಿದ್ದು ಚೆನ್ನಬಸವೇಶ್ವರದೇವರು ನಿರ್ವಾಣ ಹೊಂದಲು ಅವರ ಸಮಾಧಿಯನ್ನು ಸ್ವತಃ ಮಲ್ಲಣಾರ್ಯರು ಗುಬ್ಬಿಯಲ್ಲಿ ಮಾಡಿಸಿದರೆಂದು ಗುಬ್ಬಿಯ ಪರವಾಗಿ ಹೇಳಲಾಗುತ್ತಿದೆ.

2. ಇನ್ನು ಹರದನಹಳ್ಳಿಯಲ್ಲಿದ್ದ ಚೆನ್ನಬಸವೇಶ್ವರದೇವರು ಹೊರಗೆಲ್ಲಿಯೂ ಪ್ರವಾಸವನ್ನು ಕೈಕೊಳ್ಳದೆ ಹರದನಹಳ್ಳಿಯಲ್ಲಿಯೇ ಇದ್ದರೆಂದೂ ತೋಂಟದ ಶ್ರೀ ಸಿದ್ಧಲಿಂಗಯತಿಗಳು ಒಂದುಸಲ ದೇಶಪರ್ಯಟಣ ಮಾಡಿದ ಅನಂತರ ಹರದನಹಳ್ಳಿಗೆ ಬಂದು ಗುರುಸೇವೆಯಲ್ಲಿ ನಿಂದರೆಂದೂ ಗುರು ಗೋಸಲ ಚೆನ್ನಬಸವೇಶ್ವರದೇವರು ನಿರ್ವಾಣವನ್ನೈದಲು ಅವರ ಸಮಾಧಿಯನ್ನು ಸಿದ್ಧಲಿಂಗಯತಿಗಳೇ ಹರದನಹಳ್ಳಿಯಲ್ಲಿ ಮಾಡಿಸಿದರೆಂದೂ ಹರದನಹಳ್ಳಿಯ ಪರವಾದ ಹೇಳಿಕೆಯಾಗಿದೆ ?

ಇದೇ ವಿಷಯವನ್ನು ನೇರವಾಗಿ ಹೇಳಬಲ್ಲ ಇತಿಹಾಸಗಳಿಲ್ಲವಾದ್ದರಿಂದ ಸ್ಥಳಚರಿತೆ ಹಾಗೂ ಅನಂತರದ ಕೆಲವು ಗ್ರಂಥಗಳ ಸಹಾಯದಿಂದ ಊಹಿಸಿ ತಿಳಿದುಕೊಳ್ಳಬೇಕಾಗಿದೆ ?

3. ತೋಂಟದ ಸಿದ್ಧಲಿಂಗಯತಿಗಳು ತಮ್ಮ ಗುರುಪರಂಪರೆಯನ್ನು ತಾವೇ ಹೇಳಿದ್ದಾರೆ. ತಮ್ಮ ಗುರುಗಳು ಚೆನ್ನಬಸವೇಶ್ವರದೇವರೆಂದೂ, ಚೆನ್ನ ಬಸವೇಶ್ವರ ದೇವರ ಗುರುಗಳು ದಿವ್ಯಲಿಂಗದೇವರೆಂದೂ ಹೇಳಿದ್ದಾರೆ. ಅಂದರೆ ಗೋಸಲ ಚೆನ್ನಬಸವೇಶ್ವರದೇವರ ಗುರುಗಳು ಮಲ್ಲಪ್ಪನವರಲ್ಲವೆಂದೂ ನಿರ್ವಿ ವಾದವಾದಂತಾಯಿತು. ಇನ್ನು ಗುಬ್ಬಿಯಲ್ಲಿರುವ ಗೋಸಲ ಚೆನ್ನಬಸವೇಶ್ವರ ದೇವರು ತೋಂಟದ ಸಿದ್ಧಲಿಂಗಯತಿಗಳ ಗುರುಗಳಾದ ಗೋಸಲ ಚೆನ್ನಬಸ ವೇಶ್ವರದೇವರು ಅಲ್ಲವೆಂದಾಯಿತು.

"ಚೆನ್ನಬಸವೇಶ್ವರದೇವರು" ಎಂಬ ಹೆಸರಿನ ಸಾಮ್ಯತೆಯಿಂದ ಈ ತರಹದ ತಪ್ಪುಕಲ್ಪನೆಯಾಗಿರಲಿಕ್ಕೂ ಸಾಧ್ಯವಿದೆ.

ಗುಬ್ಬಿಯಲ್ಲಿರುವ ಚೆನ್ನಬಸವೇಶ್ವರ ದೇವರು ಗೋಸಲ ಚೆನ್ನಬಸವೇಶ್ವರ ದೇವರಿಂದ ಬೇರೆಯವರೆಂಬ ಕೆಳಗಿನ ಆಖ್ಯಾಯಿಕೆಯೂ ಇದೆ.

4. ಚೆನ್ನಬಸವಸ್ವಾಮಿಗಳೆಂಬವರು ಉತ್ತರ ಕರ್ಣಾಟಕದಿಂದ ಬಂದು ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿಯ "ತೆದಡೆಹಳ್ಳಿ" ಎಂಬ ಗ್ರಾಮ ದಲ್ಲಿ ಅನುಷ್ಠಾನದಲ್ಲಿರಲು, ಅಲ್ಲಿಂದ ಗುಬ್ಬಿಗೆ ದಯಮಾಡಿಸಿ, ಅಲ್ಲಿಯ ಮಲ್ಲೇ ಶ್ವರ ದೇವಾಲಯದಲ್ಲಿ ಅನುಷ್ಠಾನದಲ್ಲಿರಲು, ಅಲ್ಲಿಯ ಹದಿನೆಂಟು ಪಕಡಿಯ ಬೋರೇಗೌಡ ಎಂಬುವರೂ, ಗುಬ್ಬಿಹೊಸಳ್ಳಿಯ ಅರಸು ಹೊನ್ನಪ್ಪಾಜಿ ಎಂಬು ವರೂ ಇವರ ಸೇವೆ ಮಾಡುತ್ತಿದ್ದರಲ್ಲದೆ ಎಲ್ಲ ಅನುಕೂಲತೆಗಳನ್ನೂ ಒದಗಿ ಕೊಟ್ಟರು. ಬೋರೇಗೌಡರಿಗೆ ಬಂದ ಒಂದು ದೊಡ್ಡ ಗಂಡಾಂತರದಿಂದ ಸ್ವಾಮಿಗಳು ಅವರನ್ನು ಪಾರುಮಾಡಿದರು. ಪ್ರಸ್ತುತ ಅರಸರು ಹೊನ್ನಪ್ಪಾಜಿ ಯವರ ಪ್ರಾರ್ಥನೆಯ ಮೇರೆಗೆ ಗುಬ್ಬಿಹೊಸಳ್ಳಿಯಲ್ಲಿ ಕೆಲವುಕಾಲ ಸ್ವಾಮಿಗಳು ಅನುಷ್ಠಾನ ಮಾಡಿದರು. ತದನಂತರ ತುಮಕೂರು ತಾಲ್ಲೂಕು ಹೊನ್ನುಡಿಕೆಗೆ ಹೋಗಿ ಕೆಲಕಾಲ ಅಲ್ಲಿ ಶಿವಚಿಂತಾಪರರಾಗಿರಲು, ವೃದ್ಧಾಪ್ಯದಿಂದ ಬಯ ಲಾದರು. ಈ ಸುದ್ದಿ ತಿಳಿಯುತ್ತಲೇ, ತೆಡಡೇಹಳ್ಳಿ, ಗುಬ್ಬಿ, ಗುಬ್ಬಿಹೊಸಳ್ಳಿ ಭಕ್ತರುಗಳು ಹೊನ್ನುಡಿಕೆಗೆ ಬಂದು ಪರಸ್ಪರರು ತಮ್ಮಲ್ಲಿಯೇ ಸ್ವಾಮಿಗಳನ್ನು

ಗದ್ದುಗೆಯಾಗಬೇಕೆಂದು ವಾದಿಸಹತ್ತಿದರು. ಈ ವ್ಯಾಜ್ಯಕ್ಕೆ ಕೊನೆಯೇ ಇಲ್ಲ ವೇನೋ ಎನ್ನುವಮಟ್ಟಿಗೂ ಅದು ಬಂದಿತು. ಕೊನೆಗೆ ಅವರು ತಮ್ಮ ತಮ್ಮೊಳಗೆ ಒಂದು ಒಪ್ಪಂದಕ್ಕೆ ಬಂದರು. ಬಯಲಾದ ಸ್ವಾಮಿಗಳೇ ತಮ್ಮ ಸಮಾಧಿ ಎಲ್ಲಿರಬೇಕೆಂಬುದನ್ನು ಹೇಳಬೇಕೆಂಬುದೇ ಆ ಒಪ್ಪಂದ. ಈ ಒಪ್ಪಂದ ವನ್ನು ಕಂಡು ಕೆಲವರು ನಕ್ಕರು. ಇನ್ನು ಕೆಲವರು ಮೂಗುಮುರಿದರು. ಆದರೆ ತಮ್ಮ ವ್ಯಾಜ್ಯಕ್ಕೆ ಕೊನೆಮಾಡಿಸುವದು ಸ್ವಾಮಿಯವರ ಮನಸ್ಸಿನಲ್ಲಿದ್ದರೆ ಸ್ವಾಮಿಗಳು ಮಾತನಾಡಲೇಬೇಕೆಂಬುದು ಭಕ್ತರ ಚಲ. ಕೊನೆಗೆ ಗುಬ್ಬಿಯ ಬಳಿಯಲ್ಲಿಯೇ ತಮ್ಮ ಸಮಾಧಿಯಾಗಬೇಕೆಂಬ ಶ್ರೀಗಳ ಹೇಳಿಕೆಯ ಮೇಲೆ (?) ಗುಬ್ಬಿಯ ಬಳಿ ಇರುವ ಚೆನ್ನಶೆಟ್ಟಿಹಳ್ಳಿ ಗ್ರಾಮದ ತೋಪಿನಲ್ಲಿ ಶ್ರೀಗಳವರ ಸಮಾಧಿ ಆಯಿತು. ಇವರ ತೋರಗದ್ದುಗೆಗಳು ಇವರು ಅನುಷ್ಠಾನಮಾಡಿದ ತೆವಡೆಹಳ್ಳಿ, ಹೊನ್ನುಡಿಕೆ, ಮತ್ತೆ ಗುಬ್ಬಿ ಈ ಮೂರು ಕಡೆಗೂ ಇರುತ್ತವೆ. ಬೋರೇಗೌಡರು ಗುಬ್ಬಿಯಲ್ಲಿರುವ ಸ್ವಾಮಿಗಳ ತೋರಗದ್ದುಗೆಯ ಪ್ರಾಕಾರ ಗಳನ್ನು ಕಟ್ಟಿಸಿದರು ಈ ಗುಬ್ಬಿಯ ತೋರಗದ್ದುಗೆಯ ಎಡಗಡೆಯಲ್ಲಿ ಒಂದು ಗದ್ದುಗೆ ಇದ್ದು ಅದು ಸದರೀ ಚೆನ್ನಬಸವೇಶ್ವರದೇವರ ಗುರುಗಳಾದ ಮಲ್ಲಪ್ಪ ನವರೆಂದು ಹೇಳಲಾಗುತ್ತಿದೆ. ಈ ಇಬ್ಬರ ಉತ್ಸವವೂ ಕೂಡಿಯೇ ಆಗುತ್ತದೆ. ಈ ಎರಡೂ ಗದ್ದುಗೆಗಳು ಗುರುಶಿಷ್ಯರ ಗದ್ದುಗೆಗಳೆಂದು ಎಲ್ಲರೂ ನಂಬಿರುವರು. ಈ ತೋರಗದ್ದುಗೆಯ ಉತ್ತರ ದಿಕ್ಕಿನಲ್ಲಿರುವ ಕಲ್ಯಾಣಿಯನ್ನು ಈಚೆಗೆ ಉತ್ತರ ಕರ್ಣಾಟಕದಿಂದ ದಯಮಾಡಿಸಿದ್ದ ಶ್ರೀ ಗುರು ಅಡವಿ ಸ್ವಾಮಿಗಳು ಕಟ್ಟಿಸಿದರು. *

ಗುಬ್ಬಿಯಲ್ಲಿರುವ ಚೆನ್ನಬಸವೇಶ್ವರರ ತೋರಗದ್ದುಗೆಯೇ ಸಿದ್ಧಲಿಂಗಯತಿ ಗಳ ಗುರುಗಳಾದ ಗೋಸಲ ಚೆನ್ನಬಸವೇಶ್ವರ ದೇವರ ಗದ್ದುಗೆಯೆಂದು ಅಭಿ ಪ್ರಾಯಪಡುವವರಲ್ಲಿ ಗಣಭಾಷಿತರತ್ನಮಾಲೆಯ ಸಂಪಾದಕರೂ ಒಬ್ಬರು.

---

* ಅಡವಿಸ್ವಾಮಿಗಳು ಗುಬ್ಬಿಯಲ್ಲಿ ಹಿರೆಮಠ ಸ್ಥಾಪಿಸಿದ್ದಾರೆ. ಶ್ರೀ ಚೆನ್ನಬಸ ವೇಶ್ವರ ಗುಡಿ ಪಕ್ಕದ ಕಲ್ಯಾಣಿ ಶಿಖರ ಮಂಟಪ ಕಟ್ಟಿಸಿದ್ದಾರೆ. ಶ್ರೀ ಕ್ಷೇತ್ರ ಸಿದ್ಧಗಂಗೆ ಯಲ್ಲಿ ಸಂಸ್ಕೃತ ಪಾಠಶಾಲೆ, ದಾಸೋಹ ಪ್ರಾರಂಭಿಸಿದ್ದಾರೆ. ತುಮಕೂರು ಜಿಲ್ಲಾ ಚಿರತೊಟ್ಟಲು ಕೆರೆಯಲ್ಲಿನ ಮಠದಲ್ಲಿ ಸಮಾಧಿಯಾಗಿದ್ದಾರೆ. ಈ ಮಹಾತ್ಮರನ್ನು ಕುರಿತ ತುಮಕೂರು ನಂಜುಂಡಸ್ವಾಮಿಗಳು, ಅಟವೀಶ ಗೀತ, ಅಟವೀಶ ಭಜನಾವಳಿ ಮೊದ ಲಾದ ಗ್ರಂಥಗಳನ್ನು ಬರೆದಿದ್ದಾರೆ. (ಸಂ.)

ಅವರು ತಮ್ಮ ಗಣಭಾಷಿತ ರತ್ನಮಾಲೆಯ (ಪ್ರಸ್ತಾವನೆ, ಪುಟ 3–7 ರಲ್ಲಿ) ಪಡುವ ಅಭಿಪ್ರಾಯವಿದು.

"ಗೋಸಲ ಚೆನ್ನಬಸವಸ್ವಾಮಿಗಳು ತಮ್ಮ ಶಿಷ್ಯರಾದ ಅಪಾರ ಮಹಿಮಾನ್ವಿತರಾದ ಸಿದ್ದಲಿಂಗಯತಿಗಳಿಗೆ ತಮ್ಮ ಶಿವಾನುಭವ ಚರಂತಿಗೆಯ ಪಟ್ಟವ ಕೊಟ್ಟು ತಮ್ಮ ಪರಮ ಗುರುಗಳಾದ ಗೋಸಲ ಸಿದ್ಧೇಶ್ವರಸ್ವಾಮಿಗಳು ತಮ್ಮ ಮಹಿಮೆಯಿಂದ ಗಂಗೆಯಂ ತರಿಸಿದ ಕಾರಣದಿಂದ ಅವರ ಹೆಸರಾದ ಶ್ರೀ ಸಿದ್ಧಗಂಗೆಯ ಬೆಟ್ಟಕ್ಕೆ ಚಿತ್ತೈಸಿ ಗಣಪರ್ವವಂ ಮಾಡುತ್ತ ಲಿಂಗಪೂಜೆ ಜಂಗಮದಾಸೋಹಧಿಂದ ಗಣಸಮೂಹದೊಡನೆ ಇರುತ್ತಿರಲು, ಅಮರಗುಂಡದ (ಗುಬ್ಬಿ) ಪ್ರಸಿದ್ಧ ಕವೀಶ್ವರನಾದ ಮಲ್ಲಣಾರ್ಯನೆಂಬ ಗಣವರನು ಸಿದ್ಧಗಂಗೆ ಬೆಟ್ಟದಲ್ಲಿರುವ ಸ್ವಾಮಿಗಳವರ ಸನ್ನಿಧಿಗೆ ಬಂದು ಭಕ್ತಿಯಿಂದ ಸಾಷ್ಟಾಂಗವೆರ ಬಿನ್ನಹವಂ ಮಾಡಿ ಸ್ವಾಮಿಗಳವರನ್ನು ಗಣಸಮೂಹದೊಡಗೂಡಿ ಎಪ್ಪತ್ತೆರಡು ಬಿರುದುಗಳೊಡನೆ ಅಮರಗುಂಡಕ್ಕೆ ಕರೆದುಕೊಂಡು ಹೋಗಿ ಉತ್ಸಹಂಗೊಳಿ ತಮ್ಮಯ ಮಠದಿ ಗಣಪರ್ವವಂಮಾಡಿ, ಆ ಬಳಿಕ ಮಲ್ಲಣಾರ್ಯರು ಮುಂತಾ ಗಣಂಗಳು ಸ್ವಾಮಿಗಳವರಿಂದ ಷಟ್‌ಸ್ಥಲ ಜ್ಞಾನೋಪದೇಶವಂ ಪಡೆದರು. ಅಲ್ಲಿ ಮಲ್ಲಣಾರ್ಯರೇ ಮೊದಲಾದವರು ಒಂದು ಮಠವನ್ನು ಕಟ್ಟಿಸಿ ಅಲ್ಲಿಯೇ ಲಿಂಗಾನಂದದಿಂದಿರಲು ಪ್ರಾರ್ಥಿಸಿದರು. ಅವರ ಭಕ್ತಿಯುತವಾದ ಪ್ರಾರ್ಥನೆಯನ್ನು ಮನ್ನಿಸಿ ಜನತೆಯನ್ನು ಪಾವನಗೊಳಿಸುತ್ತ ಲಿಂಗಾನಂದದಲ್ಲಿದ್ದರು. ಚೆನ್ನಬಸವಸ್ವಾಮಿಗಳು ಅಮರಗುಂಡದಲ್ಲಿಯೇ ಲಿಂಗೈಕ್ಯರಾದರು. ಊರ ಪೂರ್ವದಿಶೆಯನ್ನು ಹೊಂದಿಕೊಂಡು ಉನ್ನತವಾಗಿ ಬೆಳೆದ ವಿಸ್ತಾರವಾ ಹಬ್ಬಿಕೊಂಡು ಹಚ್ಚಹಸುರಿಂದೊಪ್ಪುವ ಮನೋಹರವಾದ ಮಾಮರ ಗುಂಪಿನ ಮಧ್ಯದಲ್ಲಿ ಸ್ವಾಮಿಗಳ ಸಮಾಧಿಯಾಗಿದೆ."

ಈ ಮೇಲಿನ ಮಾತುಗಳನ್ನು ನೋಡಿದಾಗ ಗುಬ್ಬಿಯ ಮಲ್ಲಣಾರ್ಯರು ಗೋಸಲ ಚೆನ್ನಬಸವೇಶ್ವರದೇವರೂ ಸಮಕಾಲೀನರೆಂದು ವಿದಿತವಾಗುತ್ತದೆ. ಪ್ರಸ್ತುತ ಗುಬ್ಬಿ ಮಲ್ಲಣಾರ್ಯರ ಕಾಲವು ಕ್ರಿ. ಶ. 1513 ಎಂದು ಕ ಚರಿತೆಕಾರರು (ಕವಿಚರಿತೆ, ಭಾಗ 2, ಪುಟ 191) ಹೇಳಿದ್ದಾರೆ. ಅಂದ ಗೋಸಲ ಚೆನ್ನಬಸವೇಶ್ವರನ ಕಾಲವೂ 1513 ಎಂದಂತಾಯಿತು. ಆ ಗೋಸಲ ಚೆನ್ನಬಸವೇಶ್ವರರ ಶಿಷ್ಯರಾದ ತೋಂಟದ ಸಿದ್ಧಲಿಂಗಯತಿಗಳ ಕಾ

ವನ್ನು ಅದೇ ಕವಿಚರಿತೆಕಾರರು 1470 ಎಂದು ಹೇಳುತ್ತಾರೆ. ಕವಿಚರಿತೆ (ಭಾಗ 2, ಪುಟ 92) ಅಲ್ಲದೆ ಗುಬ್ಬಿಯ ಮಲ್ಲಣಾರ್ಯನ ಅಜ್ಜನಾದ ಗುಬ್ಬಿಯ ಮಲ್ಲಣ್ಣನು ತೋಂಟದ ಸಿದ್ಧಲಿಂಗಯತಿಗಳ ಶಿಷ್ಯನಾಗಿದ್ದನೆಂಬ ಅಂಶವನ್ನು 1560ರಲ್ಲಿ ಜೀವಿಸಿದ್ದ ಗುಬ್ಬಿಯ ಮಲ್ಲಣ್ಣ ಕವಿಯ ಮರಿಮೊಮ್ಮಗನಾದ ಶಾಂತೇಶನು ತನ್ನ ಸಿದ್ಧೇಶ್ವರ ಪುರಾಣದಲ್ಲಿ ಹೇಳಿದ್ದಾನೆ. ಗುಬ್ಬಿಯ ಮಲ್ಲಣ್ಣ ಕವಿಯ ಕಾಲ 1475(ಕವಿಚರಿತೆ, ಭಾಗ 2, ಪುಟ 101) ಮೇಲಿನ ಅಂಶವನ್ನು ಗಮನಿಸಿದಾಗ ತೋಂಟದ ಸಿದ್ಧಲಿಂಗೇಶ್ವರರ ಗುರುಗೋಸಲ ಚೆನ್ನಬಸವೇಶ್ವರ ರಿಗೂ ಗುಬ್ಬಿಯ ಮಲ್ಲಣಾರ್ಯರಿಗೂ ಸುಮಾರು ಒಂದುನೂರು ವರುಷ ಅಂತರವಾಗುತ್ತದೆ. ಆದುದರಿಂದ ಇವರು ಪರಸ್ಪರರು ಕೂಡಿದ್ದರೆಂಬ ಮಾತು ಅಸಂಭವ. ಹೀಗಿರುವಾಗ ಗುಬ್ಬಿಯ ಮಲ್ಲಣಾರ್ಯರು ಸಿದ್ಧಗಂಗೆಯಿಂದ ಗುಬ್ಬಿಗೆ ಕರೆದುಕೊಂಡು ಬಂದರೆಂದು ಹೇಳಲಾಗುವ ಚೆನ್ನಬಸವೇಶ್ವರ ದೇವರು ತೋಂಟದ ಸಿದ್ಧಲಿಂಗಯತಿಗಳ ಗುರುಗಳಾದ ಗೋಸಲ ಚೆನ್ನ ಬಸವೇಶ್ವರದೇವರಾಗಿರವೆ ಬೇರೆ ಮತ್ತೊಬ್ಬ ಮಹಿಮಾವಂತರಾದ ಚೆನ್ನಬಸವೇ ಶ್ವರ ದೇವರಾಗಿರಬೇಕು.

ಗುಬ್ಬಿಯ ಮಲ್ಲಣಾರ್ಯರು ತಮ್ಮ ಪರಂಪರೆಯನ್ನು ಹೇಳಿಕೊಂಡಿದ್ದಾರೆ. ಅದರಲ್ಲೆಲ್ಲಿಯೂ ಗೋಸಲ ಚೆನ್ನಬಸವೇಶ್ವರದೇವರ ಹೆಸರನ್ನು ತೆಗೆದುಕೊಳ್ಳುವುದಿಲ್ಲ. ಮಲ್ಲಣಾರ್ಯರು ತಮ್ಮ ಪರಂಪರೆಯನ್ನು ಈ ರೀತಿ ಹೇಳಿಕೊಂಡಿದ್ದಾರೆ.

ಅಮರಗುಂಡದ ಮಲ್ಲೇಶ್ವರಾಚಾರ್ಯ, ಅವನ ಶಿಷ್ಯ ಶೂಲವೇರಿದ ಮಹತ್ವವುಳ್ಳ ಗುರುಭಕ್ತ. ಅವರ ಮಗ ದೇಶಿಕಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ, ಅವನ ಮಗ ನಾಗನಾಥಾರ್ಯ, ಅವನ ಮಗ ಆಹಿಯಂ ಲಿಂಗಕ್ಕೆ ಛತ್ರಮಂ ಮಾಡಿದ ಅಮರಗುಂಡಾರ್ಯ, ಇವರ ವಂಶ ದೊಳು ಗುಬ್ಬಿಯ ಮಲ್ಲಣ್ಣ ಹುಟ್ಟಿ ಅನುಭವಯೋಗ ಷಟ್‌ಸ್ಥಲಖ್ಯಾತಮಂ ಗಣಭಾಷ್ಯ ರತ್ನಮಾಲೆಯುಮಂ ಮಾಡಿ, ವಾತೂಲಕ್ಕೆ ಟಿಪ್ಪಣವೆಸಗಿದ್ದಂ. ಅವನ ಮಗ ಗುರುಭಕ್ತ ಈತನ ಹೆಂಡತಿ ಸಪ್ಪೆಯಮ್ಮ ಇವರ ಮಗ ಕವಿ ಮಲ್ಲಣಾರ್ಯ.

ಮೇಲಿನ ಗುಬ್ಬಿಯ ಮಲ್ಲಣಾರ್ಯರ ಹೇಳಿಕೆಯಲ್ಲಿ ಗೋಸಲ ಚೆನ್ನ ಬಸವೇಶ್ವರರ ಹೆಸರು ಎಲ್ಲಿಯೂ ಬರುವುದಿಲ್ಲ. ಅಲ್ಲದೆ ಈ ಹೇಳಿಕೆಯಲ್ಲಿ ಬಳಸಿದ 'ಶಿಷ್ಯ, ಮಗ' ಈ ಶಬ್ದಗಳನ್ನು ನೋಡಿದಾಗ ಮಲ್ಲಣಾರ್ಯರ ಪರಂಪರೆಯವರು ಸಂಸಾರಿಕರಾಗಿದ್ದರೆಂಬ ಮಾತು ಎದ್ದು ಕಾಣುತ್ತದೆ. ಆದು ದರಿಂದ ಸಂಸಾರಿಕರನ್ನು ತಮ್ಮ ಶಿಷ್ಯರನ್ನಾಗಿ ವಿರಕ್ತಪರಂಪರೆಯವರಾದ ಗೋಸಲ ಚೆನ್ನಬಸವೇಶ್ವರದೇವರು ಮಾಡಿಕೊಳ್ಳುವ ಸಂದರ್ಭವಿಲ್ಲ. (?)

ಮೇಲಿನ ಚರ್ಚೆಯಲ್ಲಿ ಹರಪನಹಳ್ಳಿಯಲ್ಲಿರುವುದೇ ಗೋಸಲ ಚೆನ್ನಬಸ ವೇಶ್ವರರ ಗದ್ದುಗೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಗುಬ್ಬಿ ಯಲ್ಲಿ ಗೋಸಲ ಚೆನ್ನಬಸವೇಶ್ವರರದೆಂದು ಹೇಳಲಾಗುತ್ತಿರುವ ಗದ್ದುಗೆಯು ಮಾತ್ರ ಅವರದಲ್ಲವೆಂಬ ನಿರ್ದಿಷ್ಟವಾದ ಮಾತು ಹೊರಬರುತ್ತದೆ. ಗೋಸಲ ಚೆನ್ನಬಸವೇಸ್ವರರ ಸಮಾಧಿ ನಿರ್ದೇಶನ ತಾಣಗಳೆಂದು ವಿವಾದವೆದ್ದಿರು ವುದೇ ಎರಡು ತಾಣಗಳ ನಿರ್ದೇಶನದ ನಡುವೆ ಒಂದು ಗುಬ್ಬಿ, ಮತ್ತೊಂದು ಹರದನಹಳ್ಳಿ. ಗುಬ್ಬಿಯಲ್ಲಿರುವದು ಅಲ್ಲವೆಂದು ನಿರ್ದಿಷ್ಟವಾಗಿ ಕಂಡುಬರು ವುದರಿಂದ ಹರದನಹಳ್ಳಿಯಲ್ಲಿರುವುದೇ ಗೋಸಲ ಚೆನ್ನಬಸವೇಶ್ವರರ ಗದ್ದುಗೆ ಯೆಂದು ಗ್ರಹಿಸಲು ಯಾವ ಅಭ್ಯಂತರವೂ ಇಲ್ಲ.

ಶ್ರೀ ನಿರಂಜನ ಜಗದ್ಗುರು ಶಿವಾನುಭಾವ ಚರಂತಿಗೆ ಪಟ್ಟದ ಗೋಸಲ ಸಿದ್ದೇಶ್ವರಸ್ವಾಮಿಗಳು.

ಇವರು ಮೂರು ಸಾವಿರ ವಿರಕ್ತ ಗಣಸಮೂಹರೊಡನೆ ಭಕ್ತಿಜ್ಞಾನ ವೈರಾಗ್ಯ ಉಳ್ಳವರಾಗಿ ದೇಶಂಗಳಲ್ಲಿ ಸಂಚರಿಸುತ್ತಾ ಭಕ್ತರ ಪಾವನಮಾಡುತ್ತ ಮೈಸೂರು ಸೀಮೆಗೆ ದಯಮಾಡಿಸಿದರು. ಆ ಸೀಮೆಯಲ್ಲಿ ಹರದನಹಳ್ಳಿ ಎಂಬ ಗ್ರಾಮದಲ್ಲಿ ಆ ಊರ ಭಕ್ತರು ಭಕ್ತಿಯಿಂದ ಮಠವನ್ನು ಕಟ್ಟಿಸಿ ನಮಸ್ಕಾರವ ಮಾಡಲು, ಆ ಮಠದಲ್ಲಿ ಲಿಂಗಪೂಜಾ ಜಂಗಮ ದಾಸೋಹ

ಈ ಲೇಖನವು ವಾದಗ್ರಸ್ಥ ವಿಷಯದಿಂದ ಕೂಡಿದೆ. ಈಗ ಗುಬ್ಬಿಯಲ್ಲಿರುವ ಶ್ರೀ ಚೆನ್ನಬಸವೇಶ್ವರರ ಗದ್ದುಗೆಯೇ ಶ್ರೀ ಗೋಸಲ ಚೆನ್ನಬಸವೇಶ್ವರರ ಗದ್ದುಗೆ ಎಂಬ ಭಾವನೆಯು ಜನರಲ್ಲಿ ರೂಢಿಯಾಗಿದೆ. ಈ ಲೇಖನ ಅದಕ್ಕೆ ವಿರುದ್ಧವಾಗಿದೆ. ಶ್ರೀ ಗುಬ್ಬಿ ಚೆನ್ನಬಸವೇಶ್ವರರ ಭಕ್ತರು ಇದಕ್ಕೆ ಸಮಾಧಾನ ಹೇಳುವರೆ? (ಸಂ)

ದೊಡನೆ ಇದ್ದರು. ಆವಾಗ್ಯೆ ಅಯೋನಿಜರಾದ ತೋಂಟದಾರ್ಯರು ಬಾಲ ರೂಪವುಳ್ಳವರಾಗಿ ಹರದನಹಳ್ಳಿ ಗ್ರಾಮದಲ್ಲಿ ಗೋಸಲ ಸಿದ್ಧೇಶ್ವರಸ್ವಾಮಿಗಳ ವರ ಸೇವಾಮಾಡುತ್ತ ಆ ಊರಿನಲ್ಲಿ ಬಾಲಲೀಲೆಯಿಂದ ಅನೇಕ ಮಹಿಮೆ ತೋರುತ್ತ, ಆ ಸ್ಥಳದಲ್ಲಿ ಕಲ್ಲುಬಸವಣ್ಣನಿಗೆ ಉಣಿಸಿದರು. ಅದನ್ನು ಅಲ್ಲಿಯ ಪ್ರಜೆಗಳು ನೋಡಿ ಆಶ್ಚರ್ಯಪಟ್ಟು ಸಮಸ್ತರೂ ಇವರು ಮನುಷ್ಯರಲ್ಲ, ಕೈಲಾಸ ದಿಂದ ಬಂದ ಮಹಾಯೋಗಿಗಳು ಎಂದು ಕೊಂಡಾಡಿದರು.

ಈ ವರ್ತಮಾನವು ಗೋಸಲ ಸಿದ್ಧೇಶ್ವರ ಸ್ವಾಮಿಗಳವರಿಗೆ ತಿಳಿದು ತತ್‌ಕ್ಷಣವೇ ಅಲ್ಲಿ ಭಕ್ತಮಹೇಶ್ವರರ ಕರೆಸಿ ಅವರ ಮುಂತಿಟ್ಟುಕೊಂಡು ತಮ್ಮ ಶಿವಾನುಭಾವ ಚರಂತಿಗೆ ಪಟ್ಟವನ್ನು ಮಾಡಿ ನೀವು ಇನ್ನುಮೇಲೆ ನಮ್ಮ ಸೇವೆ ಮಾಡಬಾರದು, ನೀವು ಮಹಾಪುರುಷರು ಎಂದು ತಿಳಿಯದೆ ನಿಮ್ಮ ಕಡೆ ಯಿಂದ ಸೇವಾ ಕೈಗೊಂಡದ್ದಾಯಿತು. ನೀವು ಗಣಸಮೂಹದೊಡನೆ ದೇಶಂ ಗಳಲ್ಲಿ ಸಂಚರಿಸಿ ಭಕ್ತರ ಪಾವನಮಾಡಿ ನಮ್ಮ ಪ್ರಭುವಂಶ ಉದ್ಧಾರಮಾಡುವ ದೆಂದಪ್ಪಣೆ ಕೊಟ್ಟು ದೇಶದ ಮೇಲೆ ಸಂಚಾರಾರ್ಥವಾಗಿ ಕಳುಹಿಸಿಕೊಟ್ಟು ಅನಂತರ ಸ್ವಲ್ಪದಿವಸ ಶಿವಯೋಗದೊಡನೆ ಇದ್ದು ಅದೇ ಸ್ಥಲದಲ್ಲಿ ಬಯಲಾ ದರು. ಇವರ ತೋರಗದ್ದಿಗೆಯು ಮೈಸೂರು ಸೀಮೆಯ ಹರದನಹಳ್ಳಿಯಲ್ಲಿ ಇರುತ್ತದೆ. ಹಾಗೂ ಸದರಿ ಸ್ಥಳದಲ್ಲಿ ತೋಂಟದಾರ್ಯರು ಉಣಿಸಿದ ಕಲ್ಲ ಬಸವನು ಇರುತ್ತದೆ. ಇದಕ್ಕೆ ಸಿದ್ಧೇಶ್ವರ ಪುರಾಣ ಪ್ರಭುದೇವರ ಪುರಾಣ ಮುಂತಾದುವೇ ಸಾಕ್ಷಿ. (ಸಿ. ರ. ಪುಟ. ೧೪೭).

ನಿರಂಜನ

ನಿರವಯ-ಕೈಕಾಲು ಮುಂತಾದ ಅವಯವಗಳಿಲ್ಲದವನು, ನಿರಾಮಯ- ಸಂಸಾರವೆಂಬ ರೋಗವಿಲ್ಲದವನು, ನಿರಾಕುಳ-ವ್ಯಾಕುಲವಿಲ್ಲದವನು, ನಿರ್ದ್ವಂದ್ವ- ಜೀವ ಪರನು, ಪ್ರಕೃತಿಪುರುಷ ಎಂಬ ಭೇದವಿಲ್ಲದವನು, ನಿರ್ಮಲ-ಮಲತ್ರಯ ಗಳಿಲ್ಲದವನು, ನಿಜಸ್ವರೂಪ-ಮೂಲವಸ್ತುವಿನ ಸ್ವರೂಪವುಳ್ಳವನು, ನಿರ್ಭಾವ- ಭಾವವಿಲ್ಲದವನು, ನಿಃಸ್ಪೃಹ-ಆಸೆಯಿಲ್ಲದವನು, ಶಿಃಪುರುಷ-ಮನುಷ್ಯನಲ್ಲ ದವನು, ನಿರಂಜನ-ಮಾಯಾರಂಜನೆಗೆ ಬಾರದಿದ್ದವನು, ನಿರಾಕಾರ-ಸಾಕಾರ ವಿಲ್ಲದವನು, ನಿರಾವರಣ-ಅಜ್ಞತೆಯಿಲ್ಲದವನು, ನಿರುಪಮ-ಸಮಾನವಿಲ್ಲದವನು, ನಿರ್ಗುಣ-ಸತ್ವರಜತಮಗಳಿಲ್ಲದವನು, ನಿರಾಧಾರ-ಮತ್ತೊಂದರಾಶ್ರಯವಿಲ್ಲ

ದವನು, ನಿರಾಲಂಬ–ಪ್ರಪಂಚದ ಅವಲಂಬವಿಲ್ಲದವನು, ಸರ್ವಾಧಾರ–ಸಮ
ಸ್ತಕ್ಕೂ ತಾನೇ ಆಸ್ಪದನು, ಸದಾಶಿವ–ಯಾವಾಗಲೂ ಮಂಗಲಸ್ವರೂಪನು,
ಅತ್ಯತ್ತಿಷ್ಠದ್ದಶಾಂಗುಲ–ಅರಿದಿಹೆನೆಂಬುವರಿಗೆ ಹತ್ತು ಬೆರಳು ದೂರ, ನಿತ್ಯ–
ಶಾಶ್ವತಸ್ವರೂಪನು, ನಿಶ್ಚಿಂತ–ಚಿಂತೆಯಿಲ್ಲದವನು, ನಿರ್ಮಾಯ–ಮಾಯೆ ಇಲ್ಲ
ದವನು, ನಿರಾಳಕಂ–ಅಡಿ, ಮುಡಿ, ಒಡಲು, ಉಸ್ದ, ದಪ್ಪವ ಕಾಣಿಸಿಕೊಳ್ಳ
ವನು, ಶರಣ–ಮರೆಹೊಕ್ಕವನು. (ಶಿವ. ೧)

ಬಸವತತ್ವ ರತ್ನಾಕರ ಉಪನ್ಯಾಸ ಸಂಗ್ರಹ–ಪುಟ 255.

ಯದಾ ಯದಾಹಿ ಧರ್ಮಸ್ಯಹಾನಿರ್ಭವತಿ ಭೂತಲೇ ।
ತದಾತದವತಾರೋಯಮಸ್ ಗಣೇಶಾನಾಂ ಮಹಿತಲೇ ॥
ಯದಾ ಯದಾಹಿ ಪ್ರಾಣಶಿವೈಕ್ಯಭಾಜಾಂ ಹಾನಿರ್ಭವದ್ಭೂಮಿತಲೇ
ಗಣೇಶಾ
ತದಾತದಾ ಮರ್ತ್ಯಕುಲೇsವತೀರ್ಯ ಸಂಭೂಯ ಕುರ್ವಂತಿಹಿ
ಧರ್ಮಸಂಸ್ಥಾಂ
ದೇವದೇವ ಜಗನ್ನಾಥ ಕರುಣಾಕರ ಶಂಕರ ।
ಆಗಮೇ ಭವತಾಚೋಕ್ತಂ ಶಿಷ್ಯಪಾಪಂ ಗುರೋರಿತಿ ।
ಏತಸ್ಮಾತ್ಕರ್ಮಣೋ ಸ್ವಾಮಿನ್ ವಯಂ ಭೀತಾಸ್ಸದಾಶಿವ ।
ತೇಷೂತ್ತಮೇಷುಭೋ ದೇವಿ ಗಣಾಧಿಶೇಷು ಪಂಚಸು ।
ಮೇ ಶಿಖಾಚಕ್ರಮಧ್ಯಸ್ಥಂ ಚರಲಿಂಗಂ ನಿರಂಜನಂ ।
ಕೃತ್ವಾಬಹಿರ್ಗತಂ ತೇಭ್ಯೋಮಯಾಪ್ರೋಕ್ತಮಿದಂ ವಚಃ ॥
ಮಮೈತಚ್ಚರಲಿಂಗಂತು ಮತ್ತಶ್ಚತ ಗುಣಾಧಿಕಂ ।
ಇತ್ಯುಕ್ತ್ವಾವ ಗಣಪಂಚೇಭ್ಯೋದತ್ವಾ ಜಂಗಮಲಿಂಗಕಂ ॥
ಪ್ರೇಷಿತಂ ಧರಣೀಭಾಗೇ ಶೃಣುಶಂಕರಿ ಸಾದರಂ ॥

ಯಾವ ಕಾಲದಲ್ಲಿ ಭೂಲೋಕದೊಳಗೆ ಪ್ರಾಣಲಿಂಗಾಂಗ ಸಾಮರ
ವಿಚಾರದಲ್ಲಿ ಹಾನಿಯು ಆಗುತ್ತದೆಯೋ ಆಯಾಕಾಲದಲ್ಲಿ ಶಿವಧರ್ಮ ಸ್ಥಾಪ
ಯನ್ನು ಮಾಡುವದಕ್ಕೋಸ್ಕರ ರುದ್ರರು ಮರ್ತ್ಯಲೋಕದಲ್ಲವತರಿಸಿ ಧರ

ಸ್ಥಾಪನೆಯನ್ನು ಮಾಡುವವರೆಂದಿರುವಂತೆ ಶ್ರೀ ಆಚಾರ್ಯರನ್ನು ಶಿವಧರ್ಮ ಸ್ಥಾಪನಾರ್ಥವಾಗಿ ಭೂಲೋಕದಲ್ಲಿ ಅವತರಿಸಬೇಕೆಂದು ಪರಶಿವನು ಆಜ್ಞಾಪಿಸಲು, ಶಿಷ್ಯನ ಪಾಪವು ಗುರುವಿಗೆಂದು ಪ್ರಮಾಣವಿರುವುದರಿಂದ ಇದಕ್ಕಾಗಿ ನಾವು ಭೀತರಾಗಿರುವೆವು ಎಂದು ಹೇಳಿದುದಕ್ಕೆ, ಪರಶಿವನು ತನ್ನ ಶಾಚಕ್ರಮಧ್ಯಸ್ಥನಾಗಿದ್ದ ಆ ನಿರಂಜನ ಜಂಗಮನನ್ನು ಇವರ ಕೂಡ ಕಳುಹಿಸಿ ಜಂಗಮಾರಾಧನೆಯಿಂದ ಶಿಷ್ಯಸಂಬಂಧವಾದ ಪಾಪಕ್ಕೊಳಗಾಗದೆ ಭೂಲೋಕದಲ್ಲಿ ಧರ್ಮಸ್ಥಾಪನೆಯಂ ಮಾಡಿರೆಂದು ಆಜ್ಞಾಪಿಸಿ ಕಳುಹಿಸಿದರೆಂದು ಚಿಂತಾಮ, ವೀರಾಗಮ ಮೊದಲಾದ ಆಗಮಗಳ ವಚನಗಳ ಮೇರೆಗೆ ಭೂಲೋಕದಲ್ಲಿ ವತರಿಸಿದ ನಿರಂಜನ ಜಂಗಮ ಮಂಶೀಭೂತರೇ ನಿರಾಭಾರಿ ವೀರಶೈವರೆಂಬ ರಕ್ಮಾತ್ರಶ್ರಮಿಗಳು. (ಭಾ. ತತ್ವ. ಪುಟ ೩೦೨)

ಎಲೌ ಪಾರ್ವತಿಯೇ, ನಿರಾಭಾರಿಯ ಲಕ್ಷಣವನ್ನು ಹೇಳುತ್ತೇನೆ ಕೇಳು. ಪ್ರಾಣಿಗಳಿಗೆ ಪುಣ್ಯ ಪಾಪಗಳೆಂಬ ಎರಡು ಕರ್ಮಗಳು ಹೇಳಲ್ಪಟ್ಟಿರುತ್ತವೆ. ದಂಡ, ಕಮಂಡಲು, ಕೌಪೀನಧಾರಿಯಾಗಿಯೂ ಜಡೆಯುಳ್ಳವನಾಗಿಯಾಗಲೀ ಅಥವಾ ಬೋಳು ತಲೆಯುಳ್ಳವನಾಗಿಯಾಗಲೀ, ಕಾಷಾಯವಸ್ತ್ರವನ್ನು ಧರಿಸಿದವನಾಗಿಯೂ, ಆಶಾರಹಿತನಾಗಿಯೂ ತನ್ನ ಲಿಂಗದಲ್ಲಿ ನಿಷ್ಠೆಯುಳ್ಳವನಾಗಿಯೂ, ಜ್ಞಾನ್ನವನ್ನುಣ್ಣುವವನಾಗಿಯೂ, ಭಯವರ್ಜಿತನೂ, ಮೌನಿಯೂ ಆಗಿರಬೇಕು. ಮತ್ತು ಭೂತದಯಾನ್ವಿತನಾಗಿಯೂ, ಇರುವವನೇ ನಿರಾಭಾರಿಯು. ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದವನಾಗಿಯೂ, ವನದಲ್ಲಿ ಬೆಳೆದ ಪತ್ರಪುಷ್ಪಾದಿಗಳಿಂದ ಲಿಂಗಾರ್ಚನೆ ಮಾಡುವವನಾಗಿಯೂ, ಭ್ರಮರಗಳು ಹೇಗೆ ಬೇರೆ ಬೇರೆ ಪುಷ್ಪಗಳಿಂದ ಮಕರಂದವನ್ನು ತೆಗೆದುಕೊಂಡು ಜೇನುತುಪ್ಪವನ್ನು ಸಂಗ್ರಹ ಮಾಡುತ್ತವೆಯೋ ಹಾಗೆಯೇ ಗೃಹಸ್ಥರ ಮನೆಗಳಿಂದ ಭಿಕ್ಷೆಯನ್ನು ಮಾಡಬೇಕು. ಮ ಉಪವಾಸವ್ರತಕ್ಕೆ ಸಮಾನವಾದುದಾಗುವದು. ಜಂಗಮನಾದವನು ಯಾವ ವಸ್ತುವನ್ನೂ ಸಂಗ್ರಹಿಸಿಡಕೂಡದು. ಒಂದು ವೇಳೆ ಸಂಗ್ರಹಿಸಿದರೂ ಬಡ ಬಡಭಕ್ತರಿಗೆ ದಾನವನ್ನು ಮಾಡಬೇಕು. (ಭಾ. ತತ್ವ, ಪುಟ ೩೦೩)

ಲಿಂಗಧಾರಣ ಚಂದ್ರಿಕಾ

(ಕಾಶಿಯ ಶ್ರೀ ಜಂಗಮವಾಡಿಯ ಜಗದ್ಗುರು ಮಠದಿಂದ ಅಚ್ಚಾದದ್ದು)

ಲಿಂಗಧಾರಣ ಚಂದ್ರಿಕೆಯ ಕೊನೆಯ ಭಾಗದಲ್ಲಿ ವೀರಶೈವೋ
ಪ್ರದೀಪಿಕೆಯು ಇರುತ್ತದೆ. ಅದರ ಕರ್ತೃಗಳು ಗ್ರಂಥಾರಂಭದಲ್ಲಿ—

ಗುರುಮನಾದಿ ನಿರಂಜನ ಜಂಗಮಂ ಪರಮ ಸದ್ಗುಣ ಸೌಖ್ಯಪರಾ
ಜಗತಿ ತೋಂ

ಸಿದ್ಧಮಹೇಶ್ವರಂ ಪ್ರಥಿತನಾಮಜುಷಂ ಪ್ರಣಮಾಮ್ಯಹಂ ॥

ಲೀಲಾಮೂರ್ತಿರನಾದಿ ಜಂಗಮಮಯಃ ಶ್ರೀತೋಂಟಸಿದ್ಧೇಶ್ವರಃ।

ಸ್ವೈರೋದ್ಧಾಮಕೃಪಾಕಟಾಕ್ಷ ಲಹರೀ ಪ್ರಾಪ್ತೋಪದೇಶೋನ್ನತಿಃ।

ಧರ್ಮಾನ್ಸಾಧುಸಮೀರಯನ್ ಸ್ವಭಜಕಾನ್ ಶ್ರೀವೀರಶೈವೋಚಿತಾ

ಬೋಧಂನೋವಿಮಲಂ ದದಾತು ಮುರಿಗಾ ಶ್ರೀ ಶಾಂತವೀರೋಯ

(ಬ. ತತ್ವ, ಪುಟ ೩

ಅಭಿನವ ಮಹಿಮನನಂತಕೋಟಿಯ ರೂಪ ।

ನಭವಂಗೆ ಸರಿ ಮಿಗಿಲೆನಿಪ ॥

ವಿಭುನಿರಂಜನ ಗಣಾಧೀಶನೊಪ್ಪಿದ ಶಿವ ।

ಸಭೆಗೆ ಚಂದ್ರಮನೋಲು ಹೊಳೆದು

(ತಾ. ಗ್ರಂಥ, ಪುಟ ೧೪, ಪದ ೩)

ಶೂನ್ಯಸಿಂಹಾಸನ:—

ಶೂನ್ಯ ಪೀಠ

ಮಹಾತ್ಮ ಬಸವಣ್ಣನವರು, ಅನುಭವಮಂಟಪದ ಅಗ್ರಪೀಠ ಮಹಾಮನೆಯ ಮೂಲಪೀಠವಾಗಿ ಶೂನ್ಯಪೀಠವನ್ನು ಸ್ಥಾಪಿಸಿದರು. ಅ ಅಲಂಕರಿಸಿದ ಮಹಾನುಭಾವ, ವ್ಯೋಮಕಾಯ, ಶೂನ್ಯಮೂರ್ತಿ ಅಲ್ಲಮಪ್ರ ಶೂನ್ಯತತ್ವದ ರಹಸ್ಯವನ್ನು ಶರಣರಿಗೆಲ್ಲ ಭೋಧಿಸಿ, ಶೂನ್ಯದ ಸಂಪ ಯನ್ನು ಮಾಡಿಸುವ ಉದ್ದೇಶದಿಂದಲೇ ಪ್ರಭುದೇವರು ಶೂನ್ಯಪೀಠವನ್ನು ಸ್ಥ ಸಿದರು. ಪ್ರಭುವಿನ ಕೃಪೆಯಿಂದ ಬಸವಾದಿ ಪ್ರಮಥರು ಶೂನ್ಯದ ಯನ್ನು ಸಂಪಾದಿಸಿ ಕೃತಾರ್ಥರಾದರು.

ಶೂನ್ಯಪೀಠ ಇಲ್ಲವೆ ಶೂನ್ಯಸಿಂಹಾಸನವನ್ನು ಬಸವಣ್ಣನವರು ಹೇಗೆ ರಚಿಸಿವರು ? ಎಂಬುದನ್ನು ಚಾಮರಸ ಕವಿಯು—

" ತನ್ನೊಳಗೆ ತಾ ಸಾಧಿಸಿದ ಸಂ
ಪನ್ನತೆಯ ನಿದಿರಿಟ್ಟು ರಚಿಸಿದ
ಶೂನ್ಯಸಿಂಹಾಸನವನೆನ್ಮಯ ಬಸವದಂಡೇಶ "

ಎಂದು ಸುಂದರ ಶೈಲಿಯಲ್ಲಿ, ಸಂಗ್ರಹವಾಗಿ ಹಾಗು ಸಮಗ್ರವಾಗಿ ನಿರೂಪಿಸಿದ್ದಾನೆ. ಬಸವಣ್ಣನ ನಿರಹಂಭಾವ–ನಿರೀಹಂಭಾವದ ಭಕ್ತಿಯ ಶಕ್ತಿಯೇ ಪ್ರಭುಪೀಠವಾಗಿ ಪರಿಣಮಿಸಿ, ಸಮಾಜದಲ್ಲಿ ಅಧ್ಯಾತ್ಮ ಸಮೃದ್ಧಿಯ ಸತ್ಯ–ಶುದ್ಧ–ಜೀವನದ ಮಾರ್ಗದರ್ಶನವನ್ನು ನೀಡಿದೆ - ಎಂಬುದು ವಸ್ತುಸ್ಥಿತಿಯಾಗಿದೆ !

ಪ್ರಭುದೇವರ ನಿಲುವು ಮಾತು-ಮನಂಗಳಿಗೆ ನಿಲುಕುವಂತಹದಲ್ಲ. ಅವರು ಬಯಲವೊದಗಿದ ಭರಿತ ; ನಿರಾಳವನೊಳಕೊಂಡ ಸಹಜ.

ಅಂತಃಪೂರ್ಣೋ ಬಹಿಃಪೂರ್ಣಃ ಪೂರ್ಣಕುಂಭ ಇವಾರ್ಣವೆ ||

ಅಂತಃಶೂನ್ಯೋ ಬಹಿಃಶೂನ್ಯಃ ಶೂನ್ಯಕುಂಭ ಇವಾಂಬರೆ ||

ಎಂಬ ಉಪನಿಷದುಕ್ತಿಯಂತೆ, ಅಂತರಂಗ–ಬಹಿರಂಗಗಳಲ್ಲಿ ಸಂಸಾರ ವಾಸನಾಶೂನ್ಯನಾದ ಅಲ್ಲಮನ ಅತ್ಯಂತ ಪರಿಶುದ್ಧವಾದ ಜೀವನ, ಚಿದ್ರಸ ಪರಿಪೂರ್ಣ ಸ್ಫಟಿಕಘಟ, ಅಮೃತಕುಂಭ ! ಆತನ ಮನೋನ್ನತ ವ್ಯಕ್ತಿತ್ವವನ್ನು ಬಲ್ಲ ಬಸವಣ್ಣನವರು, ಆತನಿಗೆ ಶೂನ್ಯಪೀಠವನ್ನು ಕಲ್ಪಿಸಿ ತಮ್ಮ ದಾಸೋಹಂ ಭಾವದ ಭಕ್ತಿಯನ್ನು ಸಲ್ಲಿಸಿದರು.

ಶೂನ್ಯವೆಂದರೇನು ?

ಶೂನ್ಯಪೀಠ, ಶೂನ್ಯಸಿಂಹಾಸನ - ಮೊದಲಾದ ಪ್ರಯೋಗಗಳಲ್ಲಿ ಶೂನ್ಯ ಪದವು ಬಂದಿದೆ. ಶರಣರು ಅದನ್ನು ಯಾವ ಅರ್ಥದಲ್ಲಿ ಉಪಯೋಗಿಸಿದ್ದಾರೆ ? ಎಂಬುದನ್ನು ಇಲ್ಲಿ ಸ್ವಲ್ಪ ಗಮನಿಸುವುದು ಅವಶ್ಯವಿದೆ.

ಮೊದಲು ಬೌದ್ಧಧರ್ಮದಲ್ಲಿ ಶೂನ್ಯವಾದವನ್ನು ಬಲವಾಗಿ ಮಂಡಿ
ದವರು ಮಾಧ್ಯಮಿಕ ಶಾಖೆಯವರು. ಅವರ ಅಭಿಪ್ರಾಯದಲ್ಲಿ ಶೂನ್ಯ
ತತ್ವವು—

ನಸನ್ನಾಸನ್ ಸದಸನ್ನಚಾಪ್ಯನು ಭಯಾತ್ಮಕಮ್ |
ಚತುಷ್ಕೋಟಿ ವಿನಿರ್ಮುಕ್ತಂ ತತ್ತ್ವಂ ಮಾಧ್ಯಮಿಕಾವಿದುಃ |

ಎಂದು ಆಸ್ತಿ-ನಾಸ್ತಿಗಳ ಚತುಷ್ಕೋಟಿಯಿಂದ ಆಚೆ, ಅನಿರ್ವಚನೀಯ
ವಾಗಿರುವ ಒಂದು ತತ್ವವಿಶೇಷ. ಶೂನ್ಯತತ್ವವನ್ನು ವಿಧಿ-ನಿಷೇಧಗಳ ಕೇಂದ್ರ
ಸ್ಥಾನದಲ್ಲಿಯೇ ನಿರ್ಣಯಿಸಬೇಕೆಂಬುದು ಮಾಧ್ಯಮಿಕರ ಮಧ್ಯಮಾರ್ಗ. ಆತ್ಮ
ತತ್ತ್ವವೇ ಶೂನ್ಯತತ್ವವೆಂದು ಅವರು ಸ್ಪಷ್ಟವಾಗಿ ಪ್ರತಿಪಾದಿಸಲಾರರು.
ಏಕೆಂದರೆ ಅವರದು ಅನಾತ್ಮವಾದ. ಶೂನ್ಯವಾದವೂ ಅದಕ್ಕೆ ಪೋಷಕವಾಗಿಯೇ
ಇದೆ. ಇತರ ತತ್ವಗಳ ನಿಷೇಧಪೂರ್ವಕವಾಗಿ ಸತ್ಯವನ್ನು, ಅಸತ್ಯದ ಸಮಸ್ತ
ಆರೋಪಗಳಿಂದ ದೂರಗೊಳಿಸಿ, ಸಹಜ-ಶುದ್ಧ ಸ್ವರೂಪದಲ್ಲಿಯೇ ಅರಿಯಬೇಕೆಂ
ಬುದು ಶೂನ್ಯವಾದದ ಹೃದ್ಗತ. ಈ ವಾದವನ್ನು ಆಚಾರ್ಯ ಶಂಕರರು, ಲೋಕೋ
ಹಾಸಿಕರವೆಂದು ಕೇವಲ ಅನಾದರ ಬುದ್ಧಿಯಿಂದ ಅಲ್ಲಗಳೆದಿದ್ದಾರೆ.

ಶೂನ್ಯವಾದದ ಶೂನ್ಯಾದ್ವೈತದಲ್ಲಿ, ನಿ ಷೇ ಧ ಮು ಖ ವಾ
ಶೂನ್ಯದ ಮೂಲವನ್ನು ಮುಟ್ಟುವ ಸಾಹಸವಿದೆ. ಅದು ಪ್ರಶಸ್ತವಾ
ಯುಕ್ತಿಯುಕ್ತವಾದ ವಿಧಾನವಲ್ಲ. ನಾಸ್ತಿಭಾವದ ಸೂತ್ರವಿಡಿದು ಅಸ್ತಿ
ಭಾವವನ್ನು ಸೇರುವುದು ಹೇಗೆ ಸಾಧ್ಯ? ಎಲ್ಲ ನಾಮ-ರೂಪ-ಕ್ರಿಯೆಗಳ
ಆರೋಪಗಳನ್ನು ಕಳೆಯುವುದು ಹೇಗೆ? ಕಳೆದಬಳಿಕ ಉಳಿಯುವ ವಸ್ತುವಿನ
ಸ್ವರೂಪವೇನು? ಅದನ್ನು ಏತರಿಂದ ಅರಿಯಬೇಕು? ಎಲ್ಲವನ್ನೂ ನಿಷೇಧಿಸಿ,
ಆ ನಿಷೇಧವನ್ನೂ ಮೀರಿ, ತಾನೇತಾನಾಗಿ ನಿಲ್ಲುವ ತತ್ವವೇ ಶೂನ್ಯವೆಂದು
ಹೇಳಿದರೆ, ಶೂನ್ಯತತ್ವದ ವಿಶಾಲ ವ್ಯಾಪಕಭಾವನೆಗೆ ಅದೊಂದು ಕೊರತೆ
ಯಲ್ಲವೆ? ಶೂನ್ಯವಾದದ ವಿಚಾರಸರಣಿಯಲ್ಲಿ ಇಂತಹ ಅನೇಕ ಸಮಸ್ಯೆಗಳಿದ್ದು
ಅವುಗಳಿಗೆ ಸಮರ್ಪಕ ಸಮಾಧಾನವಿಲ್ಲ.

ಶೂನ್ಯತತ್ವದ ಬಗೆಗೆ ಶರಣರ ಪಾರಿಭಾಷೆಯೇ ಬೇರೆ. ಪೂರ್ಣ-ಪ
ಪೂರ್ಣ ಪರತತ್ವದ ಸಂಕೇತವಾಗಿ ಅವರು ಶೂನ್ಯಪದವನ್ನು ಉಪಯೋಗಿಸಿದ್ದಾರೆ

ಬಯಲು, ನಿರವಯಲು, ನಿರವಯ-ಮುಂತಾದ ಪದಗಳನ್ನು ಶೂನ್ಯದ ಪರ್ಯಾಯವಾಗಿ ಅವರು ಪ್ರಯೋಗಿಸಿದ್ದಾರೆ. ಏನೂ ಇಲ್ಲದ, ಏನೂ ಅಲ್ಲದ. ನಿಷೇಧಾತ್ಮಕ ಶೂನ್ಯತತ್ವ ಅವರಿಗೆ ಇಷ್ಟವಿಲ್ಲ. ಎಲ್ಲದರಲ್ಲಿಯೂ ಕೂಡಿಕೊಂಡು, ಎಲ್ಲವನ್ನೂ ಒಳಗೊಂಡು, ವಿಶ್ವಾತ್ಮಕವಾಗಿ ಪಲ್ಲವಿಸಿ ವಿಶ್ವಾತೀತವಾಗಿ ಪರಿಣಮಿಸಿರುವ ಮೂಲವಸ್ತುವನ್ನೇ ಅವರು ಶೂನ್ಯವೆಂದು ಭಾವಿಸಿದರು. ಘಟವ ನೊಡೆದು ಬಯಲ ನೋಡುವ ವಿಶ್ಲೇಷಣಾತ್ಮಕ-ದೃಷ್ಟಿ ಅವರದಲ್ಲ. ಘಟದೊಳಗಿಪ್ಪುದದೇ ಬಯಲು-ಎಂದು ಸಂಶ್ಲೇಷಣಾತ್ಮಕವಾಗಿ ವಿಚಾರಿಸುವ ವಿಶಾಲದೃಷ್ಟಿ ಅವರದು. ಶರಣರು ಒಮ್ಮೊಮ್ಮೆ ಮೂಲತತ್ತ್ವವನ್ನು ಪ್ರತಿಪಾದಿಸುವಾಗ-ಹಾಗಲ್ಲ, ಹೀಗಲ್ಲ-ಎಂದು ಎಲ್ಲವನ್ನೂ ಅಲ್ಲಗಳೆದು ಹೇಳುವುದೂ ಉಂಟು.

ಉದಾಹರಣೆಗಾಗಿ ಪ್ರಭುದೇವರ ಒಂದು ವಚನ—

ಅಯ್ಯ, ನಿರವಯುವ ಶೂನ್ಯಲಿಂಗ, ಮೂರ್ತಿಯ ನಿಲುಕಡೆ
ಎಂತೆಂದೊಡೆ, ಸಾಕಾರನಲ್ಲ, ನಿರಾಕಾರನಲ್ಲ ನೋಡಾ !
ನಿರವಯುವ ಶೂನ್ಯಲಿಂಗಮೂರ್ತಿ, ಆದಿಯಲ್ಲ,
ಅನಾದಿಯಲ್ಲ; ಇಹದವನಲ್ಲ, ಪರದವನಲ್ಲ ;
ಸುಖದವನಲ್ಲ, ದುಃಖದವನಲ್ಲ ; ನಿರವಯುವ
ಶೂನ್ಯಲಿಂಗಮೂರ್ತಿ ಪುಣ್ಯ-ಪಾಪದವನಲ್ಲ ;
ಕರ್ತೃ-ಭೃತ್ಯನಲ್ಲ ; ಕಾರಣನಲ್ಲ,
ಧರ್ಮಿ-ಕರ್ಮಿಯಲ್ಲ, ಪೂಜ್ಯ-ಪೂಜಕನಲ್ಲ ;
ಇಂತು ಉಭಯುವಳಿದು ಬೆಳಗುವ ನೋಡಾ !
ನಮ್ಮ ಗುಹೇಶ್ವರ ಲಿಂಗವು !

ಈ ವಚನದಲ್ಲಿ ನಿರವಯ-ಶೂನ್ಯಲಿಂಗಮೂರ್ತಿಯ ನಿಲುಕಡೆಯನ್ನು ಸಾಕಾರನಲ್ಲ, ನಿರಾಕಾರನಲ್ಲ-ಮೊದಲಾಗಿ ನಿರೂಪಿಸಿರುವುದು ಸ್ಪಷ್ಟವಿದೆ. ಇಲ್ಲಿ ಸಾಕಾರನಲ್ಲ, ನಿರಾಕಾರನಲ್ಲ-ಎಂದರೆ ಸಾಕಾರನಾಗಿಲ್ಲ, ನಿರಾಕಾರನಾಗಿಲ್ಲ

ಎಂಬುದು ಅದರ ಅರ್ಥವಲ್ಲ. ನಿರವಧಿಕ–ನಿರುಪಾಧಿಕ-ಚೈತನ್ಯವನ್ನು ನಿರ್ದಿಷ್ಟ ಶಬ್ದಗಳಿಂದ ಇತಿ ಮಿತಿಗೊಳಿಸಿ ಹೇಳುವುದು ಸೂಕ್ತ ವೆಂಬುದು ಅದರ ಅಭಿಪ್ರಾಯ. ಉಭಯವಳಿದು ಬೆಳಗುವ ತತ್ತ್ವವನ್ನು ಉಭಯಾತ್ಮಕವಾಗಿ ವಿವರಿಸುವುದು ಸಾಧ್ಯವೇ ? ಹಾಗೆ ಸಾಧ್ಯವಿಲ್ಲವೆಂ ದನ್ನೇ ಅವರು ಆ ವಿಧವಾಗಿ ಹೇಳಿದ್ದಾರೆ. "ನೇತಿ, ನೇತಿ" ಎಂದರೂ "ಚೆಕ್ಕ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ" ಎಂದರೂ ಅದೇ ಅಭಿಪ್ರಾಯ. ಮುಖ್ಯವಾ ನಿತ್ಯನಿರಂಜನ, ಸತ್ಯ–ಸನಾತನ ತತ್ತ್ವದ ಸ್ವರೂಪ–ಸ್ವಭಾವಗಳನ್ನು ಸಾ ವಿದ್ದಮಟ್ಟಿಗೆ ಶೂನ್ಯಶಬ್ದದಿಂದ ಪ್ರಕಟಿಸುವುದೇ ಶರಣರ ಉದ್ದೇಶ.

(ಚಿ. ಜ. ರು. 15-10-64ರ ಸಂದೇ

೧೩. ಇದು ಗೃಹಸ್ಥಾಶ್ರಮಕ್ಕೆ ಬಹಳ ಗೌರವವನ್ನು ಕೊಟ್ಟಿತು ಜೈನ ಬುದ್ಧಾದಿ ಧರ್ಮಗಳು ಸನ್ಯಾಸಕ್ಕೆ ಮನ್ನಣೆ ಕೊಟ್ಟಿರುವುದರಿ ಸಮಾಜದಮೇಲೆ ನಿವೃತ್ತಿಯ ಪರಿಣಾಮವೇ ಬಹಳ ಆಗಿತ್ತು. ಈ ಭಾವ ಯನ್ನು ಕಿತ್ತುಹಾಕಿ, ಸಮಾಜವನ್ನು ಸುಧಾರಿಸಿ, ಸನ್ಯಾಸಿಯಂತೆ ಗೃಹಸ್ಥನ ಮೋಕ್ಷಕ್ಕೆ ಅಧಿಕಾರಿಯೆಂದು ಸಾರಿತು. ಈ ವೀರಶೈವ ಮತೋದ್ಧಾರಕನಾ ಬಸವೇಶ್ವರನು ಸ್ವತಃ ಗೃಹಸ್ಥಾಶ್ರಮಿ.

೧೪. ಯಾವ ಅಸ್ಪೃಶ್ಯರು ಮಾನವ ಜಾತಿಗಿರುವ ತಮ್ಮ ಹಕ್ಕುಗಳನ್ನು ಕಳೆದುಕೊಂಡು ಇದುವರೆಗೆ ಹಿಂದೂ ಸಮಾಜದ ಹೊರಗೆ ನಿಂತುಕೊಂಡ ವರೋ, ಯಾವ ಜನರ ಉದ್ಧಾರದ ಮೇಲೆ ಹಿಂದೂದೇಶದ ಭಾವೀ ರಾಜಕೀ ಸ್ಥಿತಿಯು ಅವಲಂಭಿಸಿಕೊಂಡಿರುವುದೋ ಅಂತಹ ಅಸ್ಪೃಶ್ಯರನ್ನು ಈ ಸಂಸ್ಥೆಯ ಬಿಗಿದಪ್ಪಿ ಅವರೊಡನೆ ಸಹಪಂಕ್ತಿ ಭೋಜನ, ಅವರೊಡನೆ ಲಗ್ನಸಂಬಂಧ ವ್ಯವಹಾರವನ್ನು ಮಾಡಿದ್ದಲ್ಲದೆ ಅವರಿಗೆ ಆತ್ಮೋನ್ನತಿಯ ಶಿಕ್ಷಣವನ್ನು ಕೊಟ್ಟಿತ್ತೆಂಬುದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ. ಇಪ್ಪತ್ತನೇ ಶ ಮಾನದಲ್ಲಿ ಈ ವಿಷಯವು ಇಷ್ಟು ಕಠಿಣವೆನಿಸಿದುದಲ್ಲಿ, ೮೦೦ ವರ್ಷಗ ಪೂರ್ವದಲ್ಲಿ ಶಿವಶರಣರು ಇದನ್ನು ಸಹಜವಾಗಿ ಆಚರಣೆಯಲ್ಲಿ ತಂದದ್ದನ್ನು ನೋಡಿದರೆ ಆಧುನಿಕ ಸುಧಾರಕರೆಲ್ಲರೂ ತಲೆಬಾಗಿಸಬೇಕಾಗುವುದು. ಈ ಸಂಸ್ಥೆಯು ಕೊಟ್ಟ ಆಧ್ಯಾತ್ಮಿಕ ಶಿಕ್ಷಣವು ಎಷ್ಟು ಉಚ್ಚತರಗತಿಯದಾಗಿತ್ತು

ಎಂಬುದನ್ನು ಅವರವರು ತಮ್ಮ ಕಾಯಕಗಳ ದ್ವಾರಾ ಹೇಳಿರುವ ವಚನಗಳಿಂದ ತಿಳಿದುಬರುತ್ತದೆ.

ಶಿವಾನುಭವ ಮಂಟಪದಲ್ಲಿ ಮುಖ್ಯವಾಗಿ ಧಾರ್ಮಿಕ ಚರ್ಚೆಯಾಗುತ್ತಲಿದ್ದಿತು. ಪ್ರತಿಯೊಬ್ಬರೂ ತಮ್ಮತಮ್ಮ ಶಿವನ ಸಂಬಂಧ ಅನುಭವವನ್ನು ಹೇಳುತ್ತಿದ್ದಕಾರಣ ಶಿವಾನುಭವವೆಂಬುವ ಹೆಸರಾಯಿತು. ಶಿವಸ್ಯ ಅನುಭವಃ ಶಿವಾನುಭವಃ ಅನುಭವವೆಂದರೆ ಜ್ಞಾನ; ಶಿವನ ಜ್ಞಾನವೆಂತಲೂ ಇದರ ಅರ್ಥವಾಗುವುದು.

ಶಿವಾನುಭವ ಮಂಟಪದ ಬಗ್ಗೆ ವೀರಶೈವ ಧರ್ಮಗ್ರಂಥಗಳಲ್ಲಿ ಅನೇಕ ರೀತಿಯಿಂದ ವರ್ಣಿಸಲ್ಪಟ್ಟಿರುತ್ತದೆ. ಇದು ಐತಿಹಾಸಿಕ ಸುಪ್ರಸಿದ್ಧ ಕಾರ್ಯವಾಗಿರುವುದರಿಂದ ಶ್ರೀ ಬಸವಾದಿ ಪ್ರಮಥರ ಕಾಲದಿಂದಲೂ ಶಿವಾನುಭವ ಮಂಟಪದ ಚರ್ಚೆ ನಡೆಯುತ್ತಲೇ ಬಂದಿದೆ ಆದ್ದರಿಂದ ಪ್ರತಿಯೊಬ್ಬ ಗ್ರಂಥಕಾರರೂ ಅದನ್ನು ಉಲ್ಲೇಖ ಮಾಡುತ್ತಾ ಬಂದಿರುತ್ತಾರೆ. ಶಿವಶರಣರು ಅಲ್ಲಿ ಸಿಗುತ್ತಿದ್ದ ಜ್ಞಾನದ ಸಲುವಾಗಿ ಬಹಳ ಅಭಿಮಾನಪೂರ್ವಕವಾಗಿ ಅದನ್ನು ತಮ್ಮ ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಈ ಅನುಭವಮಂಟಪವು ಮಾಡಿದ ಕಾರ್ಯಗಳಲ್ಲಿ ಇನ್ನೊಂದು ಅತ್ಯಂತ ಮಹತ್ವದ್ದಾಗಿರುತ್ತದೆ. ಇದರಲ್ಲಿ ಮುಳ್ಳಾವಿಗೆಯ ಕಾಯಕವೆಂಬುವದೊಂದು ಪ್ರಾಯಶ್ಚಿತ್ತದ ಹೊಸ ತರಹದ ವಿಧಿಯು ಪ್ರಚಾರದಲ್ಲಿ ತರಲ್ಪಟ್ಟಿದ್ದು, ಪಾಪಿಗಳಾದವರು ತಮ್ಮ ಪಾಪದ ಬಗ್ಗೆ ಪಶ್ಚಾತ್ತಾಪ ಪಡುವಂತೆ, ನಿರಪರಾಧಿಗಳಾದ ಶಿವಭಕ್ತರು ಮೊಳೆಗಳ ಮೇಲೆ ಉಪವಾಸ ನಿಂತುಕೊಳ್ಳುವುದು, ಪಾಪಮಾಡಿದವನು ಒಬ್ಬನು, ದುಃಖ ಅನುಭವಿಸುವವನು ಇನ್ನೊಬ್ಬನು. ಕರ್ಮವಾದಕ್ಕೂ ಮಾನವ ಸ್ವಭಾವಕ್ಕೂ ವಿರೋಧವಾಗಿ ತೋರುವ ಈ ಆತ್ಮಶುದ್ಧತೆಯ ತತ್ವವು ಜಗತ್ತಿನಲ್ಲಿ ಸುಧಾರಿಸಿದ ಇತರ ಯಾವ ಸಮಾಜದಲ್ಲಿಯೂ ಪ್ರಚಾರದಲ್ಲಿದ್ದಂತೆ ಕಂಡುಬರುವುದಿಲ್ಲ.

ಈ ಅನುಭವ ಮಂಟಪವು ಕಲ್ಯಾಣನಗರದಲ್ಲಿದ್ದರೂ ದೇಶದ ತುಂಬ ಅದರ ಶಾಖೆಗಳಿದ್ದವು. ಅಂದರೆ ವೀರಶೈವರ ಮಠಗಳೇ ಶಿವಾನುಭವವನ್ನು ಪ್ರಚಾರಮಾಡತಕ್ಕ ಸಂಸ್ಥೆಗಳಾಗಿದ್ದವು.

ಅನುಭವವೆಂದರೆ ಜ್ಞಾನವೆಂದು ಮೇಲೆ ಹೇಳಿರುತ್ತೇವೆ. ಅನುಭವದ ಬೇರೆ ಬೇರೆ ಶರಣರು ತಮ್ಮ ವಚನಗಳಲ್ಲಿ :—

ಶ್ರೀ ಚೆನ್ನಬಸವಣ್ಣನವರು :—

"ಭಕ್ತಿಗೆ ಅನುಭಾವವೇ ಬೀಜಕಾಣಿರೋ, ಭಕ್ತಿಗೆ ಅನುಭಾ ಆಚರಣೆ ಕಾಣಿರೋ, ಭಕ್ತಿಗೆ ಅನುಭಾವವೇ ಸಕಲೈಶ್ವರ್ಯದ ಶೃಂ ಕಾಣಿರೋ ವೀರಶೈವಾಚಾರ ಸಂಪನ್ನರೆನಿಸುವ ಪರಮ ಸದ್ಭಕ್ತರಿಗೆ ಅನುಭಾ ಅರುವಿನ ಗೊತ್ತು ಕಾಣಿರೋ, ಅದು ಕಾರಣವಾಗಿ ಅನುಭಾವವಿಲ್ಲದವನ ಎಳತಟಗೊಳಿಸಿತ್ತು. ಅನುಭಾವವನರಿಯದವ ಕಾಮುಕ ಕಾಣಿರೋ, ಮಹಾನುಭವವ ಮಾಡುವಲ್ಲಿ ಸಕಲ ಸಂಚಲವಳಿದು ವಿನಯದಿಂದ ದಿರ್ದೊಡೆ ನಮ್ಮ ಕೂಡಲ ಚನ್ನಸಂಗಮದೇವರು ಆ ಘೋರ ನರಕದಲ್ಲಿ ಮಾಣ್ಬನೇ ?

ಶ್ರೀ ಚೆನ್ನಬಸವಣ್ಣನವರು :—

ಅನುಭಾವವಿಲ್ಲದ ಭಕ್ತಿ ಅರುವಿಂಗೆ ಬಾರದು, ಅನುಭಾವವಿಲ್ಲದ ಸಂ ಸಮರಕ್ಕೆ ನಿಲುಕದು. ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡ ಅನುಭವವಿಲ್ಲದೆ, ಏನೇನೂ ಅರಿಯಬಾರದು. ತನ್ನಲ್ಲಿ ಸನ್ನಿಹಿತ ಉಳ್ಳ ಶಿವಶರಣರ ಸಂಗವೇತಕ್ಕೆನಲುಂಟೆ ? ಕೂಡಲ ಸಂಗಮದೇವಯ್ಯಾ ನ ಅನುಭಾವ ಮಾಡಿದ ಮಥನವೆಂದು ನುಡಿಯಬಹುದೇ ? ಪ್ರಭುವೇ ?

ಶ್ರೀ ಪ್ರಭುದೇವರು :—

"ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿ ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ, ಅನುಭಾವದನುವಿ ಗುಹೇಶ್ವರಾ ನಿಮ್ಮ ಅನುಪಮ ಸುಖಿ"

ಈ ಅನುಭವ ಮಂಟಪದಿಂದ ಲಿಂಗತತ್ವವು ಚೈತನ್ಯಯುಕ್ತವಾಗಿ ಸ್ಫೂ ಗೊಂಡಿತು. ಷಟ್‌ಸ್ಥಲಗಳು ಪ್ರಫುಲ್ಲಿತಗಳಾದವು. ಪಂಚಾಚಾರಗಳು ಸ್ಥಿರಪ ಸಮಾಜದಲ್ಲಿ ನೆಲೆಗೊಂಡವು. ಎತ್ತನೋಡಿದಡತ್ತ ಶಿವಭಕ್ತಿಯು ಬೇರೂ ಆಚಾರನಿಷ್ಠತೆಯು ಬೆಳೆಯಿತು. ವಚನಗಳು ಪ್ರಚಾರಕ್ಕೆ ಬಂದವು. ಸಮಾ

ದಲ್ಲಿ ಮೇಲೆ ಕೀಳುಗಳೆಂಬ ಕೊಳೆಯು ನಾಶವಾಗಿ ಸಮಾನಾತ್ಮವು ಬೇರೂರಿತು. ಅನುಭವಿಗಳೇ ಹಿರಿಯರಾದರು. ಜಾತಿಭೇದವು ನಾಶವಾಗಿ ಅಂಗದ ಮೇಲೆ ಲಿಂಗವಿದ್ದವರೆಲ್ಲ ಪರಸ್ಪರ ಸಂಗಮನಾಥನೆಂಬುವ ಭಾವನೆಯು ಬೆಳೆಯಿತು. ಎಲ್ಲೆಡೆಯಲ್ಲೂ ವೀರಶೈವ ಧರ್ಮದ ಪ್ರಸಾರವು ಕ್ರಾಂತಿಕಾರಕವಾಗಿ ನಡೆಯಿತು. ಕಾಯಕಗಳು ಬೇರೂರಿದವು. ಬೇರೆ ಬೇರೆ ಮತದ ಪಂಡಿತ ಪಾಮರರೆಲ್ಲ ಶ್ರೀ ಬಸವಣ್ಣನವರ ಈ ಅದ್ಭುತಕಾರ್ಯಕ್ಕೆ ಮೆಚ್ಚಿ ತಲೆತೂಗಿ ಅನುಭವ ಪ್ರಚಾರಕ್ಕೆ ಒಳಪಟ್ಟು ವೀರಶೈವ ಧರ್ಮವನ್ನು ಸ್ವೀಕರಿಸಿದರು. ಹೀಗಾಗಿ ಅನುಭವ ಮಂಟಪದ ಕೀರ್ತಿಯು ದಶದಿಕ್ಕುಗಳಲ್ಲಿ ಹಬ್ಬಿತು.

ವೀರಶೈವ ಧರ್ಮ ಕೇವಲ ವ್ಯಕ್ತಿವೈಶಿಷ್ಟ್ಯವನ್ನು ಸಾರುವದಕ್ಕಾಗಲೀ ವ್ಯಕ್ತಿಯ ವಿಮುಕ್ತಿಯನ್ನು ಸಾಧಿಸುವುದಕ್ಕಾಗಲೀ ಜನ್ಮ ತಾಳಲಿಲ್ಲ. ಪಾಂಡಿತ್ಯದ ಕೆಚ್ಚಿನಿಂದ ಒಂದು ಗಹನ ತತ್ವವನ್ನು ಪ್ರತಿಪಾದಿಸಿ ಜನತೆಯನ್ನು ದಂಗುಗೊಳಿಸು ವುದಕ್ಕೂ ಪ್ರಯತ್ನಿಸಲಿಲ್ಲ. ಬಸವಣ್ಣನವರೇ ಆದಿಯಾಗಿ ವೀರಶೈವ ಧರ್ಮ ಪ್ರತಿಪಾದಿತರು ಜನತೆಯಿಂದ ಬಹಳ ಎತ್ತರದಲ್ಲಿ ನಿಂತು ಜನಸಾಮಾನ್ಯರನ್ನು ಕಡೆಗಣ್ಣಿನಿಂದ ಕಾಣುವ ಮಹಾನುಭಾವತ್ವವನ್ನೂ ಮೆರೆಸಲಿಲ್ಲ. ತಮ್ಮ ಆಧ್ಯಾತ್ಮಿಕ ಸಾಧನೆಯಿಂದ ಯಾವ ಆನಂದ ನೈರ್ಮಲ್ಯ ಶಾಂತಿಗಳನ್ನು ದೊರಕಿಸಿಕೊಂಡಿದ್ದರೋ ಅವರ ಲಾಭ ಎಲ್ಲರಿಗೂ ದೊರೆಯಬೇಕೆಂದು ಬಯ ಸಿದರು. ತಮ್ಮ ಜೀವನ ಹಸನಾದಂತೆ ನಾಡಿನವರೆಲ್ಲರ ಜೀವನವೂ ಹಸನಾಗ ಬೇಕು ; ಲೋಕವೆಲ್ಲಾ ಒಂದು ಧರ್ಮದ ಶ್ವೇತಚ್ಛತ್ರದ ಕೆಳಗೆ ಕೆಳೆಯರಂತೆ, ಸಹೋದರರಂತೆ ಬಾಳಿ ಬದುಕಬೇಕೆಂಬುವುದು ಅವರ ಹಿರಿಯಾಸೆಯಾಗಿತ್ತು. ಬಾಳುವೆಯನ್ನು ಮರೆತು ಸದಾ ಪರಲೋಕದ ಚಿಂತೆಯಲ್ಲಿರುವುದು ನಿರರ್ಥಕ ವಾದುದೆಂದು ಬಗೆದರು. ಇಹಪರ ಲೋಕಗಳನ್ನು ಎರಡು ಜಗತ್ತುಗಳನ್ನಾಗಿ ವಿಭಾಗಿಸದೆ ಒಂದು ಮತ್ತೊಂದರ ಪೂರಕವೆಂದು ಭಾವಿಸಿದರು. ಮುಂದಿನ ಲೋಕಕ್ಕೆ ಹೋಗಿ ಬಾಳುವೆ ಮಾಡುವದೆಂದರೆ ಈ ಲೋಕದ ಜೀವನವನ್ನು ಮುಂದುವರಿಸಿದಂತಲ್ಲದೆ ಬೇರೆಯಲ್ಲವೆಂಬುದನ್ನು ಸಾರಿದರು. ಇಹಲೋಕದ ಕುಂದುಕೊರತೆಗಳನ್ನೂ, ಅಪೂರ್ಣವಾದ ಆಶೆಗಳನ್ನೂ ಪೂರೈಸುವುದಕ್ಕೆ ಮುಂದಿನ ಲೋಕ ಒಂದಿದೆ ಎಂದು ಭಾವಿಸುವ ಮಾಯಾನಿರಸನವನ್ನು ಮಾಡ ಲೆತ್ನಿಸಿದರು.

ಶ್ರೀ ಆ. ನ. ಕೃಷ್ಣರಾಯರು ತಮ್ಮ 'ಶೂನ್ಯಸಂಪಾದನೆ' ಎಂಬುವ ಚಿಕ್ಕ ಹೊತ್ತಿಗೆಯಲ್ಲಿ—"ವೀರಶೈವ ಮತೋದ್ಧಾರಕರಾದ ಶ್ರೀ ಬಸವಣ್ಣನವರು ಅನೇಕ ಪವಾಡಗಳನ್ನು ಮೆರೆಯಿಸಿ ಕಾರಣಪುರುಷರೆಂದು ಹೆಸರಾದರು. ತಮ್ಮ ಶುಭ್ರವಾದ ಜೀವನದಿಂದ ಎಲ್ಲ ಧರ್ಮಗಳ ಬುನಾದಿಯಾದ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ತಮ್ಮ ಜೀವನದಲ್ಲಿಯೇ ಸಮನ್ವಯಮಾಡಿ ತೋರಿದರು. ತತ್ವಗಳ ಹೆಸರಿನ ಹೋರಾಟದಲ್ಲಿ ವೈಮನಸ್ಯಹೊಂದಿದ್ದ ಮತಗಳಿಗೆ ಈ ಶಾಂತಿಮಂತ್ರವು ನೂತನವೂ, ಪವಾಡಮಯವೂ ಆಗಿ ಕಂಡಿರಬೇಕು. ವೀರಶೈವ ಸಿದ್ಧಾಂತದಲ್ಲಿ ಅಡಗಿದ್ದ ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿ ಸಂಗಮಕ್ಕೆ ಒಂದು ಶಾಶ್ವತ ವಾದ ನಿಲುವನ್ನು ಕೊಡಲು ಬಸವಣ್ಣನವರು ನಿಶ್ಚಯಿಸಿದರು. ಬಸವಣ್ಣನವರು ಸಾಧಿಸಿದ ಪವಾಡಗಳಲ್ಲಿ ಅತ್ಯಂತ ಮಹತ್ವವಾದುದೆಂದರೆ ಇದೇ" ಎಂದು ಹೇಳಿರುವರು.

"ದೇವನೊಬ್ಬ ನಾಮ ಹಲವು" ಎಂಬ ಸೂಕ್ಷ್ಮ ಆಧ್ಯಾತ್ಮಿಕ ತತ್ವವನ್ನು ಮನಗಂಡಿದ್ದ ಬಸವಣ್ಣನವರು ಆ ದೇವರನ್ನು ಸಾಧಿಸುವ ಮಾರ್ಗಗಳೂ ಹಲವೆಂಬುದನ್ನು ತಿಳಿದಿದ್ದರು. ಸಹಜವಾಗಿ ತಮ್ಮ ಒಲವು ಭಕ್ತಿಮಾರ್ಗವನ್ನು ಅವಲಂಬಿಸಿತೆಂದು ಎಲ್ಲರೂ ಆ ಮಾರ್ಗವನ್ನೇ ಅನುಸರಿಸಬೇಕೆಂಬ ಛಲ ಅವರಿಗಿರಲಿಲ್ಲ. ವ್ಯಕ್ತಿ ತನ್ನ ಸಂಸ್ಕಾರ ಹಾಗೂ ಮನೋಧರ್ಮವನ್ನು ಅವಲಂಬಿಸಿ ಪ್ರಗತಿಪಥದಲ್ಲಿ ಅಡಿ ಇಡಬೇಕು ಎಂದು ಬಯಸಿದರು. ಈ ಸಾಧಕ ಸ್ಥಿತಿಯಲ್ಲಿ ತಮ್ಮ ಮಾರ್ಗದಿಂದ ಭಿನ್ನವಾದರೂ ಪ್ರಗತಿಯ ಜಾಡನ್ನು ಬಿಡದಿರುವ ಪ್ರತಿಯೊಬ್ಬನೂ ಸಮಾನಧರ್ಮ ಎಂಬುವದನ್ನು ಒಪ್ಪಿಕೊಳ್ಳುವ ಔದಾರ್ಯವನ್ನು ತೋರಿದರು. ಇಂತಹ ಸಮಾನ ಧರ್ಮಿಗಳು ಒಂದು ಕಡೆ ಕಲೆತು ವಿಚಾರವಿನಿಮಯಮಾಡಿ, ವಾದಮಥನಕ್ಕೆ ತಮ್ಮ ತತ್ವವನ್ನು ನಿವೇದಿಸಿ ನೋಡಿ ಸತ್ಯಾನ್ವೇಷಣವನ್ನು ಮಾಡಬೇಕಾಗಿದ್ದುದರ ಅವಶ್ಯಕತೆ ಬಹಳವಾಗಿತ್ತು.

ವೀರಶೈವಧರ್ಮದ ಉನ್ನತ ತತ್ವಗಳಿಗೆ ಸಾರ್ವತ್ರಿಕ ಸ್ವರೂಪ ಕೊಡು ವುದಕ್ಕೆ ಒಂದು "ಅನುಭವ ಮಂಟಪ"ವನ್ನು ಸ್ಥಾಪಿಸಿ, ಅದನ್ನು ಆಧ್ಯಾತ್ಮಿಕ ಪರಮಹಂಸಗಳ ತಿಳಿಗೊಳವನ್ನಾಗಿ ಮಾಡಬೇಕೆಂದು ನಿಶ್ಚಯಿಸಿದರು. ತಮ್ಮ

ಮಂಟಪವು ಶಿವಜ್ಞಾನದ ಒಂದು ವಿಶ್ವವಿದ್ಯಾನಿಲಯವಾಗಬೇಕೆಂಬುದೇ ಬಸವಣ್ಣನವರ ಹೆಬ್ಬಯಕೆಯಾಗಿತ್ತು.

ವೀರಶೈವಧರ್ಮ ಸಜೀವ ಧರ್ಮವಾಗುವುದಕ್ಕೆ ಅದರ ಪ್ರತ್ಯೇಕರೂಪವೇ ಮೂಲಕಾರಣವಾಗಿರಬಹುದು. ಆತ್ಮನ ಕಲ್ಯಾಣಯಾತ್ರೆಗೆ ಆರು ಹಂತಗಳನ್ನು ಏರ್ಪಡಿಸಿದ ಶಿವಶರಣರು ಸಾಧಕನಿಗೆ ದೊಡ್ಡ ಪ್ರವೇಶಪರೀಕ್ಷೆಯನ್ನೇರ್ಪಡಿಸಿದರು. ಸಾಧಕನು ವಸ್ತುವಿನೊಂದಿಗೆ ತದೇಕಚಿತ್ತನಾಗಿ ಅದರ ಜೀವತಂತಿಗೆ ತನ್ನ ಜೀವತಂತಿಯನ್ನು ಪ್ರತಿಯಾಗಿ ಹಚ್ಚುತ್ತಾನೆಯೇ ಎಂಬುದನ್ನು ಮೊವಲು ದೃಢಪಡಿಸಿಕೊಳ್ಳಬೇಕಾಯಿತು.

ಮನೋಭೂಮಿಕೆಯನ್ನು ಇಂತು ಶುಚಿಗೊಳಿಸಿಕೊಂಡ ಶರಣರು ಪ್ರಗತಿಪಥದಲ್ಲಿ ಬಹಳ ಮುಂದುವರಿದಂತೆಯೇ ಆಯಿತು. ಈ ಮುಕ್ತಿಯಾತ್ರೆ ಸುಗಮವೂ ಶ್ರೇಯಃಪ್ರದವೂ ಆಗುವಂತೆ ಮಾಡಿದರು. ಷಟ್‌ಸ್ಥಲ ಮೂರ್ತಿಗಳಾಗಿದ್ದ ಚನ್ನಬಸವಣ್ಣನವರಿಂದ ಅಧಿಕೃತರಿಗೆ ದೀಕ್ಷೆ ದೊರಕುತ್ತಿತ್ತು. ಬಸವಣ್ಣನವರು, ಅಲ್ಲಮಪ್ರಭುಗಳವರು, ಸಿದ್ಧರಾಮದೇವರು, ಮಹಾದೇವಿಯಕ್ಕಗಳು ಸಾಧಕರ ಕೈಹಿಡಿದು ಯಾರುಯಾರನ್ನು ಎಲ್ಲಿ ಎಲ್ಲಿ ಮುಟ್ಟಿಸಬೇಕೋ ಅಲ್ಲಿಅಲ್ಲಿಗೆ ಒಯ್ದು ಮುಟ್ಟಿಸುತ್ತಿದ್ದರು. ಇದರಿಂದ ಅನುಭವಮಂಟಪವು ಕೇವಲ ಜ್ಞಾನಪಾಂಡಿತ್ಯಗಳಿಂದ ಕೊಬ್ಬಿದ ಕೆಲವು ಪಾಂಡಿತ್ಯದವಾದ ಸಂತೆಯಾಗದೆ ಸಜೀವಸಾಧಕರ ಒಂದು ಪ್ರಯೋಗಕ್ಷೇತ್ರವಾಯಿತು. ದಿದೃಕ್ಷುಗಳೂ, ಜಿಜ್ಞಾಸುಗಳೂ, ಜ್ಞಾನಭಿಕ್ಷುಗಳೂ, ಭಕ್ತಿಮಾರ್ಗಾನುಯಾಯಿಗಳೂ, ಉತ್ಕಟ ಯೋಗಿಗಳೂ ಎಲ್ಲರೂ ನೆರೆಯಲು ಅನುವಾಯಿತು.

ವೀರಶೈವ ಅನುಭಾವಿಗಳು ತಮ್ಮ ಜೀವನದಲ್ಲಿ ಜೇನಕೊಡಗಳನ್ನು ಅನುಭವ ಮಂಟಪದಲ್ಲಿ ಶೇಖರಿಸಿ ಜೇನು ಹೊಂಡವನ್ನೇ ನಿರ್ಮಾಣಮಾಡಿಬಿಟ್ಟರು. ಇದರಲ್ಲಿ ಎಲ್ಲ ಪುಷ್ಪಗಳ ಸೌರಭಪರಿಮಳ ಸವಿಗಳು ಬೆರೆತುಕೊಂಡಿವೆ. ಎಲ್ಲ ಧರ್ಮಗಳೂ ಒಂದೊಂದು ಜಾಡನ್ನು ಹಿಡಿಯಹೋಗಿ ಕಂಡ ಸತ್ಯದ ಕೇಂದ್ರವನ್ನೇ ವೀರಶೈವ ಧರ್ಮವು ಅರಿಸಿತು. ಇದು ಎಲ್ಲ ಧರ್ಮಗಳ ಸಾರವಾಯಿತು. ಅಂತೆಯೇ ವಿಶ್ವಧರ್ಮವೆನಿಸಿಕೊಳ್ಳಲು ಪೂರ್ಣ ಅರ್ಹತೆಯನ್ನು ಪಡೆಯಿತು. ವಿಶ್ವಧರ್ಮವನ್ನೇ ಗುರಿಯಾಗಿಟ್ಟುಕೊಂಡು ಮಧ್ಯ

ಯುಗದಲ್ಲಿ ಅರೇಬಿಯಾ, ಪರ್ಷಿಯಾ ದೇಶಗಳಲ್ಲಿ "ಸೂಫಿಧರ್ಮ" ತಲೆಯೆತ್ತಿತು ಆದರೆ ಇಸ್ಲಾಮಿನ ಕಟುಧಾರ್ಮಿಯತೆಯನ್ನು ತಾಳಲಾರದೆ ಅದು ಮಹತ್ವ ಸ್ವರೂಪ ತಾಳಿ ಅಲ್ಲಿ ಇಲ್ಲಿ ತಲೆಮರೆಸಿಕೊಳ್ಳಬೇಕಾಯಿತು. ಹೀಗೆಯೆ ಅಶೋಕನು ಸ್ಥಾಪಿಸಲೆತ್ನಿಸಿದ ಧರ್ಮವಾದರೂ ಸ್ವಲ್ಪವೇ ದಿನಗಳಲ್ಲಿ ಮುಳು ಹೋಯಿತು. ಆದರೆ ವೀರಶೈವಧರ್ಮ ಜೀವಂತಧರ್ಮವಾಗಿ ಉಳಿದಿ ಅನುಭವ ಮಂಟಪದ ಮಹಾನುಭಾವಿಗಳ ಕೃತಿಗಳು ನಾಡವರ ಕೊರಳ ಮುಕ್ತಿಮಣಿಗಳಾಗಿ ರಾರಾಜಿಸುತ್ತಿವೆ. ಇಂದಿನ ಜಗತ್ತಿನ ಧರ್ಮ ಜೀವ ಜೀವನ ಸಮಸ್ಯೆಗಳಿಗೆ ತನ್ನಲ್ಲಿ ನಿವಾರಣೋಪಾಯವನ್ನು ಧರಿಸಿದೆಯೊ ಏನೋ ? ಜಗತ್ತಿನ ಕಲ್ಯಾಣಕ್ಕೆ ಅವಶ್ಯಕವಾದ ಬೆಳಕನ್ನು ನೀಡುವ ಸೌಭಾಗ್ಯ ವನ್ನು ಅನುಭವ ಮಂಟಪದ ಶಿವಾನುಭವಿಗಳು ಕನ್ನಡನಾಡಿಗೆ ಒದಗಿಸಿಕೊಟ್ಟ ಬಾರದೇತಕ್ಕೆ ? ಅನುಭವ ಮಂಟಪದ ಅಧ್ಯಕ್ಷರು ಪ್ರಭುದೇವರೆಂಬುವದನ್ನು ಈ ಮೊದಲೇ ಹೇಳಿದ್ದೇವೆ. ಅವರ ಅಧ್ಯಕ್ಷತೆಯಲ್ಲಿ ಪೀಠದ ಹೆಸರು ಶೂನ್ಯ ಸಿಂಹಾಸನವೆಂದು ಸುಪ್ರಸಿದ್ಧವಾದುದು. ಈ ಶೂನ್ಯಸಿಂಹಾಸನ ವರ್ಣನೆಯ ವೀರಶೈವ ಧಾರ್ಮಿಕ ಗ್ರಂಥಗಳಲ್ಲಿ ಅನೇಕ ತರಹದಿಂದ ವರ್ಣಿಸಲ್ಪಟ್ಟಿರುತ್ತದೆ ಚಾಮರಸ ಕವಿಗಳು ತಮ್ಮ ಚನ್ನಬಸವ ಪುರಾಣದಲ್ಲಿ ಚೆನ್ನಾಗಿ ಪ್ರತಿಪಾ ಸಿರುತ್ತಾರೆ.

ಶ್ರೀ ನೀಲಾಂಬಿಕಾದೇವಿಯವರು :—

ಅಷ್ಟದಳ ಕಮಲದ ಹೂಗಲ್ಲವಿಡಿದು ಶೂನ್ಯಸಿಂಹಾಸನಕ್ಕೆ ಧವಳಾಲಯ ವೆತ್ತಿತ್ತು, ಚಂದ್ರಕಾಂತದ ಶಿಲೆಯಲ್ಲಿ ಪಶ್ಚಿಮ ದ್ವಾರವಂ ತೆಗೆದು ನೋಡುವಡೆ ವಿಪರೀತ, ಏಕೋಭಾವವೆಂಬುದೊಂದೆ ಕಂಭ! ಅದಕ್ಕೆ ಅನೇಕ ಚಿತ್ರಂಗಳಡಗಿ ಪ್ರಭೆಯೊಳಗೆ ಬ್ರಹ್ಮರಂಧ್ರ ಎಂಬ ಪುಸ್ತಕದಮೇಲೆ ಪವಹಹಾರದ ಪಂಜರಮಂ ಕಟ್ಟಿ ಪಂಚಮೌಕ್ತಿಕದ ಮಾಲೆಯನಿಳಿಯಬಿಟ್ಟಮಲಕ್ಕು ಮಲಕ್ಕಿನ ನಡುವೆ ಕಟ್ಟಿದುವು ನವರತ್ನ ಗೊಂಡೆಗಳು, ಕಾಳಿಕೆಯ ಕಪ್ಪಡವದಕೆ ಮೇಲುಹೊದಿಕೆ ಉಲುಹಿನರಳೆಲೆಯ ಬಳಸುದೋರಣವ ಕಟ್ಟಿ ದಶವಾಯುಗಳನೊಂದು ಮಾಡಿ ಲಿಂಗಸುಖವಾಯುವ ಸಂತೈಸಿ ಅಲವಟ್ಟವಂ ಮಾಡಿ ಲಂಬಿಸಿದ ಮಂದಾನಿಲ ಮಲಗಂಮಾಡಿ ಹರುಷನೀವ ವಸಂತನ ಚೌಕವಟ್ಟಗೆಯ ಆಸನವಂ ಮಾಡಿ ನವನಾಳಸುನಾಳದೊಳು ಮೊರೆವ ಶಬ್ದಮಂ ಶುಕಪಿಕ ಭ್ರಮರಾಮೋದಮಂ

ಮಾಡಿ । ಪರಮಶಾಂತಿಯೆಂಬ ಶೈತ್ಯಾಕಾರ ಸೊಂಕಿನ ಚೂತಫಲಂಗಳಂ ಹಾಸಿ ಉತ್ತರದ್ವಾರವೆಂಬ ನುಸುಳುಗಂಡಿಯಂ ರಚಿಸಿ ಪೂರ್ವಯೋಗಂಗಳೆಂಬ ಸೋಪಾನಮಂ ಮಾಡಿ ಪಶ್ಚಿಮದ್ವಾರವೆಂಬ ನಿಜದ್ವಾರಮಂ ಮಾಡಿ ಸಪ್ತಾವಸನ ಪಂಚೇಂದ್ರಿಯಂಗಳೆಂಬ ಗವಾಕ್ಷಿಯನ್ನಿಕ್ಕಿ ಆಶೆಯಾಮಿಷಮಂ ಕೆಡಿಸಿ ಊರ್ಧ್ವಚಕ್ರವೆಂಬ ಮೇಲುಪ್ಪರಿಗೆಯಂ ಮಾಡಿ ಚಂದ್ರಸೂರ್ಯರೆಂಬ ದ್ವೀಪಗಳಂ ಬೆಳಗಿ ಶಿವೋಹವೆಂಬ ಶಿಖರಿಯ ಮೇಲೆ ಮಹಾಜ್ಞಾನ ಪ್ರಕಾಶವೆಂಬ ಹೊನ್ನಕಲಶವ ಸಿಂಗಾರವಂ ಮಾಡಿ ನಿಶೂನ್ಯನಿರಾಳವೆಂಬ ಶೂನ್ಯ ಸಿಂಹಾಸನಮಂ ಮಾಡಿದ ಬಸವಪ್ರಿಯ ಕೂಡಲ ಚನ್ನಸಂಗನಲ್ಲಿ ಎನ್ನ ಪರಮ ಗುರು ಸಂಗನ ಬಸವಣ್ಣ.

ಶ್ರೀ ಹಡಪದ ಅಪ್ಪಣ್ಣನವರು :—

" ನೆಲನ ಹೊದ್ದದು. ಆಕಾಶ ಮುಟ್ಟದು, ಎಡಲೊಂದು ರೂಪಿಲ್ಲ, ಭಾವವೆಂಬ ಜ್ಞಾನ ನಿವಾಸ, ನಿಲುವೇ ಭಕ್ತಿ, ನಿರಹಂಕಾರವೇ ಶಿಖರ, ಮಹದಹಂಕಾರವೇ ಶೃಂಗಾರ, ಕಳಸಪತ್ರದನವ ಕಮಲಸಿಂಹಾಸನದ ನಿತ್ಯಮಲಗು ನಿಜವೆಂಬ ವಿಸ್ತಾರದಲ್ಲಿ ನಿತ್ಯನಿರಾಳವೆಂಬ ಮಹಾಘನವ ಒಂದು ಮೂರ್ತಗೊಳ್ಳಲು ಕಾಯದಕಂಗೆ ಕಾಣಬಾರದು ಮುಗದ ಮುಂದೆ ಅಳವಡದು, ಭಾವದ ಬಗೆಗೆ ಮೈದೋರದು " ಎಂಬುದಾಗಿ ವರ್ಣಿಸಿರುವರು.

ಇನ್ನೂ ಅನೇಕ ಶರಣರು ಶೂನ್ಯಸಿಂಹಾಸನದಮೇಲೆ ಕುಳಿತ ಪ್ರಭುವನ್ನು ಸ್ತೋತ್ರ ಮಾಡಿರುತ್ತಾರೆ. ಈ ಪ್ರಕಾರ ಸ್ತೋತ್ರಮಾಡಿರುವದನ್ನು ನೋಡಿದರೆ ಆ ಶೂನ್ಯಸಿಂಹಾಸನದ ಯೋಗ್ಯತೆಯು ಅದೆಷ್ಟರಮಟ್ಟಿಗಿರುತ್ತದೆಂದು ತಿಳಿದುಬರುತ್ತದೆ.

ಶೂನ್ಯಶಬ್ದಕ್ಕೆ ಅನೇಕಾರ್ಥಗಳಿವೆ. ಮುಂದೆ ಸಿಂಹಾಸನವೆಂಬುವ ಪದವಿರುವುದರಿಂದ ಅದಕ್ಕನುಣವಾಗಿ ಅರ್ಥವನ್ನೂ ಮಾಡಬೇಕಾಗುತ್ತದೆ.

ಶ್ರೀ ಉತ್ತಂಗಿ ಚನ್ನಪ್ಪನವರು "ಶೂನ್ಯವೆಂಬುವ ಶಬ್ದವು ಬೌದ್ಧರ ಗ್ರಂಥಗಳಲ್ಲಿ ವಿಶೇಷವಾಗಿ ಬರುತ್ತದೆ. ಅದು ಅಲ್ಲಿಂದ ತೆಗೆದುಕೊಂಡದ್ದೆಂದು ಯಾರೂ ತರ್ಕಿಸಲಾಗದು. ಅದಕ್ಕೂ ಇದಕ್ಕೂ ಅರ್ಥದಲ್ಲಿ ಬಹಳ ವ್ಯತ್ಯಾಸ ಇರುತ್ತದೆ. ಶೂನ್ಯಸಂಪಾದನೆ ಎಂದರೆ ವಾಙ್ಮನಕ್ಕೆ ಗೋಚರವಾಗಿದ್ದು

ಬುದ್ಧಿಗೆ ಕೇವಲ ಶೂನ್ಯವಾಗಿ ತೋರುವುದೋ ಅಂತಹ ಪರಬ್ರಹ್ಮವಸ್ತುವನ್ನು ಅನುಭವದಿಂದ ಸಂಪಾದಿಸುವುದೇ ಶೂನ್ಯಸಂಪಾದನೆಯು. ಇದರಿಂದ ವೀರಶೈವ ಶೂನ್ಯವೆಂದರೆ ಬುದ್ಧನ ನಿರ್ವಿಕಾರ ಶೂನ್ಯವಲ್ಲ; ಅದ್ವೈತಿಗಳ ಜಗನ್ಮಿಥ್ಯವಲ್ಲ, ದ್ವೈತರ ಜೀವಪರಮಾತ್ಮರ ಭೇದವಲ್ಲ, ಅದು ಶಕ್ತಿವಿಶಿಷ್ಟಾದ್ವೈತ; ಜಗತ್ತು ಜೀವನವೂ ಪರಬ್ರಹ್ಮನಂತೆ ಸತ್ಯವಸ್ತುಗಳೆಂದೂ, ಕೊನೆಗೆ ಅವೆಲ್ಲವು ಪರಬ್ರಹ್ಮನಲ್ಲಿ ಲೀನವಾಗಿ ಅವನಲ್ಲಿಯೇ ಅಡಗಿಕೊಂಡಿರುವವೆಂದೂ ಅ ಹೇಳುತ್ತದೆ" ಎಂದು ಹೇಳಿರುವರು.

ಈ ಅವ್ಯಕ್ತಸ್ಥಿತಿಗೆ ವೀರಶೈವ ಧರ್ಮದಲ್ಲಿ ನಿಷ್ಕಲವೆಂದೆನ್ನುತ್ತಾ ಪದಾರ್ಥಕ್ಕೂ ಅದರೊಳಗಿನ ಶಕ್ತಿಗೂ, ಲೋಹ ಚುಂಬಕಕ್ಕೂ ಅದರ ಆಕರ್ಷಣ ಶಕ್ತಿಗೂ, ಸೂರ್ಯನಿಗೂ ಅದರ ಕಿರಣಗಳಿಗೂ ಇರುವ ಸಂಬಂಧವೇ ಜೀ ಪರಬ್ರಹ್ಮರ ಸಂಬಂಧವು. ಶೂನ್ಯಸಂಪಾದನೆಯಲ್ಲಿ ಅನುಭವಕ್ಕೆ ಬರಬೇಕಾ ಇನ್ನೊಂದು ವಿಷಯವೇನೆಂದರೆ :—

"ಜೀವನು ತನ್ನ ವ್ಯಕ್ತಿತ್ವವನ್ನು ಪರಬ್ರಹ್ಮದಲ್ಲಿ ಸಂಪೂರ್ಣವಾಗಿ ಶೂನ್ಯತ್ವವನ್ನು ಸಂಪಾದಿಸುವನು. ಆ ಶೂನ್ಯಸಂಪಾದನೆಯಾಗಬೇಕಾದ ಇದಕ್ಕೆ ವಿರೋಧವಾಗಿ ಪೂರ್ವದಲ್ಲಿ ಸಂಪಾದಿಸಲ್ಪಟ್ಟಿರುವ ಅಹಂಕಾರವು ಮೊ ಮೊದಲು ಶೂನ್ಯವಾಗಬೇಕು. ಇಲ್ಲಿ ವೀರಶೈವ ಭಾಷೆಯಲ್ಲಿ ಹೇಳಬೇಕಾದ ಅಂಗಾಂಗವೆಲ್ಲ ಲಿಂಗಾಂಗವಾಗಬೇಕೆನ್ನುವದೇ ಆಗಿರುತ್ತದೆ. ಇದಕ್ಕೆ ಆಧುನಿ ಮನಶ್ಶಾಸ್ತ್ರವು 'ಸಬ್ಲಿಮೇಷನ್' ಔನ್ನತ್ಯವೆಂದು ಹೆಸರು ಕೊಟ್ಟಿರುವರು. ಐಕ್ಯಸ್ಥಿತಿಯನ್ನು ಇಲ್ಲವೆ ಲಿಂಗಾಂಗ ಸಾಮರಸ್ಯದ ಅನುಭವವನ್ನು ಯಾವ ತ ಸಿದ್ಧಾಂತದ ಭಾಷೆಯಿಂದಲ್ಲ ವಿವರಿಸಿ ಹೇಳಲಾಗದು."

ಈ ಅನುಭವ ಗೋಷ್ಠಿಯಲ್ಲಿ ಒಬ್ಬೊಬ್ಬ ಶರಣರು ಒಂದೊಂದು ವಿ ಯದ ಚರ್ಚೆಯಲ್ಲಿ ಪ್ರಮುಖರಾಗಿರುತ್ತಾರೆ. ಯಾವ ಪ್ರಕರಣವಲ್ಲಿ ಯಾ ಪ್ರಮುಖರಾಗಿರುತ್ತಿದ್ದಾರೋ ಅಂತಹ ಸಂಪಾದನೆಗೆ ಅವರವರ ಹೆಸರು ಬಿದ್ದಿ ತ್ತದೆ. ಇಂತಹ ಸಂಪಾದನೆಗಳೆಲ್ಲ ಕೂಡಿ ಶೂನ್ಯಸಂಪಾದನೆ ಎಂಬ ಹೆಸರನ್ನು ಪಡೆದಿರುತ್ತದೆ. (ಬಸವತತ್ವ, ಪುಟ ೩೮೭ ರಿಂದ ೩

ಟಿಪ್ಪಣಿ—ಈ ಶರಣರ ದೇಹವು ಪ್ರಾಕೃತರ ದೇಹದಂತೆ ಕೇವ ಪೃಥಿವಿ ಅಪ್ಪು, ತೇಜಸ್ಸು ವಾಯು ಆಕಾಶವೆಂಬ ಪಂಚಭೂತಗಳ ಮಾಯವಾ

ದಲ್ಲ. ಇವರ ಅಂಗೇಂದ್ರಿಯಗಳಲ್ಲೆಲ್ಲಾ ಪರಶಿವನು ವ್ಯಾಪಿಸಿರುವನು. (ಈ ಅರ್ಥದಲ್ಲಿ —

ಪವಿತ್ರಂತೇವಿತಂ ಬ್ರಹ್ಮಣಸ್ಪತೇಪ್ರಭುರ್ಗಾತ್ರಾಣಿ ಪರ್ಯೇಷಿವಿಶ್ವತಃ ॥ ಎಂಬ ಋಗ್ವೇದವಚನವೂ, ಇಷ್ಟಲಿಂಗಂ ತುಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ । ಭಾವಲಿಂಗಂ ತಥೈವಾಸ್ತ ಆತ್ಮಾಂಗೇಸುಪ್ರತಿಷ್ಠಿತಂ ॥ ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇತು ಪ್ರಸಾದ ಕಂ । ತ್ವಗಂಗೇ ಚರಲಿಂಗಂ ಚದ್ಯ ಗಂಗೇ ಶಿವಲಿಂಗಕಂ । ಜಿಹ್ವಾಂಗೇಗುರುಲಿಂಗಂ ಸ್ಯಾನ್ನಾಸಿಕಾಂಗೇ ತಥೈವಚ । ಆಚಾರಲಿಂಗಮಶ್ರಾಂತಂ ಸುಪ್ರತಿಷ್ಠಿತಮೇನ ಹಿ । ಯಥಾಜ್ಞಾನೇಂದ್ರಿಯಾಂಗೇಷುಕ್ರಮಾಲ್ಲಿಂಗಂಪ್ರತಿಷ್ಠಿತಂ । ತಥಾರಕ್ಮೇಂದ್ರಿಯಾಂಗೇಷುಕ್ರಮಾಲ್ಲಿಂಗಂ ಪ್ರತಿಷ್ಠಿತಂ ಎಂಬ ವಾತುಲಾಗಮ ವಚನವೂ ಪ್ರಮಾಣವಾಗಿರುವುವು). ಅದು ಕಾರಣ ಪವಿತ್ರವಾದ ಆ ಶಿವಶರಣರ ದೇಹದಲ್ಲಿ ಮಣಿಗಳಿಂದ ಪೋಣಿಸಲ್ಪಟ್ಟ ದಾರದಂತೆ ಮಂಗಲರೂಪನಾದ ಮಹಾಲಿಂಗವು ಸಮರಸವಾಗಿರುವುದು.

ಟಿಪ್ಪಣಿ.—ಭೂಮಿಯೇ ಪೀಠವಾಗಿಯೂ, ಆಕಾಶವೇ ಲಿಂಗವಾಗಿಯೂ ಇವು ಒಂದನ್ನೊಂದು ಎಡಬಿಡದೆ ಸೇರಿಕೊಂಡಿರುವುದರಿಂದಲೇ, ಮಹಾಲಿಂಗ ರೂಪವಾದ ಭೂಮ್ಯಾಕಾಶಗಳು ಸಕಲ ಜಗತ್ತಿಗೂ ಆಧಾರಸ್ಥಾನವಾಗಿರುವುದೇ ಹೊರತು, ಅವು ಒಂದನ್ನೊಂದು ಕೂಡಿರದೆ ಇದ್ದರೆ ಸರ್ವಾಧಾರ ಸ್ಥಾನವಾಗಿರಲಿಲ್ಲ. ವಿಚಾರಮಾಡಿ ನೋಡಿದರೆ ಭೂಮ್ಯಾಕಾಶಗಳೆರಡರಲ್ಲೂ ಸಮಾನ ಧರ್ಮವಿರುವುದೇ ಹೊರತು ಹೆಚ್ಚು ಕುಂದೇನೂ ಇಲ್ಲ.

(ಈ ಅರ್ಥವು ಮುಂದಣ ಪದ್ಯದಲ್ಲಿ ವಿವರಿಸಲ್ಪಟ್ಟಿರುವುದು).

ಟಿಪ್ಪಣಿ.—ಭೂಮಿಯು ಸಕಲ ಭೂತವಿಕಾರವಾದ ಪ್ರಾಣಿಕೋಟಿಯ ಉತ್ಪತ್ತಿಗೂ ಆಧಾರವಾಗಿರುವದು.(ಈ ಅರ್ಥದಲ್ಲಿ—"ಕರ್ಥಮನ ಪ್ರಜಾಭೂತಃ" ಎಂದು ಋಗ್ವೇದವಚನ ಪ್ರಮಾಣವುಂಟು) ಆಕಾಶವು ಸಹ ಸರ್ವವ್ಯಾಪಿಯಾಗಿ ಸರ್ವವನ್ನೂ ತನ್ನೊಳಗುಮಾಡಿಕೊಳ್ಳುವುದರಿಂದ ಅದು ಸರ್ವಾಧಾರವಾಗಿರುವುದು. ಈ ಭೂಮ್ಯಾಕಾಶಗಳೆರಡಕ್ಕೂ ಪ್ರಕೃತಿ ಪುರುಷಾತ್ಮಕವಾದ ಲಿಂಗ ಪೀಠಗಳಿಂದ ಕೂಡಿದ - ಜಗದುತ್ಪತ್ತಿ ಲಯಗಳಿಗೆ ಸ್ಥಾನವಾದ ಮಹಾಲಿಂಗವೇ ಆಧಾರವಾಗಿರುವುದು.

ಟಿಪ್ಪಣಿ.—ಪಂಚಭೂತಾತ್ಮಕ ದೇಹಗಳಲ್ಲಿ ಆಕಾಶವಿಕಾರ ದೇಹವೇ ಆಗಲಿ, ವಾಯುಮಯ ಶರೀರವೇ ಆಗಲಿ, ಅಗ್ನಿರೂಪಾಂಗವೇ ಆಗಲಿ, ಜಲಾತ್ಮ ತನುವೇ ಆಗಲೀ, ಪ್ರಥಿವೀಕಾಯವೇ ಆಗಲಿ, ಈ ಮಾರ್ವೋಕ್ತವಾದ ಯಾವ ಬಗೆಯಾದ ಶರೀರವಾದರೂ ಅದು ಲಿಂಗ ಸಮೇತತ್ವದಿಂದ ಲಿಂಗಸ್ಥಾನವಾಗಿಯೇ ಇರುವುದು.

ಟಿಪ್ಪಣಿ.—ಭಕ್ತಾದಿ ಪಟ್ಸ್ಥಲಗಳಲ್ಲಿ ಭೂಮಿಮಯವಾದ ಶರೀರವುಳ್ಳದು ಭಕ್ತಸ್ಥಲವು, ಜಲಮಯವಾದ ಶರೀರವುಳ್ಳುದು ಮಹೇಶ್ವರಸ್ಥಲವು. ಅಗ್ನಿ ಮಯವಾದ ಶರೀರವುಳ್ಳುದ್ದು ಪ್ರಸಾದಿಸ್ಥಲವು, ವಾಯುಮಯವಾದ ದೇಹ ವುಳ್ಳದು ಪ್ರಾಣಲಿಂಗಿಸ್ಥಲವು. ಆಕಾಶಮಯವಾದ ದೇಹವುಳ್ಳದು ಶರಣ ಸ್ಥಲವು. ಆತ್ಮಮಯವಾದ ದೇಹವುಳ್ಳುದು ಐಕ್ಯಸ್ಥಲವು

ಟಿಪ್ಪಣಿ :—ತ್ವಕ್ ಮಾಂಸ ರಕ್ತಾದಿ ಧಾತು ಮುಂತಾದ ದೇಹವು ಶರಣನಿಗಿದ್ದರೂ ಅದು ಆತನ ಜೀವನ್ಮುಕ್ತತೆಗೆ ತೊಡಕಾದುದಲ್ಲ ಏಕೆಂದರೆ- ರಕ್ತಮಾಂಸಾದಿಮಯವಲ್ಲದ ದೇಹವಿದ್ದಮಾತ್ರಕ್ಕೆ ಅದು ಜನನಮರಣ ಗಳನ್ನು ಗೆಲ್ಲುವುದಕ್ಕೆ ಸಮರ್ಥವಾಗುವುದಿಲ್ಲ. ಹೇಗೆಂದರೆ-ಸೂಕ್ಷ್ಮಶರೀರವು ರಕ್ತಮಾಂಸಾದಿಮಯವಲ್ಲದೆ ಇದ್ದಮಾತ್ರದಿಂದಲೇ ಅದು ಜನ್ಮಮೃತ್ಯು ಗಳನ್ನು ಗೆದ್ದುದಾದೀತೆ. ಅಂಗಲಿಂಗ ಸಾಮರಸ್ಯಗೊಂಡ ಶಿವಶರಣನೇ ಆಜನ್ಮ ಮೃತ್ಯುಗಳನ್ನು ಗೆದ್ದವನು. ಅದುಕಾರಣ ಅಂತಪ್ಪ ಶರಣನ ದೇಹವು ಹೇಗಿದ್ದರೇನು?

ಟಿಪ್ಪಣಿ :—ಮತ್ತೂ, ರಕ್ತ ಮಾಂಸ ಚರ್ಮಗಳ ಮಯವಾಗಿಲ್ಲದೆ ಛಾಯಾಮಾತ್ರವಾಗಿ ತೋರುತ್ತಿರುವ ದೇಹವು ಭೂತ ಪಿಶಾಚಾದಿಗಳಿಗೆ ಇರುತ್ತಿರುವುದು. ಹಾಗೆ ಷಡ್ಧಾತುವಿಕಾರವಲ್ಲದ ದೇಹವನ್ನು ಧರಿಸಿರುವ ಆ ಪಿಶಾಚಾದಿಗಳು ತಾವನ್ಮಾತ್ರದಿಂದಲೇ ಜನ್ಮಮರಣಾದಿಗಳನ್ನು ದಾಂಟರು ವುವೇ ? ಇಲ್ಲ. ಅದುಕಾರಣ, ಭೂತಮಯವಾದ ದೇಹವಿಲ್ಲದಿರುವುದೇ ಘನವೆಂದು ಹೇಳುವ ಮಾತು ನಿಷ್ಪ್ರಯೋಜಕವಾದುದು. ಅದು ಹಾಗಿರಲಿ. ಲಿಂಗದೇಹವಾಗಿರುವ ಶಿವಶರಣನ ದೇಹವು ಧಾತುಮಯವಾಗಿ ತೋರುತ್ತಿದ್ದರೂ ಇರಲಿ, ಆತನ ರೀತಿಯು ಜಗದ್ವಿಲಕ್ಷಣವಾದುದು.

ಟಿಪ್ಪಣಿ :—ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಎಂಬ ಈ ಪಂಚಭೂತಗಳಲ್ಲಿ ಪೃಥ್ವಿಯು-ಗಂಧ, ರೂಪ, ರಸ, ಸ್ಪರ್ಶ, ಶಬ್ದವೆಂಬ ಐದು ಗುಣಗಳುಳ್ಳದ್ದು. ಅಪ್ಪು-ಘನ, ರೂಪ, ಸ್ಪರ್ಶ, ಶಬ್ದವೆಂಬ ನಾಲ್ಕು ಗುಣಗಳುಳ್ಳದ್ದು- ಅಗ್ನಿಯು-ರೂಪ, ಸ್ಪರ್ಶ, ಶಬ್ದಗಳೆಂಬ ಮೂರುಗುಣಗಳುಳ್ಳದ್ದು. ವಾಯುವು-ಸ್ಪರ್ಶ, ಶಬ್ದವೆಂಬ ಎರಡು ಗುಣಗಳುಳ್ಳದ್ದು. ಆಕಾಶವು-ಶಬ್ದವೆಂಬ ಒಂದು ಗುಣಗಳುಳ್ಳದ್ದು. ಹೀಗೆ ಆ ಭೂತಗಳು ಒಂದಕ್ಕಿಂತ ಒಂದು ಹೆಚ್ಚು ಕಡಿಮೆಯಾದ ಗುಣಗಳುಳ್ಳದ್ದಾದಕಾರಣದಿಂದ ಸಾಮ್ಯಾವಸ್ಥೆಯಿಂದಿರದೆ ತಾರತಮ್ಯವುಳ್ಳದಾಗಿರುವುದಾದರೂ ಜಗತ್ತಿನ ಉತ್ಪತ್ತಿ ಸ್ಥಿತಿ ನಾಶಗಳನ್ನು ಒಂದನ್ನು ಬಿಟ್ಟು ಮತ್ತೊಂದು ಮಾಡಲಾರದಾದಕಾರಣ, ಆ ವಿಷಯದಲ್ಲಿ ಎಲ್ಲವೂ ಸಮಾನವಾಗಿರುವುದು.

ಟಿಪ್ಪಣಿ :—ಲಿಂಗಭಕ್ತನಾದ ಶರಣನ ದೇಹವು ರಕ್ತಮಾಂಸಾದಿ ಧಾತು ವಿಕಾರವಾಗಿಲ್ಲವೆಂದು ಹೇಳುವ ಅಭಿಮಾನದ ಮಾತು ನಿಷ್ಪ್ರಯೋಜಕವಾದುದು. (ಏಕೆಂದರೆ-ದೇಹವು ಧಾತುವಿಕಾರವಲ್ಲದ ಮಾತ್ರದಿಂದಲೇ ಘನತೆಯೇನೂ ಇಲ್ಲ.) ಶರಣನು ಲಿಂಗಾಂಗ ಸಮರಸಭಕ್ತಿಯಿಂದುಂಟಾದ ಮಹಾನಂದದಲ್ಲಿ ಮುಳುಗಿರುವನಾದಕಾರಣ, ಅವನ ದೇಹವು ಧಾತುವಿಕಾರವಾಗಿದ್ದರೂ ತನ್ನ ಗುಣಲೋಪವಿಲ್ಲದಿರುವಕಾರಣ, ಧಾತುಮಯವಲ್ಲವಾಗಿಯೇ ಇರುವುದು. ಅದುಕಾರಣ, ಶರಣನ ದೇಹವು ಧಾತುಮಯವೂ ಅಧಾತುಮಯವೂ ಸಹ ಆಗಿರುವುದೆಂದು ಭಾವ.

ಟಿಪ್ಪಣಿ :—ಶರಣನ ದೇಹವು ಧಾತುಮಯವೂ ಅಧಾತುಮಯವೂ ಆಗಿರುವುದನ್ನು ದೃಷ್ಟಾಂತವು ಪುರಸ್ಸರವಾಗಿ ನಿರೂಪಿಸುವನು :— ಅನಿಮಿಷಯ್ಯನು ಕೇವಲ ಮೂಳೆಯ ಮಾತ್ರದ ಶರೀರವುಳ್ಳವನಾಗಿರಲಿಲ್ಲವೇ ? ಬಸವೇಶ್ವರನು ತ್ವಙ್ಮಾಂಸ ರಕ್ತಾದಿ ಧಾತುವಿಕಾರವಾದ ಶರೀರವುಳ್ಳವನಾಗಿರಲಿಲ್ಲವೇ ? ಅಲ್ಲಮಪ್ರಭುವು ಕರಚರಣಾದ್ಯವಯವಗಳಿಲ್ಲದೆ ಮತ್ತು ನೆಳಲು ಸಹ ಕಾಣದ ಶರೀರವುಳ್ಳವನಾಗಿರಲಿಲ್ಲವೇ ? ಅದುಕಾರಣ ಲಿಂಗಾಂಗಸಾಮರಸ್ಯಾನಂದದಿಂದ ಪರಿಪೂರ್ಣನಾದ ಶರಣನದೇಹವು ಧಾತುವಿಕಾರವಾಗಿದ್ದರೂ ಅಲ್ಲದಿದ್ದರೂ ಸಹ ಒಂದೇತರದ ಪ್ರಯೋಜನವುಳ್ಳದಾಗಿರುವುದೆಂದು ಭಾವ.

ಟಿಪ್ಪಣಿ :—ಶರಣನು ಧರಿಸಿರುವ ಸ್ಥೂಲಶರೀರವು ಪೃಥ್ವ್ಯಾದಿ

ಭೂತಗಳಿಂದ ಸಮುತ್ಪನ್ನವಾಗಿದ್ದರೂ ಇರಲಿ, ತ್ವಕ್, ಮಾಂಸ, ಶ
ಮಜ್ಜಾ, ಅಸ್ಥಿ, ಮೇದಸ್ಸು ಎಂಬ ಆರು ಧಾತುಗಳ ವಿಕಾರವಾಗಿದ್ದರೂ
ಅಥವಾ ಒಂದೆರಡು ಧಾತುಗಳ ಮಯವಾಗಿಯೇ ಇದ್ದರೂ ಇರಲಿ. ಹ
ಆ ದೇಹದ ಸ್ಥಿತಿಯೂ ಹೇಗೆ ಕಾಣುತ್ತಿದ್ದರೂ ಅದರಿಂದ ದೋಷವೇನೂ

ಟಿಪ್ಪಣಿ :—ಎಂಥ ದೇಹವನ್ನು ಧರಿಸಿದ್ದರೂ ಬಿಡುವಕಾಲ ಬ
ಒಂದು ದಿವಸ ಅದನ್ನು ಬಿಡಬೇಕು. ಲಿಂಗಾಂಗ ಸಮರಸಸೌಖ್ಯವನ್ನು ಹೊ
ವುದಕ್ಕೆ ಪೃಥ್ವೀಮಯ ಶರೀರವಾದರೇನು ? ಜಲಮಯ ಶರೀರವಾದ
ಭೂತವಿಕಾರದೇಹವಾದರೆ ತಾನೇಯೇನು ? ಎಲ್ಲವೂ ಒಂದೇ.
ಸಂಬಂಧವೆಲ್ಲಿಯವರೆಗೆ ಇರಬೇಕಾಗುವುದೋ ಅಲ್ಲಿಯವರೆಗೂ ಅದನ್ನು
ಹಿಡಿದೇ ಇರಬೇಕು.

ಟಿಪ್ಪಣಿ :—ತಾನು ಗುರುವಿನಿಂದ ವೇದಾದೀಕ್ಷಾತ್ರಯವನ್ನು ಹೊ
ನಂತರ ಪೃಥ್ವ್ಯಾದಿ ಪಂಚಭೂತವಿಕಾರವು ತನ್ನಲ್ಲಿಲ್ಲವೆಂದೂ, ತಾನು
ಲಿಂಗ ಶರೀರಿಯೆಂದೂ ತಿಳಿದುಕೊಂಡವನಾದರೆ, ಅಂತಪ್ಪ ಶರಣನು ನಿ
ಶಿವಯೋಗಾನಂದಕ್ಕೆ ಪಾತ್ರನಾಗಿ ಮೆರೆಯುವನು. ಇದೇ ಅರ್ಥ
ಕೈವಲ್ಯೋಪನಿಷತ್ತು, “ ನನಗೆ ಭೂಸಂಬಂಧವೂ, ಅಗ್ನಿಸಂಬಂಧವೂ
ಇರುವುದಿಲ್ಲ ಎಂಬುದಾಗಿ ತಿಳಿದುಕೊಂಡನಂತರ ಹೃದಯಾಕಾಶದಲ್ಲಿ
ಯುವ ಕಳಾತೀತವಾದ ಪರಬ್ರಹ್ಮವನ್ನು ಹೊಂದುವನು ಎಂಬುದಾಗಿ
ವುದು.

ಟಿಪ್ಪಣಿ:—ಕಣ್ಣಿಗೆ ಕಾಣಿಸುವ ಚೇತನಾರಹಿತಗಳಾದ ಪೃಥ್ವಿ
ಭೂತಗಳೆಲ್ಲವೂ ತಮ್ಮ ತಮ್ಮ ಗುಣಗಳಿಂದ ಕೂಡಿಕೊಂಡು ಒಂದ
ಮತ್ತೊಂದು ವಿಶಿಷ್ಟವಾಗಿದ್ದರೂ ಪ್ರಳಯಕಾಲವು ಸನ್ನಿಹಿತವಾದಾಗ ಅವೆ
ನಷ್ಟವಾಗಿ ಹೋಗುವುವು. ಎಲೈ ಪರಶಿವನೇ! ನೀನು ಮಾತ್ರ
ನಾಶರಹಿತನಾಗಿ ಬಾಳುತ್ತಿರುವೆ.

ಟಿಪ್ಪಣಿ :—ಶರಣನು ಆತ್ಮವಿಚಾರಶಕ್ತಿಯಿಂದ—ಈ ಭೂಮಿ,
ಅಗ್ನಿ, ವಾಯು, ಆಕಾಶಗಳೆಲ್ಲಾ ಅಚೇತನವಾದವುಗಳು ಎಂಬುದನ್ನು

ಜಡವಸ್ತುಗಳ ಸಂಬಂಧವನ್ನು ಪರಿತ್ಯಜಿಸಿ, ನಿತ್ಯವಾದ ಆಚಾರಾದಿ ಲಿಂಗಗಳ ಸಂಬಂಧವನ್ನು ಹೊಂದಿ ಸಮರಸವಾಗಿ ಮೆರೆಯುತ್ತಿರುವವನು.

(ಸಟೀಕ ಶತಕಪ್ರಿಯ, ಪುಟ 199)

ಟಿಪ್ಪಣಿ :—ಪುರಾಕೃತವಾದ ಪಾಪದ ಸಂಬಂಧವಿಲ್ಲದಿರುವಾಗ, ತತ್ ...ರ್ಮಾನುನ್ಯೂತವಾಗಿ ಮುಂದೆ ಮಾಡಲ್ಪಡತಕ್ಕ ಪಾಪಾಚರಣೆಯೂ ಇರುವುದಿಲ್ಲ. ...ಚಾರಮಾಡಿ ನೋಡಿದರೆ, ಸ್ವಕರ್ಮಪರಿಪಾಕೇನ ಪ್ರಕ್ಷೀಣ ಕುಲವಾಸನಃ । ...ಪ್ರಸಾದಜ್ಞಿನ್ಯೋಯಾಂಜಾಯತೇ ಶುದ್ಧಮಾನಸಃ ಶುದ್ಧಾಂತಃಕರಣೇ ...ೀವೇ ಶುದ್ಧಕರ್ಮಾವಿಪಾಕತಃ । ಜಾಯತೇ ಶಿವಕಾರುಣ್ಯಾತ್ಸ್ವಸ್ಫುಟಾಭಕ್ತಿ ...ಶ್ವರೀ" ಎಂಬ ಸಿದ್ಧಾಂತಶಿಖಾಮಣಿ ವಚನರೀತ್ಯಾ ಕರ್ಮಕ್ಷಯಾನಂತರವೇ ...ವಭಕ್ತಿಯು ಹುಟ್ಟಿ ತದ್ದ್ವಾರಾ ಮೋಕ್ಷಮಾರ್ಗೋಪದೇಶವು ಸಮನಿಸಿ, ಶರಣ ...ದವನಿಗೆ ಪಾಪಸಂಬಂಧವು ಮೊದಲೇ ಇಲ್ಲವಾಗಿರುವುದು. ಒಂದುವೇಳೆ ...ಹದಲ್ಲಿ ಪಾಪಾಚರಣೆಯೆಂಬುದು ಸಂಭವಿಸಿದರೂ ಅದನ್ನು ಮಾಡುವುದಕ್ಕೆ ...ನು ಕರ್ತನಲ್ಲ, ನಿನ್ನ ಅಧೀನ ನಾನು. ಹೀಗಿರುವಲ್ಲಿ ಅಸ್ವತಂತ್ರನಾದ ನನಗೆ ...ನ್ನನ್ನು ಕುರಿತು ಒಂದು ಇಷ್ಟಾರ್ಥವು ಬೇಕೆಂದು ಬೇಡುವ ಪಾಪವು ತಾನೇ ...ಲ್ಲುಂಟು.

(ಸ. ಶ. ಪುಟ 199).

ಟಿಪ್ಪಣಿ:—ಒಂದು ವಸ್ತುವನ್ನು ಬೇಕೆಂದು ಅಪೇಕ್ಷಿಸುವುದೇ ಕಾಮವು. ... ವಸ್ತುವು ದೊರೆಯದೆಹೋದರೆ ಆಗಲೇ ಕೋಪವು ಹುಟ್ಟುವುದು. ಬೇಡಿದ ...ಸ್ತುವು ದೊರೆತರೆ ಅದನ್ನು ಕಳೆಯದೆ ರಕ್ಷಿಸಿಕೊಂಡಿರುವುದೇ ಲೋಭವು. ಆ ...ಷ್ಟವಸ್ತುಪ್ರಾಪ್ತಿಯ ದೆಸೆಯಿಂದ ವಿವೇಕಗೆಟ್ಟಿರುವುದೇ ಮೋಹವು. ಆ ...ಸ್ತುಪ್ರಾಪ್ತಿಯ ಆನಂದದಲ್ಲಿ ಮುಳುಗಾಡುತ್ತಾ ಸೊಕ್ಕಿರುವುದೇ ಮದವು. ...ದೊರೆತ ಆ ವಸ್ತುವನ್ನು ಭದ್ರಪಡಿಸಿಕೊಂಡು ಬೀಗುತ್ತಿರುವುದೇ ಮತ್ಸರವು. ...ಮುಕಾರಣ ವಿಚಾರಮಾಡಿ ನೋಡಿದರೆ ಕಾಮಕ್ರೋಧಾದ್ಯರಿಷಡ್ವರ್ಗವೆಲ್ಲವೂ ಬೇಡುವು ...ಎಂಬ ಪಾಪಕಾರ್ಯವೊಂದರಿಂದಲೇ ಹುಟ್ಟುವವುವೆಂಬುದು ಗೊತ್ತಾಗುವುದು.

(ಸ. ಶ. ಪದ್ಯ. 92)

ಟಿಪ್ಪಣಿ :—ಪರರನ್ನು ಕಂಡು ಯಾಚಿಸುವಲ್ಲಿರುವ ಬಡತನವು ಆ ...ನ್ಯರು ಕೊಡುವ ಮಿಗಿಲಾದ ಹಣದಿಂದ ತುಂಬಿಹೋಗಿ, ಇನ್ನೂ ಸಾಕೆಂದು ...ೇಳಿಸಿಕೊಳ್ಳುವುದೊಂದಿಗೂ ಇಲ್ಲ. ಹಣವು ದೊರೆತಷ್ಟೂ ವೃತ್ತಿಮತ್ತಿ ದ್ರವ್ಯಾ

ಕಾಂಕ್ಷೆಯು ಹೆಚ್ಚಿ ಮರಳಿ ಬೇಡುತ್ತಿರುವಂತೆಯೇ ಮಾಡುವುದು. ಕಾರಣ ಒಂದು ವಸ್ತುವಿನ ಅಪೇಕ್ಷೆಯನ್ನು ಸ್ವಲ್ಪವೂ ಮಾಡದೆ ಇದ್ದ ಆನಿಷ್ಕಾಮತ್ವವು ಅವನಿಗೆ ಪರಿತೃಪ್ತಿಯನ್ನುಂಟುಮಾಡಿರುವುದು.

(ಸ ಶ. ಪದ್ಯ

ಟಿಪ್ಪಣಿ :—ಎಲೈ ಪರಮಮಂಗಳ ಸ್ವರೂಪನಾದ ಶಿವನೆ, ಲೋ ಬೇಡುವಿಕೆಯೆಂಬುವುದೇ ಪಾಪವಲ್ಲ. ಮತ್ತೇನೆಂದರೆ—ಭಕ್ತವತ್ಸಲ ಮುಕ್ತಿಪ್ರದನೂ ಆದ ನಿನ್ನೊಬ್ಬನನ್ನು ಮಾತ್ರ ಯಾಚಿಸುತ್ತಾ ಅ ಬೇಡದಿರುವಂತಹ ಸಿದ್ಧಿಯನ್ನು ಪಡೆದುಕೊಳ್ಳದಿದ್ದರೆ ಮಾತ್ರ ಅಂತಹ ವಿಕೆಯು ಪಾಪವೆನಿಸಿಕೊಳ್ಳುವುದು. ಆದರೆ ಯಾಚನೆಯೆಂಬುದೇ ಸಾಧಕವಾಗುವುದರಿಂದ ಆ ಯಾಚನೆಯನ್ನು ಮರೆದಾದರೂ ಮಾಡದೆ ನಾಗಿ ಇರುವಂತೆ ನನಗೆ ನೀನು ಅನುಗ್ರಹಿಸಬೇಕು. (ಸ. ಶ. ಪದ್ಯ

ಟಿಪ್ಪಣಿ :—ಎಲೈ ಸ್ವಾಮಿಯೆ, ಪುರುಷನು ಪ್ರಯತ್ನವನ್ನು ಮಾ ಮಾಡದೆ ಇರಲಿ, ಆ ಪ್ರಯತ್ನಾಪ್ರಯತ್ನಗಳೆರಡೂ ಫಲಿಸಬೇಕಾದರೆ ದಯೆಯಿಂದ ಅವು ಪರಿಪಕ್ವವಾಗಲೇಬೇಕು. ಎಣೆಯಿಲ್ಲದ ಮೋಕ್ಷ ಕೊಡತಕ್ಕ ಆ ನಿನ್ನ ಕಾರುಣ್ಯವಿಲ್ಲದಿದ್ದ ಬಳಿಕ ಎಷ್ಟು ಪ್ರಯತ್ನಪಟ್ಟರೂ ಫಲಕಾರಿಯಾಗುವುದಿಲ್ಲ ಅದುಕಾರಣ, ಬರಿಯ ಭ್ರಮೆಯಿಂದ ಪ್ರ ಶೀಲನಾಗದಿರುವಂತೆ ನನಗೆ ನಿನ್ನ ದಯೆಯನ್ನು ಅನುಗ್ರಹಿಸು.

(ಸ. ಶ. ಪದ್ಯ

ಟಿಪ್ಪಣಿ :—ಸಿದ್ಧರಸವು ಲೋಹ ಸಂಬಂಧಗೊಂಡು ಕ್ರಮೇಣ ಚಿನ್ನದ ಗಟ್ಟಿಯಾಗುತ್ತಾಬಂದಂತೆ ನಿಷ್ಕಾಮನಾದ ಅಚ್ಚಸಮನಾದ ಬರಬರುತ್ತಾ ಬಾಹ್ಯವೇಷಾಡಂಬರದ ಕಾಮ್ಯಭಕ್ತಿಯಾಗಿ ಪರಿಣಮಿಸಿ, ಭಾಗ್ಯಪ್ರದವಾಗುತ್ತಾ ಬಂದಿತು. ಈ ಕಾರಣದಿಂದ ಮುಕ್ತಿಪ್ರದ ಜ್ಞಾನವು ಅಡಗಿಹೋಯಿತು. ಅಯ್ಯೋ ! ನಾನೇನು ಮಾಡಲಿ ! (ಭಕ್ತಿಯು ನಿವೃತ್ತಿಮಾರ್ಗವುಳ್ಳದಾಗಿ ಮುಕ್ತಿಯನ್ನೀವುದು. ಭಕ್ತಿಯು ಪ್ರವೃತ್ತಿಮಾರ್ಗವುಳ್ಳದಾಗಿ ಭೋಗಲಾಭವನ್ನುಂಟುಮಾಡ ಭಾವ.

(ಸ. ಶ. ಪದ್ಯ

|| ಶ್ರೀಃ ||

ಭಗವಾನ್ ತೋಂಟದ ಸಿದ್ಧಲಿಂಗೇಶ್ವರ

ದಿನಾಂಕ 18-1-1964 ನೇ ಶನಿವಾರ ಧಾರವಾಡ ಮೃತ್ಯುಂಜಯ ನಗರದಲ್ಲಿ ...ವ ಶ್ರೀ ಮುರುಘಾಮಠದಲ್ಲಿ ನಡೆದ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ ಜಯಂತೀ ...ಹೋತ್ಸವದ ಶುಭ ಸಂದರ್ಭದಲ್ಲಿ, ಅವರಿಂದ ವಿರಚಿತವಾದ 'ಷಟ್‌ಸ್ಥಲಜ್ಞಾನ ...ಮೃತ' ಎಂಬ ಗ್ರಂಥ ಪ್ರಕಟನೆಯ ಸನ್ನಿವೇಶದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ...ಧ್ಯಕ್ಷರೂ 'ಶರಣ ಸಾಹಿತ್ಯ' ಸಂಪಾದಕರೂ ಆದ ಆಸ್ಥಾನವಿದ್ವಾನ್, ಪಂಡಿತರತ್ನಂ, ...ರ್ತನಾಚಾರ್ಯ, ಕರ್ನಾಟಕದ ವಿಭೂಷಣ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ...ರೂಪಿಸಿದ

ಅಧ್ಯಕ್ಷರ ಭಾಷಣ

...ರಮಪೂಜ್ಯ ಮಹಾಸ್ವಾಮಿಗಳೆ, ಹರಗುರು ಚರಮೂರ್ತಿಗಳೆ,

ಸನ್ಮಾನ್ಯ ಸಹೋದರಿಯರೆ ಮತ್ತು ಮಹನೀಯರೆ,

ವೀರಶೈವ ಧರ್ಮದ ಚರಿತ್ರೆಯನ್ನೂ ಸಾಹಿತ್ಯವನ್ನೂ ಆಳವಾಗಿ ಅಭ್ಯಾಸ ...ಾಡಿದ ಮಹನೀಯರಿಗೆ ಈ ಮುಂದೆ ಹೇಳುವ ಲಿಂಗವಂತ ಮಹಾಪುರುಷರ ...ಣ್ಯಪ್ರದ ಹೆಸರುಗಳು ಸದಾ ನೆನಪಿನಲ್ಲಿರುತ್ತವೆ.

ಆಚಾರ್ಯ ರೇವಣಸಿದ್ಧ, ೨. ದೇವರ ದಾಸಿಮಯ್ಯ, ೩. ...ಲ್ಲಮ ಪ್ರಭುದೇವರು, ೪. ಬಸವೇಶ್ವರ ಮತ್ತು ಚೆನ್ನಬಸವೇಶ್ವ...ರು, ೫. ಸಿದ್ಧರಾಮೇಶ್ವರ, ೬. ಕೆರೆಯ ಪದ್ಮರಸ, ೭. ಶರಣ ...ದಿಶೆಟ್ಟಿ, ೮. ಏಕಾಂತದ ರಾಮಯ್ಯ, ೯. ಮಲ್ಲಿಕಾರ್ಜುನ ...ಂಡಿತಾರಾಧ್ಯ, ೧೦. ಪಾಲ್ಕುರಿಕೆ ಸೋಮನಾಥ, ೧೧. ವಿಜಯ ...ಗರದ ಪ್ರೌಢಪ್ರತಾಪದೇವ, ೧೨. ಲಕ್ಕಣಾಮಾತ್ಯ ಮತ್ತು ...ಕ್ಕಣಾರ್ಯರು, ೧೩. ಭಗವಾನ್ ಸಿದ್ಧಲಿಂಗೇಶ್ವರ, ೧೪. ಮಹಾ...ನಿ ಶಿವಪ್ರಕಾಶಸ್ವಾಮಿಗಳು ಮತ್ತು ೧೫. ನಾಸಿಕದ ಶಾಂತಲಿಂಗ ...ವರು ಇತ್ಯಾದಿಗಳು.

ಈ ಮೇಲೆ ಕಂಡ ವಿಭೂತಿಪುರುಷರು ಮಾಡಿದ ಸಹಾಸ, ತೋರಿದ ...ರ್ಮಶ್ರದ್ಧೆಗಳ ಫಲವಾಗಿ, ವೀರಶೈವಧರ್ಮ, ಸಾಹಿತ್ಯ, ಸಂಸ್ಕೃತಿಗಳು

ಸಮಗ್ರ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ, ಆಂಧ್ರ, ತಮಿಳ
ಮತ್ತು ಮಹಾರಾಷ್ಟ್ರಗಳಲ್ಲಿ ಇಂದಿಗೂ ತಲೆಯೆತ್ತಿ ನಿಲ್ಲಲು ಕಾರಣವ
ಎಂಬುದನ್ನು ನಾವು ಸ್ಮರಿಸಿಕೊಳ್ಳುವುದು ಇಂದು ಅಗತ್ಯವಾಗಿದೆ.

ಈ ಮೇಲಿಕಂಡ ಮಹಾಪುರುಷರು ಪ್ರತಿಯೊಬ್ಬರೂ ಮಹತ್
ಗಳನ್ನು ನಿರ್ವಹಿಸಿದವರೇ ಆಗಿದ್ದಾರೆ. ಇವರಲ್ಲಿ ಆಚಾರ್ಯ ರೇವಣ
ಅಲ್ಲಮಪ್ರಭುದೇವರು, ಮತ್ತು ಎಡೆಯೂರು ಸಿದ್ಧಲಿಂಗೇಶ್ವರರು ಈ ಮೂ
"ವೀರಶೈವ ಸಿದ್ಧತ್ರಯರು" ಎಂದು ಕರೆಯಬಹುದು. ವೀರಶೈವ ಮತ
ಯಲ್ಲಿ 'ಪಂಡಿತ ತ್ರಯ' (ಮಲ್ಲಿಕಾರ್ಜುನ ಪಂಡಿತ, ಶ್ರೀಪತಿ ಪಂಡಿತ, ಮ
ಪಂಡಿತ) ಆಚಾರ್ಯ ಪಂಚಕ (ರೇವಣಸಿದ್ಧ, ಮರುಳಸಿದ್ಧ, ಏಕೋ
ಪಂಡಿತಾರಾಧ್ಯ, ಮತ್ತು ವಿಶ್ವಾರಾಧ್ಯ) ಎಂದು ಕರೆಯುವ ರೂಢಿಯಿರುವ
ಈ ಮಹಾಸಿದ್ಧತ್ರಯರ ಹೆಸರುಗಳನ್ನು ಕೂಡ ಬಳಕೆಗೆ ತರುವುದು ಅಗತ್ಯ

ಭಗವಾನ್ ಸಿದ್ಧಲಿಂಗೇಶ್ವರರು ಸುವಿಖ್ಯಾತವಾದ ಕಲ್ಯಾಣದ ಗು
ಸಿಂಹಾಸನದ ಪರಂಪರೆಗೆ ಸೇರಿದವರು. ಗೋಸಲ ಚೆನ್ನಬಸವೇಶ್ವರರ ಗಳ
ಜಾತ ಸಂಜಾತರು. ಶೂನ್ಯಸಿಂಹಾಸನದಲ್ಲಿ, ಅಲ್ಲಮಪ್ರಭು, ಚೆನ್ನಬಸವೇ
ಸಿದ್ಧರಾಮೇಶ್ವರ, ಅನಾದಿ ಗಣನಾಥ, ಆದಿಗಣೇಶ್ವರ, ನಿರ್ಮಾಯ ಗಣೇ
(ಮಾದೇಶ್ವರ) ನಿರಂಜನ ಸ್ವಾಮಿಗಳು, ಬಸವಪ್ರಭು ಸ್ವಾಮಿಗಳು,
ಸ್ವಾಮಿಗಳು, ಚೆನ್ನವೀರಸ್ವಾಮಿಗಳು, ಗೋಸಲಸಿದ್ಧೇಶ್ವರರು, ಶಂಕರಾ
ಸ್ವಾಮಿಗಳು, ದಿವ್ಯಲಿಂಗೇಶ್ವರ ಸ್ವಾಮಿಗಳು, ಚೆನ್ನಬಸವರಾಜೇಂದ್ರರು
ಗಳ ಅನಂತರ ಭಗವಾನ್ ತೋಂಟದ ಸಿದ್ಧಲಿಂಗೇಶ್ವರರು ಅಧ್ಯಕ್ಷರಾಗಿ
ಳಿಸುತ್ತಾರೆ. ನಿರಂಜನವಂಶ ರತ್ನಾಕರದ ಆಧಾರದ ಪ್ರಕಾರ ಶ್ರೀ ಸಿದ್ಧ
ಶ್ವರರು ಶೂನ್ಯಪೀಠದಲ್ಲಿ ಹತ್ತೊಂಬತ್ತನೆಯ ಜಗದ್ಗುರುವೆನಿಸುತ್ತಾರೆ.

ವೃತ್ತಾಂತ ಮತ್ತು ಪ್ರಭಾವ ಮುದ್ರೆ

ಭಗವಾನ್ ಸಿದ್ಧಲಿಂಗೇಶ್ವರರು, ಘನವಿದ್ವಾಂಸರು, ಮಹಾಮ
ನಿರಂಜನ ಗಣೇಶ್ವರನ ಅಪರಾವತಾರವೆಂದು ಕೀರ್ತಿವೆತ್ತವರು. ಪವಾಡ
ರಾದ ಹರದನಹಳ್ಳಿ ಗೋಸಲ ಚೆನ್ನಬಸವೇಶ್ವರರ ಶಿಷ್ಯರು. ಭಾರತ
ಭಾಗವನ್ನು ಸಂಚರಿಸಿ, ತಮ್ಮ ಸಂಗಡಿಗರಾದ ಹಲವಾರುಮಂದಿ ವಿ

ಕೂಡಿಕೊಂಡು ವೀರಶೈವ ಧರ್ಮಪ್ರಸಾರವನ್ನು ಮಾಡಿದವರು. ವಚನ ವಾಙ್ಮಯದಲ್ಲಿ ವಿಖ್ಯಾತವಾದ 'ಷಟ್‌ಸ್ಥಲ ಜ್ಞಾನಸಾರಾಮೃತ' ಎಂಬ ಮಹತ್ಕೃತಿಯನ್ನು ರಚಿಸಿದವರು. ಇವಕ್ಕೂ ಹೆಚ್ಚಾಗಿ ಶೂನ್ಯ ಸಿಂಹಾಸನಾಧೀಶ್ವರರು. ಕನ್ನಡ ಕವಿಚರಿತ್ರೆಯಲ್ಲಿ ಇವರನ್ನು ಕುರಿತು, "ತೋಂಟದ ಸಿದ್ಧೇಶ್ವರ (ಸು. ೧೪೭೦) ಈತನು ಷಟ್‌ಸ್ಥಲ ಜ್ಞಾನ ಸಾರಾಮೃತವನ್ನು ಬರೆದಿದ್ದಾನೆ. ಇವನಿಗೆ ತೋಂಟದ ಸಿದ್ಧಲಿಂಗಯತಿಯೆಂಬ ಹೆಸರೂ ಉಂಟು. ಇವನು ಹರದನಹಳ್ಳಿ ಗೋಸಲ ಚೆನ್ನಬಸವೇಶ್ವರನ ಶಿಷ್ಯನು. ಕಗ್ಗೆರೆ ಸಮೀಪದಲ್ಲಿರುವ ನಾಗಿಣಿ ನದಿಯ ತೀರದ ತೋಂಟದಲ್ಲಿ ಬಹಳಕಾಲ ಶಿವಯೋಗ ಸಮಾಧಿಯಲ್ಲಿದ್ದುದರಿಂದ "ತೋಂಟದ" ಎಂಬ ವಿಶೇಷಣ ರೂಢಿಯಾಗಿ ಬಂದಿದೆ. ಇವನು ಕುಣಿಗಲಿಗೆ ಸಮೀಪದಲ್ಲಿರುವ ಎಡೆಯೂರಿನಲ್ಲಿ ಸಮಾಧಿಯನ್ನು ಹೊಂದಿದನು. ಆ ಊರಿನಲ್ಲಿ ಈತನ ಜ್ಞಾಪಕಾರ್ಥವಾಗಿ ಕಟ್ಟಿಸಿದ 'ಸಿದ್ಧಲಿಂಗೇಶ್ವರ' ಎಂಬ ದೇವಾಲಯವು ಈಗಲೂ ಇದೆ. ಈತನು ವೀರಶೈವರಲ್ಲಿ ಬಹಳ ಪ್ರಸಿದ್ಧನಾದ ಗುರು. ಈತನ ಚರಿತ್ರೆಯನ್ನು ಕುರಿತು ಹಲವು ಗ್ರಂಥಗಳು ಹುಟ್ಟಿವೆ. ಇವುಗಳಲ್ಲಿ ಈತನು 'ನಿರಂಜನ ಗಣೇಶ್ವರನ ಅಪರಾವತಾರ' ಎಂದು ಹೇಳಿದೆ. ಮೇಲೆ ಹೇಳಿದ ಸಿದ್ಧಲಿಂಗೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ಒಂದು ಶಿಲಾಶಾಸನವಿದೆ. ಇದರಲ್ಲಿ ಈತನ ಮಹಿಮೆಯನ್ನು ವಿಶೇಷವಾಗಿ ಕೊಂಡಾಡಿ ಈತನ ಶಿಷ್ಯರಲ್ಲಿ ಕೆಲವರ ಹೆಸರನ್ನು ಹೇಳಿ, ಈತನಿಗೋಸ್ಕರ ಕೆಲವು ಭಕ್ತರು ಎಡೆಯೂರಿನಲ್ಲಿ ಒಂದು ಕಲ್ಲುಮಠವನ್ನು ಕಟ್ಟಿಸಿದಂತೆ ಹೇಳಿದೆ' ಎಂದು ಬರೆದಿದ್ದಾರೆ. [ಕರ್ನಾಟಕ ಕವಿ ಚರಿತೆ, ಭಾಗ-೨, ಪುಟ ೯೭-೧೦೦].

ಶ್ರೀ ಸಿದ್ಧಲಿಂಗೇಶ್ವರ ದೇವಾಲಯದ ಶಾಸನದಲ್ಲಿ ಈ ಮಹಾತ್ಮನನ್ನು ಕುರಿತು ಈ ಮುಂದೆ ಹೇಳುವಂತೆ ನಿರೂಪಿತವಾಗಿದೆ. "ಇಂತಪ್ಪ ಅನಾದಿ ಸಂಗಮವೇ ಜಗದ್ಧಿತಾರ್ಥವಾಗಿ ಆಚರಿಸಿದ ಕ್ರಮವೆಂತೆಂದೊಡೆ—ಜ್ಞಾನ ಕ್ರಿಯಾಸ್ವರೂಪನೂ, ಸರ್ವಾಂಗಲಿಂಗಿ, ಷಟ್‌ಸ್ಥಲಜ್ಞಾನಿ, ಸರ್ವಾಚಾರ ಸಂಪನ್ನ, ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯ, ನವೀನ ಅಷ್ಟಾವರಣಾಲಂಕರಣ, ದ್ವೈತಾದ್ವೈತತಿಮಿರ ಮಾರ್ತಾಂಡ ಇಂತಪ್ಪ ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರಂಗೆ ಸಮ್ಯಕ್‌ಜ್ಞಾನೋದಯವಾಗಿ ಸಂಸಾರಹೇಯಮಂಮಾಡೆ ಶರಣುಹೊಕ್ಕ ಶಿಷ್ಯಜನಗಳಂ ನಾಮಪರಿಕ್ರಮಗಳ ಎಂತೆಂದೊಡೆ : ಸಪ್ಪೆದೇವರು.

ಉಪ್ಪಿನಹಳ್ಳಿ ಸಿದ್ಧದೇವರು, ನಂಜೇದೇವರು, ಬೋಳಬಸವರಾಜದೇ
ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟ್ಟಣದೇವರು, ರೇವಣ್ಣಸಿದ್ಧದೇ
ಶೀಲವಂತದೇವರು, ಚಿಟ್ಟಗದೇವರು ಇಂತು ಇವರು ಮುಖ್ಯವಾದ ಭಕ್ತಮ
ಸ್ವರ್ಗೆ ಷಟ್‌ಸ್ಥಲಜ್ಞಾನ, ಲಿಂಗಾಂಗಸಂಬಂಧ. ಸಮರಸೈಕಾರ್ಥಮಂಬೋ
ಮುಕ್ತರಂಮಾಡಿ ಷಟ್‌ಸ್ಥಲೈಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲ ಸಿ
ಯಾಗಿ ಎಡೆಯೂರಲ್ಲಿ ತನಗೆ ಕಟ್ಟಿಸಿದ ಮಠದಲ್ಲಿ ಶಿವಯೋಗ ಸಮಾಧಿ ಸ
ರಾದರು. ತೋಂಟದಸ್ವಾಮಿಯ ಪಾದಪದ್ಮಾರಾಧಕರಾದ ದಾನಿವಾಸ ಸ
ಗಳಾದ ಚೆನ್ನರಾಯ ಒಡೆಯರು, ಅವರ ಮಕ್ಕಳು ಲಿಂಗಪ್ಪ ಒಡೆಯರು,
ಮಕ್ಕಳು ಪ್ರಾದೋಷಕ ಪ್ರಸಾದ ಸಂಪನ್ನರಾದ ಚೆನ್ನವೀರಪ್ಪ ಒಡೆ
ಇವರ ಸತಿ ಪಾರ್ವತಮ್ಮ ಈ ದಂಪತಿಗಳು ತಮ್ಮ
ಯಿಂದ ತೋಂಟದ ಸ್ವಾಮಿಗೆ ಕಲ್ಲುಮಠವ ಕಟ್ಟಬೇಕೆಂದು ಚಿಟ್ಟಗ ದೇ
ಪದಾರ್ಥಮಂ ಕೊಟ್ಟು ನಮಸ್ಕಾರಮಂ ಮಾಡಲಾಗಿ ಭಕ್ತಿ ಪದಾರ್
ಕೈಕೊಂಡು ಎಡೆಯೂರಿಗೆ ಬಿಜಯಂಗೈದು ತೋಂಟದ ಸ್ವಾಮಿಗೆ ಕಲ್ಲ
ಮನ್ನು ಎಂಟು ಜಡೆಯ ಬಗೆಯ ಹಿರಿಯರು ಚಟ್ಟಗದೇವರು ಕಟ್ಟಿ
[ಎ.ಕ. XII] Kunigal-49. [ಎ.ಕ.12] ಕುಣಿಗಲ್-49

ಕವಿಚರಿತೆಕಾರರು ಶ್ರೀ ಸಿದ್ಧಲಿಂಗೇಶ್ವರರು ವಿಜಯನಗರದ ರಾ
ವಿರೂಪಾಕ್ಷನ [೧೪೬೭, ೧೪೭೮] ಕಾಲದಲ್ಲಿ ಇದ್ದಂತೆ ನಿರ್ಧರಿಸಿ
ಅವರ ಈ ಸಿದ್ಧಾಂತಕ್ಕೆ ಮಹಾಕವಿ ವಿರೂಪಾಕ್ಷ ಪಂಡಿತನ [ಸು. ೧
ಚೆನ್ನಬಸವ ಪುರಾಣವು ಆಧಾರವಾಗಿದೆ. ಆ ಚೆನ್ನಬಸವ ಪುರಾ
ಭಗವಾನ್ ಸಿದ್ಧಲಿಂಗೇಶ್ವರನನ್ನು ಕುರಿತು :

ವಾ.ಷ|| ಧರೆಯೊಳಗೆ ವೀರಶೈವಾಚಾರ ವಡಗಿತ್ತು |
ಕರುಣದಿಂ ನೀವೇ ಚಿತ್ರೈಸಿ ಷಟ್‌ಸ್ಥಲವನು |
ಧ್ಧರಿಸೆಂದು ನಾರದಂ ಬಿನ್ನವಿಸಲೀಶಂ ನಿರಂಜನ ಗಣೇಶನೊ
ವರಗಣೇಶ್ವರರನೇಳ್ನೂರ್ವರಂ ಕೂಡಿಕೊಂ |
ಡಿರದೆ:ಭೂಮಿಯೊಳುದಿಸಿ ಜಂಗಮಸ್ಥಲವಾಂತು |
ಪರಮ ಷಟ್‌ಸ್ಥಲವನುದ್ಧರಿಸಲೆಂದು ಕಳುಹಿ ಅವರೊಡಗೂ

ಭೂಮಿಗೆ

ಪರನು ಗೋಸಲ ಚೆನ್ನಬಸವೇಶ್ವರನ ಹಸ್ತ ।
ಸರಸಿರುಹದಿಂದ ಆ ನಿರಂಜನ ಗಣೇಶ್ವರಂ ।
ಹರುಷದಿಂದೊಗೆದು ಸಿದ್ಧೇಶನಾಮವನಾಂತು ಕಗ್ಗೆರೆಯ
ತೋಟಕ್ಕೈದಿ ॥

ಇರದೆ ಸಂಬ್ಯಣ್ಣನೆಂಬಾತನತಿ ಭಕ್ತಿಯಿಂ ।
ಶರಣೆಂದು ಭಿಕ್ಷಕ್ಕೆ ಬಿನ್ನವಿಸಿಕೊಂಡೀಗ ।
ತಿರುಗಿಬಂದಾನೆ ಕರಕೊಂಡು ಪೋದಪೆದೆಂದು ಕಗ್ಗೆರೆಗೆ ಪೋಗಲಾಗ॥

ಜಗಳದಿಂದೂರೊಡೆದುಪೋಗಿ ಕೆಲದಿವಸಕ್ಕೆ ।
ಮಗುಳೆ ಬರ್ಪ್ಪನ್ನೆಗಂ ತೋಂಟದೊಳಗೇನುವಂ ।
ಬಗೆಯದೆ ಶಿವಧ್ಯಾನದಿಂದೆ ಪರಪಶವನ್ನೈದಿರೆ ಗೆದಲೆ ಹುತ್ತವಿಕ್ಕೆ ॥

ಜಗವೆಲ್ಲ ಮತ್ತೆ ಚೋದ್ಯದಿಂ ನೋಡಿ ಹುತ್ತಮಂ ।
ಬಗೆದು ಕಂಡಾಗ ತೋಂಟದ ಸಿದ್ಧಲಿಂಗನೆಂ ।
ದಗಣಿತ ಮಹಾಪುರುಷನೆಂದು ಪೂಜಿಸುವರೆಲೆ ರಾಮೇಶಕೇಳೆಂದನು॥

ಅಲ್ಲಲ್ಲಿ ಸಾನಾಪವಾಡಮಂ ಮೆರೆವುತಿರ ।
ಲಲ್ಲಲ್ಲಿ ಪೂಜೆಗೊಳುತ್ತೈದಿ ತೋಂಟವಯತಿಯ ಸಾರಲತಿಪ್ರೀತಿ
ಯಿಂದೆ ॥

ಮೆಲ್ಲಮೆಲ್ಲನೆ ತೋಂಟದಾರ್ಯರ್ ಆ ವಿರತರೊಳ್ ।
ಬಲ್ಲಬಲ್ಲರೊಳು ತತ್ವಾನುಭಾವಂಗಳಿಂ ।
ಸೊಲ್ಲುಸೊಲ್ಲಿಗೆ ಪರಮ ಷಟ್‌ಸ್ಥಲವನುಸಿರ್ವರ್ ಆ ವಿರತರಾ
ರೆಂದೊಡೆ ॥

ಎಂದು ಹೇಳಿ ವಿರೂಪಾಕ್ಷ ಪಂಡಿತರು ತೋಂಟದಾರ್ಯರ ಶಿಷ್ಯರ ಹೆಸರುಗಳನ್ನು ಹೀಗೆ ಹೇಳಿದ್ದಾನೆ.—ಸಿದ್ಧಲಿಂಗೇಶ್ವರ, ಕಂಬಳಿದೇವ, ಸಿದ್ಧನಂಜೇಶ್ವರ, ಚೆನ್ನದೇವರು, ದೊಡ್ಡಸಿದ್ಧಲಿಂಗೇಶ್ವರ, ಕಂಕಣದ ದೇವರು, ಲಂಬಕರ್ಣ ದೇವರು, ಸಿದ್ಧಮಲ್ಲೇಶ, ಗುಮ್ಮಳಾಪುರದ ಸಿದ್ಧಲಿಂಗಯತಿ, ಯಡತೊರೆಯ ಗುರು, ಸಿದ್ಧವೀರಣ್ಣೊಡೆಯ, ಸುತ್ತೂರಿನ ಘನಲಿಂಗಿದೇವರು, ಚಿಕ್ಕಮಲ್ಲೇಶ, ಮರುಳಸಿದ್ಧೇಶ್ವರ, ಚಂದ್ರಶೇಖರದೇವರು, ಸುರುಗಯಾರ್ಯ, ಶಾಂತಮಲ್ಲಿಕಾ

ರ್ಜುನ, ಬೆಡಗಿನ ಪರ್ವತೇಶ್ವರ, ಪಟ್ಟಣದ ದೇವರು, ಜಗುಸಿಯ ಮ
ದೇವರು, ಮಳೆಯದೇವರು, ಬತ್ತಲೆಯ ದೇವರು, ಸಂಪಗೆಯ ರಾಜ
ದೇವರು, ಸಪ್ಪೆಯಾರ್ಯ, ಉಪ್ಪಿನಹಳ್ಳಿ ಆರ್ಯ, ಶೀಲವಂತಾರ್ಯ, ಕೊ
ಹಳ್ಳಿ ಆರ್ಯ, ಜೋಲಿಸು ಬಸವೇಶ್ವರ, ರಾಜಪಟ್ಟದೇವ, ಗೋರಿಯ
ಬಸವೇಶ್ವರ, ಹಿರಣ್ಯಾರ್ಯ, ಶಿವಪೂಜೆಯಾರ್ಯ, [ಜೋಳ ಬಸವೇಶ್ವ
ಚೆನ್ನಮಲ್ಲೇಶ [ಚೆನ್ನಬಸವ ಪುರಾಣ, ಕಾಂಡ ೫-ಸಂಧಿ ೧೦]

ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣದಲ್ಲಿ ಶ್ರೀ ತೋಂ
ದಾರ್ಯರ ಶಿಷ್ಯರ ಪತ್ತೆ ಕೆಲವು ಹೆಸರುಗಳನ್ನು ಹೇಳಿದೆ:—ಗಟ್ಟಿಸಿದ್ದಯ್ಯ
ಕಟ್ಟಿಯಪುರದ ನಂಜದೇವ, ಹುಚ್ಚು ಪರ್ವತದೇವ, ದೊಡ್ಡ ಸಿದ್ದಯ್ಯ......

ಶ್ರೀ ಸಿದ್ಧಲಿಂಗೇಶ್ವರನನ್ನು ಕುರಿತು ಸುಪ್ರಸಿದ್ಧ ವೀರಶೈವ ಕವಿಯ
ವಿರಕ್ತ ತೋಂಟದಾರ್ಯನು [ಸು. ೧೫೬೦] ಸಿದ್ಧೇಶ್ವರ ಪುರಾಣಂ ಎಂ
ಗ್ರಂಥವನ್ನೂ, ಮಹಾಕವಿ ಗುಬ್ಬಿಮಲ್ಲಣಾರ್ಯನ ಮಗನಾದ ಶಾಂತೇ
ಕವಿಯು [ಸು. ೧೫೬೧] ತೋಂಟದ ಸಿದ್ಧೇಶ್ವರ ಪುರಾಣ ಎಂಬ ಗ್ರಂಥವನ್ನು
ಬರೆದಿದ್ದಾರೆ.* ಶಾಂತೇಶ ಕವಿಯು 'ವಿಮಲಗುರು ತೋಂಟದಾರ್ಯ
ಪದಕಮಲಷಟ್ಚರಣ' ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ. ವಿರಕ್ತ
ತೋಂಟದಾರ್ಯನ ಗ್ರಂಥ ಅಚ್ಚಾಗಿದೆ. ಶಾಂತೇಶನ ಗ್ರಂಥ ಅಚ್ಚಾಗಿ
ಹೇರಂಬಕವಿ ಎಂಬಾತನು [ಸು. ೧೬೦೦] ಸಿದ್ಧಲಿಂಗೇಶ್ವರ ಸಾಂಗತ್ಯ ಎಂ
ಗ್ರಂಥವನ್ನು ಬರೆದಿದ್ದಾನೆ. ಈತನು ಜನ್ಮತಃ ವೈಷ್ಣವ ಬ್ರಾಹ್ಮಣನೆಂಬ
ಇಲ್ಲಿ ಸ್ಮರಣಾರ್ಹ. ಇದರಲ್ಲಿಯೂ ತೋಂಟದಾರ್ಯನು ನಿರಂಜನ ಗಣೇಶ್ವರ
ಅವತಾರವೆಂದು ಹೇಳಲಾಗಿದೆ. ಸಮಗ್ರ ಭಾರತವನ್ನು ಸುತ್ತಿ ಗುರುವರ್ಯ
ಧರ್ಮಪ್ರಸಾರ ಮಾಡಿದ ವಿಷಯವನ್ನು ನಿರೂಪಿಸಲಾಗಿದೆ. ಈ ಗ್ರಂ
ಅಚ್ಚಾಗಿದೆ. ಕವಿಯು—

ಸಾಂಗತ್ಯ ॥ ಶ್ರೀಮದ್ಗೌರಿಯ ಭಾಗ್ಯ ಪುಣ್ಯೋದಯ ।
ಕಾಮಿತ ಫಲ ಸುಪ್ರದಾಯ ॥

* ಈ ಪುರಾಣಕಾರರಿಬ್ಬರೂ ಸಮಕಾಲೀನರು. (ಲೇ.)

ಸಾಮಜಮುಖನೆ ಬ್ರಹ್ಮಾಂಡೋದರ ಜೀಯ ।
ಸ್ವಾಮಿ ಶರಣುಕೊಡು ಮತಿಯ ॥

ಎಂದು ತನ್ನ ಗ್ರಂಥವನ್ನು ಪ್ರಾರಂಭಿಸುತ್ತಾನೆ.

ಹರಪನಹಳ್ಳಿಯು ಹರಪಗೆ ಶಿಮವಾಗಿ ।
ಸುರಗಿರಿಯಿಂದಿಳೆ ಗೈದಿ ॥
ಗುರುಸೇವೆಯನುಮಾಡಿ ಚರಿಸಿದ ನೆಡೆಯೂರ ।
ಪುರವಾಸಿಯಾ ಕಥೆಯೊರೆವೆಂ ॥

ಎಂದು ತನ್ನ ಕಥಾನಾಯಕನನ್ನು ನಿರೂಪಿಸುತ್ತಾನೆ.

ಜಯ ಜಯ ಜನಿಮೃತಿ ದೂರ ಶುಭಾಂಗಂಗೆ ।
ಜಯ ಜಯ ಜಗದ ಪಾವನಗೆ ॥
ಜಯ ಜಯ ಜಯ ಪರಂಜ್ಯೋತಿ ಸ್ವರೂಪಂಗೆ ।
ಜಯ ಜಯ ಸಿದ್ಧಲಿಂಗನಿಗೆ ॥

ಎಂದು ತನ್ನ ಗ್ರಂಥವನ್ನು ಮುಗಿಸುತ್ತಾನೆ. ಇದರಲ್ಲಿ ಜ್ಞಾನಾಂಬೆ—ಮಲ್ಲಿಕಾರ್ಜುನರ ಮಗ ಸಿದ್ಧಲಿಂಗೇಶ್ವರ ಎಂದು ಹೇಳಲಾಗಿದೆ.

ಈ ಗ್ರಂಥವು ಕವಿಚರಿತೆಕಾರರಿಗೆ ಸಿಕ್ಕಿದಂತೆ ತೋರಲಿಲ್ಲ. ಇದರಲ್ಲಿ ಕಥೆಯು ಪುರಾಣಕ್ಕಿಂತ ತುಸು ಭಿನ್ನವಾಗಿದೆ. ದೇವಾಲಯದ ಶಾಸನದ ವಿಷಯ ಇದರಲ್ಲಿ ಬಂದಿದೆ. [ಸಿದ್ಧಲಿಂಗೇಶ್ವರ ಸಾಂಗತ್ಯ.]

ಇತ್ತೀಚೆಗೆ ಕೈ॥ ಮಾಗಡಿ ವೀರಪ್ಪಶಾಸ್ತ್ರಿಗಳು ಸಂಸ್ಕೃತದಲ್ಲಿ 'ಸಿದ್ಧಲಿಂಗೇಶಸ್ತವಂ' ಕನ್ನಡದಲ್ಲಿ 'ಸಿದ್ಧಲಿಂಗೇಶ್ವರ ಶತಕ' ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಆ ಶತಕದಿಂದ ಎರಡು ಪದ್ಯಗಳನ್ನು ಸಹೃದಯರಿಗಾಗಿ ಇಲ್ಲಿ ನಿರೂಪಿಸಲಾಗಿದೆ.

ವಾ॥ ಷ॥ ನರರಾವ ಬಲವಿಡಿದು ಮೆರೆಯುವರೊ ಧರಿಣಿಯೊಳು ।
ಮರಣವಿಲ್ಲವೆ ? ಯಮಗೆ ಶಾಂತಿಬಂದುದೆ ? ಮೃತ್ಯು ।
ಪರಮ ಧರ್ಮವ ಪಿಡಿದು ನೆಲಸಿಹುದೆ ? ಯಮಭಟರು ಕಾರುಣ್ಯ
ರಸಯುಕ್ತರೆ ? ॥

ಮರಣ ಬಂದುದೆ ಚಿತ್ರಗುಪ್ತರಿಗೆ ? ಕಾಲಮದು ।
ಚರಿಸಿ ನಿಂದುದೆ ದೇವ ? ನಿನ್ನೊಲುಮೆಯಿಲ್ಲದಿರೆ ।
ಪರಮಪದ ದೊರೆಯುವುದೆ ? ಭುವನಾಳಿ ರಕ್ಷಕನೆ ಗುರುಸಿದ್ಧ
ಲಿಂಗೇಶ್ವರ

ಅಂಗನೆಯರೆಂದೆಂಬ ಶಬರಿಯರು ಲೋಕದೊಳ ।
ಗಂಗಜವಿಹಾರವೆನಿಪುತ್ಕರದ ಬೇಂಟೆಯೊಳು ।
ಸಂಗಳಿಸಿಕೊಂಡು ನರರೆಂಬ ಮೃಗನಿವಹಮಂ ಮೋಹವೆಂದೆನಿಪ
ಬಲೆಗೆ ।

ಸಂಗತರನುರೆಮಾಡಿ ನೇತ್ರಾಂತಬಾಣದಿಂ ।
ಭಂಗಮಂಗೊಳಿಸಿ ಮೆರೆಯುತ್ತಿರ್ಪರಿವರುಗಳ
ಸಂಗಮಂ ಕಡೆನೂಂಕಿ ಮೆರೆದವನೆ ಧನ್ಯನೈ ಗುರುಸಿದ್ಧಲಿಂಗೇಶ್ವರ
(ಗ್ರಂಥಕರ್ತೃಕ, ಚರಿತ್ರಕೋಶ, ಪುಟ ೧೪೨)

ಭಗವಾನ್ ತೋಂಟದ ಸಿದ್ಧಲಿಂಗೇಶ್ವರರು ಹಲವಾರು ಕಾರಣಗಳಿಂದ ಸಾಹಿತ್ಯದಮೇಲೂ, ಸಮಾಜದಮೇಲೂ, ಮಿಗಿಲಾದ ತಮ್ಮ ಪ್ರಭಾವಮುದ್ರೆಯನ್ನು ಬೀರಿದ್ದಾರೆ. ಶೂನ್ಯಸಂಪಾದನೆಯ ಕರ್ತೃವೂ ಸಂಸ್ಕೃತದಲ್ಲಿ 'ಅನಾದಿ ವೀರಶೈವಾಚಾರ ಸಂಗ್ರಹಂ' ಎಂಬ ಗ್ರಂಥವನ್ನು ರಚಿಸಿದವನೂ ಆದ ಗೂಳೂರು ಸಂಪಾದನೆಯ ಸಿದ್ಧವೀರೇಶ್ವರನು ತಾನು ಸಂಗ್ರಹಿಸಿದ ಶೂನ್ಯಸಂಪಾದನೆಯ ಪೀಠಿಕೆಯಲ್ಲಿ ತನ್ನ ಗುರುವಿನ ಗುರುವಾದ ಸಿದ್ಧಲಿಂಗೇಶ್ವರರನ್ನು ಕುರಿತು —

ಕಂದ॥ ಶ್ರೀ ವಿಮಲ ಮುಕ್ತಿದಾಯಕ ।
ಪಾವನಮಯ ಪರಮಚರಿತ ಷಟ್‌ಸ್ಥಲನಾಯಕ ॥
ಭೂವಿನುತ ಸಚ್ಚಿದಾತ್ಮಕ ।
ಭಾವಜಹರ ಸಲಹು ಸಿದ್ಧಲಿಂಗ ಸುದೇಶಿಕ ॥

ಎಂಬ ಕಂದದಲ್ಲಿಯೂ,

ಶ್ರೀಮತು ಪರಾತ್ಪರ ಪರಶಿವ ನಿತ್ಯನಿರ್ಮಲ ನಿರಹ ನಿರಮಾಯ ಅನಿರ್ವಾಚ್ಯ ಪರಂಜ್ಯೋತಿಸ್ವರೂಪ ಷಟ್‌ಸ್ಥಲ ಜ್ಞಾನಪ್ರಭಾಪುಂಜ ರಂಜಿತ ಸಕಲ ಭಕ್ತಜನ ಹೃತ್ಕಮಲ ಕರ್ಣಿಕಾವಾಸ ಶರಣಜನ ಮುಕ್ತಿಪ್ರದಾಯಕ ಅಖಿಳ

ಜಗದಾರಾಧ್ಯರಪ್ಪ ತೋಂಟದ ಸಿದ್ಧಲಿಂಗೇಶ್ವರನ ಕೃಪಾಪ್ರಸನ್ನ ಪಾತ್ರರಾದ ಬೋಳಬಸವೇಶ್ವರನು ಮುಖ್ಯವಾದ ವಸುಧೆಯ ಷಟ್‌ಸ್ಥಲ ಜ್ಞಾನಿಗಳಾದ ದಿವ್ಯಾನುಭವಿಗಳ ಬೋಧೆವಿಡಿದು" ಎಂಬ ವಚನದಲ್ಲಿಯೂ ತನ್ನ ಗುರುವಿನ ಗುರುವನ್ನು ಮುಕ್ತಕಂಠದಿಂದ ಬಣ್ಣಿಸಿದ್ದಾನೆ.

ಶ್ರೀ ಸಿದ್ಧಲಿಂಗೇಶ್ವರನ ಮತ್ತೊಬ್ಬ ಪ್ರಮುಖ ಶಿಷ್ಯನಾಗಿ ಸುತ್ತೂರು ವೀರಸಿಂಹಾಸನ ಮಠದ ಅಧ್ಯಕ್ಷನಾದ ಶ್ರೀ ಘನಲಿಂಗಿದೇವನು ತನ್ನ ಒಂದು ವಚನದಲ್ಲಿ "ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯರಿಗೆ ಗುರುಭಕ್ತಿಯಿಂದ ಎನ್ನ ಶರಣು ಮಾಡಿದರು. ಆ ತೋಂಟದಾರ್ಯರು, ತಮ್ಮ ಕೃಪೆಯೆಂಬ ತೊಟ್ಟಿಲೊಳಗೆ ಎನ್ನ ಮಲಗಿಸಿ, ಪ್ರಮಥಗಣಗಳ ವಚನಸ್ವರೂಪಾರ್ಥವೆಂಬ ಹಾಲು ತುಪ್ಪಮಂ ಸದಾ ತಣಿಯಲೆರೆದು, ಅಕ್ಕರಿಂದ ಸಂರಕ್ಷಣಮಂ ಮಾಡಿ 'ಘನಲಿಂಗಿ' ಎಂಬ ನಾಮಕರಣಮಂ ಕೊಟ್ಟು ಪ್ರಾಯಸಮರ್ಥೆಯಂ ಮಾಡಿ, ಸತ್ಯ, ಸದಾಚಾರ, ಜ್ಞಾನ, ಕ್ರಿಯೆಗಳೆಂಬ ದಿವ್ಯಾಭರಣಂಗಳಂ ತೊಡಿಸಿ, ಅರುವೆಂಬ ಬಣ್ಣದ ನಿರಿವಿಡಿದುಡಿಸಿ ಅರ್ತಿಯ ಮಾಡುತಿಪ್ಪ ಸಮಯದಲ್ಲಿ" ಎಂಬ ವಚನದಲ್ಲಿ ಶ್ರೀ ತೋಂಟದಾರ್ಯರ ಬಗೆಗೆ ತನಗಿರುವ ಶ್ರದ್ಧಾಭಕ್ತಿಗಳನ್ನು ಕವಿ ಮುಕ್ತಕಂಠದಿಂದ ಹೊಗಳಿದ್ದಾನೆ.

ಹದಿನೇಳನೆಯ ಶತಮಾನದಲ್ಲಿ ವಿಖ್ಯಾತನಾದ ಮಹಾಕವಿ ಷಡಕ್ಷರದೇವನು ಎಡೆಯೂರು ಸಿದ್ದಲಿಂಗೇಶ್ವರರನ್ನು ಕುರಿತು ತನ್ನ ಗ್ರಂಥಗಳ ಆದಿಯಲ್ಲಿ ಭಕ್ತಿಯಿಂದ ಪ್ರಾರ್ಥಿಸಿದ್ದಾನೆ.

ವೃತ್ತ ॥ ದುರಿತತಮಃ ಪಂತಗನ್ ಅಮಳಾರ್ಥ ವಿವೇಚನ ಸತ್ಪ್ರಸಂಗನ್ ಈ।
ಶ್ವರಲಸದಂತರಂಗನ್ ಅಭವಾಗಮವಾರಿಜ ದಿವ್ಯಭೃಂಗನ್ ಅ।
ಕ್ಷರಪರಲಿಂಗಸಂಗನ್ ಅತಿಶಾಂತಿ ನಿರಸ್ತ ಜಡಾನುಸಂಗನ್ ಒ।
ಲ್ದುರುತರ ಸಿದ್ಧಲಿಂಗಯತಿಪುಂಗನ್ ಒಡರ್ಚುಗೆ ಸಜ್ಜನೇಷ್ಟಮಂ ॥
(ರಾಜಶೇಖರ ವಿಲಾಸ, ಆಶ್ವಾಸ ೧-೧೪.)

ವೃ॥ ಶ್ರೀಕರ ವೀರ ಸಾಧು ಸಹಕಾರನ್ ಉದಂಚಿತ ಮುಕ್ತಕಂ ಸುಪ।
ವ್ಯಾಕರನ್ ಉದ್ಗಮ ಪ್ರರುಚಿ ಮಂಜುಲತಾನ್ವಿತನ್ ಊರ್ಜಿತಾಗಮಾ।

ನೀಕನುತನ್ ಮಹಾವಿರತಿ ಸಂಯುತನ್ ಆದುದರಿಂದೆ ಸಾರ್ದನಾ।
ಮಾಕರನ್ ಆದ ತೋಂಟದ ಗುರೂತ್ತಮನೋರ್ವನೆ ಸತ್ಫಲಪ್ರವಂ॥

(ವೃಷಭೇಂದ್ರ ವಿಜಯ, ಆಶ್ವಾಸ ೧, ಪದ್ಯ ೧

ಎಂದು ಮನವೊಪ್ಪಿ ಬಣ್ಣಿಸಿದ್ದಾನೆ.

ಮಹಾಕವಿ ವಿರಕ್ತ ತೋಂಟದಾರ್ಯನು ತನ್ನ ಗುರುವಿನ ಗುರುವಾ ಸಿದ್ಧಲಿಂಗೇಶ್ವರನನ್ನು ಕುರಿತು ಸಿದ್ಧೇಶ ಮಹಾಪುರಾಣವನ್ನು ಬರೆದಿದ್ದಾ ಆ ಪುರಾಣದಲ್ಲಿ ನಿರಂಜನಗಣಾಧಿಪನು ಹರದನಹಳ್ಳಿಗೆ ಬಂದು ಚೆನ್ನಬ ಸ್ವಾಮಿಯಿಂದ ಉಪದೇಶ ಹೊಂದಿ 'ಸಿದ್ಧಲಿಂಗೇಶಂ' ಎಂಬ ನಾಮವ ಹೊಂದಿ ನೀರಿನಿಂದ ದೀಪವನ್ನುರಿಸಿ ಗುರುವಿನ ಅನುಗ್ರಹ ಪಡೆದುದು, ಅರು ಚಲ, ಕಂಬಳೀಶ್ವರ, ಮಹಾಬಲೇಶ್ವರ ಮೊದಲಾದ ಕ್ಷೇತ್ರಗಳಲ್ಲಿ ಮಹಿ ಯನ್ನು ತೋರಿದುದು, ಉತ್ತುಂಗ ಯೋಗಿ, ಜನಾರ್ದನ ಜೀಯರ ಗರ್ವವ ವಾದದಿಂದ ತಗ್ಗಿಸಿದುದು, ಕಾರ್ಕಳ, ಗಾಳಿಯ ಪೂಜೆಯಬೆಟ್ಟ (ಮುಳ್ಳಯ್ಯ ಗಿರಿ) ಗಳಲ್ಲಿ ಮಹಿಮೆಯನ್ನು ಪಸರಿಸಿದುದು, ಕಗ್ಗೆರೆಯ ಹೂದೋಟ ನಾಗಿಣೀತೀರದಲ್ಲಿ ಹುತ್ತದ ಮಧ್ಯದಲ್ಲಿ ತಪಸ್ವಿಯಾಗಿ ಕೂತುದುದು, ಸತ್ತ ವನ್ನು ಬದುಕಿಸಿದುದು ಭೂತಗಳಿಗೆ ಶಾಪವಿಮೋಚನೆ ಮಾಡಿದುದು, ಅ ದಲ್ಲಿ ನೇರಳೆಹಣ್ಣುಗಳನ್ನು ತೋರಿದುದು, ಲಿಂಗಣ್ಣೊಡೆಯನ ಕುಟಿಲತನ ಕ್ಷಮಿಸಿ ಕಹಿ ಸೋರೆಕಾಯನ್ನು ಸೇವಿಸಿದುದು, ಹೇರೂರು, ಹುಲಿಯ ಗೂಳೂರು, ನಾಗವಲ್ಲಿ, ತುಮಕೂರು, ಶಿವಗಂಗೆ, ಹೊಳಲುಗುಂದ ಮೊದ ಊರುಗಳ ಭಕ್ತರನ್ನು ಅನುಗ್ರಹಿಸಿದುದು, ಮಂಗಲದಲ್ಲಿ ಕಲ್ಲುಬಸವನಿಗೆ ಮೇಯಿಸಿದುದು, ಸತ್ತಮಗು, ಎಮ್ಮೆ, ಕುದುರೆಗಳಿಗೆ ಪ್ರಾಣದಾನ ಮಾ ದುದು, ತುಂಬಿಹರಿಯುತ್ತಿದ್ದ ನಾಗಿಣೀನದಿಯು ತೋಂಟದಾರ್ಯರಿಗೆ ದಾ ಯನ್ನು ಬಿಟ್ಟುಕೊಟ್ಟದ್ದು, ಶ್ರೀ ಸಿದ್ಧಲಿಂಗ ಯತಿಯು ಬೋಳಬಸವಸ್ವಾ ಏಕೋತ್ತರ ಶತಸ್ಥಲವನ್ನು ಬೋಧಿಸಿ ಎಡೆಯೂರಿನಲ್ಲಿ ಸಮಾಧಿಸ್ಥರಾದ ಇತ್ಯಾದಿ ವಿಷಯಗಳನ್ನು ಅತ್ಯಂತ ಹಿರಿಮೆಯಿಂದ ಬಣ್ಣಿಸಿದ್ದಾನೆ. ಈ ಗ್ರಂ ಶ್ರೀ ತೋಂಟದ ಸಿದ್ಧಲಿಂಗೇಶನ ವಿಷಯವನ್ನು ತಿಳಿಯಲು ಕೈಗನ್ನಡಿಯ ಕಾವ್ಯಕಲಾದೃಷ್ಟಿಯಿಂದಲೂ ಈ ಗ್ರಂಥವು ವಾಚನಾರ್ಹವಾಗಿದೆ.

ಕ್ರಿ. ಶ. ೧೬೫೦ ರಲ್ಲಿದ್ದ ಹೂಲಿಯ ಸಿದ್ಧನಂಜೇಶನೆಂಬ ಮಹಾಕವಿಯು ರಾಘವಾಂಕ ಚಾರಿತ್ರ ಮತ್ತು ಗುರುರಾಜ ಚಾರಿತ್ರಗಳನ್ನು ಬರೆಯುದಲ್ಲದೆ ತೋಂಟದ ಸಿದ್ಧಲಿಂಗ ದೇಶಿಕನನ್ನು ಕುರಿತು 'ಭಾವರತ್ನಾಭರಣ' ಎಂಬ ಗ್ರಂಥವನ್ನು ಬರೆದಂತೆ ಕವಿಚರಿತ್ರೆಯಲ್ಲಿ ಹೇಳಿದೆ (ಭಾಗ ೨, ಪುಟ ೩೭೯) ಈ ಗ್ರಂಥ ನಮಗಿನ್ನೂ ದೊರೆತಿಲ್ಲ.

ಕ್ರಿ. ಶ. ೧೭೦೦ ರಲ್ಲಿದ್ದ ಸೋಮಶೇಖರ ಶಿವಯೋಗಿ ಎಂಬ ಕವಿಯು ತೋಂಟದ ಸಿದ್ಧಲಿಂಗನ 'ಷಟ್‌ಸ್ಥಲಜ್ಞಾನ ಸಾರಾಮೃತ'ಕ್ಕೆ ಟೀಕೆ ಬರೆದಂತೆ ಹೇಳಲಾಗಿದೆ. (ಕರ್ಣಾಟಕ ಕವಿಚರಿತ್ರೆ, ಭಾಗ ೨, ಪುಟ ೨೫೭.)

ಶಾಂತೇಶನ ಸಿದ್ಧಲಿಂಗೇಶ್ವರ ಪುರಾಣ, ಸಿದ್ಧನಂಜೇಶನ ಭಾವರತ್ನಾಭರಣ, ಸೋಮಶೇಖರ ಶಿವಯೋಗಿಯ ಟೀಕೆ ಇವನ್ನು ಸಂಗ್ರಹಿಸಿ ಪ್ರಕಟಿಸುವುದು ವೀರಶೈವ ಸಾಹಿತ್ಯ ಪ್ರೇಮಿಗಳ ಕಾರ್ಯವಾಗಿದೆ. ಇತ್ತೀಚೆಗೆ ಬೆಂಗಳೂರು ಕೈ|| ಶಿವಪ್ಪಶಾಸ್ತ್ರಿಗಳು 'ಸಿದ್ಧಲಿಂಗೇಶ ವಿಜಯ' ಎಂಬ ಗದ್ಯ ಗ್ರಂಥವನ್ನು ಪ್ರಚುರಗೊಳಿಸಿರುತ್ತಾರೆ. ಅದು ಬಹುಮಟ್ಟಿಗೆ ಸಿದ್ಧೇಶ್ವರ ಪುರಾಣದ ಸಾರಾಂಶವಾಗಿದೆ.

ಧಾರವಾಡದಲ್ಲಿರುವ ಮುರುಘಾಮಠದಿಂದ ಪ್ರಕಟವಾಗಿ ಪ್ರೊ|| ಎಸ್. ಎಂ. ವೃಷಭೇಂದ್ರಸ್ವಾಮಿಯವರಿಂದ ವಿರಚಿತವಾಗಿರುವ 'ತೋಂಟದ ಸಿದ್ಧಲಿಂಗ ಶಿವಯೋಗಿಗಳ ಚಾರಿತ್ರ' ಎಂಬ ಗ್ರಂಥವನ್ನೂ, ಡಾ|| ಎಂ. ಸಿದ್ಧಲಿಂಗಯ್ಯನವರ ಪುತ್ರ ಶ್ರೀ ಗುರುಮಠ್ ವಿರಚಿಸಿದ 'ಸಿದ್ಧಲಿಂಗೇಶ ವಿಜಯ' ಎಂಬ ಗ್ರಂಥವನ್ನೂ ಇಲ್ಲಿ ಸ್ಮರಿಸಬಹುದು.

ಕ್ರಿ. ಶ. ೧೬೦೦ ರಲ್ಲಿದ್ದ ಹೇರಂಬಕವಿಯ 'ಸಿದ್ಧಲಿಂಗೇಶ್ವರ ಸಾಂಗತ್ಯ'ದಲ್ಲಿ ಕೆಲವು ಹೊಸ ವಿಚಾರಗಳಿವೆ. ಇಲ್ಲಿ ಸಿದ್ಧಲಿಂಗನು ಜ್ಞಾನಾಂಬೆ-ಮಲ್ಲಿಕಾರ್ಜುನರ ಮಗನಾಗಿದ್ದಾನೆ. ಹುಟ್ಟುವಾಗ ಕೆಲವು ಅದ್ಭುತಗಳನ್ನು ಕವಿ ಹೇಳಿದ್ದಾನೆ. ಬಾಲ ಸಿದ್ಧಲಿಂಗನು ವಿಶ್ವರೂಪು ತೋರಿದಂತೆ ಹೇಳಿದೆ. ಎಡೆಯೂರಿನಲ್ಲಿ ಚಿಟ್ಟಗದೇವರು ಮಠ ಕಟ್ಟಿಸಿದ ವಿಷಯವನ್ನು ಸಾಂಗತ್ಯದಲ್ಲಿ ಹೇಳಲಾಗಿದೆ. ಮಿಕ್ಕ ವಿಷಯಗಳಲ್ಲಿ ಪುರಾಣ-ಸಾಂಗತ್ಯ ಸಹಕರಿಸಿವೆ. ಐತಿಹಾಸಿಕ ದೃಷ್ಟಿಯಿಂದ ಸಾಂಗತ್ಯ ಗಮನಾರ್ಹವಾಗಿದೆ. ಕಾಲದ ದೃಷ್ಟಿಯಿಂದ ಸಾಂಗತ್ಯ ಪುರಾಣಗಳಿಗಿಂತ ಈಚಿನದು.

ಷಟ್ಸ್ಥಲ ಜ್ಞಾನ ಸಾರಾಮೃತ

ಭಗವಾನ್ ಸಿದ್ಧಲಿಂಗೇಶ್ವರರು 'ಷಟ್ಸ್ಥಲಜ್ಞಾನ ಸಾರಾಮೃತ' ಗ್ರಂಥವನ್ನು ಬರೆದಿದ್ದಾರೆಂಬ ಮೊದಲೇ ಹೇಳಿದೆ. ಇದು ೭೦೧ ವ... ಗಳಿಂದಲೂ ಹಲವಾರು ಪ್ರಮಾಣಗಳಿಂದಲೂ ಕೂಡಿದೆ. ಇದರಲ್ಲಿ ಕೆ... ಬೆಡಗಿನ ವಚನಗಳು ಇವೆ. ಈ ಬೆಡಗಿನ ವಚನಗಳು ವಚನಕಾರರ ಪ್ರತಿಭ... ನಿದರ್ಶನವೆನಿಸಿವೆ. ಈ ಗ್ರಂಥದ ಒಂದು ವಚನದಲ್ಲಿ 'ಮಂಗಳವಾಡದ... ಗಿರ್ದ ಬಸವಾದಿ ಪ್ರಮಥರ್ಗೆ' ಎಂದು ಹೇಳುವಲ್ಲಿ, ಚಾಲುಕ್ಯ ರಾಜಧ... ಯಾದ ಕಲ್ಯಾಣ ಪಟ್ಟಣವನ್ನು ಕಾಲಚುರ್ಯರ ರಾಜಕೀಯ ಕೇಂದ್ರವೆ... 'ಮಂಗಳವಾಡ' ಎಂದು ಹೇಳಿದೆ. ಈ ಮಂಗಳವಾಡ ಮತ್ತು ಕಲ್ಯಾ... ಪಟ್ಟಣಗಳು ಬೇರೆ ಬೇರೆ ಎಂದು ತಿಳಿಯುವುದು ಅಗತ್ಯ. ಗ್ರಂಥದ ಪ್ರಾರಂಭ... ಸಿದ್ಧಲಿಂಗೇಶ್ವರರು ತಮ್ಮ ಗುರುಪರಂಪರೆಯನ್ನು ಹೀಗೆ ಹೇಳುತ್ತಾರೆ. 'ಅ... ಗಣೇಶ್ವರನ ಶಿಷ್ಯ ಆದಿಗಣೇಶ್ವರ, ಆದಿಗಣೇಶ್ವರನ ಶಿಷ್ಯ ನಿರ್ಮಾಯನೆ... ಗಣೇಶ್ವರ, ನಿರ್ಮಾಯನೆಂಬ ಗಣೇಶ್ವರನ, ಶಿಷ್ಯ ನಿರಂಜನನೆಂಬ ಗಣೇಶ... ನಿರಂಜನನೆಂಬ ಗಣೇಶ್ವರನ ಶಿಷ್ಯ ಜ್ಞಾನಾನಂದ ಗಣೇಶ್ವರ, ಜ್ಞಾನಾನ... ಗಣೇಶ್ವರನೆಂಬ ಶಿಷ್ಯ ಆತ್ಮಗಣೇಶ್ವರ, ಆತ್ಮಗಣೇಶ್ವರನ ಶಿಷ್ಯ ಅಧ್ಯಾ... ಗಣೇಶ್ವರ, ಅಧ್ಯಾತ್ಮ ಗಣೇಶ್ವರನ ಶಿಷ್ಯ ರುದ್ರನೆಂಬ ಗಣೇಶ್ವರ, ರುದ್ರನೆ... ಗಣೇಶ್ವರನ ಶಿಷ್ಯ ಬಸವ ಪ್ರಭುದೇವರು, ಬಸವ ಪ್ರಭುದೇವರ ಶಿಷ್ಯ ಆದಿಲಿ... ದೇವರು, ಆದಿಲಿಂಗದೇವರ ಶಿಷ್ಯ ಚೆನ್ನವೀರೇಶ್ವರ ದೇವರು, ಚೆನ್ನವೀರೇಶ್ವ... ದೇವರ ಶಿಷ್ಯ ಹರದನಹಳ್ಳಿಯ ಗೋಸಲದೇವರು, ಹರದನಹಳ್ಳಿಯ ಗೋಸಲ... ದೇವರ ಶಿಷ್ಯ ಶಂಕರದೇವರು, ಶಂಕರದೇವರ ಶಿಷ್ಯರು ಚೆನ್ನಬಸವೇಶ್ವರದೇವರು... ಚೆನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿ... ನಾನಯ್ಯ........" ಎಂದು ಹೇಳುವಲ್ಲಿ ಸಿದ್ಧಲಿಂಗೇಶ್ವರರು ತಮ್ಮ ಗು... ಪರಂಪರೆಯನ್ನು ಹೇಳಿದ್ದಾರೆ. ನಿರಂಜನ ವಂಶರತ್ನಾಕರದಲ್ಲಿ ಬಂದಿರುವ... ಗುರುಪರಂಪರೆಗೂ, ಶ್ರೀ ಸಿದ್ಧಲಿಂಗೇಶ್ವರ ವಚನಗಳಲ್ಲಿ ಬಂದಿರುವ ಈ ಪರಂಪ... ರೆಗೂ ವ್ಯತ್ಯಾಸ ಇಲ್ಲವೆಂಬುದು ಇಲ್ಲಿ ಗಮನಾರ್ಹ. ಆದರೆ ಶ್ರೀ ಸಿದ್ಧಲಿಂಗೇ... ಶ್ವರರು, ಅಲ್ಲಮಪ್ರಭು, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ ಎಂಬ ಮ... ಮಂದಿ ಆದಿಮ ಗುರುಗಳ ಹೆಸರನ್ನು ತಮ್ಮ ಗುರುಪರಂಪರೆಯಲ್ಲಿ ಸ್ಮರಿ...

ವುದಕ್ಕೆ ಕಾರಣವೇನೆಂಬುದು ತಿಳಿಯದು. ಇದರಲ್ಲಿ 'ಗೋಸಲದೇವರು' ಎಂದಿರುವುದೇ ಗೋಸಲ ಸಿದ್ಧೇಶ್ವರರ ಹೆಸರು. 'ನಿರ್ಮಾಯ ಗಣೇಶ್ವರ' ಎಂದಿರುವುದೇ ಶ್ರೀ ಮಾದೇಶ್ವರರ ಹೆಸರು—ಎಂಬುದನ್ನು ನಾವಿಲ್ಲಿ ಸ್ಮರಿಸಿ ಕೊಳ್ಳುವುದು ಅಗತ್ಯ.

ಶ್ರೀ ಸಿದ್ಧಲಿಂಗೇಶ್ವರರು "ಚಿನ್ನದಿಂದಾದ (ಭಂಗಾರ) ಒಡವೆ, ಚಿನ್ನದ ರೂಪಲ್ಲದೆ ಮತ್ತೊಂದು ರೂಪಾಗಬಲ್ಲುದೆ ಹೇಳಾ ? ಲಿಂಗಮುಖದಿಂದ ಉದಯ ವಾದ ಶರಣರು ಲಿಂಗರೂಪವಲ್ಲದೆ ಮತ್ತೊಂದು ರೂಪವೆಂದೆನ್ನಬಹುದೆ, ಎನ್ನ ಲಾಗದು ನೋಡಾ ? ಶಿವನ ವಂಶವಾದ ಶರಣರಿಗೆ ಮಲಿನಭಾವವ ಕಲ್ಪಿಸುವ ಮಹಾಪಾತಕರಿಗೆ ಭವಭಾರ ತಪ್ಪದು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ" ಎಂದು ಹೇಳುವಲ್ಲಿ, ವೀರಶೈವರು ಶಿವಾತ್ಮ ಭಾವದಿಂದ; ಶಿವಾದ್ವೈತ ಮಾರ್ಗದಿಂದ ತಮ್ಮ ಜೀವನವನ್ನು, ತಮ್ಮ ಭಾವನೆಗಳನ್ನು ಅಳವಡಿಸಿಕೊಳ್ಳ ಬೇಕೆಂದು ಉಪದೇಶಿಸಿರುತ್ತಾರೆ. ಆಚಾರ್ಯರೇ ಬೇರೆ, ಪ್ರಮಥರೇ ಬೇರೆ ಎಂದು ವಾದಮಾಡುವ ಜನರು ಭಗವಾನರ ಈ ವಿಮಲಾರ್ಥವನ್ನು ಅರಿತು ಅರಗಿಸಿಕೊಳ್ಳುವುದು ಒಳ್ಳೆಯದು. 'ಮಿಸುನಿತೊಡವೆನಿಸಿ ಬಹು ವೆಸರು ಪಳೆ ದಂತೆ' ಎಂಬ ಶ್ರೀ ನಿಜಗುಣರ ವಾಕ್ಯ ಕೂಡ ಇಲ್ಲಿ ನಮಗೆ ಸ್ಮರಣಾರ್ಹ ವಾಗಿದೆ.

ಶ್ರೀ ಸಿದ್ಧಲಿಂಗೇಶ್ವರ ವಚನಗಳಲ್ಲಿ "ಚಿನ್ಮಾದವೇ ಬಸವಣ್ಣ, ಚಿನ್ಮಾದ ರೂಪವೇ ಜಂಗಮ, ಚಿದ್ಬಿಂದು ಸ್ವರೂಪವೇ ಲಿಂಗ, ಚಿತ್ಕಲಾಸ್ವರೂಪವೇ ಭಕ್ತರು, ಶಿವನಿಗೂ ಭಕ್ತರಿಗೂ ಭಿನ್ನವುಂಟೆ ? ಶರಣನೇ ಸಾಕ್ಷಾತ್ ಶಿವ, ಪುರಾತನರ ಮಹಾವಾಕ್ಯವೇ ಪ್ರಮಾಣ, ಅಂಗಲಿಂಗ ಸಂಬಂಧಿಗಳಿಗೆ ಪರಮ ವೀರಶೈವಾಗಮವೇ ಪ್ರಮಾಣ" ಇತ್ಯಾದಿ ಅಣಿಮುತ್ತುಗಳಂತಹ ಉಪದೇಶ ವಾಕ್ಯಗಳು ಬಂದಿವೆ. ಇವು ವೀರಶೈವಧರ್ಮ ಮತ್ತು ದರ್ಶನವನ್ನು ಬಲ್ಲವರಿಗೆ ಕರ್ಣರಸಾಯನವೆನಿಸುತ್ತವೆ. ಹಾಗೂ ಶಿವಶರಣರ ಅನುಭವಾ ಮೃತವೆನಿಸುತ್ತವೆ.

ಶ್ರೀ ಸಿದ್ಧಲಿಂಗೇಶ್ವರ ವಚನಗಳಲ್ಲಿ ನಂದಿ, ಭೃಂಗಿ, ವೀರಭದ್ರ, ದಾರುಕ, ರೇಣುಕ, ಶಂಖಕರ್ಣ, ಗೋಕರ್ಣ, ಏಕಾಕ್ಷರ, ತ್ರ್ಯಕ್ಷರ, ಪಂಚಾಕ್ಷರ,

ಪಂಚಮುಖ, ರೇವಣಸಿದ್ಧ, ಬಸವೇಶ್ವರ ಮೊದಲಾದ ಪ್ರಾಚೀನ ಪ್ರ
ಅರ್ವಾಚೀನ ಪ್ರಮುಖರ ಹೆಸರುಗಳು ನಿರೂಪಿತವಾಗಿರುವುದರಿಂದ ಇವ
ಧರ್ಮ ಮತ್ತು ವೀರಶೈವ ಮತಚರಿತೆ ಹಾಗೂ ಶಿವಾಗಮಗಳ ವಿಷ
ಪರಿಚಯವಿತ್ತೆಂದು ನಾವು ತಿಳಿಯಬಹುದು.

ಶ್ರೀ ಸಿದ್ಧಲಿಂಗೇಶ್ವರರು ತಮ್ಮ ವಚನಗಳಿಗೆ ಪ್ರಮಾಣವಾಗಿ ಪ್ರಾ
ವೇದಶಾಸ್ತ್ರ ಪುರಾಣಗಳ ಆಧಾರವನ್ನು ಕೊಟ್ಟಿರುವುದು, ಇವರಿಗೆ ಪ್ರಾ
ವೇದಾಗಮ ಶಾಸ್ತ್ರ ಸಾಹಿತ್ಯದಲ್ಲಿ ಹೆಚ್ಚಿನ ಪರಿಚಯವಿತ್ತೆಂಬುದಕ್ಕೆ ಸಾ
ವಾಗಿದೆ. ಇದು ಇವರ ತುಂಬುಪಾಂಡಿತ್ಯದ ಹಿರಿಯ ಗುರುತಾಗಿದೆ.

ಶ್ರೀ ಸಿದ್ಧಲಿಂಗೇಶ್ವರ, ಶ್ರೀ ಘನಲಿಂಗಿದೇವ, ಸ್ವತಂತ್ರ ಸಿದ್ಧಲಿಂ
ಮೊದಲಾದ ಮಧ್ಯಕಾಲೀನರ ವಚನಗಳಿಗೂ, ಬಸವೇಶ್ವರ, ಚೆನ್ನಬಸವ
ಪ್ರಭುದೇವ, ದಾಸಿಮಯ್ಯ, ಅಕ್ಕಮಹಾದೇವಿ ಮೊದಲಾದ ಪ್ರಾಚೀನ
ವಚನಗಳಿಗೂ ಇರುವ ವ್ಯತ್ಯಾಸವನ್ನು ನಾವು ಇಲ್ಲಿ ಅರಿಯುವುದು
ಹಿಂದಿನವರ ವಚನಗಳು ಕೇವಲ ಸಂಗ್ರಹವಾಗಿರುತ್ತವೆ. ಶೈಲಿಯಲ್ಲಿ
ವಿಶಿಷ್ಟವಾದ ಮಾಧುರ್ಯದಿಂದ ಕೂಡಿರುತ್ತವೆ. ಕ್ರಾಂತಿಯ ಕಿಡಿ
ಝುಳಪಿಸುತ್ತವೆ. ಆದರೆ ಮಧ್ಯಕಾಲೀನರಾದ ತೋಂಟದ ಸಿದ್ಧಲಿಂಗೇ
ಮೊದಲಾದವರ ವಚನಗಳು ಆದ್ಯರ ವಚನಗಳಿಗೆ ವ್ಯಾಖ್ಯಾನದಂತಿದೆ.
ವಾಗಿವೆ, ಶಾಸ್ತ್ರಾಧಾರಗಳಿಂದ ತುಂಬಿ ತುಳುಕುತ್ತಿವೆ.

ಗುಬ್ಬಿ ಮಲ್ಲಣಾಚಾರ್ಯರು, ಕಲ್ಲುಮಠದ ಪ್ರಭುದೇವರು ಇದೇ ಪ
ಸೇರಿದವರಾಗಿದ್ದಾರೆ. ವೀರಶೈವ ಸಿದ್ಧಾಂತ ಬೋಧಕಗಳಾದ ೭೦೧ ದಿವ್ಯ
ಗಳಿಂದ, ಹಲವು ಶಾಸ್ತ್ರಪ್ರಮಾಣಗಳಿಂದ ಕಂಗೊಳಿಸುವ ಈ 'ಷಟ್ಸ್ಥಲ
ಸಾರಾಮೃತವು' ವೀರಶೈವರಿಗೆ ಒಂದು ಪ್ರಮಾಣವಾದ ಗ್ರಂಥವೆನ್ನ

"ನಿರವಯ, ನಿರಾಮಯ, ನಿರಾಕುಳ, ನಿರ್ದ್ವಂದ್ವ, ನಿರ್ಮಳ
ಸ್ವರೂಪ, ನಿರ್ಭಾವ ನಿಃಪುರುಷ, ನಿರಂಜನ, ನಿರಾಕಾರ, ನಿರಾವರಣ
ಪಮ, ನಿರ್ಗುಣ, ನಿರಾಧಾರ, ನಿರಾಲಂಬ, ಸರ್ವಾಧಾರ, ಸದಾಶಿವ
ತಿಷ್ಠದ್ದಶಾಂಗುಲ, ನಿತ್ಯ, ನಿಶ್ಚಿಂತ, ನಿರ್ಮಾಯ, ನಿರಾಳಕಂ, ಹರ
ಶಿವಶಿವಾ, ಜಯಜಯ ಜಯತು, ಶರಣ ಕರುಣಾಕರ, ತ್ರಾಹಿಮಾಂ

ವತ್ಸಲ, ಮತ್‌ಪ್ರಾಣನಾಥ, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ" ಎಂಬ ವಚನದಿಂದ ಪ್ರಾರಂಭವಾಗಿ "ಭಕ್ತಿಸ್ಥಲ ಮಾಹೇಶ್ವರ ಸ್ಥಲದಲ್ಲಿ ಅಡಗಿ, ಮಾಹೇಶ್ವರ ಸ್ಥಲ ಪ್ರಸಾದಿಸ್ಥಲದಲ್ಲಿ ಅಡಗಿ, ಪ್ರಸಾದಿಸ್ಥಳ ಪ್ರಾಣ ಲಿಂಗಿಸ್ಥಲದೊಳಗಡಗಿ, ಪ್ರಾಣಲಿಂಗಿಸ್ಥಲ ಶರಣ ಸ್ಥಲದೊಳಗಡಗಿ, ಶರಣಸ್ಥಲ ಐಕ್ಯಸ್ಥಲದಲ್ಲಿಯೇ ಅಡಗಿ, ಇಂತೀಷಡಂಗ ಯೋಗ ಸಮರಸನಾಗಿ, ಷಡುಸ್ಥಲವ ಮೀರಿ ನಿರವಯ ಸ್ಥಲವನ್ನೈದಿ, ಆ ನಿರವಯಸ್ಥಲ ನಿರಾಳದಲ್ಲೇ ಅಡಗಿ, ಆ ನಿರಾಳ ನಿತ್ಯ ನಿರಂಜನ ಪರವಸ್ತು ತಾನಾಯಿತ್ತಾಗಿ ಕ್ರಿಯಾನಿಃಪತಿ, ಜ್ಞಾನ ನಿಃಪತಿ, ಭಾವನಿಃಪತಿ, ಮಾಡುವ ಕ್ರಿಯೆಗಳೆಲ್ಲಾ ನಿಃಪತಿಯಾಗಿ ಅರಿವ ಅರುಹೆಲ್ಲಾ ಅಡಗಿ ಭಾವಿಸುವ ಭಾವವೆಲ್ಲಾ ನಿರ್ಭಾವವಾಗಿ, ನಿರ್ಲೇಪ ನಿರಂಜನವಸ್ತು ತಾನೇತಾನಲ್ಲದೆ ಧ್ಯಾನಿಸಲ್ಕೆ ಏನೂ ಇಲ್ಲ, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭು ತಾನೇ ಷಡುಸ್ಥಲ ಜ್ಞಾನಸಾರಾಯ ಸ್ವರೂಪವೆಂದು ಹೇಳಲ್ಪಟ್ಟನು"

ಎಂಬ ವಚನದೊಡನೆ ಮುಕ್ತಾಯವಾಗುತ್ತದೆ.

ಶ್ರೀ ಸಿದ್ಧಲಿಂಗೇಶ್ವರನ ಉಪದೇಶಾಮೃತದಿಂದ ಕೂಡಿದ ಈ ವಚನಗಳನ್ನು 'ಸಿದ್ಧೇಶ್ವರ ವಚನ' ಎಂದು ರೂಢಿಯಲ್ಲಿ ಕರೆಯಲಾಗುತ್ತದೆ. ಆದರೆ ಅದರ ನಿಜವಾದ ಹೆಸರು 'ಷಟ್ಸ್ಥಲಜ್ಞಾನ ಸಾರಾಮೃತ' ಎಂದು.

ಸಿದ್ಧಲಿಂಗೇಶ್ವರರ ಕ್ಷೇತ್ರಗಳು

೧. ಹರದನಹಳ್ಳಿ :

ಇದು ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿನಲ್ಲಿದೆ (ನಗರ ಮತ್ತು ಸತ್ಯಮಂಗಲದ ಮಾರ್ಗದಲ್ಲಿ). ಅಲ್ಲಿ ಶ್ರೀ ಸಿದ್ಧಲಿಂಗೇಶ್ವರನ ಮಠ ಇಂದಿಗೂ ಅಸ್ತಿತ್ವದಲ್ಲಿದೆ. ಜನ ಅದನ್ನು ಕುರಿತು ಹಲವು ದಂತ ಕತೆಗಳನ್ನು ಹೇಳುತ್ತಾರೆ. ಅಲ್ಲಿ ದಿವ್ಯಲಿಂಗೇಶ್ವರ ದೇವಾಲಯವಿದೆ.

೨. ಎಡೆಯೂರು :

ಇದು ತುಮಕೂರು ಜಿಲ್ಲಾ ಕುಣಿಗಲು ತಾಲ್ಲೂಕಿನಲ್ಲಿದೆ (ಬೆಂಗಳೂರು ಮೈಸೂರು ಮಾರ್ಗ ಮಧ್ಯದಲ್ಲಿದೆ.) ಇಲ್ಲಿ ಸಿದ್ಧಲಿಂಗೇಶ್ವರರ ಶಿವಯೋಗ

ಸಮಾಧಿಯಿದೆ. ದಿವ್ಯವಾದ ದೇವಾಲಯವನ್ನು ಕಟ್ಟಿದ್ದಾರೆ. ವರ್ಷಕ್ಕೊ
ಜಾತ್ರೆಯಾಗುತ್ತದೆ. ದಿನವೂ ಭಕ್ತರು ಬಂದು ಹೋಗುತ್ತಾರೆ. ಜಾಗೃತ ಸ
ವೆನಿಸಿದೆ. ದೆವ್ವ, ಪೀಡೆ, ಪಿಶಾಚ ಮೊದಲಾದುವುಗಳಿಗೆ ಈ ಕ್ಷೇತ್ರವು
ಯನ್ನು ಉಂಟುಮಾಡುತ್ತದೆ. ಸುಕ್ಷೇತ್ರ ಮಹಾತ್ಮ್ಯವನ್ನು ಇಲ್ಲಿ
ಚೆನ್ನಾಗಿ ಮನಗಾಣಬಹುದು.

೩. ಕಗ್ಗೆರೆ :—

ಇದು ಎಡೆಯೂರಿಗೆ ನಾಲ್ಕಾರು ಮೈಲಿ ದೂರದಲ್ಲಿದೆ. ನಾಗಿಣಿ
ತೀರದ ಹೂದೋಟದಲ್ಲಿದೆ. ಇಲ್ಲಿ ಸಿದ್ಧಲಿಂಗೇಶ್ವರರು ಬಹುಕಾಲ ತ
ಮಾಡಿದರು. ಮೈಮೇಲೆ ಹುತ್ತ ಬಳಿದುದರ ಪರಿವೆಯಿಲ್ಲದೆ ಅವರು ಇಲ್ಲಿ
ಪೂಜೆಯಲ್ಲಿ ನಿರತರಾಗಿದ್ದರೆಂದು ಪುರಾಣದಲ್ಲಿ ಹೇಳಿದೆ. ಇಲ್ಲಿ ಸಿದ್ಧೇಶ್ವ
ಸತ್ತಹಾವನ್ನು ಬದುಕಿಸಿದ ನಿಮಿತ್ತವಾಗಿ, ಅಲ್ಲಿ ಅಂದಿನಿಂದ ಇಂದಿನ
ಹಾವು ಕಚ್ಚಿ ಸತ್ತವರಿಲ್ಲವೆಂದು ಜನ ಹೇಳುತ್ತಿದ್ದಾರೆ. ರಾಘವಾಂಕನು
ವಂತೆ " ನಿಂದ ನೆಲದ ಗುಣ " ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಇಲ್ಲಿ
ಕ್ಕೊಮ್ಮೆ ಜಾತ್ರೆಯಾಗುತ್ತದೆ. ದಿನವೂ ಭಕ್ತರು ಬಂದು ಹೋಗುತ್ತಾರೆ.

೪. ಮಂಗಲ :—

ಇದು ಎಡೆಯೂರು ಕಗ್ಗೆರೆಗಳ ಮಧ್ಯದಲ್ಲಿದೆ. ಇಲ್ಲಿ ಸಿದ್ಧಲಿಂಗೇಶ್ವ
' ಕಲ್ಲುಬಸವನಿಗೆ ಹುಲ್ಲು ಮೇಯಿಸಿದರು ' ಎಂದು ಪುರಾಣದಲ್ಲಿ ಹೇಳಿದೆ.
ಮೇದಕಲ್ಲು ಬಸವನನ್ನು ನಾವು ಇಲ್ಲಿ ಈಗಲೂ ನೋಡಬಹುದು.

೫. ಸಿದ್ಧಗಂಗೆ :—

ಇದು ತುಮಕೂರಿಗೆ ಮೂರು ಮೈಲಿ ದೂರದಲ್ಲಿ ಪೂರ್ವದಿಕ್ಕಿನಲ್ಲಿದೆ
ಗೋಸಲ ಸಿದ್ಧೇಶ್ವರರು ತಮ್ಮ ಪಾದಸ್ಪರ್ಶದಿಂದ ಗಂಗೆಯು ಉದ್ಭವವಾಗು
ಮಾಡಿದ್ದಾರೆ. ಇದು ಸುಕ್ಷೇತ್ರವೆನಿಸಿದೆ. ಸಿದ್ಧೇಶ್ವರರ ಶಿವಸಮಾಧಿ ಇ
ಇದೆ. ಪ್ರತಿವರ್ಷವೂ ಶಿವರಾತ್ರಿಯಲ್ಲಿ ಇಲ್ಲಿಯ ಜಾತ್ರೆ ಪ್ರಸಿದ್ಧ.
ದಾಸೋಹ, ಸಂಸ್ಕೃತ ಕಾಲೇಜು, ಹೈಸ್ಕೂಲು ಮೊದಲಾದವು ಪ್ರಸಿದ್ಧ

೬. ಸಿದ್ಧರ ಬೆಟ್ಟ :—

ಇಲ್ಲಿ ಶ್ರೀ ಶಂಕರಾಚಾರ್ಯ ಸ್ವಾಮಿಗಳ ಶಿವಯೋಗ ಸಮಾಧಿಯಿದೆ. ಹಿರಿಯರಾದ ಗೋಸಲ ಸಿದ್ಧೇಶ್ವರರು ಇಲ್ಲಿ ಬಹುಕಾಲ ತಪಸ್ಸು ಮಾಡಿದುದರಿಂದ ಇದಕ್ಕೆ 'ಸಿದ್ಧೇಶ್ವರ ಬೆಟ್ಟ' ಎಂದು ಹೆಸರಾಗಿದೆ. ಇದು ಜಾಗ್ರತಸ್ಥಾನ ವೆನಿಸಿದೆ. ಇದು ಗಿಡಮೂಲಿಕೆಗಳಿಗೆ ಪ್ರಸಿದ್ಧವಾಗಿದೆ.

೭. ಮಾದೇಶ್ವರ ಬೆಟ್ಟ :—

ಇದು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿದೆ. ಸಿದ್ಧಲಿಂಗೇಶ್ವರರ ಗುರುಗಳಾದ ನಿರ್ಮಾಯ ಗಣೇಶ್ವರ ಹೆಸರಿನ ಮಾದೇಶ್ವರರು ಇಲ್ಲಿ ಸಮಾಧಿಸ್ಥರಾಗಿದ್ದಾರೆ. ಇದು ಪೂರ್ವಘಟ್ಟದ ಮಧ್ಯಪ್ರದೇಶದಲ್ಲಿರುವುದರಿಂದ ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುತ್ತಿದೆ. ಇಲ್ಲಿ ಶಿವರಾತ್ರೆ, ಯುಗಾದಿ, ನವರಾತ್ರೆ ಮತ್ತು ದೀಪಾವಳಿ ಹೀಗೆ ವರ್ಷಕ್ಕೆ ನಾಲ್ಕು ಜಾತ್ರೆಗಳಾಗುತ್ತವೆ.

೮. ತುಮಕೂರು ಸಿದ್ಧಲಿಂಗೇಶ್ವರ :—

ವಿರಕ್ತ ತೋಂಟದಾರ್ಯ ಸಿದ್ಧೇಶ್ವರ ಪುರಾಣದಲ್ಲಿ ಶ್ರೀ ತೋಂಟದಾರ್ಯರು ತುಮಕೂರಿನಲ್ಲಿ ಭಕ್ತರ ಪ್ರಾರ್ಥನೆಯಂತೆ ಬಹುಕಾಲ ಇದ್ದು ಹಲವು ಪವಾಡಗಳನ್ನು ಮೆರೆದಂತೆ ಹೇಳಿದೆ. ತುಮಕೂರಿನಲ್ಲಿ ಇವರು ಶಿವಪೂಜೆ ಮಾಡಿದ ಸ್ಥಳದಲ್ಲಿ 'ಸಿದ್ಧಲಿಂಗೇಶ್ವರ ದೇವಾಲಯ' ಎಂಬ ಒಂದು ಮಂದಿರ ವನ್ನು ಕಟ್ಟಿದ್ದಾರೆ. ಅದು ಸುಕ್ಷೇತ್ರವೆನಿಸಿದೆ. ಅದು ತುಮಕೂರು ಕೋಟೆ ಯಲ್ಲಿದೆ.

೯. ಗುಬ್ಬಿ :—

ಇಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಗುರುಗಳಾದ ಗೋಸಲ ಚೆನ್ನಬಸವೇಶ್ವರರ ಶಿವಯೋಗ ಸಮಾಧಿಯಿದೆ. ಜಾಗ್ರತಸ್ಥಾನ, ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ.

೧೦. ಪ್ರಭುಲಿಂಗನ ಬೆಟ್ಟ :—

ಇಲ್ಲಿ ಸಿದ್ಧಲಿಂಗೇಶ್ವರರ ಗುರುಗಳಾದ ಆದಿಗಣೇಶ್ವರರ ಶಿವಸಮಾಧಿ

ಯಿದೆ. ಇದು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಾವೇರೀ ತೀರದಲ್ಲಿದೆ. ಮಾದೇಶ್ವರರು ಕೆಲವು ಕಾಲವಿದ್ದರು.

೧೧. ಹಲವು ಸುಕ್ಷೇತ್ರಗಳು :--

ಉಳವಿಯ ಚೆನ್ನಬಸವೇಶ್ವರರ ಮಹಾಮನೆ, ಬಸವಾದಿಗಳ ನೆಲೆ ಕಲ್ಯಾಣಪಟ್ಟಣ, ಪ್ರಭುದೇವ ಅಕ್ಕಮಹಾದೇವಿಯರು ಬಯಲಾದ ಶ್ರೀ ಕದಳೀವನ ಇವೆಲ್ಲವೂ ಸಿದ್ಧಲಿಂಗೇಶ್ವರರ ಗುರುವರ್ಗದ ಕ್ಷೇತ್ರಗಳೆನಿಸಿವೆ.

೧೨. ಶ್ರೀ ತೋಂಟದಾರ್ಯರ ಮಠ :—

ಗದಗ ಮತ್ತು ಡಂಬಳಗಳಲ್ಲಿರುವ ಜಗದ್ಗುರು ತೋಂಟದಾರ್ಯರ ಗಳು ಈ ಮಹಾತ್ಮರ ಧರ್ಮಪೀಠವೆನಿಸಿವೆ.

ಹರದನಪುರಿಯಿಂದಲಾಗ ॥ ೪ ॥

ಪಾವನಚರಿತ ಬಿಟ್ಟಿರಲಾರೆನೆಂ ।
ದೋವಿಂದಗೋಸಲಗುರುವು ॥
ಸಾವಿರಫೆನಸೇವಕರ ಕೂಡಿ ಪೊರವಂಟ ।
ಭಾವಜ್ಞನಸಿದ್ಧೇಶನೊಡನೆ ॥ ೫ ॥

ಹರಗಿರಿಯಿಂದ ಸಂಗಡಬಂದುಸಿದ್ದನ ।
ಹರಕೆಯಿಂದೊಗೆದು ಸಂತಸದಿ ॥
ಸ್ಥಿರಜಂಗವ ಪ್ರಥರೂಪತಾಳ್ದ ಜಂಗಮರೆಲ್ಲ ।
ತೆರಳ್ದರುಲಕ್ಷಸಂಖ್ಯೆಯಲಿ ॥ ೬ ॥

ಅ ನು ಕ್ರ ಮ ಣಿ ಕೆ

ಸಿದ್ದಲಿಂಗಶಿವಯೋಗಿಗಳು ಸಹಸ್ರಾರು ವಿರಕ್ತರೊಡನೆ ಭಾರತಭೂಮಿ ಯಲ್ಲಿ ಸಂಚರಿಸಿ ಧರ್ಮೋದ್ಧಾರ ಮಾಡುತ್ತಾ ಪವಾಡವನ್ನು ತೋರಿಸಿದ ತಾಡ ವಾಲೆಯ ಗ್ರಂಥದ ಪ್ರಕಾರ ಈ ರೀತಿಯಿರುತ್ತೆ :—

5. ಆನೆ ಸಿಂಹಗಳು ಮೃತವಾಗಿ ಕಿನ್ನರರಾದದ್ದು ಮಹಿಷನ ವಧೆಗೆ ಶಪ್ತ ನಿಯಮಿಸಿದ್ದು ಶರಣರ ಮನೆಯಲ್ಲಿ ಮಗುವಾಗಿರುವದು.

6. ಮಗುವಿಗೆ ತೊಟ್ಟಲಿಟ್ಟು ಜೋಗುಳ ಹಾಡಿ ರಜೇ ಮಾಡುತ್ತಾನೆ. ಜ್ಞಾನಾಂಗನೆ ನಿದ್ರೆಮಾಡುತ್ತಾ ಕನಸಿನಲ್ಲಿ ಮಗುವಿಗೆ ಘಟಸರ್ಪ ಹಾಸಿಗೆಯಾ ಗಿರುವದ ಕಂಡಳು. ಎಳೆಯ ಸರ್ಪ ಹೆಡೆಯಾಡುತ್ತಾ ಕಾವಲಿದ್ದು ಮಾಯ ವಾಯಿತು. ಬಾಯಿ ತೆಗೆದಾಗ ಕೈಲಾಸದ ವಿಶ್ವರೂಪು ಮುಂತಾದ್ದನ್ನು ತಾಯಿ ಕಂಡಳು.

7. ಚಂದ್ರನುದಯ ಚಂದ್ರನ ಕರೆಯುಲು ಚಂದ್ರನು ಹಸ್ತಕ್ಕೆ ಬಂದುದೂ.

8. ಮನೆಯಲ್ಲಿ ಜಂಗಮಾರ್ಚನೆ ಅಡಿಗೆ ಮನೆಯಲ್ಲಿ ಮಾಸಲ ಮಾಡುವದ ಕಡರಿಂದು ಅಯ್ಯಗಳೆಲ್ಲ ಕೋಪಿಸಿಕೊಳ್ಳಲು, ಮಗನ ಮನೆ ಬಿಟ್ಹೋಗುವನು. ಅಯ್ನಗಳ ಲಿಂಗಗಳಲ್ಲೂ ಮಾಯವಾಗುವದು. ಬಾಲಕ ನನ್ನು ಹುಡುಕಿ ಕರತರುವಲ್ಲಿ ವಿಶ್ವರೂಪ ತೋರಿದ್ದು ಅಯ್ಯಗಳಿಗೆಲ್ಲ ಲಿಂಗಗಳು ಬಂದದ್ದು, ಅಯ್ಯಗಳೆಲ್ಲ ಶ್ರೀ ಸಿದ್ಧಲಿಂಗನ ಪೂಜಿಸಿ ಪ್ರಸಾದವಿಟ್ಟು ಉಳಿದ ಪ್ರಸಾದವನ್ನು ಎಲ್ಲರು ತೆಗೊಂಕೊಳ್ಳುವದು ಮಾಡಿದ ಅಡಿಗೆಯಲ್ಲಿ ಊರವ ರೆಲ್ಲ ವುಂಡು ತೃಪ್ತರಾಗುವದು.

೯. ಪುರುಷ ಮಲೆಯಾಳದಲ್ಲಿ ಬುದ್ಧಿ ಕಲಿಸಿಶಿವ ದೀಕ್ಷೆ ಮಾಡಿದ್ದು.
೧೦. ಸ್ತ್ರೀ ಮಲೆಯಾಳದಲೂ ಶಿವದೀಕ್ಷೆ ಮಾಡಿದ್ದು.
೧೧. ಉಡುಪಿ, ಗೋಕರ್ಣ, ಮುಂತಾದ ಕಡೆ ಸಂಚರಿಸಿ ಆ ಪ್ರಾಂತ್ಯದ ಚಾರುವಾಕರಿಗೆ ಬುದ್ಧಿ ಕಲಿಸಿ ಅರಣ್ಯದಲ್ಲಿ ಗುಂಪು ಕಟ್ಟಿ ಕಳ್ಳತನ ಮಾಡುತ್ತಿದ್ದ. ಇರುಳ ಮುಂತಾದ ಕಳ್ಳರಿಗೆ ಬುದ್ಧಿಕಲಿಸಿ ಶಿವ ದೀಕ್ಷೆ ಮಾಡಿದ್ದು.
೧೨. ದೆಲ್ಲಿಯಲ್ಲಿ ಶೂಲದ ಮರವನ್ನು ಚಿಗರಿಸಿ ಮುಸಲ್ಮಾನ್ ದೊರೆಗೆ ಬುದ್ಧಿ ಕಲಿಸಿದ್ದು.
೧೩. ಹುಟ್ಟು ಕುರುಡಗೆ ಕಣ್ಣು ಬರೆಸಿದ್ದು.
೧೪. ಕುಷ್ಟರೋಗ ಪರಿಹರಿಸಿದ್ದು.
೧೫. ಉಟ್ಟು ಬಂಜೆಗೆ ಮಕ್ಕಳ ಫಲ ಕೊಟ್ಟದ್ದು.
೧೬. ಕಾಶಿಯಲ್ಲಿ ಗಂಗೆಯಲ್ಲಿ ಭಿಕ್ಷ ಪಡೆದಿದ್ದು.
೧೭. ಕೇದಾರೇಶ್ವರ ದರ್ಶನ.
೧೮, ನೇಪಾಳದ ಗೊಲ್ಲನ ಗೋವುಗಳನ್ನು ಹುಲಿಯ ಕಾಟದಿಂದ ಬದುಕಿಸಿದ್ದು.
೧೯. ನೀರುಗಂಟಿಗೆ ತೂಬು ತೋರಿಸಿದ್ದು. ಆತನಿಗೆ ದೀಕ್ಷೆಮಾಡಿದ್ದು
೨೦. ಸತ್ತ ಎಮ್ಮೆ ಕುದುರೆಗಳನ್ನು ಬದುಕಿಸಿದ್ದು.
೨೧. ನವಧಾನ್ಯದ ಮಳೆಯನ್ನು ಕರೆಸಿದ್ದು.
೨೨. ವಿಜಯನಗರದ ಸೋಮವಾರದ ಬಸಮ್ಮನಿಗೆ ಸದ್ಬೋಧೆ ಮಾಡಿ ಪಾದತೀರ್ಥವನ್ನು ಮಾಡಿ ಗಂಗೆಗೆ ಹೆಚ್ಚಿನದೆಂದು ತೂಕಮಾಡಿ ತೋರಿಸಿದ್ದು.
೨೩. ಹಂಪೆ ವಿರುಪಾಕ್ಷೇಶ್ವರ ದರ್ಶನ, ಅಲ್ಲಿದ್ದ ವೀರಣ್ಣ ಒಡೆಯರಿಗೆ ಸದ್ಬೋಧೆಯಿಂದ ಐಕ್ಯಮಾಡಿಕೊಂಡಿದ್ದು,
೨೪. ತುಮಕೂರಿನಲ್ಲಿ ತುಂಬೆ ಹೂವಿನ ಮಳೆ ಸುರಿಸಿದ್ದು.
೨೫. ಕ್ಯಾತಸಂದ್ರದಲ್ಲಿ ಅರೆಬಂಡೆಯಲ್ಲಿ ಪಾದ ಹೂರಿ ಜಂಗಮರ ಪ್ರಾರ್ಥನೆಯಂತೆ ನೀರು ತಂದುದು.

೨೬. ಅದೇ ಜಲದಿಂದ ಮಾಟ ಮಂತ್ರಕ್ಕೆ ಗುರಿಯಾಗಿದ್ದ ವೀರಣ್ಣ
ಸ್ನಾನದಿಂದ ಪವಿತ್ರವಾದದ್ದು.

೨೭. ಗೂಳೂರಿನಲ್ಲಿ ಕದ್ದ ಬದನೇಕಾಯಿ ಬೇಯದಂತೆ ಮಾಡಿದ್ದು.

೨೮. ಕಲ್ಯಾಣ ಪುರದ ಕಲ್ಲುಬಸವನಿಗೆ ಉಣಿಸಿದ್ದು.

೨೯. ಕುಣಿಗಲ್ಲಿನ ಕುಟಿಲ ಮಂತ್ರದ ಲಿಂಗಣ್ಣ ಹೊದೆಯನಿಗೆ
ಕಲಿಸಿದ್ದು.

೩೦. ಹುಲಿಯೂರ್ ದುರ್ಗದಲ್ಲಿ ಸತ್ತವರನ್ನು ಬದುಕಿಸಿದ್ದು.

೩೧. ಹೊಳಲಗುಂದದ ಮಾಯೆಯ ಭಿಕ್ಷೆಯನ್ನು ಕೈಕೊಂಡಿದ್ದು.

೩೨. ಕಗ್ಗರೆಯ ಹೂವಿನ ತೋಟದಲ್ಲಿ ತಪಸ್ಸಿನಲ್ಲಿದ್ದಾಗ
ಬೆಳೆದಿದ್ದು.

೩೩. ತುಂಬಿ ಹರಿಯುತ್ತಿದ್ದ ನಾಗಿನಿ ನದಿ ದಾರಿಬಿಟ್ಟದ್ದು.

೩೪. ಯೆಡೆಯೂರಿನಲ್ಲಿ ಸಿದ್ಧರಾಮಯ್ಯನ ಮನೆಯಲ್ಲಿ
ಸಾಪುರಸ್ಯದಲ್ಲಿ ಮೂರು ದಿನ ಅಚಲ ಬಿದ್ದದ್ದು.

೩೫. ಪಟ್ಟ ಶಿಷ್ಯರಿಗೆ ಸದ್ಬೋಧೆ ಮಾಡುತ್ತಿದ್ದಾಗ ಗವಿ
ಸಿಡಿಲುಬಂದದು ಪ್ರದಕ್ಷಿಣೆ ಮಾಡಿದ್ದು.

ಇನ್ನೂ ಮುಂತಾದ ಅನೇಕ ಮಹತ್ವಗಳನ್ನು ತೋರಿಸಿರುತ್ತಾರೆ.

---

೭೭೦ ಗಂಗಾಧೀಶ್ವರರ ನೇಮುಕ

1. ಲೋಚನ ಬುಡಕಟ್ಟಿನ ಗುರುಬಸಪ್ಪನವರಿಗೆ ಸೇರಿದ ಚರಮೂರ್ತಿಗಳು 65
2. ಬರಹದ ಬುಡಕಟ್ಟಿನ ಚೆನ್ನವೀರಪ್ಪನವರ ಬಗೆ ಚರಮೂರ್ತಿಗಳು 40
3. ಮೂರುಸಾವಿರದ ಬುಡಕಟ್ಟಿನ ಚೆನ್ನವೀರಪ್ಪನವರೂ ಸಿದ್ದರಾಮಪ್ಪನವರ ಬಗೆ ಚರಮೂರ್ತಿಗಳು 27
4. ಸುಲೇಗೋವಿ ಬುಡಕಟ್ಟಿನ ಸಂಗನಬಸಪ್ಪನವರ ಬಗೆ ಚ॥ಮೂ॥ 25
5. ಕಡಕಡ ಬುಡಕಟ್ಟಿನ ಗುರು: ಸಂಜಪ್ಪನವರ ಬಗೆ ಚ॥ಮೂ॥ 25
6, ಕಸೂತಿ ಬುಡಕಟ್ಟಿನ ಅದೃಶಪ್ಪನವರ ಬಗೆ ಚ॥ಮೂ॥ 15
7, ಅರುಣಾಚಲದ ಬುಡಕಟ್ಟಿನ ಸಿದ್ದಪ್ಪನವರ ಬಗೆ ಚ॥ಮೂ॥ 20
8. ಮುತ್ತಿನಕಂತೆ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ ಚ॥ಮೂ॥ 15
9 ಎಂಟತ್ತಿನ ಬುಡಕಟ್ಟಿಗೆ ಸೇರಿದ ಸಿದ್ದಲಿಂಗಪ್ಪನವರ ಬಗೆ ಚ॥ಮೂ॥20
10 ನೈಗಂಟನ ಬುಡಕಟ್ಟಿನ ಚಂದ್ರಶೇಖರಪ್ಪನವರ ಬಗೆ ಚ॥ಮೂ॥ 25
11 ಜಲಕಂತಗ ಬುಡಕಟ್ಟಿನ ಲಲಾಟಪ್ಪನವರ ಬಗೆ ಚ॥ಮೂ॥ 15
12 ಕೊಡಲಿಕಲ್ಲಿ ಬುಡಕಟ್ಟಿನ ಸೋಮಪ್ಪನವರ ಬಗೆ ಚ॥ಮೂ॥ 10
13 ಬಸವಾಪಟ್ಟಣದ ಪಚ್ಚೆಕಂತೆ ಬುಡಕಟ್ಟಿನ ಶಿವಲಿಂಗಪ್ಪನವರ ಬಗೆ ಚ॥ಮೂ॥ 10
14 ಕಲ್ಯಾಣ ಬುಡಕಟ್ಟಿನ ಸಿದ್ದಮಲ್ಲಪ್ಪನವರ ಬಗೆ ಚ॥ಮೂ॥ 15
15 ಸೋಲೂರು ಬುಡಕಟ್ಟಿನ ಮ.ಹಂತಪ್ಪನವರ ಬಗೆ ಚ॥ಮೂ॥ 30
16 ಒಪ್ಪತಿನ ಬುಡಕಟ್ಟಿನ ಚರಮೂರ್ತಿಗಳ ಬಗೆ ಗುರಸಂಗಪ್ಪನವರ ಬಗೆ ಚ॥ಮೂ॥ 30

17 ಬೆಳ್ಳಿ ಕಣ್ಣಿನ ಬುಡಕಟ್ಟಿನ ಚೆನ್ನಬಸಪ್ಪನವರ ಬಗೆ ಚ||ಮೂ||
18 ಅಂಡರಂಗಿ ಬುಡಕಟ್ಟಿನ ಪ್ರಭೋಪ್ಪನವರ ಬಗೆ ಚ||ಮೂ||
19 ಕೋಟಿ ಕಲ್ಲು ಬುಡಕಟ್ಟಿನ ನಂಜುಂಡಪ್ಪನವರ ಬಗೆ
20 ಕಡ್ಲಿ ಕಡ್ಡಿನ ಬುಡಕಟ್ಟಿನ ಗುರುಸಿದ್ಧಪ್ಪನವರ ಬಗೆ
21 ಭೂಗಾಳಿ ಬುಡಕಟ್ಟಿನ ಸಣ್ಣಮುತ್ತಪ್ಪನವರ ಬಗೆ
22 ಕಾಶಿಕಾವಿ ಬುಡಕಟ್ಟಿನ ಶಿವಲಿಂಗಪ್ಪನವರ ಬಗೆ
23 ಪಾಚ್ಯಾದ ಬಸವಲಿಂಗಪ್ಪನವರು ಚೆನ್ನವೀರಪ್ಪನವರ ಬಗೆ
24 ದೊರದುರ್ಗದ ಬುಡಕಟ್ಟಿನ ಗುರುಶಾಂತಪ್ಪನವರ ಬಗೆ
25 ಮಕ್ಕಳ ಬುಡಕಟ್ಟಿನ ಮರುಗಪ್ಪನವರ ಬಗೆ
26 ನೋಡ ಬುಡಕಟ್ಟಿನ ಶಾಂತವೀರಪ್ಪನವರ ಬಗೆ
27 ಜೇವರಿಗೆ ಬುಡಕಟ್ಟಿನ ಮಹದೇವಪ್ಪನವರ ಬಗೆ
28 ವಿಜಯಪುರದ ಬುಡಕಟ್ಟಿನ ಮಹಾಲಿಂಗಪ್ಪನವರ ಬಗೆ
29 ಮಳೆಖಿಗೆ ಬುಡಕಟ್ಟಿನ ಗುರುಲಿಂಗಪ್ಪನವರ ಬಗೆ
30 ಸಾವಳಾಗಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ
31 ಕಲ್ಲುಬುರಗಿ ಬುಡಕಟ್ಟಿನ ರೇವಣಿ ಸಿದ್ದಪ್ಪನವರ ಬಗೆ
32 ಗಂಗಾಚಲದ ಬುಡಕಟ್ಟಿನ ಚೆರಲಿಂಗಪ್ಪನವರ ಬಗೆ
33 ಗಗ್ಗರಿಕಟ್ಟ ಬುಡಕಟ್ಟಿನ ನೀಲಕಂಠಪ್ಪನವರ ಬಗೆ
34 ಬಿಸಿ ಅಗ್ಗಣಿ ಬುಡಕಟ್ಟಿನ ಚೆನ್ನಬಸಪ್ಪನವರ ಬಗೆ
35 ಬಾಂಡೇದ ಬುಡಕಟ್ಟಿನ ಸೋಮಚನ್ನಬಸಪ್ಪನವರ ಬಗೆ
36 ಲೀಲಾಕ್ಯದ ಬುಡಕಟ್ಟಿನ ಮಡಿವಾಳಪ್ಪನವರ ಬಗೆ
37 ಶಿವಪೂಜಾ ಬುಡಕಟ್ಟಿನ ಮುದ್ದುವೀರಪ್ಪನವರ ಬಗೆ
38 ಕೊಡೆ ಬುಡಕಟ್ಟಿನ ಮರಳುಸಿದ್ಧಪ್ಪನವರ ಬಗೆ
39 ಬೊಾಳ ಬುಡಕಟ್ಟಿನ ತೋಂಟಪ್ಪನವರ ಬಗೆ
40 ಕಾದಿಕಂತೆ ಬುಡಕಟ್ಟಿನ ಮಹಂತಪ್ಪನವರ ಬಗೆ
41 ವ್ಯಾಕರಣದ ಬುಡಕಟ್ಟಿನ ಮಲ್ಲಿಕಾರ್ಜುನಪ್ಪನವರ ಬಗೆ
42 ಟೀಕಿನ ಬುಡಕಟ್ಟಿನ ಕರಿಬಸಪ್ಪನವರ ಬಗೆ

43	ಉದ್ದಣ್ಣಿ ಗುರುಶಾಂತಪ್ಪನವರ ಬಗೆ	10
44	ಬಳ್ಳಾರಿ ಬುಡುಕಟ್ಟಿನ ಶಾಂತವೀರಪ್ಪನವರ ಬಗೆ	15
45	ಚಿತ್ತಾರಿ ಬುಡಕಟ್ಟಿನ ಗುರುಲಿಂಗಪ್ಪನವರ ಬಗೆ	10
46	ಆದವಾನಿ ಬುಡಕಟ್ಟಿನ ನೀಲಕಂಠಪ್ಪನವರ ಬಗೆ	7
47	ಕಡಲೆ ಬರಹದ ಶಿವಬಸಪ್ಪನವರ ಬಗೆ	5
48	ತಾಡವಾಲೆ ಬುಡಕಟ್ಟಿನ ಅನ್ನದಾನಪ್ಪನವರ ಬಗೆ	25
49	ಗದುಗಿದ ಬುಡಕಟ್ಟಿನ ಚರಮೂರ್ತಿಗಳು ಮಾನಿ ಸಿದ್ದಲಿಂಗಪ್ಪನವರ ಬಗೆ ಇವರು ಬಟ್ಟಲು ಕೊಟ್ಟ ವಿರಕ್ತರು	103
50	ಕೆಂಪಿನ ಬುಡಕಟ್ಟಿನ ಸಿದ್ದಲಿಂಗಪ್ಪನವರ, ಶಿವಲಿಂಗಪ್ಪನವರ ಬಗೆ	2
51	ರುದ್ರಾಕ್ಷಿ ಬುಡಕಟ್ಟಿನ ಚನ್ನರ್ಗಂಜಯ್ಯನವರ ಬಗೆ	8
52	ಹುಕ್ಕೇರಿ ಬುಡಕಟ್ಟಿನ ಗುರುಸಿದ್ದಪ್ಪನವರ ಬಗೆ	8
53	ಉಪ್ಪಿನಜಿಟ್ಟಗೇರಿ ಬಸವಲಿಂಗಪ್ಪನವರ ಬಗೆ	3
54	ಗುಳೇದ ಗುಡ್ಡದ ಗದ್ದಕಟ್ಟಿನ ಬುಡಕಟ್ಟಿನ ಚನ್ನಬಸಪ್ಪನವರ ಬಗೆ	5
55	ದಾವಳಿ ಬುಡಕಟ್ಟಿನ ಬಸವಲಿಂಗಪ್ಪನವರ ಬಗೆ	5
56	ಅಪ್ಪಯ ಪುರಾಣದ ಬುಡಕಟ್ಟಿನಶಿವಲಿಂಗಪ್ಪ ನವರ ಬಗೆ	6
57	ಶಿವಮೊಹಿ ಬುಡಕಟ್ಟಿನ ಸಿದ್ದರಾಮಪ್ಪನವರ ಬಗೆ	6
58	ಪಚ್ಚಿ ಬುಡಕಟ್ಟಿನ ಮಹಂತಪ್ಪನವರ ಬಗೆ	5
59	ಗುಷ್ಠಿವ ಬುಡಕಟ್ಟಿನ ಮಹಂತದೇವರ ಬಗೆ	8
	ಜಮಖಂಡಿ ಬುಡಕಟ್ಟಿನ ಬಸವ ಪ್ರಭಪ್ಪನವರ ಬಗೆ	5
	ಪ್ರಭುಪಾಕಿನ ಕೊಂಡಕೊಳ್ಳದ ಶಾಂತಲಿಂಗಪ್ಪನವರ ಬಗೆ	4
	ಗೋಕಾಕಿ ಬುಡಕಟ್ಟಿನ ಸಿದ್ದಲಿಂಗಪ್ಪನವರ ಬಗೆ	6
	ಗಳಿಗೆ ಬುಡಕಟ್ಟಿನ ಹುಬ್ಬಳ್ಳಿ ರುದ್ರಯ್ಯನವರ ಬಗೆ	3
	ಬೈರತ್ತಿಯ ಬಸವಲಿಂಗಪ್ಪನವರ ಹಿಡಿದು 60 ವಿರಕ್ತರು	60
	ತಮಕೂರ ಸೋಮೋಕಟ್ಟಿ ಬುಡಕಟ್ಟಿನ ಚನ್ನಬಸಪ್ಪನವರ ಬಗೆ	10
	ಗೂಲಕೊಂಡಯ್ಯಗಳ ಕೊಂಪಗೋ ಬುಡಕಟ್ಟಿನ ರುದ್ರಪ್ಪನವರ ಬಗೆ	5
	ಅಯಕಟ್ಟಿನ ಬುಡಕಟ್ಟಿನ ಸಿದ್ದಲಿಂಗಯನವರ ಬಗೆ	6

68 ಇಂರವರೆಲ್ಲಾಂ 770 ಬುಡಕಟ್ಟಿನ ಅಮರ ಗಂಣಾಧೀಶ್ವರ
69 ಕ್ರಿಯಾಮೂರ್ತಿಗಳಾದ ಹಾವೇರಿ ಫುರದ ಬಡೇದ ಚನ್ನವೀರಪ್ಪ
ವಿರುಪಾಕ್ಷಪ್ಪನವರು ಸಿಂಗಾವಿಸಂಗನ ಬಸಪ್ಪನವರು ಬೊಮ್ಮ
ಪರಮೇಶ್ವರಪ್ಪನವರು ಮೊದಲಿಂದ 30 ಪರದೇಶಿಗಳು—

70 ಕಲ್ಯಾಣ ಸೀಮೆಯ ಹುಮುನಾಬಾದ್ ಪ್ರಾಂತ್ಯದ ಹುಲ
ಮಠದ ಕೆಂಪಿನ ಬುಡಕಟ್ಟಿನ ಸಂಗನ ಬಸಪ್ಪನವರ ಬಗೆ

———

ಯಡಿಯೂರು ಸಿದ್ಧಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿಲಾಶಾಸನದ ಸತ್ಯಂ

ಕೊಡಗಿಹಳ್ಳಿಯ ದೇವರು ತಾವು ಪಡೆದ ಮಠದ ಭೂಮಿಯಲ್ಲಿ ತೋಂಟದ ಸ್ವಾಮಿಗೆ ತಮ್ಮ ಭಕ್ತಿಯಿಂದ ಕಟ್ಟಿಸಿಕೊಟ್ಟ ಮಠ—

ಈ ಮಹಾಸಿದ್ಧಲಿಂಗೇಶ್ವರನ ಅತಿಶಯವೆಂತೆಂದರೆ— ಶ್ರೀಮತ್ಸಚ್ಚಿದಾನಂದ ನಿತ್ಯ ಪರಿಪೂರ್ಣನುಳ್ಳ ಅನಾದಿಭಕ್ತ ಆ ಭಕ್ತನ ಹೃದಯದಲ್ಲಿ ಜಂಗಮ ಜಂಗಮದ ಮುಕುಟದಲ್ಲಿ ಶೂನ್ಯಲಿಂಗ, ಆ ಲಿಂಗದಲ್ಲಿ-ಚಿದಂಬರನ ಶಕ್ತಿ ಪಂಚಶಕ್ತಿ ಪಂಚನಾದ ಪಂಚಬ್ರಹ್ಮ, ಈಶ್ವರಾಷ್ಟಕ ಮಹೇಶ್ವರ ಪಂಚವಿಷ್ಣು ರುದ್ರ ಲೋಕಾದ ಶತ್ರಯುವಯು ಹಿರಣ್ಯಗರ್ಭ ವಿರಾಟಮೂರ್ತಿ ಇಂತೆಂಭತ್ತೊಂದು ಮೂರ್ತಿಯ ಅಂಗವಾಗಿಪ್ಪಾತನೆ ಅನಾದಿ ಭಕ್ತನು. ಆ ಭಕ್ತನು ಪ್ರಾಣಚಿತ್ಕಳಾ ಚೈತನ್ಯಸ್ವರೂಪದ ತೋಂಟದ ಸಿದ್ಧಲಿಂಗೇಶ್ವರನು ಆ ಸಿದ್ಧಲಿಂಗೇಶ್ವರನ ಮೂರ್ತಿಕ್ರಮವೆಂತೆಂದಡೆ ಪ್ರಣವವೆ ಶಿರಸ್ಸು, ನಾಮಕಾರವೇ, ಭುಜ ಶಿಕಾರವೇ ದೇಹ ವಯುಸ್ಕಾರವೇ ಪಾದ, ಅನಂತಕೋಟಿ ಬ್ರಹ್ಮಾಂಡಗಳೇ ವಿರಾಟ್ ಸಮಸ್ತ ಲೋಕಾದಿ ಲೋಕಂಗಳೇ ದೇಹ ಧವಳ ಖಳೆಯು ಆಕಾಶವೇ ಮುಖ ದಶದಿಕ್ಕುಗಳೆ ತೋಳು ಚಂದ್ರ ಸೂರ್ಯಾದಿಗಳೆ ನಯನ ಪಾತಾಳವೆ ಪಾದ ಮೇಘಂಗಳೇ ಜಟಾಬಂಧ ಆ ಜಟಾ ಬಂಧದಲ್ಲಿ ಶೈಲಿಂಗವೇ, ವೇದ ಪುರಾಣಗಳೆ ಕ್ರಿಯಾ, ನಕ್ಷತ್ರಗಳೇ ಪುಷ್ಪ, ಚಂದ್ರ ಪ್ರಕಾಶವೆ ವಿಭೂತಿ ಅಷ್ಟ ಕುಲ ಪರ್ವತಂಗಳೆ ರುದ್ರಾಕ್ಷಿ ಸಪ್ತಮುದ್ರಗಳೇ ಮಂಡಲ, ಭುವನಸೃಷ್ಟಿಯೆ ಯೋಗ ಕಂಥೆ ದಿವಾರಾತ್ರಿಗಳೆ ಮಠ ಷಡ್ರುತುಗಳೆ ಷಡುಸ್ಥಲ ಮಹಾ ಕೋಟಿನೆ ಮಂತ್ರ ಪರಿಪೂರ್ಣ ಜ್ಞಾನವೆ ಪಂಚಮುದ್ರೆ ತ್ರಿಕಾಲ ಜ್ಞಾನವೆ. ಮಹದೈಶ್ವರ್ಯ, ಮಹಮೇರುವೇ ದಂಡ, ಸದ್ಗುಣವೇ, ಖರ್ಪರ, ಕುಲವೇ ಶಿವಕುಲ. ಇಂತಪ್ಪ ಅನಾದಿ ಜಂಗಮವೇ ಜಗಹಿತಾರ್ಥವಾಗಿ ಚರಿಸಿದ ಕ್ರಮವೆಂತೆಂದೊಡೆ ಜ್ಞಾನಕ್ರಿಯಾ ಸ್ವರೂಪನು, ಸರ್ವಾಂಗ

ಲಿಂಗಿ ಷಟ್‌ಸ್ಥಳ. ಜ್ಞಾನಿ ಸರ್ವಾಚಾರ ಸಂಪನ್ನ. ಪಾದೋತಕ ಪ್ರಸಾದ
ಷ್ಟಾಚಾರ್ಯರಿ ಅಷ್ಟಾವರ್ಣಾಲಂಕಾರನು, ದ್ವೈತಾದ್ವೈತ ತಿಮಿರ ಮಾ
ಡನು, ಇಂತಪ್ಪ ದಿವ್ಯ ಶಿವಯೋಗಿ ಸಿದ್ಧಲಿಂಗೇಶ್ವರಂಗೆ, ಸೌಮ್ಯ ಜ್ಞಾನೋ
ಪಾಗಿ ಸಂಸಾರ ಹೇಯಮಂ ಮಾಡಿ ಶರಣು ಹೊಕ್ಕ ಶಿಷ್ಯ ಜನಂಗಳ
ಗಳೆಂತೊಡೆ ಸಪ್ಪೇ ದೇವರು ಉಪ್ಪಿನಹಳ್ಳಿಯ ಸ್ವಾಮೀ. ಸಂಜೇ ದೇ
ಬೋಳ ಬಸವರಾಜ ದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು,
ದೇವರು, ರೇವಣಸಿದ್ಧದೇವರು. ಶೀಲವಂತದೇವರು. ಚಿಟ್ಟಗದೇ
ಇಂತವರು ಮುಖ್ಯವಾದ ಶಕ್ತಿ ಮಹೇಶ್ವರರಿಗೆ ಶಡುಸ್ಥಳ ಜ್ಞಾನ ಲಿ
ಸಂಬಂಧ ಸಮರಸೆ ಯೇಕಾರ್ಥಮಂ ಭೋದಿಸಿ, ಮುಕ್ತರಂ ಮಾಡಿ ಸ
ಏಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲಾ ನಿಷ್ಪಾತಿಯಾಗಿ ಯಡಿಯ
ತಮಗೆ ಕಟ್ಟಿಸಿರುವ ಮಠದಲ್ಲಿ ಶಿವಯೋಗ ಸಮಾಧಿ ಸನ್ನದ್ಧರಾ
ತೋಂಟದ ಸ್ವಾಮಿಯ ಪಾದ ಪದ್ಮಾಂಕರಾದ ವಾಸಿವಾಸಿಸಿಗಳಾದ ಚೆನ್ನ
ಒಡೆಯರು, ಚೆನ್ನರಾಯರ ಒಡೆಯರ ಮಕ್ಕಳು, ಲಿಂಗಪ್ಪ ಒಡೆಯರ ಮ
ಪಾದೋದಕ ಪ್ರಸಾದ ಸಂಪನ್ನರಾದ ಚೆನ್ನವೀರಪ್ಪ ಒಡೆಯರ ಸತಿ
ತಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದ ಸ್ವಾಮಿಗೆ ಕಲ್ಲು
ಕಟ್ಟಿಸಬೇಕೆಂದು ಚಿಟ್ಟಗ ದೇವರಿಗೆ ಪದಾರ್ಥಮಂ ನಮಸ್ಕಾರಗಳನು
ಲಾಗಿ ಭಕ್ತಿ ಪದಾರ್ಥಂ ಕೈಗೊಂಡು ಎಡಿಯೂರಿಗೆ ವಿಜಯಂಗೈದು ತೋ
ಸ್ವಾಮಿಗೆ ಕಲ್ಲು ಮಠವನ್ನು, ಎಂಟು ಜಡೆಯ ಬಗೆಯ ಹಿರಿಯರು,
ದೇವರು ಕಟ್ಟಿಸಿದರು. ಎಡಿಯೂರು ಸ್ಥಳದಲ್ಲಿ ಆದ, ತೊಡಗಿ ಮಾ
ಬಂದ ಕಾಣಿಕೆ, ಸೀಮೆ ಮೇಲೆ ತಂದ ನಂದಾದೀಪದ ಕಾಣಿಕೆ ಇ
ಮಠದ ಹಿರಿಯರು, ಪಟ್ಟಿಕಂತೆ ಚನ್ನಮಲ್ಲಿಕಾರ್ಜುನ ದೇವರು ಎಂಟು
ಬಗೆಯ ಹಿರಿಯರು ಚಿಟ್ಟಗ ದೇವರು ಪಡೆದ ಪುರ ವರ್ಗವು ಸ
ಬಂದ ಕಾಣಿಕೆ. ತೋಂಟದ ಸ್ವಾಮಿಯ ದಾಸೋಹದ ದ್ರವ್ಯ ಈ ಮ
ತೋಂಟದ ಸ್ವಾಮಿಯ ದಾಸೋಹವನ್ನು ಚಿಟ್ಟಗ ದೇವರು ಪ
ಪಡೆದಲ್ಲಿ ಒಡೆಯರು ಭಕ್ತರು ಸತ್ಪುರುಷರು ದಾಸೋಹವನ್ನು ಮಾಡು
ಈ ದ್ರವ್ಯ ತೋಂಟ ಸ್ವಾಮಿಯ ದಾಸೋಹಕ್ಕೆ ಸಲ್ಲುವುದು.
ಪಾರಂಪರ್ಯವಾಗಿ ಸಲ್ಲುವುದು.

ಶ್ರೀ ಯಡೆಯೂರು ಮಠದಲ್ಲಿರುವ ಶಿಲಾ ಲೇಖದ ಮಹದೈಶ್ವರ್ಯ ವೆಂತೆಂದರೆ ಅನ್ನುವುದರಿಂದ ಇಂತಪ್ಪ ದಿವ್ಯ ಶಿವಯೋಗಿ ಸಿದ್ಧಲಿಂಗೇಶ್ವರಂಗೆ ಅನ್ನುವವರೆಗೆ ಶ್ರೀ ಸಿದ್ಧಲಿಂಗ ಶಿವಯೋಗಿಗಳ ಪ್ರಭಾವ ಶಾಸ್ತ್ರದಿಂದ ಪ್ರಕಾಶಿಸಿದೆವೆಂಬುವುದು ವಿರಕ್ತ ಮರಿದೋಂಟದಾರ್ಯರರು ಬರೆದಿರುವ ವೀರಶೈವಾ ನಂದಾ ಚಂದ್ರಿಕೆಯ ಜಂಗಮವೈಶಿಷ್ಟವೆಂಬ (ಪುಟ. 242) ಉದಹರಿಸಿರುವುದು—

ಜಂಗಮ ವೈಭವ

ಇನ್ನು ಜಂಗಮ ಲಕ್ಷಣವೆಂತೆಂದೊಡೆ :— ಅನಾದಿ ಭಕ್ತನ ಪಶ್ಚಿಮ ಹೃದಯದಲ್ಲಿರುವ ಚಿದ್ರೂಪವಾದ ಮಂಡಲತ್ರಯ ಮಧ್ಯದಲ್ಲಿ ರಾರಾಜಿಸುತ್ತಿರುವ ಚಿತ್ಪದ್ಮದಲ್ಲಿರುವ ಚಿತ್ಪ್ರಣವ ಮಧ್ಯದೊಳು ಹೊಳೆಯುತ್ತಿರುವ ಶೂನ್ಯಲಿಂಗ ನಿಷ್ಕಲಲಿಂಗ ಪ್ರಣವ ಲಿಂಗ ಮುಂತಾದ ಲಿಂಗಗಳಿಗೆ ಪ್ರವರ್ತಕವಾದ ನಿರ್ಗುಣ ನಿರಾಕಾರವಾದ ಮೂರ್ತಿಯು ಉಪಾಸದಗೋಸ್ಕರವಾಗಿ ಕಲ್ಪಿತ ಆಕಾರವುಳ್ಳ, ಸ್ಥಾವರ ಜಂಗಮರೂಪವಾದ ಅಖಿಲ ಪ್ರಪಂಚವನ್ನು ನಿರ್ಮಿಸುವ ಶಕ್ತಿಯೊಡನೆ ಸಮರಸನಾಗಿರುವ, ನಿರಂಜನ ಜಂಗಮ ತತ್ತ್ವವೇ ಸರ್ವೋತ್ತಮವಾದುದೆಂದು ಆಗಮಾದಿಗಳು ಮುಕ್ತಕಂಠದಿಂದು ಸಾರುವುವು.

ಪಶ್ಚಾದನಾದಿಭಕ್ತಸ್ಯ ಹೃತ್ಪದ್ಮಸ್ಯಾಂತರೇ ಸದಾ ।
ಚಿನ್ಮಂಡಲತ್ರಯೋಪೇತ ಪ್ರಣವಾಸನ ಮಧ್ಯಗಃ ॥
ನಿರಂಜನಃ ಸಪ್ರಣವಸ್ಸ್ವರೂಪೋಽತ್ರ ನಿಗದ್ಯತೇ ।
ನಿರಾಕೃತಂ ರಂಜನಂ ಯನ್ಮಾಯಾಮೋಹವಿಜೃಂಭಿತಃ ॥

ಯೇನ ಸ್ವರೂಪಸಿದ್ಧೇನ ಸ ಭವೇದ್ಧಿ ನಿರಂಜನಃ ।
ಇದಂ ತಸ್ಯ ನಿರಾಲಂಬಸ್ಸ್ವರೂಪಂ ಸಮುದೀರಿತಂ ॥

ಅಂತಹ ನಿರಂಜನ ಜಂಗಮದ ಗರ್ಭದಲ್ಲಿ ಋಗಾದಿ ನಾಲ್ಕು ವೇದಗಳೂ, ಅಷ್ಟಾದಶ ಪುರಾಣಗಳೂ ಬೆಳಗುತ್ತಿರುವುವು. ಸಮಸ್ತ ಯೋಗಿಗಳೂ, ಮುನಿಗಳೂ ಆತನ ಚರಣಗಳನ್ನಾಶ್ರಯಿಸಿರುವರು. ಅಂಗಾಲುಗಳಲ್ಲಿ ಅತಲವೂ, ಪಾದಗಳ ಮೇಲು ಭಾಗದಲ್ಲಿ ವಿತಲೂ, ಮೊಣಕಾಲುಗಳಲ್ಲಿ ಸುತಲವೂ, ಜಾನುಗಳಲ್ಲಿ ಮಹಾತಲೂ, ತೊಡೆಗಳಲ್ಲಿ ತಲಾತಲವೂ, ಗುಹ್ಯದಲ್ಲಿ ರಸಾತಲವೂ, ನಡುವಿನಲ್ಲಿ ಪಾತಾಲವೂ, ನಾಭಿಯಲ್ಲಿ ಭೂಲೋಕವೂ, ಹೊಟ್ಟೆಯಲ್ಲಿ ಭುವರ್ಲೋಕವೂ, ಹೃದಯದಲ್ಲಿ ಸ್ವರ್ಗಲೋಕವೂ, ಕಂಠದಲ್ಲಿ ಜನಲೋಕವೂ, ದವಡೆಯಲ್ಲಿ ತಪೋಲೋಕವೂ, ಹಣೆಯಲ್ಲಿ ಸತ್ಯಲೋಕವೂ, ಮಸ್ತಕದೊಳು ಮಹಾರ್ಲೋಕವೂ ಹೀಗೆ ಹದಿನಾಲ್ಕು ಲೋಕಗಳು ಆತನ ದೇಹದಲ್ಲಿ ವಿರಾಜಿಸುತ್ತಿರುವುವು. ಬ್ರಹ್ಮಾಂಡವೇ ಆತನ ಮಕುಟವು. ಗಗನವೇ ಆತನ ವದನವು, ದಿಕ್ಕುಗಳೇ ಬಾಹುಗಳು, ಸೂರ್ಯಚಂದ್ರರೇ ನೇತ್ರಗಳು, ವ್ಯೋಮವೇ ಶರೀರವು, ಪಾತಾಳವೇ ಪಾದವು, ಆತನ ಕರಸ್ಥಲದಲ್ಲಿ ಶೂನ್ಯಲಿಂಗವು, ಮೇಘವೇ ಜಟಾಪಜಲವು, ಬೆಳದಿಂಗಳೇ ಆತನ ವಿಭೂತಿಯು, ಆತನ ಕ್ರಿಯಾ ರೂಪಗಳೇ ನಿಖಿಲ ದೇವತೆಗಳು, ನಕ್ಷತ್ರಗಳೇ ಪುಷ್ಪಗಳು, ರುದ್ರಾಕ್ಷಗಳೇ ಕುಲಪರ್ವತಗಳು, ಸಮುದ್ರವೇ ಜಲಪಾತ್ರವು, ಸೃಷ್ಟಿರೂಪವಾದ ಜಗತ್ತೇ ಆತನ ಕಂತೆಯು, ಪೃಥಿವಿಯೇ ಆಸನವು, ಅಹೋರಾತ್ರಂಗಳೇ ಆತನ ಗುಹಾಮಠಗಳು, ಆರು ಋತುಗಳೇ ತ್ರಿಕಾಲಜ್ಞಾನ ಸೌಭಾಗ್ಯವು, ಆದಿಶೇಷನೇ ಕಟೀಸೂತ್ರವು, ವಾಗ್ರೂಪವೇ ಜ್ಞಾನಮುದ್ರೆಯು, ಮೇರುವೇ ದಂಡವು, ಗುಣವೇ ಸೂತ್ರವು, ಶಿವಕುಲವೇ ಗೋತ್ರವು, ವನಸ್ಪತಿಗಳೇ ಲೋಮಗಳು ಇಂತು ಆ ನಿರಂಜನ ಜಂಗಮಮೂರ್ತಿಯ ಸಾಕಾರಸ್ವರೂಪವಾಗಿರುವುದೆಂದು ಶಿವಾಗಮಗಳು ಘೋಷಿಸುತ್ತಿರುವುವು.

ಚತುರ್ವೇದಾಶ್ಚ ತದ್ಗರ್ಭಂ ಪುರಾಣಂ ತಸ್ಯ ಮಧ್ಯಮಂ ।
ಯೋಗಿನೋ ಮುನಯಸ್ಸರ್ವೇ ಜಂಗಮಾಂಘ್ರಿಸಮಾಶ್ರಿತಾಃ ॥

ತಸ್ಯ ದೇಹೇ ಸಮಸ್ತಾನಿ ಭುವನಾನಿ ಚತುರ್ದಶ ।
ಪಾದಯೋರತಲಂ ವಿಂದ್ಯಾತ್ ಪದೋರ್ಧ್ವೇ ವಿತಲಂ ತಥಾ ॥
ಜಂಘೆಯೋಸ್ಸುತಲಂ ಜ್ಞೇಯಂ ಜಾನುದೇಶೇ ಮಹಾತಲಂ ।
ತಲಾತಲಂ ತದೂರ್ವೋಶ್ಚ ಗುಹ್ಯಸ್ಥಾನೇ ರಸಾತಲಂ ॥
ಕಟಿಬಂಧೇಷು ಪಾತಾಳಂ ಸಪ್ತಲೋಕಾ ಇತೀರಿತಾಃ ।
ಭೂಲೋಕೋ ನಾಭಿಮಧ್ಯೇತು ಭುವರ್ಲೋಕೋಽಸ್ಯ ಚೋದರೆ ॥
ಹೃದಯೇ ಚಾಪಿ ಸ್ವರ್ಲೋಕೋ ಜನಲೋಕಶ್ಶಿರೋಧಿಗಃ ।
ತಾಲ್ವೋಶ್ಚಾಪಿ ತಪೋಲೋಕಃ ಸತ್ಯಲೋಕೋ ಲಲಾಟಕೇ ॥
ಮಹೋಲೋಕಸ್ತಸ್ಯ ಮೂರ್ಧ್ನಿ ಚತುರ್ದಶಸಮೀರಿತಾಃ ।
ಬ್ರಹ್ಮಾಂಡಂ ಮಕುಟಂ ತಸ್ಯ ವದನಂ ಗಗನಂ ಶೃಣು ॥
ತದ್ಬಾಹವೋ ದಿಶಸ್ಸರ್ವಾ ನೇತ್ರೆ ಚಂದ್ರದಿವಾಕರೌ ।
ಶರೀರಂ ವ್ಯೋಮರೂಪಂ ಚ ಪಾತಾಳಂ ಪಾದಪಂಕಜಂ ॥
ಕರಸ್ಥಲೇ ಶೂನ್ಯಲಿಂಗಂ ಮೇಘಾಸ್ಸರ್ವ ಜಟಾಶ್ಶುಭಾಃ ॥
ಚಂದ್ರಜ್ಯೋತ್ಸ್ನಾ ವಿಭೂತಿಶ್ಚ ದೇವಾಸ್ಸರ್ವೇ ಕ್ರಿಯಾಮಯಾಃ ॥
ನಕ್ಷತ್ರಾಣಿ ಚ ಪುಷ್ಪಾಣಿ ರುದ್ರಾಕ್ಷಾಃ ಕುಲಪರ್ವತಾಃ ॥
ಸಾಗರೋ ಜಲಪಾತ್ರಂ ಚ ಕಂಥಾ ಸೃಷ್ಟಿಮಯಂ ಜಗತ್ ॥
ಆಸನಂ ಪೃಥಿವೀ ತಸ್ಯಾಪ್ಯಹೋರಾತ್ರಂ ಗುಹಾಮಠಾಃ ।
ತ್ರಿಕಾಲಜ್ಞಾನ ಸೌಭಾಗ್ಯಮೃತವಃ ಷಟ್‌ಸ್ಥಲಂ ಪ್ರಿಯೇ ॥
ಶೇಷಸ್ತಸ್ಯ ಕಟೀಸೂತ್ರಂ ಜ್ಞಾನಮುದ್ರಾಚ ವಾಙ್ಮಯಿ ।
ಮೇರುರ್ದಂಡೋ ಗುಣಸ್ತೂತಂ ಗೋತ್ರಂ ಶಿವಕುಲ ಭವೇತ್ ॥
ವನಸ್ಪತಿಶ್ಚ ಲೋಮಾನಿ ಏವಮೇತಾನಿ ಪಾರ್ವತಿ ।
ಇದಂ ತಸ್ಯತು ಸಾಕಾರಂ ಸ್ವರೂಪಂ ಪರಿಕೀರ್ತಿತಂ ॥

ಆದುದರಿಂದ ಅಂತಹ ನಿರಂಜನ ಜಂಗಮವೇ ನಿರ್ಗುಣಬ್ರಹ್ಮವೆಂದೂ ಅನಾದಿ ಭಕ್ತನೆಂದೂ ನಾನಾಪ್ರಕಾರವಾದ ಹೆಸರನ್ನು ಪಡೆದು ನಂದಿಭೃಂಗ್ಯಾದಿ ಪ್ರಮಥ ವರ್ಯರಿಂದ ಧ್ಯಾನಿಸಲ್ಪಟ್ಟುದಾಗಿಯೂ, ಪಂಚಸಾದಾಖ್ಯ, ಪಂಚಕಳಾ, ಪಂಚಶಕ್ತಿ ಪಂಚತಂತ್ರ, ಪಂಚಬ್ರಹ್ಮಸ್ವರೂಪನೂ, ಸಕಲ ನಿಷ್ಕಲಸ್ವರೂಪನೂ,

ಸನಕಸನಂದಾದಿ ಯೋಗಿವಂದ್ಯನೂ, ವಶಿಷ್ಠಾದಿಮಹರ್ಷಿಪೂಜಿತನೂ, ಚಂದ್ರ ಧಾರಿತ್ವಾದಿ ಮಹಾಲಿಂಗಾಂತವಾದ ಇಪ್ಪತ್ತೈದು ಲೀಲೆಗಳಿಗೆ ಪ್ರವರ್ತಕನೂ, ತ್ರಿಲೋಚನನೂ, ಉಮಾಸಹಿತನೂ, ಮೃಗ ಪರಶುವರಾಭಯಹಸ್ತನೂ, ಬ್ರಹ್ಮವಿಷ್ಣು ರುದ್ರಾದಿ ಸರ್ವಸೇವ್ಯೋಪಾಸ್ಯನೂ, ಏಕಾದಶರುದ್ರನಿಯಾಮಕನೂ, ಭವ, ಮೃಡ, ಹರಾದಿ ಅಸಾಧಾರಣನಾಮವುಳ್ಳವನೂ, ವೈಷ್ಣವಕೋಟಿ ಸಂಸ್ತೂಯಮಾನನೂ, ಸರಸ್ವತೀಸಹಿತನಾದ ಬ್ರಹ್ಮನಿಂದ ಪೂಜಿತನೂ, ಸರ್ವಜಗದುತ್ಪತ್ತಿಕಾರಣನೂ ಆಗಿರುವುದರಿಂದ ಆ ನಿರಂಜನ ಜಂಗಮವೇ ಉತ್ತಮೋತ್ತಮವಸ್ತುವೆಂದು ಮುಮುಕ್ಷುಗಳಾದ ವೀರಶೈವರಿಂದ ಸೇವಿಸಲ್ಪಡತಕ್ಕುದೆಂದು ಭಾವವು.

ಶಂಕಾ :— ಹಾಗಾದರೆ ನಿರಂಜನ ಜಂಗಮನು ನಿರಾಮಯನೂ, ನಿರ್ಗುಣನೂ, ನಿರಾಕಾರನೂ ಆಗಿರುವುದರಿಂದ ಅಂತಹ ಜಂಗಮನಿಂದ ನಿರವಯತತ್ವ, ನಿರ್ಗುಣತ್ವ, ವ್ಯಾಪಕತ್ವ ವಿಶಿಷ್ಟಗಳಾದ ಶಿವತತ್ತ್ವ ಪರ್ಯಂತವಾಗಿರುವ ಶೂನ್ಯಲಿಂಗ, ನಿಷ್ಕಲ ಲಿಂಗಾದಿಗಳು ಉತ್ಪನ್ನಗಳಾಗಲಾರವು. ನಿರವಯವಸ್ತುವಿನಿಂದ ನಿರವಯವಸ್ತುಗಳು ಉಂಟಾಗುವ ಬಗೆಯಂತು ?

ಸಮಾಧಾನ :—ನಿರವಯುವಾದ ನಿರಂಜನ ಜಂಗಮದಿಂದ ನಿರವಯವಗಳಾದ ಶೂನ್ಯಲಿಂಗಾದಿಗಳುದಿಸುವುವು ಎಂಬುವಲ್ಲಿ ಕಾಮಿಕಾದ್ಯಾಗಮಗಳಿಂದ ಸಂಗ್ರಹೀತವಾದ ದಶಾಂಗ ಸೃಷ್ಟ್ಯುದ್ಧರಣ ಎಂಬ ಗ್ರಂಥವು ಪ್ರಮಾಣವಾಗಿರುವುದು.

ಶ್ರೀಮನ್ ಮಹಾನಾದಿಭಕ್ತಃ ಸ್ವಪ್ರಕಾಶಕೋಽದ್ವಿತೀಯಕಃ ।
ಯೋಽಸೌ ಬ್ರಹ್ಮೇತಿ ಸಂಪ್ರೋಕ್ತಃ ಶಿವತತ್ತ್ವಾರ್ಥವೇದಿಭಿಃ ॥
ತಸ್ಮಾತ್ಸ್ವಯಂ ಪ್ರಾದುರಭೂತ್ ಸ ನಿರಂಜನಜಂಗಮಃ ।
ತಚ್ಛಿಖಾಯಾಂ ಶೂನ್ಯಲಿಂಗಂ ಸಂಜಾತಂ ವಿಶ್ವಕಾರಣಂ ॥
ತಸ್ಮಾನ್ನಿಷ್ಕಲಲಿಂಗಾತ್ತು ಮಹಾಲಿಂಗಮಭೂತ್ ಸ್ವಯಂ ।
ತಸ್ಮಾತ್ಪ್ರಣವಲಿಂಗಂ ತು ಸೃಷ್ಟ್ಯುನ್ಮುಖಮಜಾಯತ ॥
ಏತಸ್ಮಾಚ್ಛಿವ ತತ್ತ್ವಂತು ಸಾದಾಖ್ಯಂ ಚ ತತೋಽಭವತ್ ।

ತಸ್ಮಾನ್ಮಹೇಶ್ವರೋ ಜಾತಸ್ತಸ್ಮಾದ್ರುದ್ರಸ್ಸಮುದ್ಭವಃ ॥
ತಸ್ಮಾಜ್ಜನಾರ್ದನೋ ಜಾತಸ್ತಸ್ಮಾಜ್ಜಾತಃ ಪಿತಾಮಹಃ ।
ಪಿತಾಮಹಾತ್ಸಮುದ್ಭೂತಂ ಜಗದೇತಚ್ಚರಾಚರಂ ॥

ಸ್ವಯಂಪ್ರಕಾಶಕನೂ, ಅದ್ವಿತೀಯನೂ ಆದ ಬ್ರಹ್ಮವೇ ಅನಾದಿಭಕ್ತನೆಂದು ಶಿವತತ್ತ್ವಾಭಿಜ್ಞರು ಹೇಳುವರು, ಅಂತಹ ಬ್ರಹ್ಮಶಬ್ದವಾಚ್ಯವಾದ ಅನಾಧಿಭಕ್ತನಿಂದ ನಿರಂಜನ ಜಂಗಮವುದಿಸಿತು. ಆ ಶೂನ್ಯ (ನಿಷ್ಕಲ) ಲಿಂಗದಿಂದ ಮಹಾಲಿಂಗವೂ, ಆ ಮಹಾಲಿಂಗದಿಂದ ಪ್ರಾಣಲಿಂಗವುದಿಸಿತು. ಅದುವೇ ಸೃಷ್ಟಿಗೆ ಅಭಿಮುಖವೆನಿಸಿತು. ಅದರಿಂದ ಶಿವತತ್ತ್ವವು ಆ ಶಿವತತ್ತ್ವದಿಂದ ಸಾದಾಖ್ಯವು, ಆ ಸಾದಾಖ್ಯದಿಂದ ಮಹೇಶತತ್ತ್ವವು, ಅವನಿಂದ ರುದ್ರನೂ, ಆ ರುದ್ರನಿಂದ ಜನಾರ್ದನನೂ, ಅವನಿಂದ ಪಿತಾಮಹನೂ, ಆ ಪಿತಾಮಹನಿಂದ ಚರಾಚರಾತ್ಮಕವಾದೀ ಜಗತ್ತು ಉದ್ಭವಿಸಿತು.

ಎಂದು ಪ್ರಬಲ ಪ್ರಮಾಣಗಳಿರುವುದರಿಂದ ನಿರವಯುವ ಜಂಗಮನಿಂದ ನಿರವಯವಗಳಾದ ಶೂನ್ಯಲಿಂಗಾದಿಗಳು ಉದಿಸುವುದರಲ್ಲಿ ಅಭ್ಯಂತರವಿಲ್ಲವೆಂದು ತಿಳಿಯತಕ್ಕುದು. ಹಾಗೆ ಪ್ರಮಾಣ ವ್ಯಾಕ್ಯಗಳನ್ನು ಲ್ಲಂಗೀಕರಿಸದೆ ಹೋದರೆ ಮೀಮಾಂಸ್‌ಶಾಸ್ತ್ರದಲ್ಲಿ ಹೇಳಲ್ಪಟ್ಟ ಪಶುವಿಶಸನರೂಪಗಳಾದ ಯಾಗಾದಿಗಳನ್ನೂ ಸಹ ಹಿಂಸೆಯೆಂದೇ ತಿಳಿಯಬೇಕಾದೀತು. ಹೇಗೆಂದರೆ—

"ಏಕಾದಶಪಶೋರವದಾನಾನಿ ತಾನಿ ದ್ವಿರವದ್ಯತಿ"

ಎಂದು ಪೂರ್ವಮೀಮಾಂಸೆಯಲ್ಲಿ ಯಾಗಸಂಬಂಧವಾದ ಪಶುವಿನ ಹೃದಯ ಜಿಹ್ವೆ, ವಕ್ಷಸ್ಸು ಮುಂತಾದ ಹನ್ನೊಂದು ಅವಯುವಗಳಲ್ಲಿ ಪ್ರತ್ಯೇಕವಾಗಿ ಒಂದೊಂದು ಅವಯುವದಿಂದ ಎರಡು ಎರಡು ಸಾರಿ ಅವದಾನ(ತೆಗೆದಿಟ್ಟುಕೊಳ್ಳುವದು) ಪೂರ್ವಕವಾಗಿ ಹವಿರವಯುವನನ್ನು ತೆಗೆದುಕೊಳ್ಳಬೆಕೆಕೆಂದು, ಸೋಮಯಾಗದ ವಿಕೃತಿರೂಪವಾದ ಪಶುವಿಶಸನರೂಪಯಾಗವು ವಿಧಾನ ಮಾಡುತ್ತದೆ. ಇಲ್ಲಿ ಪಶುವಿನ ಹನ್ನೊಂದು ಭಾಗಗಳನ್ನು ಅವದಾನಮಾಡಬೇಕೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಪ್ರತ್ಯಕ್ಷ ಹಿಂಸೆಯೇ ಆಗಿರುವಾಗ

ಇನ್ನು ಅಹಿಂಸೆಯೆಂದು ಹೇಳುವುದು ಹೇಗೆ ? ಮತ್ತು "ಯದಗ್ನೀಷೋಮೀಯಂ ಪಶುಮಾಲಭೇತ" ಅಗ್ನಿಸೋಮಸಂಬಂಧವಾದ ಪಶುವನ್ನು ವಧಿಸತಕ್ಕದ್ದು ಎಂಬ ಶ್ರುತ್ಯಾಧಾರದಿಂದಲೂ—

ಯಜ್ಞಾರ್ಥಂ ಪಶವಸ್ಸೃಷ್ಟಾಃ ಸ್ವಯಮೇವ ಸ್ವಯಂಭುವಾ॥
ಯಜ್ಞೋಹಿ ಭೂತ್ಯೈಸರ್ವಸ್ಯ ತಸ್ಮಾದ್ಯಜ್ಞೇ ವಧೋಽವಧಃ।

ಪಶುಗಳು ಯಜ್ಞಕ್ಕೋಸ್ಕರವಾಗಿ ಸೃಷ್ಟಿಸಲ್ಪಟ್ಟವೆ. ಯಜ್ಞವು ಎಲ್ಲ ಸಂಪತ್ತನ್ನು ಕೊಡುತ್ತದೆ ಆದುದರಿಂದ ಯಜ್ಞದಲ್ಲಿ ಮಾಡಲ್ಪಟ್ಟ ಪಶುವಧೆಯು ವಧೆಯೆನಿಸುವುದಿಲ್ಲ. ಎಂಬ ಸ್ಮೃತಿ ವಾಕ್ಯಾಧಾರದಿಂದಲೂ ಯಜ್ಞೀಯವಾದ ಹಿಂಸೆಯನ್ನು ಅಹಿಂಸೆಯನ್ನಾಗಿಯೇ ಪರಿಗಣಿಸಬೇಕು.

ಆದುದರಿಂದ "ಕ್ರತ್ವಂತರ್ವರ್ತಿನೀ ಹಿಂಸಾ", ಅಧರ್ಮಸಾಧಿಕಾ. ಹಿಂಸಾತ್ವಾತ್, ಕ್ರತುಬಾಹ್ಯ ಹಿಂಸಾವತ್ - ಯಜ್ಞದಲ್ಲಿ ಮಾಡಲ್ಪಡುವ ಹಿಂಸೆಯು ಅಧರ್ಮ ಸಾಧನವಾದುದು, ಹಿಂಸೆಯು ಅದರಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದರಿಂದ—ಲೋಕದಲ್ಲಿ ನಡೆಯುವ ಹಿಂಸೆಭೋಪಾತಿಯಲ್ಲಿ-ಎಂಬೀ ಅನುಮಾನದಲ್ಲಿ ನಿಷಿದ್ಧತ್ವವೇ ಉಪಾಧಿಯು ಸಾಧನಧರ್ಮದೊಡನೆ ವ್ಯಾಪ್ತಿಯನ್ನು ಪಡೆಯದೆ ಸಾಧ್ಯ ಧರ್ಮದೊಡನೆ ವ್ಯಾಪ್ತಿಯನ್ನು ಪಡೆದಿರುವ ಧರ್ಮವೇ ಉಪಾಧಿಯೆನಿಸುವುದು. ಇಂತಹ ಉಪಾಧಿಕತ್ವವು ಹಿಂಸೆಯು, ಅಧರ್ಮಸಾಧಕತ್ವವ್ಯಭಿಚಾರಿಯು, ಅಧರ್ಮಸಾಧಕವ್ಯಾಪಕ ನಿಷಿದ್ಧತ್ವ ವ್ಯಭಿಚಾರಿಯಾದುದರಿಂದ ಆರ್ದ್ರೇಂಧನ ಸಂಯೋಗದಂತೆ ಎಂದು ಹೇತುವಿಗೆ ವ್ಯಭಿಚಾರೋನ್ನಾಯಕತ್ವದಿಂದ ಸಾಧ್ಯಸಾಧಕತ್ವವನ್ನು ತಾರ್ಕಿಕರು ಅಂಗೀಕರಿಸಿರುತ್ತಾರೆ. ಮತ್ತು ಜಾತಾಶೌಚಾದಿಸೂತಕಗಳನ್ನು ಸಕಲ ಜನಗಳು ಯಾವ ಯುಕ್ತಿಯೂ ಇಲ್ಲದಂತೆ ಕೇವಲ ಪ್ರಮಾಣವಾಕ್ಯಗಳ ಆಧಾರದಿಂದಲೇ ಅನುಷ್ಠಿಸುತ್ತಾ ಬಂದಿರುತ್ತಾರೆ. ಮತ್ತು ನರಕಪಾಲವು ಶುಚಿಯಾದುದು, ಪ್ರಾಣ್ಯಂಗವಾದುದರಿಂದ, ಶಂಖದಂತೆ ಎಂಬ ತಲೆಬುರುಡೆಗೆ ಶುಚಿತ್ವಸಾಧಕವಾದ ಅನುಮಾನವನ್ನು "ನಾರಂ ಸ್ಪೃಷ್ಟ್ವಾಸ್ಥಿ ಸಸ್ನೇಹಂ ಸವಾಸಾ ಜಲಮಾವಿಶೇತ್"

ಮನುಷ್ಯನ ಮೂಳೆಯನ್ನು ಮುಟ್ಟಿದರೆ ಸಚೇಲಿಸ್ನಾನ ಮಾಡತಕ್ಕದೆಂಬ ಪ್ರಮಾಣವಚನವು ಬಾಧಿಸುತ್ತೆಂದು ತಾರ್ಕಿಕರೇ ಅಂಗೀಕರಿಸುತ್ತಾರೆ.

ಹಿಂದೆ ಅನೇಕ ಅಭಿಯುಕ್ತರು "ಶಂಖಾಸ್ಥಿ ಪಾವನಮಪಾವನಮಸ್ಥಿ ನೃಣಾಮಿತ್ಥಂ ಸ್ಥಿತೇ ವಚನಮತ್ರ ಪರಾಯಣಂ ನಃ"

ಶಂಖದ ಮೂಳೆಯು ಪರಿಶುದ್ಧವಾದುದು. ಮನುಷ್ಯನ ಮೂಳೆಯು ಅಪರಿಶುದ್ಧವಾದುದು ಎಂದು ನಿರ್ಣಯಿಸುತ್ತಾರೆ. ಅದುದರಿಂದ ಪ್ರಮಾಣ ದಿಂದ ಸಿದ್ಧವಾದ ಅರ್ಥವನ್ನು ಯುಕ್ತಿಗಳನ್ನು ಉಪಯೋಗಿಸಿ ಖಂಡಿಸುವುದು ಕೇವಲ ದುರಭಿಮಾನವೆಂದೇ ತಿಳಿಯತಕ್ಕದು. ಹಾಗಿಲ್ಲದೆ ಹೋದರೆ ಚಂದ್ರನು ಒಂದು ಚೋಟುದ್ದವಾಗಿ ಆಕಾಶದಲ್ಲಿ ಎಲ್ಲರ ಕಣ್ಣಿಗೆ ಕಾಣಿಸುತ್ತಿದ್ದರೂ ಜ್ಯೋತಿಶ್ಶಾಸ್ತ್ರಜ್ಞರು ಚಂದ್ರಮಂಡಲವನ್ನು ಎಂಭತ್ತೆಂಟುಸಾವಿರ ಯೋಜನ ವಷ್ಟು ಅಳತೆಯುಳ್ಳದೆಂದು ಹೇಳಿರುತ್ತಾರೆ. ಇಂತಹ ವಚನಗಳೆಲ್ಲಾ ಅಪ್ರ ಮಾಣಗಳಾಗಬೇಕಾಗುವುದು. ಅದುದರಿಂದ ಪರಮಾಪ್ತನಾದ ಪರಶಿವನಿಂದ ಉಸುರಲ್ಪಟ್ಟ ಕಾಮಿಕಾದ್ಯಾಗಮಗಳಲ್ಲಿ ನಿರವಯದಿಂದ ನಿರವಯವೋತ್ಪತ್ತಿ ಯನ್ನು ಹೇಳಿರುವುದರಿಂದ ಅಂತಹ ವಚನಗಳಿಗೆಲ್ಲಾ ಅಪ್ರಾಮಾಣ್ಯವನ್ನು ಹೇಳಬೇಕಾದೀತು.

ಹೀಗೆ ಶಾಸ್ತ್ರವಚನಗಳಿಗೆಲ್ಲ ಪ್ರಾಮಾಣ್ಯವನ್ನಂಗೀಕರಿಸುವುದರಿಂದ ಇಲ್ಲಿಯೂ ಪರಮಾತ್ಮನಾದ ಪರಶಿವನಿಂದ ಹೇಳಲ್ಪಟ್ಟ ಕಾಮಿಕಾದಿ ಅನೇಕ ಅನೇಕ ಆಗಮಗಳಲ್ಲಿ ನಿರವಯವದಿಂದ ನಿರವಯವವು ಉತ್ಪನ್ನವಾಗಬಹು ದೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ. ಈ ಪ್ರಮಾಣಗಳನ್ನು ನಾವು ಅಂಗೀ ಕರಿಸದಿದ್ದರೆ ನಿರವಯವಾದ ಆತ್ಮನಿಂದ ನಿರವಯವಾದ ಆಕಾಶವು ಉತ್ಪನ್ನ ವಾಗದೆ ಹೋಗಬೇಕಾಗುವುದು. ಅದು ನಮಗೆ ಇಷ್ಟವೇ ಎಂಬುವುದಾದರೆ "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ" ಆತ್ಮನಿಂದ ಆಕಾಶವುತ್ಪನ್ನ ವಾಯಿತೆಂದು ಹೇಳುವ ಶ್ರುತಿವಾಕ್ಯಕ್ಕೇ ವಿರೋಧವುಂಟಾಗುತ್ತದೆ. ಮತ್ತು ಅಂತಹ ನಿರವಯವವಾದ ಆಕಾಶದಿಂದ ಶಬ್ದೋತ್ಪತ್ತಿಯನ್ನು ಸಹ ಒಪ್ಪದೆ ಇರಬೇಕಾಗುವುದು. ಆದುದರಿಂದ ಇಂತಹ ಅನೇಕ ಯುಕ್ತಿಗಳಿಂದ ನಿರವಯ

ವಾದ—ನಿರಂಜನಜಂಗಮದಿಂದ ನಿರವಯವಗಳಾದ ಶೂನ್ಯಲಿಂಗಾದಿಗಳ ಉತ್ಪತ್ತಿಯನ್ನು ಅವಶ್ಯವಾಗಿ ಒಪ್ಪಬೇಕಾಗಿರುವುದರಿಂದ ನಿರಂಜನ ಜಂಗಮ ವೆಂಬ ವಸ್ತುವು ಸರ್ವ ತತ್ತ್ವಗಳೊಳಗೆಲ್ಲ ಉತ್ಕೃಷ್ಟ ತತ್ತ್ವವಾಗಿರುವುದರಿಂದ ಮುಕ್ತಾತ್ಮರು ಈ ನಿರಂಜನ ಜಂಗಮವನ್ನು ಸದಾ ಸೇವಿಸುತ್ತಿರಬೇಕು.

ಅಹಂ ಮಮತ್ವಶೂನ್ಯತ್ವಾತ್ ನಿಜಬೋಧೈಕರೂಪಧೃತ್ ।
ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಃಸ್ಮೃತಃ ॥

—ನಂದಿಪುರಾಣ

ನಾನು ನನ್ನದು ಎಂಬ ಅಭಿಮಾನವನ್ನೆಲ್ಲ ಬಿಟ್ಟು ನಿಜಲಿಂಗ ಒಂದರಲ್ಲಿ ಸಮರಸನಾಗಿ ತಾನೇ ಶಿವನಾಗಿ ಯಾವನು ಸಂಚರಿಸುವನೋ ಅವನೇ ಜಂಗಮ ನೆನಿಸಿಕೊಳ್ಳುವನು.

ಈಷಣತ್ರಯನಿರ್ಮುಕ್ತಾ ಜ್ಞಾನವಿಜ್ಞಾನತತ್ಪರಾಃ ।
ದೃಢವೈರಾಗ್ಯಸಂಪನ್ನಾ ಧೀರಾಸ್ತೇ ಶಿವಯೋಗಿನಃ ॥

—ಪಾರಮೇಶ್ವರಾಗಮ

ಪುತ್ರೇಷಣ ದಾರೇಷಣ ವಿತ್ತೇಷಣಗಳನ್ನು ಸುತರಾಂ ವರ್ಜಿಸಿ ಜ್ಞಾನ ವಿಜ್ಞಾನಯುಕ್ತರಾಗಿ ದೃಢತರ ವೈರಾಗ್ಯ ಸಂಪನ್ನರಾದ ಧೀರರೇ ಜಂಗಮರೆನಿ ಸುವರು.

ಸ್ವರೂಪಜ್ಞಾನಸಂಪನ್ನೋ ಧ್ವಸ್ತಾಹಂ ಮಮತಾಕೃತಿಃ ।
ಸ್ವಯಮೇವ ಸ್ವಯಂಭೂತ್ವಾ ಚರತೀತಿ ಚರಾಭಿಧಃ ॥
ಅಂತರ್ಧಾಯ ಲಲಾಟಾಕ್ಷಿ ಶಶಾಂಕಂ ಸಂವಿಧಾಯ ಚ ।
ಅವಾಮಭಾಗಲಲನೋ ಜಂಗಮಃ ಪರಮೇಶ್ವರಃ ॥

—ಸಿದ್ಧಾಂತ ಶಿಖಾಮಣಿ

ಸ್ವಸ್ವರೂಪಜ್ಞಾನವುಳ್ಳವನೂ, ನಾನು ನನ್ನದೆಂಬ ಅಭಿಮಾನವನ್ನು ತ್ಯಜಿಸಿದವನೂ, ಚಂದ್ರ ಫಾಲನೇತ್ರ ಮುಂತಾದ ಸ್ಥೂಲಲಕ್ಷಣಗಳನ್ನೂ ವಾಮ

ಭಾಗದಲ್ಲಿರುವ ಪಾರ್ವತಿಯನ್ನೂ ಸಹ ಮರೆಮಾಡಿಕೊಂಡ ಪರಮೇಶ್ವರನೋ ಹಿಂಬಂತೆ ಆವ ಪ್ರತಿಬಂಧಕವೂ ಇಲ್ಲದೆ ತಾನೇ ತಾನಾಗಿ ಸಂಚರಿಸುವವನೇ ಜಂಗಮನೆನಿಸುವನು.

ಅಹಮೇವ ಮಹೇಶಾನಿ ಧೃತ್ವಾ ಜಂಗಮ ವಿಗ್ರಹಂ ।
ಮದ್ಭಕ್ತಾನುಗ್ರಹಾರ್ಥಾಯ ಪರ್ಯಟಾಮಿ ಮಹೀತಲೇ ॥
ಹಸ್ತಪಾದಾದಿ ಸಾಮ್ಯೇನ ಮರ್ತ್ಯಾನ್ ರುತ್ಯಾನ್ ರುದ್ರವಪುರ್ಧರಾನ್ ।
ಪ್ರಾಕೃತಾನೇವ ಮನ್ವಾಸಾ ನೈವ ಜಾನಂತ್ಯಪಂಡಿತಾಃ ॥
ಧಾರಯೇತ್ಸಮತಾಕಂಥಾಂ ಕ್ಷಮಾಖ್ಯಾಂ ಭಸ್ಮಘೆಂಟಿಕಾಂ ।
ದಯಾಕಮಂಡಲುಂ ವತ್ಸ ಜ್ಞಾನದಂಡಂ ಮನೋಹರಂ ॥
ವೈರಾಗ್ಯಭಿಕ್ಷಾಪಾತ್ರಂ ಚ ಭಕ್ತಿಭಿಕ್ಷಾಂ ಚ ಯಾಚತೇ ।
ಕಂಥಾಕಮಂಡಲುರ್ದಂಡಃ ಖರ್ಪರೋ ಭಸ್ಮಭಸ್ತ್ರಿಕಾಃ॥
ಏತಾಃ ಪಂಚಮಹಾಮುದ್ರಾ ಜಂಗಮಾನಾಂ ಚ ಲಕ್ಷಣಂ ।

—ವೀರಾಗಮ

ಎಲೌ ಪಾರ್ವತಿಯೇ ನಾನೇ ಜಂಗಮದೇಹವನ್ನು ಧರಿಸಿಕೊಂಡು ಭಕ್ತರನ್ನು ಉದ್ಧರಿಸಲೋಸುಗ ಭೂಮಿಯಲ್ಲಿ ಸಂಚರಿಸುತ್ತಿರುವೆನು. ಪಂಡಿತ ರಲ್ಲದವರು ಹಸ್ತ ಪಾದಾದಿಗಳನ್ನು ನೋಡಿ ಎಲ್ಲ ಮಾನವರಂತೆ ಭಾವಿಸುವರು. ಅಂಥವರು ಜಂಗಮನ ಸ್ವರೂಪವನ್ನು ತಿಳಿಯರು. ಸಮತೆಯೆಂಬ ಕಂಥೆಯನ್ನು ಕ್ಷಮೆಯೆಂಬ ಭಸ್ಮಘೆಂಟಿಕೆಯನ್ನು, ದಯೆ ಎಂಬ ಕಮಂಡಲವನ್ನು, ಜ್ಞಾನವೆಂಬ ದಂಡವನ್ನು, ವೈರಾಗ್ಯವೆಂಬ ಭಿಕ್ಷಾಪಾತ್ರೆ ಎಂಬ ಅಂತರ್ಮುದ್ರೆ ಯನ್ನು ಧರಿಸಿಕೊಂಡು ಯಾವಾಗಲೂ ಭಕ್ತಿಯೆಂಬ ಭಿಕ್ಷೆಯನ್ನು ಯಾಚಿಸು ತ್ತಿರುವರು. ಮತ್ತು ಕಂಥೆ, ಕಮಂಡಲು, ದಂಡ, ಖರ್ಪರ, ಭಸ್ಮಘೆಂಟಿಕೆ

ಯೆಂಬ ಸ್ಥೂಲ ಪಂಚಮುದ್ರೆಗಳನ್ನು ದೇಹದಲ್ಲಿ ಧರಿಸಿ ಸಂಚರಿಸುತ್ತಿರುವವ
ಜಂಗಮನೆನಿಸುವನು.

ಹೀಗೆ ಅಂತರಂಗದ ಪಂಚಮುದ್ರೆಗಳನ್ನೂ ಬಹಿರಂಗದ ಮುದ್ರೆಗಳನ್ನು
ಧರಿಸುತ್ತ, ಗುರುಲಿಂಗಾದ್ಯಷ್ಟಾವರಣಯಾಳಿಂದ ಕೂಡಿದವನಾಗಿ, ಕ್ರಿಯಾಜ್ಞಾ
ನಿಷ್ಠನಾಗಿರುವವನೇ ಜಂಗಮನೆನಿಸುವನು. ಇಂತಪ್ಪ ಜಂಗಮನ ದರ್ಶ
ಸ್ಪರ್ಶನ, ಸಂಭಾಷಣ, ಪೂಜನ ತೀರ್ಥಪ್ರಸಾದಸೇವನಾದಿಗಳು ಲಿಂಗಾ
ಸಾಮರಸ್ಯರೂಪಮುಕ್ತಿಗೆ ಸಾಧಕವೆಂದರಿಯತಕ್ಕುದು ಎಂಬಲ್ಲಿಗೆ—

ನಾಲ್ಕನೆಯ ಪ್ರಕರಣವು ಪರಿಸಮಾಪ್ತವಾದುದು.

ಪರಜಂಗಮನ ಲಕ್ಷಣ

ಬ್ರಹ್ಮ, ವಿಷ್ಣು, ಇಂದ್ರಾದಿದೇವತೆಗಳು, ಅಷ್ಟಭೋಗಗಳು, ಅಷ್ಟೈಶ್ವರ್ಯಗಳು; ಇತರ ಲೌಕಿಕ ಐಶ್ವರ್ಯಗಳು ಇವೆಲ್ಲವನ್ನೂ ಹುಲ್ಲುಕಡ್ಡಿಗೆ ಸಮವೆಂದು ಭಾವಿಸುವಾತನೇ ಪರಜಂಗಮನು. ಮತ್ತು ತಪಶ್ಶಕ್ತಿಯಿಂದ ಪಡೆಯುವ ಎಲ್ಲ ರೀತಿಯ ಸಿದ್ಧಿಗಳು, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ನಶ್ವರಗಳೆಂದು ಅರಿಯಬೇಕಲ್ಲದೆ ಮೂರು ಲೋಕಗಳನ್ನೂ ತೃಣಸಮಾನಗಳೆಂದು ಭಾವಿಸಬೇಕು || ೪೫-೫೬ ||

ಈ ಭೂಲೋಕವೇ ಮುಂತಾದ ಸಕಲಲೋಕಗಳಲ್ಲಿಯೂ ದೊರೆಯುವ ಸಕಲ ಭೋಗ್ಯವಸ್ತುಗಳೂ, ಸುವರ್ಣ, ರತ್ನ ಇವುಗಳ ಆಭರಣಗಳೂ ಕೂಡ ತೃಣಸಮಾನವೆಂದು ಭಾವಿಸಿ, ಎಲ್ಲವನ್ನೂ ತ್ಯಜಿಸಿ, ಇತರ ಸಂಪತ್ತುಗಳನ್ನು ಲಕ್ಷಿಸದೆ, ಎಲ್ಲಿ ತನ್ನ ಮನಸ್ಸು ಆಸೆಗೆ ಒಳಪಡುವುದಿಲ್ಲವೋ ಅಲ್ಲಿ ಮಾತ್ರ ಸಂಚರಿಸಬೇಕು. ಅವನೇ ಪರಜಂಗಮನು. || ೫೭-೫೮ ||

ಪರಜಂಗಮನ ದೃಷ್ಟಿಯಲ್ಲಿ, ಸುವಾಸನೆ ಕೊಡುವ ಶ್ರೀಗಂಧ, ದುರ್ವಾಸನೆಯುಳ್ಳ ಕೆಸರು ಇವೆರಡೂ ಒಂದೇ. ಇದೇ ರೀತಿ ಮಲ್ಲಿಗೆ ಹೂ, ದತ್ತೂರಿ ಹೂವು, ಕಬ್ಬಿಣ, ಚಿನ್ನ; ವಿಷ, ಅಮೃತ; ರುಚಿಕರವಾದ ಮೃಷ್ಟಾನ್ನ ಮತ್ತು ರೊಟ್ಟಿ; ತರಕಾರಿ, ಶಾಲ್ಯನ್ನ; ಹಾಲು, ನೀರು; ಮಂಚ, ನೆಲ; ಹತ್ತಿಬಟ್ಟೆ, ರೇಶ್ಮೆ ವಸ್ತ್ರ; ಗಾಜು, ರತ್ನ; ರಾಜ, ಭಿಕ್ಷುಕ; ಶ್ರೀಮಂತ, ಬಡವ; ಗಂಗಾನದಿ, ಚಿಕ್ಕಕೊಳ; ಶ್ಮಶಾನ, ದೇವಸ್ಥಾನ; ಮನುಷ್ಯರ ಮಾತು, ಮಂತ್ರ ಇವೆಲ್ಲವೂ ಸಮಾನವಾದವುಗಳು. ಸತ್ಯ, ಅಸತ್ಯ; ಶುಭ, ಅಶುಭ; ಹುಲಿ, ಆಡು; ಹಾವು, ಕ್ರಿಮಿ; ಇಂತಹ ಪರಸ್ಪರ ವಿರುದ್ಧ ವಸ್ತುಗಳಲ್ಲಿಯೂ ಪರಜಂಗಮನು ವಿರುದ್ಧ ಭಾವನೆಯುಳ್ಳವನಾಗುವುದಿಲ್ಲ.

|| ೫೯-೬೦-೬೧-೬೨ ||

ಪರಜಂಗಮನಿಗೆ ಅತ್ಯವಶ್ಯಕವಾಗಿ ಬೇಕಾಗುವ ವಸ್ತುಗಳೂ ಇರುವುದಿಲ್ಲ. ಎಲ್ಲ ವಸ್ತುಗಳಲ್ಲಿಯೂ ಏಕಭಾವನೆಯಿಂದ ಅಥವಾ ಸಮದೃಷ್ಟಿಯಿಂದ ವರ್ತಿಸುವನು. ಭೋಗ್ಯವಸ್ತುಗಳಲ್ಲಿ, ದ್ರವ್ಯರಾಶಿಗಳಲ್ಲಿ, ಅವನಿಗೆ ಆಸೆಯೇ ಬುದೇ ಇರುವುದಿಲ್ಲ. ಎಲ್ಲ ವಸ್ತುಗಳಿಂದಲೂ ಅವನು ತೃಪ್ತಿಪಡುವನು. ಎಂತಹ ಪದಾರ್ಥಗಳಿಂದಲೂ ಅವನು ಸದಾ ಆನಂದಪಡುವನು.

ತನ್ನ ಪಾದದರ್ಶನದಿಂದ ತನ್ನ ಭಕ್ತರಿಗೂ, ಇತರರಿಗೂ, ಮೃಗಪಕ್ಷಿಗಳಿಗೂ ಮುಕ್ತಿಯನ್ನು ಕರುಣಿಸುವನು. ॥ ೭೩-೭೪-೭೫ ॥

ಬ್ರಹ್ಮ, ಇಂದ್ರ ಮುಂತಾದ ಸಕಲ ದೇವತೆಗಳಿಗೂ ದುರ್ಲಭವಾದ ಮುಕ್ತಿಯನ್ನು ಈ ಪರಜಂಗಮನು ಕರುಣಿಸಬಲ್ಲನು. ತನ್ನ ಪಾದೋದಕವನ್ನೇ ಪವಿತ್ರ ತೀರ್ಥವನ್ನಾಗಿ ಮಾಡಿಕೊಂಡು, ಪಾಪರಹಿತನಾಗಿ ಲೋಕಕ್ಕೆ ಕ್ಷೇಮವನ್ನು ಹಾರೈಸುತ್ತಾ ಎಲ್ಲೆಲ್ಲೂ ಸಂಚರಿಸುವನು. ಆದೇ ಪರಜಂಗಮನ ವೈಶಿಷ್ಟ್ಯ. ॥ ೭೬-೭೭ ॥

ಈ ಪರಜಂಗಮನೇ, ಸಾಕ್ಷಾತ್ ಬ್ರಹ್ಮನು, ಪರಿಶುದ್ಧಾತ್ಮನು, ಮಹಾಯೋಗಿಯು. ಈಶತೇ ಸತ್‌ಸ್ವರೂಪನೆನಿಸಿ, ಸ್ಥಿರನಾಗಿರುವನು. ಈತನಿಗೆ ದೇಹವಿದ್ದರೂ ದೇಹವಿಲ್ಲದ ಆತ್ಮಸ್ವರೂಪನೆನಿಸಿ ಗುಣವುಳ್ಳವನಾಗಿದ್ದರೂ ನಿರ್ಗುಣಿಯಾಗಿ ವ್ಯವಹರಿಸಿಸುವನು. ಎಲೌ ಪಾರ್ವತಿಯೇ! ಇವನಿಗಿರುವ ಮಹಿಮೆಯನ್ನೂ ಇವನಲ್ಲಿರುವ ವಿಶೇಷ ಗುಣಗಳನ್ನೂ ವರ್ಣಿಸಿ ಹೇಳಲು ನನ್ನಿಂದಲೂ ಸಾಧ್ಯವಿಲ್ಲ. ಎಂದು ಪರಮೇಶ್ವರನು ಪಾರ್ವತಿಗೆ ಹೇಳಿದನು.

॥ ೭೮-೭೯ ॥

ಹೀಗೆ ಶಿಲಾಲೇಖದ ವಿಷಯದಲ್ಲಿ ಮೂರು ಭಾಗವಾಗಿ ವಿಂಗಡಿಸಿ ಇದುವರಿಗೂ ಮೊದಲ ಭಾಗದ ವೈಶಿಷ್ಟ್ಯವನ್ನು ವಿವರಿಸಿದ್ದಾಯಿತು. 2ನೇ ಭಾಗದ ಶ್ರೀ ಗುರುವು ಶಿಷ್ಯರಿಗೆ ಷಟ್‌ಸ್ಥಲ ಮಾರ್ಗದ ಭೋದೆಯನ್ನು ಮಾಡುವಂದನು ಈ ಹಿಂದಿನ ಇತರ ಪುಟಗಳಲ್ಲಿ ವಿವರಿಸಲಾಗಿದೆ. 3ನೇ ಭಾಗದ ಯಡೆಯೂರು ಸ್ಥಳದ ಪರಂಪರೆಯನ್ನು ಈ ಮುಂದೆ ವಿಷದವಾಗಿ ವಿವರಿಸಲಾಗುತ್ತಿದೆ.

ಕೊಡಗೀಹಳ್ಳಿಯ ದೇವರು ತಾವು ಪಡೆದ ಮಠದ ಭೂಮಿಯಲ್ಲಿ ತೋಂಟದ ಸ್ವಾಮಿಗೆ ತಮ್ಮ ಭಕ್ತಿಯಿಂದ ಕಟ್ಟಿಸಿಕೊಟ್ಟ ಮಠ ಎಂದು ಮೊದಲ ಪಂಗ್ತಿಯಲ್ಲಿ ಬರೆದಿರುತ್ತದೆ ||

ತೋಂಟದ ಸ್ವಾಮಿಯ ಪಾದ ಪದ್ಮಾರಾಧಕರ ದಾನಿವಾಸ ನಿವಾಸಗಳಾದ ಚನ್ನರಾಯ ವಡೆಯರ ಮಕ್ಕಳು. ಲಿಂಗಪ್ಪ ವಡೆಯರು, ಲಿಂಗಪ್ಪ ವಡೆಯರ ಮಕ್ಕಳು. ಪಾದೋದಕ ಪ್ರಸಾದ ಸಂಪನ್ನರಾದ ಚನ್ನವೀರಪ್ಪ ವಡೆಯರು, ಚನ್ನವೀರಪ್ಪ ವಡೆಯರ ಸತಿ ಪಾರ್ವತಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದ ಸ್ವಾಮಿಗೆ ಕಲ್ಲುಮಠವ ಕಟ್ಟಿಸಬೇಕೆಂದು ಚಿಟ್ಟಿಗ ದೇವರಿಗೆ ಪದಾರ್ಥವಂ ನಮಸ್ಕಾರವಂ ಮಾಡಲಾಗಿ ಭಕ್ತಿ ಪದಾರ್ಥವಂ ಕೈಕೊಂಡು ಯಡೆಯೂರಿಗೆ ಬಿಜಯಂಗೈದು ತೋಂಟದ ಸ್ವಾಮಿಗೆ ಕಲ್ಲುಮಠ ವನ್ನು ಎಂಟು-ಬಗೆಯ ಜಡೆಯ ಹಿರಿಯರು ಚಿಟ್ಟಗದೇವರು-ಕಟ್ಟಿಸಿದರು-ಎಂದು ನಮೂದಿಸಿದೆ ಮತ್ತು ಎಡೆಯೂರ ಸ್ಥಳದಲ್ಲಿ ಅದರೊಡಗಿ ಮಾಸ್ಯ-ನಿತ್ಯ ಬಂದ ಕಾಣಿಕೆ ಸೀವೆಮೇಲೆ ತಂದ. ನಂದಾದೀಪದ ಕಾಣಿಕೆ ಇಷ್ಟು ಈ ಮಠದ ಹಿರಿಯರು. ಪಚ್ಚೀ ಕಂತೆಯ ಚನ್ನಮಲ್ಲಿಕಾರ್ಜುನ ದೇವರು ಎಂಟು ಜಡೆಯ ಬಗೆಯ ಹಿರಿಯರು ಚಿಟ್ಟಗದೇವರು ಪಡೆದ ಪುರವರ್ಗವು-ಸಮ್ಮುಖದಲ್ಲಿ ಬಂದ ಕಾಣಿಕೆ ತೋಂಟದ ಸ್ವಾಮಿಯ ದಾಸೋಹದ ದ್ರವ್ಯ, ಈ ಮಠದಲ್ಲಿ ತೋಂಟದ ಸ್ವಾಮಿಯ ದಾಸೋಹವನ್ನು ಚಿಟ್ಟಗದೇವರು ಪಡೆದರು. ವಡೆಯರು ಭಕ್ತರು ಎಂದು ವಗೈರೆ ಬರೆದಿರುದಿರುತ್ತದೆ.

ಶ್ರೀ ಸಿದ್ಧಲಿಂಗಶಿವಯೋಗಿಗಳು, ಭೂಲೋಕ ಸಂಚಾರ ಮಾಡಿಕೊಂಡು ಎಡಿಯೂರಿಗೆ ದಯಮಾಡಿಸುವುದಕ್ಕೆ ಮುಂಚೆ ನೂರಾರು ವರ್ಷದ ಹಿಂದಿನಿಂದ ಶಿಲಾಲೇಖದ ಮೊದಲ ಪಂಗ್ತಿಯಲ್ಲಿ ಬರೆದಿರುವ ಪ್ರಕಾರ ಶ್ರೀ ಶ್ರೀ ಜಗದ್ಗುರು ರೇಣುಕಾಚಾರ್ಯರ ಪೀಠದ ಶಾಖಾ ಮಠದವರಾಗಿ ಈ ಮೂಲಪುರುಷರಾಗಿ ಮಾನ್ಯ ಕೊಡಗಿ ಮುಂತಾದ್ದನ್ನು ಪಡೆದ ವೀರಶೈವ ಮಠದ ಅಪ್ರಾಕೃತ ಮ ಹೇ ಶ್ವ ರ ರಾ ಗಿ ಯಿದ್ದರೆಂಬುದು, ವ್ಯಕ್ತವಾಗುವುದಲ್ಲದೆ ವಂದನೆಯ ಚನ್ನರಾಯ ವಡೆಯರಿಂದ ಮೂರನೆಯವರಾದ ಚನ್ನವೀರಪ್ಪ ವಡೆಯರಿಗೆ ನಾಲ್ಕನೆಯವರಾದ ಚಿಟ್ಟಗದೇವರು ಮತ್ತು ಪಚ್ಚೆಕಂತೆ ಚನ್ನಮಲ್ಲಿಕಾರ್ಜುನ

ವಡೆಯಸೆಂಬ ಇಬ್ಬರು ಮಕ್ಕಳಿದ್ದು ಮೊದಲೆಯವರಾದ ಚಿಟ್ಟಗದೇವರು ಶ್ರೀ ರೇಣುಕಾಚಾರ್ಯರ ಪೀಠದ ಶಾಖಪಟ್ಟದ ದೇವರಾಗಿರುವದಾಗಿಯು ವ್ಯಕ್ತವಾಗು ವುದರಲ್ಲಿ ಎಂಟು ಜಡೆಯ ಬಗೆ ಹಿರಿಯರು ಚಿಟ್ಟಗದೇವರು ಕಲ್ಲುಮಠವನ್ನು ಕಟ್ಟಿಸಿದರೆಂದು. ಈ ಪಟ್ಟದ ಚಿಟ್ಟಗದೇವರು. ಪುರವರ್ಗ ಅಂದರೆ ವೀರಶೈವ ಸಂಸ್ಕೃತಿಯ ಪ್ರಕಾರ ಪಟ್ಟದವರ ಮತ. ಕೊಡಗಿ ಮಾನ್ಯ ಶಿಷ್ಯವರ್ಗವನ್ನೆಲ್ಲಿ ಶ್ರೀ ಸಿದ್ಧಲಿಂಗಸ್ವಾಮಿಗೆ ಒಪ್ಪಿಸಿದರೆಂಬುದ ಉದಹರಿಸಿರುತ್ತದೆ. ಚಿಟ್ಟಗದೇವರಿಗೆ ಎಲ್ಲಾ ಶಿಷ್ಯ ಮಂಡಲಿಯೊಡನೆ ಇವರಿಗೆ ಷಟ್‌ಸ್ಥಳ ಮಾರ್ಗದ ಸದ್ಬೋಧೆ ಯಾದ್ದರಿಂದ ಇವರು ತುಂಬಾ ವೈರಾಗ್ಯ ಶಾಲಿಗಳಾದರಂ॥

ಈ ಹಿಂದೆ ನಿರಂಜನ ಪ್ರಭು ಪರಂಪರೆಯನ್ನು ವಿವರಿಸಿದ್ದಾಗಿರುತ್ತೆ ಇನ್ನು ಶ್ರೀ ರೇಣುಕಾದಿ ಪಂಚಾಚಾರ್ಯರ ಪರಂಪರೆಯನ್ನು ವಿವರಿಸಲಾಗುತ್ತದೆ.

ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ಶ್ರೀ ಸಿದ್ಧರಾಮೇಶ್ವರರಿಗೆ ಶ್ರೀ ಚನ್ನಬಸವಣ್ಣನವರು ಶಿವಲಿಂಗದೀಕ್ಷಾ ಸಂಸ್ಕಾರವನ್ನು ಅದಕ್ಕಾಗಿ ಪೂಜೆ ಸಿದ್ದ ಪಂಚ ಕಲಶಗಳ ತೀರ್ಥವನ್ನು ಸಿದ್ಧರಾಮಣ್ಣನವರಿಗೆ ಸಂಪ್ರೋಕ್ಷಿಸಿದಾಗ ಅವರು ಈ ಕಲಶಗಳ ವಿಶಯವಾಗಿ ಪ್ರಶ್ನೆ ಮಾಡಿದ್ದಕ್ಕೆ ಚನ್ನಬಸವಣ್ಣನವರು ಅಪ್ಪಣೆ ಕೊಡಿಸಿದ ರೇಣುಕಾದ್ಯಚಾರ್ಯರ ವಿಷಯವು ವಿಜಯನಗರ ಸಾಮ್ರಾಜ್ಯದ ಆಸ್ಥಾನ ಪಂಡಿತರಾದ ವಿರುಪಾಕ್ಷ ಪಂಡಿತ್‌ರವರು ಬರೆದಿರುವ ಚನ್ನಬಸವೇಶ್ವರ ಪುರಾಣದ ೬೯೭ನೇ ಪುಟ ೧೭ನೇ ಪದ್ಯಗಳಿಂದ ಈ ರೀತಿ ತಿಳಿಯುತ್ತದೆ.

ವರ ವಿಭೂತಿಯ ಪಟ್ಟ ರುದ್ರಾಕ್ಷಿಯಿಂದಲಂಕರಿಸಿ /
ದರ್ಭಾಂಕುರದೆ ತತ್ಕಲಶಭರಿತ-ಜಲವಂ ತಳಿದು
ನಾಲ್ವರಾಜಾಚಾರ್ಯರೊಡನೇ ಕಲಶ ಪಂಚಕವಮಾಂ॥
ಹರುಷದಿಂ ಮೂರು ಸೂಳಿಂ ಸಿದ್ಧರಾಮ, ನುರು
ಸಿರಕೆತ್ತಿಯಭಿಷೇಚನಂ-ಗೈದು ಕಲಶಂ ಮರಳಿ
ತತ್ಕಲಶದೊಳಿರಿಸಿ ಪರಿಶುದ್ಧನಂ ಮಾಡಿದು-ಕರುಣವಿದೆ ॥ ೧೭ ॥
ವಿವರಿಸಲ್ಪಳಕಲಾ ಚನ್ನಬಸವೇಶ್ವರಂ
ತ್ರಿವಿಧ ದೀಕ್ಷೆಗಳಿಂವೆ ತ್ರಿವಿಧ ಲಿಂಗಗಳಂ

ತ್ರಿವಿದಾಂಗದೊಳ್ ದೀಕ್ಷೆಯಂ ಮಾಡಿ ತ್ರಿವಿದಮಲಮಂಬಿಡಿಸಿ
ಭೇದಿಸಲ್ಕೆ ||

ಸತ್ಯ ಸಿದ್ಧರಾಮನಾ ಗುರು ಮುಖ್ಯ ಸಕಲಗಣ
ನಿವಹಕ್ಕೆ ಸಾಷ್ಟಾಂಗದಿಂದೆರಗಿ ಕುಳಿತು
ಮುಕ್ತ್ಯಾವಿರಳಾನಂದದೀ ಕಲಶದಿರವ ನೆನಗು ಸುರೆಂದೊದೀತೆಂದನು
||| ೧೮ ||

ಅದೆಂದಾಲಿಸುರಾಮ ಪರಶಿವತಾಂ-ತ್ರಿವಿಧ
ಬೇದದಿಂ-ಗುರುಲಿಂಗಚರವೆನಿಸಿ ತನ್ನಯ ವಿ
ನೋಡದಿಂ-ಪಂಚಸಾರಿಖ್ಯದಿಂ ಪರಚಕಲೆಗಳ ನೈದೆ ಗುರುವೆ ಬಳಿಕ ||
ಸಾದರದೊಳಾನಂದಿವಾಹಂ ಪರಾಶಕ್ತಿ
ನಾದ ಚಿತ್ರ್ರಣವ ಮತ್ತಂ ಮಿಸುನಿಗಳಶದಿಂ
ದಾದಯಾಧಿಯನಿಪ ಸದ್ಗುರುವೀನಾಲ್ವರ್ಗೆ ದೀಕ್ಷೆಯಂ ಪಾಲಿಸಿದನು
|| ೧೯ ||

ವಿವರಿಸುವನುಂ ನಾಲ್ವರಾರೆ ನಲ್ಕಾಂ ಸದಾ
ಶಿವನೀಶ್ವರಂ ಮಹೇಶಂ ರುದ್ರರೆನಿಪರ್ಗೆ
ಶಿವದೀಕ್ಷೆ ವಡೆದಾರ್ಯರಾಗಿಯೂ ಸಕಲಗಣಕುಲಕೆ ದೀಕ್ಷೆಯನೆ ಮಾಡಿ ||
ತವೆ-ಹರಿಯಜೇಂದ್ರರ್ಕಾದಿ ದಿಕ್ಪಾಲ
ನಿವಹಕಂ ನರಸುರೋರಗ ಗರುಡಗಂದರ್ವ
ದಿವಿಜ ರಾಕ್ಷಸ ಯಕ್ಷ ಸಿದ್ಧ ವಿದ್ಯಾಧರ ಕಿಂಪುರುಶರ್ಗೆ ಕಿನ್ನರಾಧಿಶರ್ಗೆ
|| ೨೦ ||

ತಿಳಿಯೆ ಮನು ಮುನಿ ಪಿಶಾಚಾವಳಿಗೆ ಕಿಂಪುರುಷ
ಕುಲಕಾವರ ಶೈವಾಗವೋಕ್ಷ ಪ್ರಕಾರದಿಂ
ನಲವಿನಂದೀಕ್ಷಿಯಂಮಾಡಿ ಮರ್ತ್ಯದ ಜನರ ಭವಮಂಕಳೆದು |||
ಇಳೆಯೊಳಿವರಂಶದಿಂ ರೇವಣಸಿದ್ಧ ನಂ
ನಿರ್ಮಲ—ಮರಳು ಸಿದ್ದನೇಕೋರಾಮ ನತುಳಗುಣ
ನಿಳಯರಾ ಪಂಡಿತಾರಾಧ್ಯರಾದರ್ ಕ್ರಮದೊಳವರಿಂ ನೀ ಕೇಳ್ವುದು
|| ೨೧ ||

ಪರಿವಿಡಿಯೊಳಾ ರೇವಣಂಗಾದಿಶಕ್ತಿ ತ
ತ್ಪುರುಷ ಮುಖ ಮೆಂಟು ಜಡೆಯೊಳಾದಂಡಂ ಮೆಯ್ಲಿ
ಕರಿಯ ಕಂಬಳಿಯ ಕುಪ್ಪಸ ಕಂತೆ ಬ್ರಹ್ಮಚರಿಯಾಶ್ರಮ ಲೋಹದಿಂ
ವಿರಚಿಸಿದ ಮುರಿವಾತ್ರೆಯಂ ಕುಂಡಲಂ ತನ್ನ
ಕರದಿನಗಲಿದ ಶಾಂತಮಲ್ಲಿಕಾರ್ಜುನ ಲಿಂಗ
ಮರುಪ್ರಣವ ಮಂತ್ರವಾದುಗ್ವೇದ ಮತುಳಕೇಸರಿ ವಾಹನಂ ಕೇಳ್ವುದು
॥ ೨೨

ನಕ್ಷತ್ರ ಪರ್ವತದ ತಪದೊಳಿರ್ಪರಿ ಕಲ್ಪ
ವೃಕ್ಷದಡಿಯಲ್ಲಿ ಪದ್ಮಾಸನಕ್ಕೆ ಶಿವಾ ತಾಂ
ರಕ್ಷುಚರ್ಮದೊಳೆ ಗದ್ದುಗೆ ಭಸ್ಮ ರುದ್ರಾಕ್ಷಿಯಿಂ ತನ್ನ ಶಿಷ್ಯಕುಲಕೆ
ದೀಕ್ಷೆಗೈಯಲ್ಲಿ ವರಪಾರಿಜಾತದ ತಳರಪಕ್ಷದಿಂದೆಸವ
ಲೋಹದ ಕಲಸಮಂ ಸಹ ಸಹಾಸ್ರಾಕ್ಷ
ದಿಕ್ಕಿನೊಳೆಟ್ಟು ಪೂಜಿರ್ಪತು ಸಿದ್ದರಾಮೇಶನಿಂ ಕೇಳೆಂದನು ॥ ೨೩
ತಿಳಿಮರಳ ಸಿದ್ಧೇಶ್ವರಂಗ ಗೋರಾಸ್ತ್ರದಿಂ
ಮೊಳೆವ ಬಹುಸಿಕಿಗಳಿಪ್ಪಾ ಶಕ್ತಿ ತಿರುಗು ಗಂಬಳಿ ಕಂಥೆ
ಲೋಹದಿಂ ಮಾಡಿದಮುರಿಪಾತ್ರೆಯಂ ಕುಂತಳಂ ಕೈಯ್ಯಳು ॥
ತೊಳಗುವ ಕುಠಾರದಂಡಂ ಛಾಯೊಳ್ ಮೊಳೆವ
ದೊಳೆ ಕಪಿಲ ಸಿದ್ಧ ಸನ್ಮಲ್ಲಿಕಾರ್ಜುನಲಿಂಗ
ದೊಲವ ಷಡಕ್ಷರಿಯ ಮಂತ್ರಂ ಯಜುರ್ವೇದ ಮಾತಂದೆ ಕೀಳೆಂದನು
॥ ೨೪

ಬಿಡದೆ ವುಲಿವಾಹನಂ ಯತ್ಯಾಶ್ರಮಂ ಸಮಂ
ಬಿಡೆ ಕುಮಾರಾದ್ರಿಗಳ ಮಂದಾರ ತರುಪಂ
ಬಿಡದೆ ಮೃಗಚರ್ಮದೋಳ್ ಗೋಮುಖಾಸನದೊಳಿರ್ಪಂಭಸ್ಮ
ರುದ್ರಾಕ್ಷಿಯು
ಪೊದೆಗಳಿಂ ಶಿಷ್ಯರ್ಗೆ ದೀಕ್ಷೆಯಂ ಕರುಣದಿಂ
ಕೊಡುವಲ್ಲಿ ದೂರ್ವಾಂಕುರಾದಿ ಕುಸುಮದೆ ತೆಂಕ

ಬೆಡೆಯಿಂಲೋಹದ ಕಳಶ ಮಾತಂಗೆ ಸಿದ್ಧರಾಮೇಶ ನೀ ಕೇಳೆಂದನು
|| ೨೫ ||

ಕ್ರಮದಿ ನೇಕೋರಾಮ ತಂದೆಗಂ ವಾಮದೇವ
ಮುಖ ವ್ಯೈಜಡೆ ಕಾವ್ಯಾಂಬರಂ ತಾಮ್ರದಿಂ
ಸಮೆದ ಮುರಿಯಂ ಪ್ಲಾ಼ ಕುಂಡಲಂ ಚಿತ್ರದಂಡಂ ಜ್ಞಾನಶಕ್ತಿಶಿಪಣೆ
ಅವರ್ದಿಪ್ಪ ಪರಭೋಗ-ಮಲ್ಲಿಕಾರ್ಜುನಲಿಂಗ
ಗುಹಾಂತ ಪಂಚಾಕ್ಷರಿ ಮಂತ್ರ ಮಂತ್ರಮುಖಕೆ
ವೇದಂ ಮರಾಳ ವಾಹನಮೆಸೆವುದಾತಂಗೆ ಕೇಳೆಂದನು || ೨೬ ||

ಭೂತಿ- ರುದ್ರಾಕ್ಷ ವಾನಪ್ರಸ್ತ ವಾಶ್ರಮದೊಳಾತನಿರ್ಪಂ
ಮೇರುಗಿರಿತಟದ-ವಟವೃಕ್ಷದಾತಡಿಯೊಳೆಸೆವೆ ಭದ್ರಾಸನಮರ್ದ
ಕಾಶಾಂಚನದ ಗದ್ದುಗೆಯೊಳು
ಪ್ರೀತಿಯಿಂ ದೀಕ್ಷೆಯಂ ಕೊಡುವಲ್ಲಿ ಪೊಂಬಾಳೆಯೇ
ತನಗಂಕಾರಮಾಂ ತಾಮ್ರದುರುಕಳಶ
ಮಾತಂಗೆ ಧನದಿಕ್ಕಿನೊಳಿರ್ಪುದುದು ಸಾಧ್ಯ ಲಕ್ಷಣಂ ಕೇಳೆಂದನು
|| ೨೭ ||

ವರಪಂಡಿತಾರಾಧ್ಯರಿಗೆ ಕ್ರಿಯಾಶಕ್ತಿ ಸಾನರದೇಶಶಿಖಿ
ಬಳಿರಿಸುದೆ ಬೆಳ್ಳಿಯಿಂ ಸಮೆದ ಮುರಿಯುಮಾಪಾತ್ರೆ
ಮೌಕ್ತಿಕ ಕುಂಡಲಂ ಮುಖಕೆ ವಿಮಲಸದ್ಯೋಚಾರವಂ
ತರದೊಳಾದೊಡ ಮದಿಕ ಕಕ್ಷದೊಳಗಾವಂಡಂ
ಧರಿಸಿಹುದು ವರಚನ್ನ ಮಲ್ಲಿಕಾರ್ಜುನಲಿಂಗ
ಮರುಹಂಸ ಪಂಚಾಕ್ಷರೀ ಮಂತ್ರಮೆಸೆವದರ್ಪಣ ವೇದಮುವಗೆಂದನು
|| ೨೮ ||

ಮತ್ತಗವಿವಾಹಂ ಗೃಹಸ್ತಾಶ್ರಮಂ ಬೆಲ್ಪು
ವೆತ್ತನೆಯ ಲಾಶ್ರಮ ಕುಂಚಾದ್ರಿ ತಪದಿನಮಾಡಿ
ಸೊತ್ತಿನೊಳಗುರು ಸುಖಾಸನಮರ್ದಪೊಸರನ್ನ ಗಂಬಳಿಯೋಳ್ ||
ಬಿತ್ತರದಿಕುಳ್ಳಿರ್ದ ಶಿಷ್ಯರ್ಗೆ ದೀಕ್ಷೆಗಳ

ದಿತ್ತು ರಕ್ಷಿಸುವಲ್ಲಿ ನಾಗವಲ್ಲೀದಳಂ
ಬೊತ್ತ ಬೆಳ್ಳಿಯ ಕಲಶದಿಂದೊಪ್ಪ ಗುರುವರುಣ ದಿಕ್ಕಿನೋಳ್ ಕೇಳೆಂದವು
|| ೨೯ ||

ಹರುಷದಿಂದಾಗಿ ನಾಲ್ಪ ಪಂಚಾರ್ಯರೊಡವಿರ್ದು
ಬರುತಿರ್ಪರುಗಯುಗಂಗಳೊಳ್ ಮರೆಕಿರಣದಿಂ
ದರೆಯ ಭಕ್ತರ್ಗೆ ದೀಕ್ಷೆಯನಿತ್ತು ರಕ್ಷಿಸುತ್ತಾಲಾಗೆಯವರಂಶದಿಂ ||
ಸಿರಿಯರು ಮುಮೂನಾಲ್ಕು ಕಳಸಂಗಳು ನಾಲ್ವನೆಯೊಳಿರಿಸಿ
ತನ್ಮಧ್ಯದೋಳ್ ಗುರುಕಲಶಮಂನಿಲಿಸಿ
ಪರಮಶಕ್ತಿಯೊಳೆ ತತ್ಕಲಶಮಂ ಗುರುಭಾವದೋಳ್ ಕಂಡುಪುರುಚಿ
ಸುವುದು || ೩೦ ||

ಮತ್ತು ಬಾಳೆ ಹಳ್ಳಿಯ ಪೀಠದ ಶ್ರೀ ಜಗದ್ಗುರು ಸೋಮಶೇಖರ ಸ್ವಾಮಿಗಳು ಎಂಟು ಜಡೆಯವರೆಂದು ನಿರಂಜನವಂಶ ರತ್ನಾಕರ ೨೩ನೇ ಪುಟದಲ್ಲಿ ಹೇಳಿರುವುದರಿಂದಲೂ ಚಿಟ್ಟಗದೇವರು ಈ ಶಾಕದ ಪಟ್ಟದ ಸ್ವಾಮಿಗಳೆಂದು ನಿರ್ಧಾರವಾಗುತ್ತದೆ.

ಮತ್ತು ಈ ಪಂಚಾಚಾರ್ಯರ ಉದ್ಭವದ ವಿಚಾರದಲ್ಲಿ ವೀರಶೈವ ಸದಾಚಾರ ಸಂಗ್ರಹದಲ್ಲಿ ೪ನೇ ಪುಟದಿಂದ ೧೪ನೇ ಪುಟದವರೆಗೆ ೫೭–೫೮.

ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ವಿಶ್ವಾರಾಧ್ಯ ಎಂಬ ಈ ಐದು ಹೆಸರಿನಿಂದ ಅವರು ಕಲಿಯುಗದಲ್ಲಿ ಪೂಜ್ಯರೆನಿಸುತ್ತಾರೆ. ಈ ಐದು ಜನರನ್ನೂ ನಾನು ನನ್ನ ಐದು ಮುಖಗಳಿಂದ ಸೃಷ್ಟಿಸಿ, ಅವರಿಗೆ ವೀರಶೈವಮತವನ್ನು ಸ್ಥಾಪಿಸಲು ಅಪ್ಪಣೆ ಮಾಡಿರುತ್ತೇನೆ.
|| ೩೨–೩೩ ||

ಅವರಿಗಿರುವ ಹೆಸರುಗಳನ್ನೂ, ಗೋತ್ರಗಳನ್ನೂ, ಸೂತ್ರ, ದಂಡ, ಕಮಂಡಲು, ಮಂತ್ರ, ಬೀಜ, ಪ್ರವರ, ಶಾಖೆ, ಕಂಥೆ, ವರ್ಣ ಮುಂತಾದವುಗಳನ್ನೂ ಪ್ರತ್ಯೇಕವಾಗಿ ವಿವರಿಸುತ್ತೇನೆ. ನಿಧಾನವಾಗಿ ಕೇಳು. ಈ ಐವರಲ್ಲಿ ಮೊದಲನೆಯವನೇ ರೇಣುಕನು, ಅವನು ನನ್ನ ಸದ್ಯೋಜಾತವೆಂಬ ಮೊದಲನೆಯ ಮುಖದಿಂದ ಉದ್ಭವಿಸಿದನು. ‖ ೩೪—೩೫ ‖

ರೇಣುಕನಿಗೆ ರೇವಣಾರಾಧ್ಯನೆಂಬುದು ಪ್ರಸಿದ್ಧವಾದ ಹೆಸರು, ಪಡಿವಿಡಿ ಎಂಬುದೇ ಅವನ ಸೂತ್ರ, ಅತಿವರ್ಣವೇ ಅವನ ವರ್ಣ, ಏಕಾಕ್ಷರವೇ ಅವನ ಪ್ರವರ, ಅರಳಿಮರದ ಡಂಡವೇ ಅವನ ದಂಡ, ಹಸರುಬಣ್ಣದ ಕಮಂಡಲು ಆತನದು, ನಕಾರವೇ ಮಂತ್ರಬೀಜ. ರೇಣುಕಶಾಖೆಯೇ ಆತನ ಶಾಖೆ, ಹಸುರಿ ಬಣ್ಣದ ಕಂಥೆ ರೇಣುಕಾರಾಧ್ಯನದು. ವೀರಗೋತ್ರಕ್ಕೆ ಮೂಲಪುರುಷನೇ ರೇಣುಕಾರಾಧ್ಯನು. ‖ ೩೬-೩೭-೩೮ ‖

ವಾಮದೇವನೆಂಬ ನನ್ನ ಎರಡನೆಯ ಮುಖದಿಂದ ಉದ್ಭವಿಸಿದವನೇ ದಾರುಕನು. ಮರುಳಾರಾಧ್ಯನೆಂಬುದೇ ಅವನ ಹೆಸರು. ವೃಷ್ಟಿಸೂತ್ರ, ಅತಿವರ್ಣವೇ ಈತನ ವರ್ಣ, ದ್ವ್ಯಕ್ಷರ ದಾರುಕನ ಪ್ರವರ, ಮುತ್ತುಗದ ದಂಡವೇ ಆತನ ದಂಡ, ಕಮಂಡಲು ತಾಮ್ರವರ್ಣದ್ದು. ಮಕಾರವು ಮಂತ್ರಬೀಜ. ದಾರುಕಶಾಖೆಯೇ ಈತನ ಶಾಖೆ. ತಾಮ್ರದ ಕಲಶಕ್ಕೆ ಮುಖವೇ ವಾಮದೇವ ಮುಖ. ಅವನ ಕಂಥೆ ಕೆಂಪುಬಣ್ಣವುಳ್ಳದ್ದು. ನಂದಿಗೋತ್ರದ ಅವರ ಲಕ್ಷಣವು ಹೀಗಿದೆ. ‖ ೩೯-೪೦-೪೧ ‖

ಅಘೋರವೆಂಬ ನನ್ನ ಮೂರನೆಯ ಮುಖದಿಂದ ಹುಟ್ಟಿದವನೇ ಶಂಕುಕರ್ಣ. ಏಕೋರಾಮಾರಾಧ್ಯ ಎಂಬುದು ಆತನ ಹೆಸರು, ಲಂಬನವು ಅವನ ಸೂತ್ರ. ತ್ರ್ಯಕ್ಷರವೇ ಆತನ ಪ್ರವರ. ಅತಿವರ್ಣವೇ ಆತನ ವರ್ಣ. ಬಿದಿರು ದಂಡವೇ ಅವನ ದಂಡ. ಕಬ್ಬಿಣದ್ದು ಆತನ ಕಮಂಡಲು, ಶಿಕಾರವು ಶಂಕುಕರ್ಣನ ಮಂತ್ರಬೀಜ. ಶಂಕುಕರ್ಣಕೆಯೇ ಆತನ ಶಾಖೆ. ಅಘೋರಮುಖವೇ ಅವನ ಕಲಶದಮುಖ. ಕಪೋತ (ಪಾರಿವಾಳ) ಪಕ್ಷಿಯ ಬಣ್ಣದ ಕಂಥೆಯೇ ಆತನದು. ಭೃಂಗಿ ಗೋತ್ರಕ್ಕೆ ಮೂಲಪುರುಷನೇ ಈತನು. ‖೪೨-೪೩-೪೪‖

ತತ್ಪುರುಷವೆಂಬ ನಾಲ್ಕನೆಯ ಮುಖದಿಂದ ಪ್ರಕಾಶಿತನಾದವನು ಧೇನು ಕರ್ಣನು. ಪಂಡಿತಾರಾಧ್ಯನೆಂಬುದು ಈತನ ಹೆಸರು. ಮುತ್ತುಗುಚ್ಛವೆಂಬುದು ಈತನ ಸೂತ್ರ. ವರ್ಣವೇ ಅತಿವರ್ಣ. ಚತುರಕ್ಷರವೇ ಪ್ರವರ. ಆಲದ ದಂಡವೇ ಆತನ ದಂಡ. ಕಮಂಡಲು ಕಂಚಿನದು. ವಾ ಎಂಬುದೇ ಬೀಜಾಕ್ಷರ. ಧೇನುಕರ್ಣಿಕಾ ಎಂಬುದೇ ಶಾಖೆ. \ ತತ್ಪುರುಷಮುಖದಿಂದ ಕೂಡಿದ ಕಲಶವು ಪಂಡಿತಾರಾಧ್ಯನದು. ಬಿಳಿಯವರ್ಣದ ಕಂಥೆ, ವೃಷಭಗೋತ್ರಕ್ಕೆ ಈತನೇ ಮೂಲ ಪುರುಷನು. ‖ ೪೫-೪೬-೪೭-೪೮ ‖

ಈಶಾನವೆಂಬ ಐದನೆಯ ಮುಖದಿಂದ ಉದ್ಭವಿಸಿದ ಆಚಾರ್ಯನೇ ವಿಶ್ವಕರ್ಣನು. ಆತನು ವಿಶ್ವಾರಾಧ್ಯನೆಂದು ಹೆಸರು ಪಡೆಯುವನು. ಪಂಚವರ್ಣವೇ ಅವನ ಸೂತ್ರ, ಪಂಚಾಕ್ಷರವೇ ಆತನ ಪ್ರವರವೆನಿಸುವುದು. ಅತಿವರ್ಣವೇ ವರ್ಣ, ಬಿಲ್ವದಂಡವೂ, ಸುವರ್ಣದ ಕಮಂಡಲವೂ ಆತನಿಗೆ ಪ್ರಿಯವಾದವುಗಳು. ‖ ೪೯-೫೦-೫೧-೫೨ ‖

ವಿಶ್ವಾರಾಧ್ಯನ ಮಂತ್ರಬೀಜವು ಯಕಾರ. ವಿಶ್ವಕರ್ಣಿಕವೇ ಶಾಖೆ. ಈಶಾನ ಮುಖದಿಂದ ಪ್ರಕಾಶಿಸುವ ಚಿನ್ನದ ಕಲಶವು ವಿಶ್ವಾರಾಧ್ಯನದು: ಹಳದಿಬಣ್ಣದ ಕಂಥೆ ಮತ್ತು ಸ್ಕಂದಗೋತ್ರಕ್ಕೆ ಅಧಿಪತಿಯು ಇವನೇ. ಮುಂದೆ ಹೇಳುವ ಉಪಸೂತ್ರಗಳಿಗೂ ಇವರೇ ಗುರುಗಳೆನಿಸುವರು-

ಚರಮೂರ್ತಿಗಳನ್ನು ಸ್ಥಾಪಿಸುವುದರಲ್ಲಿಯೂ ಪಟ್ಟಾಭಿಷೇಕವೇ ಮೊದಲಾದ ಶುಭಕರ್ಮಗಳಲ್ಲಿಯೂ, ಭಕ್ತರಿಗೆ ಅನುಗ್ರಹಿಸುವಾಗಲೂ, ಶತ್ರುಗಳನ್ನು ನಿಗ್ರಹಿಸುವಾಗಲೂ, ದೇವತಾ ಅವಾಹನಕಾಲದಲ್ಲಿಯೂ ಹಾಗೆಯೇ ಆವಾಹಿತರಾದ ದೇವತೆಗಳನ್ನು ವಿಸರ್ಜಿಸುವಾಗಲೂ ನನ್ನ ಮುಖದಿಂದ ಉದ್ಭವಿಸಿದ ಪಂಚಾಚಾರ್ಯರೇ ಗುರುಗಳೆನಿಸುವರು. ಅವರವರಿಗೆ ಹೇಳಿರುವ ಗೋತ್ರಗಳಿಗೆಲ್ಲಾ ಮೂಲಪ್ರವರ್ತಕರು. ಅವರೇ ಆಗುವರು. ‖ ೫೩-೫೪ ‖

ರೇಣುಕಾದಿಪಂಚಾಚಾರ್ಯರು ನನ್ನ ಮುಖದಲ್ಲಿ ಉದ್ಭವಿಸಿದವರಾದುದರಿಂದಲೇ ಇವರು ಸ್ವತಂತ್ರರೆನಿಸಿರುವರು. ಇವರಿಂದಲೇ ಹನ್ನೆರಡು ಉಪಸೂತ್ರದವರು ಉತ್ಪನ್ನರಾಗುವರು. ಆದರೆ ಅವರೆಲ್ಲರೂ ಸ್ವತಂತ್ರರಲ್ಲ;

ಮುಖ್ಯರಲ್ಲ. ಮಹಾಚಾರ್ಯರನ್ನು ಅನುಸರಿಸಿ ನಡೆಯತಕ್ಕವರು, ಇವರಿಗೆ ಗೋತ್ರ ಮತ್ತು ಸೂತ್ರಗಳು ಬೇರೆ ಬೇರೆ ಇವೆ. ‖ ೫೫-೫೬ ‖

ಒಂದೊಂದು ಗೋತ್ರಕ್ಕೆ ಶಾಖಾ, ಸೂತ್ರಾದಿಗಳು ಬೇರೆ ಬೇರೆಯಾಗಿವೆ. ಯಾವ ಗೋತ್ರಕ್ಕೆ ಯಾವ ಶಾಖೆಯೋ, ಯಾವ ಸೂತ್ರವೋ, ಯಾವ ಕಮಂಡಲವೋ, ಯಾವ ಕಂಥೆಯೋ, ಯಾವ ದಂಡವೋ ಗುರುವಾದವನು ಇವೆಲ್ಲವುಗಳಿಂದ ಕೂಡಿರಬೇಕು. ಹೀಗೆ ಪಂಚಗೋತ್ರಗಳಿಗೆ ಗುರುಗಳು ಹೇಳಲ್ಪಟ್ಟರು. ಈ ಪ್ರಕಾರದ ಗುರುವೇ ಪೀಠಾಧಿಕಾರಿಯೂ, ಪರಮಪೂಜ್ಯನೂ ಆಗುವನು. ಐದು ಸೂತ್ರದವರಿಗೆ ಐದು ಹೆಸರುಗಳು ಬೇರೆ ಬೇರೆಯಾಗಿವೆ. ಒಂದು ಮಹಾಸೂತ್ರಕ್ಕೆ ಹನ್ನೆರಡು ಉಪಸೂತ್ರಗಳಿವೆ. ಅವುಗಳ ಹೆಸರುಗಳು ಬೇರೆ ಬೇರೆ ಯಾಗಿವೆ. ಈ ಉಪಸೂತ್ರದವರಿಗೆ ಎಂದಿಗೂ ಸಿಂಹಾಸನಾಧಿಪತ್ಯವಿರುವುದಿಲ್ಲ. ‖ ೫೭-೫೮ ‖

ಹೀಗೆ ವೀರಶೈವ ಸದಾಚಾರ ಸಂಗ್ರಹದಲ್ಲಿ ಸುಪ್ರಭೇದಾಗಮೋಕ್ತವೂ ವೀರಶೈವ ಪ್ರಕಾಶಿಕೋಕ್ತವೂ ಆದ ಆಚಾರ್ಯೋತ್ಪತ್ತಿ ಕಥನವೆಂಬ ಪ್ರಥಮ ಪ್ರಕರಣವು ಪೂರ್ಣವಾದುದು.

ಎರಡನೆಯ ಪ್ರಕರಣ

ಸುಪ್ರಭೇದಾಗಮ ಮತ್ತು ವೀರಶೈವ ಪ್ರಕಾಶಿಕೆಯಲ್ಲಿ ವರ್ಣಿತವಾಗಿರುವಂತೆ ಈ ಪ್ರಕರಣದಲ್ಲಿ ಮಹಾಸೂತ್ರಗಳಿಂದ ಉದ್ಭವವಾದ ಉಪಸೂತ್ರಗಳು ಮತ್ತು ಅವುಗಳ ಹೆಸರುಗಳು ಉಕ್ತವಾಗಿವೆ.

ಪಂಚಾಚಾರ್ಯರಲ್ಲಿ ಮೊದಲನೆಯವರಾದ ರೇಣುಕಾಚಾರ್ಯರ ಸೂತ್ರವು ಪಡಿವಿಡಿ, ಆದರಲ್ಲಿ ಹನ್ನೆರಡು ಉಪಸೂತ್ರಗಳಿವೆ. ಅವುಗಳ ಹೆಸರು ಹೀಗಿದೆ, ೧) ಪುರಾಣ, ೨) ಪಚ್ಛಕಂಥಾ, ೩) ಷಡಂಗೀ, ೪) ಸುರಗೀ, ೫) ಮಹಿಷಿ, ೬) ದಿಗಂಬರ, ೭) ವೇಣೀ, ೮) ಭಿತ್ತಿ, ೯) ಮೋರಟ. ೧೦) ನಾಟ, ೧೧) ಶೌರಿ, ೧೨) ಸತ್ವರ. ॥ ೧-೨-೩ ॥

ಎರಡನೆಯ ಆಚಾರ್ಯರಾದ ದಾರುಕರ ವೃಷ್ಟಿಸೂತ್ರದಿಂದ ೧) ಕಾರ್ಬೋನ್ನ ೨) ಸ್ವರ್ಣಕಂಥಾ, ೩) ಸಿಂಗಿ, ೪) ಮಸಣಿ, ೫) ಕುರಾರ, ೬) ಭೈತ್ರೀ, ೭) ಕುಠಾರ, ೮) ಚಾಮರೀ, ೯) ಕವಾಟ, ೧೦) ಕುಕ್ಷಕಂಥಾ, ೧೧) ಜ್ವಲತ್ಕಂಥಾ, ೧೨) ಶೃಂಗಿ. ಎಂಬ ಹನ್ನೆರಡು ಉಪಸೂತ್ರಗಳು ಉದಯಿಸಿವೆ.

॥ ೪-೫-೬ ॥

ಮೂರನೆಯ ಆಚಾರ್ಯರೆನಿಸಿದ ಶಂಕುಕರ್ಣರ ಲಂಬಕವೆಂಬ ಮಹಾಸೂತ್ರದಿಂದ, ೧) ಗೋಣಿಕಂಥಾ, ೨) ದಂತೀ, ೩) ಜಠರ, ೪) ತ್ರಿಗುಣ ೫) ಕೇಶಕಂಥಾ, ೬) ಲಲಾಟ, ೭) ವ್ಯಾಘ್ರಕಂಥಾ, ೮) ಲೋಚನ ೯) ಭಗಿನೀ, ೧೦) ಜಾಲಕಂಥಾ ೧೧) ನಟನ. ೧೨) ಬೋದಡಿ, ಎಂಬ ಹನ್ನೆರಡು ಉಪಸೂತ್ರಗಳು ಹುಟ್ಟಿವೆ. ॥ ೭-೮ ॥

ನಾಲ್ಕನೆಯ ಧೇನುಕರ್ಣಾಚಾರ್ಯರ ಮುಕ್ತಗುಚ್ಛವೆಂಬ ಮಹಾಸೂತ್ರದಿಂದ ೧) ತ್ರಿಪುಟೀ, ೨) ರಜ್ಜುಕಂಥಾ, ೩) ಕಾಪೀ, ೪) ಭಸ್ಮಿ, ೫) ರಾಷ್ಟ್ರ

೬) ಕೌಷೀ, ೭) ಚಂದ್ರಗುಂಡ, ೮) ವೃತ್ಕಂಥಾ, ೯) ಅಲಕ, ೧೦) ವಸನ, ೧೧) ಮುಂಡೀ, ೧೨) ಖಡ್ಗೀ. ಎಂಬ ಉಪಸೂತ್ರಗಳು ಹನ್ನೆರಡು ಪ್ರಸಿದ್ಧ ವಾಗಿವೆ. ॥ ೯—೧೦ ॥

ಐದನೆಯವರಾದ ವಿಶ್ವಕರ್ಣರ ಮಹಾಸೂತ್ರವೆನಿಸಿದ ಪಂಚವರ್ಣ ಸೂತ್ರದಿಂದ, ೧) ಕಂಬಾಲ, ೨) ವೃಷಭ, ೩) ದಶಮುಖ, ೪) ರಜ್ಜುಕಂಥ ೫) ವೀಟಿ, ೬) ಪಂಚಮುಖ, ೭) ಗೋಚರ, ೮) ಗಗನ, ೯) ಮುಸಡೀ, ೧೦) ಲಗುಡೀ, ೧೧) ಶಿಥಿಲೀ, ೧೨) ಪಾಶುಪತ ಈ ಹನ್ನೆರಡು ಉಪಸೂತ್ರ ಗಳು ಉದ್ಭವವಾಗಿವೆ. ಪಾರ್ವತಿಯೇ ಹೇಗೆ, ಉಪಸೂತ್ರಗಳು ಐದು ಜನ ಮಹಾತ್ಮರಿಂದ ಉತ್ಪನ್ನಗಳಾದರೂ ಇವೆಲ್ಲವೂ ಅಸ್ವತಂತ್ರಗಳಾಗಿವೆ.

॥ ೧೧—೧೨—೧೩ ॥

"ಪರಶಿವನೇ! ಮಹಾಚಾರ್ಯರಿಂದ ಉದ್ಭವಿಸಿದ ಈ ಉಪಸೂತ್ರಗಳು ಹೇಗೆ ಅಸ್ವತಂತ್ರಗಳು ? ಇದನ್ನು ದಯೆಯಿಟ್ಟು ವಿಸ್ತರಿಸಿ ಹೇಳಬೇಕು" ಎಂದು ಪಾರ್ವತಿಯು ಮತ್ತೆ ಪ್ರಶ್ನೆಮಾಡಿದಳು. ॥ ೧೪ ॥

ಅದಕ್ಕೆ ಪರಮೇಶ್ವರನು ಹೀಗೆಂದನು. "ಗೌರಿಯೇ ಕೇಳು. ಮಹಾ ಸೂತ್ರಗಳು ಮತ್ತು ಪಂಚಾಚಾರ್ಯರು ನನ್ನ ಮುಖದಿಂದ ಹುಟ್ಟಿದವರು. ಆದರೆ ಈ ಉಪಸೂತ್ರಾವಲಂಬಿಗಳು ಸಾಕ್ಷಾತ್ತಾಗಿ ನನ್ನ ಮುಖದಿಂದ ಹುಟ್ಟಿದ ವರಲ್ಲ. ಆದುದರಿಂದಲೇ ಅವರೆಲ್ಲಾ ಅಸ್ವತಂತ್ರರು. ಅವರು ಸಾಮಾನ್ಯ ವೀರಶೈವರ ಮನೆಯಲ್ಲಿ ಪುರೋಹಿತರೆನಿಸುವರು. ಅವರು, ಲಿಂಗಧಾರಣೆ, ಉಪದೇಶ, ವಿವಾಹ, ಇವುಗಳನ್ನು ನಡೆಸುತ್ತಾ ಸಾಮಾನ್ಯ ಗುರುಗಳೆನಿಸುವರು.

॥ ೧೫—೧೬—೧೭ ॥

ಹೀಗೆ ಉಪಸೂತ್ರದವರು ಅಸ್ವತಂತ್ರರಾದರೂ ಮಹಾಸೂತ್ರಾವಲಂಬಿ ಗಳ ಉಪದೇಶ, ಅನುಗ್ರಹಬಲದಿಂದಲೂ, ಅವರ ಗೋತ್ರ, ಪ್ರವರ, ವರ್ಣ,

ಕಲಶ, ಮಂತ್ರ, ದಂಡ ಕಮಂಡಲು ಇವುಗಳನ್ನು ಧರಿಸುವಿಕೆಯಿಂದಲೂ, ವೀರ ಶೈವರ ಮನೆಗಳಲ್ಲಿ ಪೌರೋಹಿತ್ಯವನ್ನು ನಡೆಸುತ್ತ ಸಾಮಾನ್ಯ ಗುರುಗಳೆನಿಸಿ ಅವರಿಂದ ಸತ್ಕಾರಗಳನ್ನು ಪಡೆಯಬಲ್ಲರು ಎಂದು ಈಶ್ವರನು ಪಾರ್ವತಿಗೆ ಉಪದೇಶ ಮಾಡಿದನು. ||೧೮-೧೯-೨೦ ||

ಹೀಗೆ ವೀರಶೈವ ಸದಾಚಾರ ಸಂಗ್ರಹದಲ್ಲಿ ಸುಪ್ರಭೇದಾಗಮೋಕ್ತಿಯ ಪ್ರಕಾರ ಉಪಸೂತ್ರಗಳಿಗೆ ಸ್ವಾತಂತ್ರ್ಯವಿಲ್ಲದಿರುವಿಕೆಯನ್ನು ವಿವರಿಸಿದ ದ್ವಿತೀಯ ಪ್ರಕರಣವು ಸಮಾಪ್ತವಾದುದು.



ಬೋಳಬಸವಾರ್ಯರಿಗೆ ಉತ್ತರಾಧಿಕಾರ

ಹೀಗೆ ವೇದಾ ವೊಕ್ತಗಳಿಂದ ಸೂತ್ರವು ಪಸೂತ್ರಾಧಿಕಾರಿ. ಸ್ಥಳದ ಮಹೇಶ್ವರದ ಪಟ್ಟದ ಚಿಟ್ಟಗದೇವರು ಪಚ್ಚೆಕಂತೆ ಚನ್ನಮಲ್ಲಿಕಾರ್ಜುನ ದೇವರು ವುಪಶಾಕಾಧಿಕಾರಿಗಳಾಗಿರುವಲ್ಲಿ ಶ್ರೀ ಸಿದ್ದಲಿಂಗ ಶಿವಯೋಗಿಗಳು ತಮ್ಮ ಶೂನ್ಯಪೀಠದ ಉತ್ತರಾಧಿಕಾರವನ್ನು ಭೋಳಬಸವದೇವರಿಗೆ ಕೊಟ್ಟಿರುವ ಸಿದ್ಧೇಶ್ವರ ಪುರಾಣದ 411 ನೇ ಪುಟದಿಂದ ಚಟ್‌ಸ್ಥಲ ಉಪದೇಶ ಮುಗಿಸಿ ಅಪ್ಪಣೆ ಕೊಡಿಸಿದ್ದು.

ಈ ತೆರದೆ ಷಟ್‌ಸ್ತಲದ ಸನ್ಮಾರ್ಗವದನೋತು
ಬಿಡದಾಚರಿಸಿನಿಂದ ನಿಜಮುಕ್ತಗ್ಗೆ
ಭೂಲೋಕದೊಳಿಹ ನಿಧಿಗಿಧಿಗಳು ಪರದೊಳಪದವಿ ಗಿಡವಿಗಳೆಲ್ಲವು ॥
ಪ್ರೀತಿ ಕರವಲಲ್ಲ ಸುಧೆಯುಂಡವಂ ಬಳಿಕ್ಕಾತುರದೆ
ಹುಳಿಯಿಂಬಲವ ಬಯಸುವನನೆಪರಂ
ಜ್ಯೋತಿಸ್ವರೂಪನಾಗಿರ್ಪ ನಾತಂ ಕೇಳಿರೈ ಭೋಳ ಬಸವದೇವಂ
॥ ೪೧ ॥

ಎಂದು ಷಟ್‌ಸ್ಥಲ ಮಾರ್ಗದೊಳ-ನವಿರಳಚಿದಾ
ನಂದ ಯತಿತನಖಿಂ ನಿಗಮಾಗಮಾಶೀತವೃಷಿ
ದ್ಯಂದ ಹೃದಯಾನಂಥ ಕಂ ಸಕಲದೇವತಾ ವಲ್ಲಭವಂದರೂಪಂ ॥
ಕುಂದದ ಮಹಾಮಹಿಮ ನಖಿಲ-ಶಿವಶರಣಜನ

ಮಂದಾರನೆನಿಪ ಸಿದ್ದೇಂದ್ರನು ಸಿರಲು ಹರಿಸದಿಂದೆ
ಯಾ ಬೋಳ ಬಸವಾರ್ಯನಿಳೆಯೊಳು ಸೈಗೆಡದು ಸುರೆಸಿದರು ಭಕ್ತಿಯಿ
|| ೪೩

ದೇವ-ಮಾಯ-ತಿಮಿರ ಹರಣ ನಿಜಸುಖಕರಣ ಪಾವನ
ಕಳೇವರ ವಿಶುದ್ಧ ಕೈವಲ್ಯ ವನಿ ಶಾವರ
ಸಮಸ್ತ ಲೋಕಾಧಾರ ಮೂರ್ತಿ ಶ್ರುತಿಚಕ್ರವರ್ತಿ ನಿಖಿಳ ||
ದೇವತಾಸ್ತುತ್ಯ ನಿಶ್ಚಳ ನಿರರ್ಗಳ ಸುತ್ಯ
ಕೇವಲ ಚಿದಾನಂದರೂಪ ನಿರ್ಜಿತಪಾಪ
ಭಾವಜಾಂತಕ ತೋಂಟಧಾರ್ಯ ಜಯಜಯ ತಸಮ ವೀರ್ಯಶಿವಶರಣ
|| ೪೩

ಎಂದು ಕೊಂಡಾಡುತಿರೆ ಪರಮ ನಿರ್ಮಲ ಚಿದಾನಂದಾ
ನಂದಸ್ವರೂಪನಿ ಸುವ ತೋಂಟದಾರ್ಯ ನೊಲವಿಂದೆ
ಯಾ ಬೋಳ ಬಸವಾರ್ಯನಂ ತಲೆದಡವಿ ಕರುಣದಿಂದ ಬಳಿ||
ಚಂದದಿಂ ಬೋಳೈಸಿತಕ್ಕೈಸಿ ಕೇಳಲೈ
ಕಂದ ನಿನಗೀ ಮಾರ್ಗ ವಳವಟ್ಟ ವನಿಯೊಳು
ಕುಂದದಾನಂದದಿಂದಾಚರಿಸುಕಿರ್ತವುದೆಂ ಸಂತಸದೊಳಿದಂ
|| ೪೪

ಸೂಚನೆ-ನಿರುಪಮ ನಿರಾಲಂಬನೆನಿಪ ತೋಂಟದ ಯತೀಶ್ವರ ನೊ
ಪಟ್ಟಸ್ಥದಟಾರ್ಯ ಪಟ್ಟಮಂ ವರಬೋಳ ಬಸವಂಗಿತ್ತನಾದಿ ಭಕ್ತನ
ಹೃದಯದೋಳ್ ನೆಲಸಿದಂ ||ಪು.೧೨||

ಸ್ವಜಿನವ್ರಜಿ ವ್ಯಾಘ್ರ್ರಮೇಘ ಪ್ರಬಂಧನು ತವೃಷ್ಟಿಧ್ವಜ
ಗಜಾಜಿನವಸನ ಸಾದ್ಯಂತ ರಹಿತ
ಹರ್ಯಜಿಸುರಸಮುಖ್ಯ ದಿವಿಜಾವ್ರಜ ವಿನತಾ ಪವಸರೋಜನ
ಪಂದ್ಯಮಂ ನಿಜನ ಶುದ್ಧಬದ್ಧ-ನಿತ್ಯಾಕಾರನೆಂದನಿಪ

ಜಗದಾನರ ತೋಂಟದಾರ್ಯ ನಾನಂದದೆ ಸ
ಹಜಿ ಷಟ್‌ಸ್ತಲ-ಬ್ರಹ್ಮಮಂ ಮುಮುಕ್ಷಿಗಳಗೊರವಿಂದನರಂ ಕ್ಷಿಸುವುದು
|| ೪೫ ||

ಇಂತೆಂದು ಬೋಳ ಬಸವಾರ್ಯಗೆ ಸಿರೂಪಿಸುವಂ
ತೋಷವೆದೆಗೊಂಡು ದೇಸಸದ್ಗುರುವೆ
ಚಿಸ್ಕಲಿತ ಕಾಲಾಂತಕರ ಮಾಯಂತಿಮಿರ ಹರಣ ಬಾಸ್ಕರ ಮಹೇಶ ||
ಸಂತತಾಗನಂದಸಿಧಿ ಸಕಲ ಲೋಕಾರಾಧ್ಯ
ಚಿಂತಾರಹಿತ ನಿರಾದಾರ ಸಿಷ್ಕಾಮ ನೀ
ನೀಪರಿಯೋಳ್ ನಿರವಿಶಲೆನಗೆ ಸತ್ವಂಜ ಭೋದಿಸುನದೆನಲ್ಕೆ
|| ೩ ||

ಎನಬು ನಿನಗೇಕೆ ಸಂದೆಯ ಮಖಿಳ ಲೋಕದೊಳ
ಗನುದಿನಂ ಪರಿಮ ಷಟ್‌ಸ್ಥಲದೆ ಸನ್ಮಾರ್ಗಮಂ
ಘನಹರುಷದಿಂದುಂಟು ಮಾಡಲೆಂದವನಿಯೋಳ್ ಚಂದಕಾರಣದಿ ನಾನು
ನಿನಗೆ ಪೇಳ್ದೆನು ನೀನವರ ಚಿತ್ತಗಳನರದು
ವಿನಿಯದಿಂದವರ ಬೋಧಿಸಿ ನಿಲಿಸಿ ನಿಜಮುಕ್ತಿ
ವನಿತೆಯೊಳಗೇ ಕರ್ದಮಂ ಮಾಳ್ಪದೆಂದು ಸಿದ್ದೇಂಪ್ರ ನೊಲವಿಂದುಸಿ
|| ೪ ||

ದೇವ ಸಂತಸದಿ ನೀನೆನ್ನಮೇಲಿರಿಸಿದ ಕೃ
ಪಾವ ಲೋಕನದಿಂದೆ ಪೇಳುತಿರ್ಪ ಪಿರಿದಂ
ಭೂವಲಯದೊಳ್‌ಗಾರಿಗುಸುರ ಬರ್ಪುದಿದಕ್ಕಿನದಿಕಾರಿಯನಿಪಂ||
ಶಿವಿದಾನಂದದಿಂ ಬಿಸಸಿ ಕೊಯಳ್ಪ
ಪಾವನಂ ಗೆಯ್ಯದೆಂದೆನುತೆ ನಲವಿಂದಯಾನಿ
ದಾವರೆಗೆ ಮಣಿಮ ಬಿನ್ನವಿಸೆ ಪೇಳುತಿರ್ದನಮಲ ಸದ್ಗುರುರಾಯನು
|| ೫ ||

ಪರಮಶೈವಾಗಮುಂಗಳ ಪೇಳ್ದ ಮಾರ್ಗದಿಂ ಚಿರಿಯಾಸದವರ್ಗೆ
ರಿಷಿಯಾಸಕ್ತರೆಂದೆನಿಸ ನರರ್ಗೆ ಚಂಚಲಮಾನವರ್ಗೆ ವಿಷಯಂಸಕ್ತ
ಅಂದಿನಿಸಸರರ್ಗೆ ಚಂಚಲ ಮನದವರ್ಗೇ ದುಷ್ಟರ್ಗೆಂಧಂ ||
ಕರ್ಮಮದ ದುಃಖದೊಳು ಬೇವರ್ಗ ತಸ್ಕರ
ಸರಸಿಜದ ಲಿಂಗಮಂ ಬಿಟ್ಟನ್ಯದೈಯ್ವಮಂ
ಪಿರಿದೆಂದು ಭಾವಿಸಿ ಭಜಿಸುವವರ್ಗೆ ಪೇಳಲಾಗದು ಷಟ್‌ಸ್ಥಲ
ಬ್ರಹ್ಮಮಂ ||

ಸಲೆ ಯಿಃಹಪರಂಗಳಾಸೆಯು ಮರೆದವರ್ಗೆ ನಿರ್ಮ
ಲಮಾನಸರ್ಗೆ ನಿಜಲಿಂಗಾಂಗಿಗಳ್ಗೆ ಸದ್ವಿಲ
ಸನ್ಮಹಾಶಾಂತಿಯುಕ್ತರ್ಗೆ ಸಕಲೇಂದ್ರಿಯಂಗಳಂ ಜಯಿಸಿದರ್ಗೆ
ನೆಲೆಗೆಡಿಸಬೇಕೆಂಬ ಬಯಕೆಯುಳ್ಳರ್ಗೆತ್ರೈ
ಮಲಂಗಳಾ ತೋಲಿಗಿ ಸೋಂಕೆನೆಂಬವರ್ಗೆ ಬೋಧಿಸವದೀ ಮಹಾ
ಬೋಧಯಂ ||

ಯಿಂದುಯುರವಿರಿಸಿ ಯನ್ನ ಶಾಸನದ ಮೇಲೆ ಹರಿಸಂ
ದಳೆದು ಬೋಳ ಬಸವಾರ್ಯನಂ ಕುಳ್ಳಿರಿಸಿ
ತಂದು ಕರುಣದಿಂದಂ ಪ್ರಸಾದದ ವೀಳೆಯವನಜಂಹೆಗೆ
ಚಂದದಿಂದಿತ್ತು ಸುಜ್ಞಾನಿಗಳು ಜಯ ಜಯರಗಳೆಂದೆ
ಗುರು ತೋಂಟದಾರ್ಯಂ ಮನದೊಳಂದವಿ ದಾನಂಡದಿಂ
ಷಟ್‌ಸ್ಥಲಾಚಾರ್ಯ ಪಟ್ಟವ ಕಟ್ಟಿದಂ ಲೋಕಹಿತ ಕೋಸುಗಂ ||

ಗುರು ತೋಂಟದಾರ್ಯನಾಂ ಬೋಳ ಬಸವಾರ್ಯರಿಗೆ
ಪರಮ ಕರುಣದೆ ಷಟ್‌ಸ್ಥಲಾಚಾರ್ಯ ಪಟ್ಟಮಂ
ಭರದಿಂದೆ ಕಟ್ಟಿಸಲ್ಕಾನಂದದಿಂದೆ ಸಪ್ಪೆಯ ದೇಶಿಕಲ ನಿರ್ಮಲ
ನಿರ್ಮಲತರವಿಂದ ಪಟ್ಟಣದೇವ ಗುರುಚಂದ್ರಶೇಕರದೇವ
ದೊಡ್ಡ ಸಿದ್ದೇಶ ಚಿಟ್ಟಗದೇವ
ಸುರುತರದ ಶೀಲವಂತೇಶ ನುಪ್ಪಿನಳ್ಳಿಯಯ್ಯನೊಂದುದೆಲ್ಲರು ||

ಈ ತೆರದೊಳಖಿಲ ಲೋಕಂಗಳೆಲ್ಲಂ ಸುವಿಖ್ಯಾತ ವಹ
ಷಟ್‌ಸ್ಥಲ ಬ್ರಹ್ಮಮಯದಂಗೆ ಚಿ ಜ್ಯೋತಿಸ್ವರೂಪನೆನಿಸುವ
ತೋಂಟದಾರ್ಯಸುರುಸಂತಸಂಗೊಂದು ಬಳಿಕಂ
ಪ್ರೀತಿಯಿಂ ಬೋಳ ಬಸವಾರ್ಯ ಮುಂತಾದ ಸ
ತ್ಪ್ರಾರಹ ವಿರತರೆಲ್ಲರ ಕರೆದು ಸಂತೈಸಿ
ಭೂತಳದೊಳಾನೆನ್ನ ಸ್ವಾತಂತ್ರ ದಿಂಚಸಿದ ಲೀಲೆ ಸೌಖ್ಯವೆಸತೆಂದು
॥ ೧೦ ॥

ಯಂದೆಲ್ಲರೊಡಂ ನಿರವಿಸಿಯ ಖಂಡಿತ ಚಂದಿರ
ನಂವಸ್ವರೂಪ ನಾದ್ಯಂತವರ್ಜಿತ ಭಗವದ್ವಂದಿತ
ಸನಾಯನತಕೂನಪ್ಪಯ ನಪ್ರವೇಯ ನಗಳರ ಪ.ಹಿಮನು
ಸುದಿಲ್ಲಪ ವಿರಳ ಬ್ರಹ್ಮ ತೋಂಟದ ಯತೀಶಂ ದಿ ಜಡೆರ.ಫೆ
ಎನಲನಾಂದಿ ಭಕ್ತನ ಹೃದಯ ಮಂದಿರದೊಳಗೆ,
ಮೂರ್ತಿಗೊಂಡು ಸಂತಸದೊಳೆಸದಂ ಜಗವರಕ್ಷಿಸುತ್ತಿ ॥

X X X X

ಎಡೆಯೂರಿನಲ್ಲಿ ಶ್ರೀ ರೇಣುಕಾಚಾರ್ಯರ ಪೀಠದ ಶಾಖಮಠವೆಂಬುದು ವೇದಾಗಮಗಳಿಂದ ಇದುವರಿಗೆ ಶೃತವಾಗಿರುವದಲ್ಲದೆ ಇಲ್ಲಿ ಸದರಿ ಶಾಖಮಠದ ಸ್ಮಾರಕವಾಗಿ ಆರಾಧ್ಯ ದೇವತೆಯಾದ ವೀರರನಸ್ವಾಕವು ಸಿದ್ಧಲಿಂಗಶಿವಯೋಗಿಗಳ ನಿರ್ವಿಕಲ್ಪ ಶಿವಯೋಗ ಸಮಾಧಿಗದ್ದುಗೆಯು ಮಠದ ಪ್ರಕಾರದಲ್ಲಿ ಆದಿಯಿಂದಲು ಇರುತ್ತೆ ಇದೇ ಸ್ಮಾರಕ ಮೂಲ ಮಠವಾದ ರಂಭಾಪುರಿಯಲ್ಲಿದ್ದು ಪ್ರತಿವರ್ಷ ಫಾಲ್ಗುಣಿ ಶುದ್ಧ ಪೂರ್ಣಿಮೆಯಲ್ಲಿ ಶ್ರೀ ಶ್ರೀ ಜಗದ್ಗುರುಗಳವರ ಗುಬ್ಬಿ ತಾಲ್ಲೂಕು ಬಿದರೆ ಮಠ ಹೀಚುನೂರು ಮಠಗಳಿಂದ ನಿರ್ಧರವಾಗುತ್ತೆ.

ಶ್ರೀ ವೀರೇಶನ ರಥೋತ್ಸವಾದಿಗಳು ನಡೆಸುವವು. ಸರ್ವವಿದಿತವಿದ್ದರೆ ಈ ಸಿಂಹ ವೀರಸಿಂಹಾಸನಾಧೀಶ್ವರ ಎಂಬುದು ಪ್ರಸಿದ್ಧವಿದೆ ಈಶಾನ ಮಠಗಳಲ್ಲಿ ವೀರೇಶನ ಸ್ಮಾರಕವು ಇರುತ್ತೆಂಬುದಕ್ಕೆ ಸಾಕ್ಷಿಯಾಗಿವೆ ಈ ಎಲ್ಲ ಕಾರಣದಿಂ ಇಲ್ಲಿಯ ಆದಿಯ ಪುರುಷರಾದ ಚನ್ನವೀರ ವಡೆಯರಿಂದ ಸ್ಥಳದ ಮಠವಿದ್ದು ಇ ರಿಂದ ನಾಲ್ಕನೆಯವರಾದ ಪಟ್ಟದ ಚಿಟ್ಟಿಗದೇವರು ತಮ್ಮ ಸದರೀ ಮಠ ಜಾಗದಲ್ಲಿ ಕಲ್ಲುಮಠವನ್ನು ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸಿ ಈಗ ಗದ್ದು ಅದುವರಿಗೆ ತಾವು ಪಡೆದಿದ್ದ ಮಾನ್ಯ ಕೊಡಗಿ ಶಿಷ್ಯವರ್ಗ ಮುಂತಾದ ತಮ್ಮ ಪುರವರ್ಗವನ್ನು ಶ್ರೀ ಸಿದ್ದಲಿಂಗಸ್ವಾಮಿಗಳಿಗೆ ಒಪ್ಪಿಸಿದಾಗ ಶ್ರೀ ಸಿದ್ಧಲಿಂ ಶಿವಯೋಗಿಗಳು ಮೇಲ್ಕಂಡ ರೀತಿ ತಮ್ಮ ಶೂನ್ಯಪೀಠದ ಅಧಿಕಾರವನ್ನು ಬೋಳ ಬಸವಾರ್ಯರಿಗೆ ಮಾಡಿ ಷಟ್‌ಸ್ಥಲಮಾರ್ಗದ ಸದ್ಬೋಧೆಯಿಂ ಭೂಲೋಕದಲ್ಲಿ ಸಂಚಾರ ಮಾಡುವಂತೆ ಹೇಳಿ ಎಡಿಯೂರಲ್ಲಿ ತಮಗಾ ಕಟ್ಟಿಸಿರುವ ಮಠದಲ್ಲಿ ಶಿಲಾಲೇಖ ಹಾಕಿಸಿ ತಮ್ಮ ಈ ಗದ್ದುಗೆ ಉತ್ತರಾಧಿ ಕಾರವನ್ನು ಎಂಟು ಬಗೆಯ ಜಡೆಯ ಹಿರಿಯರು, ಚಿಟ್ಟಿಗದೇವರಿಗೂ ಉಪಶಾ ಖಾಧಿಕಾರಿಗಳಾದ ಪಚ್ಚೇ ಕಂಥೆ ಚನ್ನಮಲ್ಲಿಕಾರ್ಜುನ ದೇವರಿಗು ವಹಿಸಿ ಎ ಡಿಯೂರಿನಲ್ಲಿ ನಿರ್ವಿಕಲ್ಪ ಶಿವಯೋಗ ಸಮಾಧಿಸ್ತರಾದರೂ ಉತ್ತರಾಧಿಕಾರವನ್ನು ಪಡೆದ ಪಟ್ಟದ ಚಿಟ್ಟಿಗದೇವರಿಗೆ ಶ್ರೀ ಗುರುವಿನಿಂದ ಷಟ್‌ಸ್ಥಲಲಿಂಗಾದಿ ಸಾಮರಸ್ಯ ಏಕಾರ್ಥವಾಗಿ ವೈರಾಗ್ಯ ಹುಟ್ಟಿ ಆದರಿಂದ ಇವರ ತಮ್ಮ ಉಪ ಶಾಖಾಧಿಕಾರಿಗಳಾದ ಪಚ್ಚೆ ಕಂಥೆ ಚನ್ನಮಲ್ಲಿಕಾರ್ಜುನದೇವರ ಸಂತತಿಯು ಮುಂದುವರಿದು ತಹಲ್‌ವರಿಗೆ ವಂಶವೃಕ್ಷವ ಪರಂಪರೆಯವರಾಗಿ ಮುಂದುವ ದಿರುತ್ತೆ. ಈ ವಂಶವೃಕ್ಷವು ಶಿಲಾಲೇಖದಿಂದಲು, ಶಿಷ್ಯರ ಪಟ್ಟಿಯಲ್ಲಿರು ಹೆಸರು ಮಹಾರಾಜರು 1818ರಲ್ಲಿ ಮತ್ತು 1823ರಲ್ಲೂ ಕೊಟ್ಟಿರುವ ಸನ್ನದ ನಲ್ಲಿ ನಮೂದಿರುವ ಸಿದ್ದಲಿಂಗಯ್ಯನವರಿಂದಲು. 1870ರಲ್ಲಿ ತಯಾರಾಗಿರು ಸರ್ವೇ ಸೆಟಲ್ಮೆಂಟು ರಿಕಾರ್ಡಿನಲ್ಲಿ ನಮೂದಿಸಿರುವ ಹೆಸರುಗಳಿಂದಲೂ ಇತ್ತೀಚಿ ಹಿರಿಯರ ಮೊಹಂತರ್ಪಾಟು ಪಟ್ಟಗಳನ್ನು ಅನುಸರಿಸಿ ಹಿರಿಯರು ಬರೆದಿಟ್ಟಿ ವುದರಿಂದ ನಂಬಲರ್ಹವಾಗಿರುತ್ತೆಂದು ಹೇಳಬಹುದು ||

ಉಪಶಾಖಾಧಿಕಾರಿ ಪಚ್ಚೇಕಂಥೆ ಚನ್ನಮಲ್ಲಿಕಾರ್ಜುನ ದೇವರು ಮೂ

ಪುರುಷರಾಗಿ, ಸದರಿಗದ್ದುಗೆಯಲ್ಲಿ ನಿಶ್ಯನ್ಯೈಮುಕ್ತರಾದಿ ಅಪ್ರಾಕೃತ ವೀರಶೈವ ಸಂಸ್ಕೃತಿಯಿಂದ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಸಾರಾಮೃತದಂತೆ ವೇದಾಗಮಗಳಲ್ಲಿ ವಿಧಿಸಿರುವ ಪ್ರಕಾರ ತ್ರಿಕಾಲಾ ಭಾಗಿತವಾಗಿ ಸಾಗಿರುವ ಪೂಜಾವೈಭವದ ಸೇವಾ ವಿಚಾರವನ್ನು ಸರ್ಪರ ಅವಗಾಹನೆಗಾಗಿ ಕೆಳದಿ ಮಹಾ ರಾಜರು ಆಸ್ಥಾನ ಪಂಡಿತರಾಗಿದ್ದ ಮರಿತೋಂಟದಾರ್ಯರು ಬರೆದಿರುವ ವಾದಕಾಂತ ವೀರಶೈವಾನಂದಾ ಚಂದ್ರಿಕೆಯ ವೀರಶೈವ್ಯ ವೈಸಿಷ್ಟವೆಂಬ ಪ್ರಕರಣವನ್ನು ಇಲ್ಲಿ ನಮೂದಿಸಿದೆ (ಪುಟ. 770)

ವೀರಶೈವ ಸರ್ವೋತ್ಕೃಷ್ಟತೆ

ಲೋಕಾಯತ, ದಿರ್ಹತ, ಸ್ವಾಗತ, ಮುಂತಾದ ಅವೈದಿಕಮತಗಳನ್ನು ಗೌತಮ, ಕಾಣಾದ, ಕಾಪಿಲ. ಪಾತಂಜಲ, ಜೈಮಿನಿ, ಬ್ರಹ್ಮಾದ್ವೈತ, ಮಾಧ್ವ, ರಾಮಾನುಜ. ಮುಂತಾದ ವೈದಿಕಮತಗಳನ್ನೂ ಖಂಡಿಸಿ, ಈಗ ಲಿಂಗಾಂಗ ಸಾಮರಸ್ಯ ರೂಪವಾದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಾನುಗುಣವಾಗಿ ಪಿಂಡಾದಿ ಜ್ಞಾನಶೂನ್ಯಾಂತ ಏಕೋತ್ತರಶತ (೧೦೧) ಪ್ರಭೇದಗಳಿಂದೊಡಗೂಡಿರುವ ಭಕ್ತಾದಿ ಷಟ್‌ಸ್ಥಲಾತ್ಮಕ ಬ್ರಹ್ಮಸಾಕ್ಷಾತ್ಕಾರವುಳ್ಳ ತ್ರಿವಿಧದೀಕ್ಷಾಸಂಪನ್ನನಾದ ಅಷ್ಟಾವರಣ ಪಂಚಾಚಾರ ಯುಕ್ತನಾದ ವೀರಶೈವನೇ ಸರ್ವೋತ್ಕೃಷ್ಟನೆಂದು ಪ್ರತಿಪಾದಿಸಲ್ಪಡುತ್ತದೆ.

ಪಾರಮೇಶ್ವರ ತಂತ್ರದಲ್ಲಿ

ವಿಭೂತಿರ್ಯಸ್ಯ ಫಾಲೇಽಸ್ತಿ ಕಂಠೇ ಲಿಂಗಂ ಮುದಾತ್ಮಕಂ।
ರುದ್ರಾಕ್ಷಧಾರಣಂ ದೇಹೇ ಸೋಽಹಂ ದೇವಿ ನ ಸಂಶಯಃ॥

ಓಪಾರ್ವತಿಯೇ ? ಯಾವನ ಹಣೆಯಲ್ಲಿ ವಿಭೂತಿಯೂ ಕಂಠದಲ್ಲಿ ಲಿಂಗವೂ ಅಂಗದಲ್ಲಿ ರುದ್ರಾಕ್ಷಿಯೂ ಇರುತ್ತದೆಯೋ ಅವನೇ ನಾನೆಂದು ಭಾವಿಸು. ಸಂಶಯ ಪಡೆಬೇಡ,

ಶಂಕರಸಂಹಿತೆಯಲ್ಲಿ—

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ
ವಿನ್ಯಸ್ಯ ತಲ್ಲೀನ ಮನಃಪ್ರಚಾರಃ।
ಬಾಹ್ಯಕ್ರಿಯಾಸಂಕುಲ ನಿಸ್ಪೃಹಾತ್ಮಾ-
ಸಂಪೂಜಯತ್ಯಂಗ ಸ ವೀರಶೈವಃ॥

ಯಾವನು ಶಿವದೀಕ್ಷಾಪೂರ್ವಕ ಗುರುವಿನಿಂದ ಶರೀರದಲ್ಲಿ ಧರಿಸಲ್ಪಟ್ಟ ಶಿವಲಿಂಗವನ್ನು ಹಸ್ತಕಮಲವೆಂಬ ಪೀಠದಲ್ಲಿರಿಸಿ ಅದರಲ್ಲಿಯೇ ಮನಸ್ಸನ್ನು ವಿಲೀನಗೊಳಿಸಿ ಹೊರಗಣ ಪ್ರಪಂಚ ವ್ಯಾಪಾರವನ್ನೆಲ್ಲ ಬಿಟ್ಟು ಪೂಜೆಗೈಯುತ್ತ ಆ ಪೂಜೆಯ ಮೂಲಕವಾಗಿ ಲಿಂಗಾಂಗಸಾಮರಸ್ಯ ಸಿದ್ಧಿಯನ್ನು ಪಡೆವನೋ ಅವನೇ ವೀರಶೈವನೆಂದು ಅನೇಕ ಪ್ರಮಾಣಗಳು ವೀರಶೈವ ಧರ್ಮದ ಉತ್ಕೃಷ್ಟತೆಯನ್ನು ಪ್ರತಿಪಾದಿಸುತ್ತವೆ.

ಶಂಕಾ—ವೀರಶೈವರು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗರೂಪಗಳಾದ ತ್ರಿವಿಧಲಿಂಗಗಳಲ್ಲಿಯೂ ಅಷ್ಟವಿಧ ಸಮರ್ಪಣದಲ್ಲಿಯೂ ಪರಮನಿಷ್ಠೆಯುಳ್ಳವರಾಗಿರಲಿ, ಅಷ್ಟುಮಾತ್ರದಿಂದ ಉತ್ಕೃಷ್ಟರಾಗಲಾರರು. ಉತ್ಕೃಷ್ಟತೆಗೆ ಅನುಗುಣವಾಗಿ ಯುಕ್ತಿಗಳಾಗಲಿ, ಪ್ರಮಾಣಗಳಾಗಲಿ, ಎಲ್ಲಿಯೂ ಕಂಡುಬರುವುದಿಲ್ಲ. ಹೇಗೆಂದರೆ-ಲೋಕದಲ್ಲಿ ಸೃಷ್ಟಿಗೆ ಒಳಪಟ್ಟಿರುವವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಣಗಳೂ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ, ಎಂದು ನಾಲ್ಕು ಆಶ್ರಮಗಳೂ ಉಂಟೆಂದು ಶ್ರುತಿಗಳಲ್ಲಿಯೂ ಆಗಮಾದಿಗಳಲ್ಲಿಯೂ ವ್ಯವಹಾರದಲ್ಲಿಯೂ ಪ್ರಸಿದ್ಧಗಳಾಗಿರತ್ತವೆ ವೀರಶೈವರು ಅಂಥ ವರ್ಣಗಳಲ್ಲಿ ಗರ್ಭಾಧಾನ, ಪುಂಸವನ ಸೀಮಂತ ಉನ್ನಯನ, ಜಾತಕರ್ಮ, ನಾಮಕರಣ ಉಪನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ವೇದ, ಪ್ರಾಜಾಪತ್ಯ ಸೌಮ್ಯಾಗ್ನೇಯ, ವೈಶ್ವದೇವ, ವ್ರತಚತುಷ್ಟಯ, ಸಮಾವರ್ತನ, ವಿವಾಹ ಪಂಚಮಹಾಯಜ್ಞ, ಔಪಾಸನ ಸ್ಥಾಲೀಪಾಕ, ಸರ್ಪಬಲಿ, ಈಶಾನಬಲಾಷ್ಟಕ, ಸಪ್ತಪಾಕಯಜ್ಞ, ಅಗ್ನ್ಯಾಧಾನ, ಅಗ್ನಿಹೋತ್ರ, ದರ್ಶಪೂರ್ಣಮಾಸ, ಪಶುಬಂಧ, ಚಾತುರ್ಮಾಸ್ಯಾ ಅಗ್ರಾಯಣೇಷ್ಟಿ ಸಪ್ತಹವಿರ್ಯಜ್ಞ, ಅಗ್ನಿಷ್ಟೋಮ ಉಕ್ಥ್ಯ, ಷೋಡಶಿ, ಅತಿರಾತ್ರ, ಅಪ್ತೋರ್ಯಾಮ, ವಾಜಪೇಯ, ಎಂಬ ಸಂಸ್ಥಾಭಿಧಾನಗಳೂ ಮತ್ತು ನಲವತ್ತು ಸಂಸ್ಕಾರಗಳೂ, ಎಂಟು ಆತ್ಮಗುಣಗಳೂ, ದಯಾ, ಕ್ಷಾಂತಿ, ಅಸೂಯೆ, ಅಶೌಚ, ಅನಾಯಾಸಮಂಗಲ, ಅಕಾರ್ಪಣ್ಯ, ಅಸ್ಪೃಹೆ, ಯಜನ, ಯಾಜನ, ಅಧ್ಯಯನ, ಅಧ್ಯಾಪನ, ಪ್ರತಿಗ್ರಹ, ಉಂಚಶಿಲಾ, ಮೊದಲಾದ ಅಸಾಧಾರಣ ಜೀವಿಕೆಗಳೂ, ಇವೆಲ್ಲಾ ಬ್ರಾಹ್ಮಣ

ಧರ್ಮಗಳೆಂದು ಶ್ರುತಿಸ್ಮೃತಿಪುರಾಣಾದಿಗಳಲ್ಲಿ ಹೇಳಲ್ಪಟ್ಟಿರುವುದರಿಂದ ವೀರ ಶೈವರು ಇವುಗಳಲ್ಲಿ ಒಂದನ್ನೂ ಆಚರಿಸುವುದಿಲ್ಲ. ಇದಲ್ಲದೆ ಬ್ರಾಹ್ಮಣರಲ್ಲಿರು ವಂತೆ ಆಂಗಿರ, ಭೃಗು. ಆತ್ರಿ, ವಿಶ್ವಾಮಿತ್ರ, ಕಾಶ್ಯಪ, ವಶಿಷ್ಠ, ಅಗಸ್ತ್ಯ, ಮುಂತಾದ ವಂಶೋತ್ಪತ್ತಿಗೆ ಸೂಚಕಗಳಾದ ಋಷಿಗೋತ್ರ ಪ್ರವರಾದಿಗ ಳೊಂದೂ ಇಲ್ಲವು. ಆಪಸ್ತಂಭ, ಬೋಧಾಯನ, ಭರದ್ವಾಜ, ಸತ್ಯಾಷಾಢ ವೈಖಾನಸ, ಮೊದಲಾದ ಸೂತ್ರಗಳಾಗಲಿ, ಋಕ್‌ಶಾಖಾವಲಂಬಿ ಅಶ್ವಲಾಯನ ಸೂತ್ರವಾಗಲಿ, ಕುಥುಮಸಾಮಶಾಖಾವಲಂಬಿ ದ್ರಾಹ್ಯಾಯನ ಸೂತ್ರವಾಗಲಿ, ತಲವಶಾಖಾವಲಂಬಿ ಜೈಮಿನಿಸೂತ್ರವಾಗಲಿ, ಯಜುಃ ಪ್ರಥಮ ವಾಜಸನೇಯ ಶಾಖಾವಲಂಬಿಗಳಿಂದ ಗ್ರಾಹ್ಯವಾದ ಕಾತ್ಯಾಯನಸೂತ್ರಾದಿಗಳಾಗಲಿ, ಯಾವು ದೊಂದೂ ವೀರಶೈವರಲ್ಲಿಲ್ಲವಾದ್ದರಿಂದ ಬ್ರಾಹ್ಮಣಪಯದಲ್ಲಿ ಸೇರಲಿಲ್ಲ,

(ಯಜನ,) ಅಧ್ಯಯನ, ದಾನಗಳಿಂದ ಕೂಡಿದ ಹಿಂದೆ ಹೇಳಿದ ಸಂಸ್ಕಾರ ಗಳಾಗಲಿ ಗೋತ್ರಗಳಾಗಲಿ ಶಾಖೆಗಳಾಗಲಿ ಒಂದೂ ವೀರಶೈವರಲ್ಲಿಲ್ಲದುದರಿಂದ ಕ್ಷತ್ರಿಯರಲ್ಲೂ ವೈಶ್ಯರಲ್ಲೂ ಸೇರಲಿಲ್ಲ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರ ಸೇವೆಯಲ್ಲದ್ದರಿಂಪಲೂ ದಾಸ್ಯ, ಉಚ್ಛಿಷ್ಟಭೋಜನ, ತದ್ರವ್ಯೋಪಜೀವನ, ಮಂತ್ರರಹಿತ ಶ್ರಾದ್ಧ, ಅಮುತ್ರಿಕ ಪಂಚಯಜ್ಞ, ಸೂತಕಾಚರಣ ಮುಂತಾದ ಧರ್ಮಾಚರಣೆಗಳಿಲ್ಲದ್ದರಿಂದ ಶೂದ್ರ ರಲ್ಲಿಯೂ ಸೇರಲಿಲ್ಲ.

ಮೂರ್ಧಾವಸಿಕ್ತ, (ಅಂಬಷ್ಠ,) ಪಾರಶಿವ, ಮೊದಲಾದ ಸಮಾಖ್ಯೆಗಳಿಲ್ಲ ದ್ದರಿಂದ ಸಂಕೀರ್ಣಜಾತಿಯಲ್ಲಿಂಊ ಸೇರಲಿಲ್ಲ, ಮತ್ತು ವರ್ಣಧರ್ಮಗಳನ್ನು ಪ್ರತಿಪಾದಿಸಿರುವ ಶ್ರುತಿಸ್ಮೃತಿಪುರಾಣಗಳ ಅಧ್ಯಯನ ಕ್ರಮವಾಗಲಿ ಅಧ್ಯಾಪ ನಕ್ರಮವಾಗಲಿ ಒಂದೂ ಇವ (ವೀರಶೈವ)ರಲ್ಲಿಲ್ಲ. ಇದಲ್ಲದೆ

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।

ಮುಂದಾವ ವಚನಾನುಸಾರವಾಗಿ ಯೋನಿಯಲ್ಲಿ ಜನಿಸಿದ ಮಾತ್ರದಿಂದ ಪುರುಷನಿಗೆ ಮಹತ್ವವು ಬರುವುದಿಲ್ಲ- ಜನ್ಮತಃ ಶೂದ್ರನಾಗಿಯೇ ಇರುತ್ತಾನೆ.

ಉಪನಯನಾದಿ ಮುಖ್ಯ ಸಂಸ್ಕಾರಗಳಿಲ್ಲದಿದ್ದರೆ ಬ್ರಾಹ್ಮಣವಂಶದಲ್ಲಿ ಹುಟ್ಟಿದ್ದರೂ ಪತಿತನೇ ಆಗುತ್ತಾನೆಂದು ಧರ್ಮಶಾಸ್ತ್ರವು ಘೋಷಿಸುತ್ತಲಿದೆ. ಅಂಥ ಸಂಸ್ಕಾರಹೀನನು ವೇದವಿದ್ಯೆಯನ್ನು ಕಿವಿಯಿಂದ ಕೇಳಲು ಸಹ ಅರ್ಹನಲ್ಲ.

"ಅಥಾಹಾಸ್ಯ ವೇದಮುಪಶೃಣ್ವತಃ ತ್ರಪುಜತುಭ್ಯಾಂ ಶ್ರೋತ್ರೇ ಪರಿಪೂರಣಮುದಾಹರಣೇ ಜಿಹ್ವಾಛೇದೋ ಧಾರಣೇ ಶರೀರಭೇದ ಆಸನ ಶಯನವಾಕ್ಪಥಿಷು ಸಮಪ್ರೇಪ್ಸುರ್ದಂಡ್ಯಃ"

ಶೂದ್ರನು ಸಂಸ್ಕಾರಶೂನ್ಯನಾದುದರಿಂದ ವೇದವನ್ನೆಂದೂ ಕಿವಿಗಳಿಂದ ಕೇಳಬಾರದು. ಹಾಗೆ ಒಂದು ಪಕ್ಷ ಕೇಳಿದುದಾದರೆ ಸೀಸವನ್ನು ಕಾಯಿಸಿ ಕಿವಿಗಳಿಗೆ ಹೊಯ್ಯಬೇಕು. ಬಾಯಿಯಿಂದ ವೇದಗಳನ್ನುಚ್ಚರಿಸಿದರೆ ನಾಲಗೆಯನ್ನು ಕತ್ತರಿಸಬೇಕು. ಆ ವೇದವು ಹೃದಯದಲ್ಲಿ ನಿಂತರೆ ಆ ಹೃದಯವನ್ನೇ ಕತ್ತರಿಸಬೇಕು. ಸಮಾನಾಸನದಲ್ಲಾಗಲಿ, ಹಾಸಿಗೆಯ ಮೇಲಾಗಲಿ, ಮಾತಿನಲ್ಲಾಗಲಿ ಮಾರ್ಗದಲ್ಲಾಗಲಿ ಸಮತೆಯನ್ನು ಪಡೆದಿದ್ದಾದರೆ ಅಂಥ ಶೂದ್ರನು ಶಿಕ್ಷಾರ್ಹನಾಗವನು. ಎಂಬುದಾಗಿ ಗೌತಮಸೂತ್ರದಲ್ಲಿ ಶೂದ್ರನು ಬ್ರಹ್ಮವಿದ್ಯೆಗೆ ಅರ್ಹನಲ್ಲವೆಂದು ಹೇಳಲ್ಪಟ್ಟಿರುತ್ತದೆ. ಪ್ರಕೃತ ವೀರಶೈವರು ಯಾವ ಸಂಸ್ಕಾರವೂ ಇಲ್ಲದವರಾದ್ದರಿಂದ ಬ್ರಾಹ್ಮಣಾದಿ ಯಾವ ವರ್ಣದಲ್ಲಿಯೂ ಸೇರದಿದ್ದ ಮೇಲೆ ಇಂಥವನಿಗೆ ಸರ್ವೋತ್ಕೃಷ್ಟತೆಯು ಹೇಗೆತಾನೆ ಸಂಭವಿಸೀತು ?

ಸಮಾಧಾನ—ಅಹೋ! ಆದೇಕೆ ? ಸಂಸ್ಕಾರಹೀನನಾದ ಶೂದ್ರನಿಗೂ ವೇದಾಧಿಕಾರವಿರುವುದೆಂದು ಶಾಸ್ತ್ರದಲ್ಲಿ ನಿರ್ಣೀತವಾಗಿದೆಯಲ್ಲ, ಹೇಗೆಂದರೆ– "ನಿಷಾದಸ್ಥಪತಿಂ ಯಾಜಯೇತ್" ಶೂದ್ರನಾದ ಬೇಡರಜಾತಿಯವನಿಂದ ಯಾಗ ಮಾಡಿಸಬೇಕು. ಎಂಬ ವಿಧಿವಾಕ್ಯವು "ನಿಷಾದಾನಾಂ ಸ್ಥಪತಿಃ" ಎಂದು ಷಷ್ಠಿ ತತ್ಪುರುಷಸಮಾಸವನ್ನು ಮಾಡಬೇಕೊ ಅಥವಾ "ನಿಷಾದಶ್ಚಾಸೌ ಸ್ಥಪತಿಶ್ಚ" ಎಂದು ಕರ್ಮಧಾರಯ ಸಮಾಸವನ್ನು ಮಾಡಬೇಕೊ, ಎಂಬ ಎರಡು ಸಂಶಯಗಳುಂಟಾಗಲಾಗಿ ಭೇದಗರ್ಭಿತವಾದ ಷಷ್ಠೀತತ್ಪುರುಷ ಸಮಾಸವನ್ನು ಮಾಡುವುದಾದರೆ ಬೇಡರ ಜಾತಿಯವರಿಗೆಲ್ಲ ಅಧಿಪತಿ (ಕ್ಷತ್ರಿಯ)

ಯೆಂದು ಅರ್ಥವು ಸಿದ್ಧವಾಗುತ್ತದೆ. ಆಗ ಕ್ಷತ್ರಿಯರಿಗೆ ಯಜ್ಞಾಧಿಕಾರವು ಸ್ವಾಭಾವಿಕವಾಗಿ ಇದ್ದೇ ಇರುತ್ತದೆ. ಶೂದ್ರನಿಗೂ ಬ್ರಹ್ಮವಿದ್ಯಾಧಿಕಾರವಿರುತ್ತದೆಂದು ಹೇಳುವ "ವೇದೋವಾ ಪ್ರಾಯದರ್ಶನಾತ್" ಎಂಬ ವೇದೋಪಕ್ರಮಾಧಿಕಾರಣ ನ್ಯಾಯಕ್ಕೆ ವಿರೋದವು ಸಂಭವಿಸಬೇಕಾಗುತ್ತದೆ. ಅಂದರೆ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ, ಅರ್ಥವಾದ, ಉಪಪತ್ತಿ ಎಂಬ ಷಡ್ವಿಧಲಿಂಗಗಳು ತಾತ್ಪರ್ಯವನ್ನು ನಿಶ್ಚಯಪಡಿಸುವ ಸಾಧನಗಳಾಗಿವೆ. ಈ ಆರು ಲಿಂಗಗಳಲ್ಲಿ ಉಪಕ್ರಮವೆಂಬ ಮೊದಲನೆಯ ಲಿಂಗವೇ ಅಸಂಜಾತ ವಿರೋಧಿಯಾದ್ದರಿಂದ ಅತ್ಯಂತ ಪ್ರಬಲವಾದುದು. ಇಂಥ ಲಕ್ಷಣಾನಾಶ್ರಯಣರೂಪವಾದ ಉಪಕ್ರಮಲಬ್ಧ ಲಾಘವಾನುರೋಧದಿಂದ ಷಷ್ಠೀಸಮಾಸನ್ನು ಬಿಟ್ಟು ಅಭೇದ ಬೋಧಕವಾದ "ನಿಷಾದಶ್ಚಾಸೌ ಸ್ಥಪತಿಶ್ಚ" ಎಂಬ ಕರ್ಮಧಾರಯಸಮಾಸವನ್ನೇ ಆಶ್ರಯಿಸಿ ವೇದಕ್ಕೆ ಅನಧಿಕಾರಿಯಾದ ನಿಷಾದನಿಗೆ (ಬೇಡ) ವೇದಾಧಿಕಾರವು ಹೇಗೆ ಮೀಮಾಂಸಾಕಾರರಿಂದ ಕಲ್ಪಿಸಲ್ಪಟ್ಟಿರುವುದೋ ಹಾಗೆ ಇಲ್ಲಿಯೂ ವೀರಶೈವರಿಗೆ ಉಪನಯನಾದಿ ಸಂಸ್ಕಾರಗಳೊಂದೂ ಇಲ್ಲದಿದ್ದರೂ ಉಪಕ್ರಮಪ್ರಾಬಲ್ಯದಿಂದ ಬ್ರಹ್ಮ ವಿದ್ಯಾಧಿಕಾರವಿರುವುದೆಂದು ಹೇಳುತ್ತೇವೆ.

ಶಂಕಾ—ಎಲೈ ವಾದಿಯೆ ? ನೀನು ಹೇಳುವ "ನಿಷಾದಸ್ಥಪತಿಂ ಯಾಜಯೇತ್" ಎಂಬ ನ್ಯಾಯುನಲ್ಲಿ ಯಾಜಯೇತ್ ಎಂದು ಲಿಂಗಂತವಾದ ವಿಧಿವಾಕ್ಯವಿರುವುದರಿಂದ ಸಂಸ್ಕಾರವಿಲ್ಲದ ನಿಷಾದನಿಗೆ (ಶೂದ್ರನಿಗೆ) ವೇದೋಪಕ್ರಮಬಲದಿಂದ ಸಿದ್ಧವಾದರೂ ಅಂಥ ವಿಧಿಬೋಧಕವಾಕ್ಯಗಳು ವೀರಶೈವನಿಗೆ ಎಲ್ಲಿಯೂ ಹೇಳಲ್ಪಡದಿರುವುದರಿಂದ ಇಲ್ಲಿ ಆ ದೃಷ್ಟಾಂತವೇ ಸರಿಬೀಳುವುದಿಲ್ಲ.

ಸಮಾಧಾನ—ಧರ್ಮಪತ್ನಿಗೆ ಉಪನಯನಾದಿ ಯಾವ ಸಂಸ್ಕಾರಗಳಿಲ್ಲದಿದ್ದರೂ ವಿವಾಹ ಸಂಸ್ಕಾರವೊಂದರಿಂದಲೇ ಯಜ್ಞಕಾರ್ಯನಿರ್ವಾಹದಲ್ಲಿ ಅಧಿಕಾರಿಣಿಯಾಗಿ ವೇದವಾಕ್ಯಗಳನ್ನು ಕೇಳುವುದರಲ್ಲಿ ಅಧಿಕಾರವಿರುವಂತೆ ವೀರಶೈವನಿಗೆ ಯಾವ ಸಂಸ್ಕಾರವಿಲ್ಲದಿದ್ದರೂ ವೇದಾಧಿಕಾರವುಂಟೆಂದು ಏಕೆ ಹೇಳಬಾರದು ?

ಶಂಕಾ—ಆ ಧರ್ಮಪತ್ನಿಗೆ ಉಪನಯನಾದಿ ಸಂಸ್ಕಾರಗಳಿಲ್ಲದಿದ್ದರೂ "ಪತ್ನೀಂ ವಾಚಯೀತ" ಹೆಂಡತಿಗೆ ವೇದವನ್ನು ಓದಿಸಬೇಕು. ಎಂದು ವಿಧಿವಾಕ್ಯವಿರುವಂತೆ ವೀರಶೈವರಿಗೆ ಅಂಥ ವಿಧಿವಾಕ್ಯಗಳಾವೂ ಇರುವುದಿಲ್ಲ. ಮತ್ತು

"ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ"

ಸ್ವರ್ಗವನ್ನಿಚ್ಛಿಸುವನು ಜೋತಿಷ್ಟೋಮ ಎಂಬ ಯಾಗವನ್ನು ಮಾಡಬೇಕು. ಎಂಬ ವಿಧಿವಾಕ್ಯದಿಂದ ಯಜಮಾನನ ಧರ್ಮಪತ್ನಿಗೂ ಯಾಗದಲ್ಲಿ ಅಧಿಕಾರವು ಸಿದ್ಧವಾಗುತ್ತದೆ. ಇದಲ್ಲದೆ

"ಧರ್ಮೇ ಚಾರ್ಥೇ ಚ ಕಾಮೇಚ ನಾತಿಚರಿತವ್ಯಾ"

ಧರ್ಮವಿಷಯದಲ್ಲಾಗಲಿ ಸಂಪತ್ತಿನ ವಿಷಯದಲ್ಲಾಗಲಿ, ಕಾಮವಿಷಯದಲ್ಲಾಗಲಿ ಪತ್ನಿಯನ್ನು ವಂಚಿಸಿ ನಡೆಯಬಾರದು. ಎಂಬ ಶ್ರುತಿವಾಕ್ಯದಿಂದ ಹೆಂಡತಿಗೂ ಗಂಡನಂತೆ ವೇದಾಧಿಕಾರದ ಕರ್ತೃತ್ವವುಂಟೆದು ಸ್ಪಷ್ಟವಾಗುತ್ತದೆ. ಇದರಂತೆ ವೀರಶೈವರಿಗೆ ಯಾವ ಶ್ರುತಿವಾಕ್ಯಗಳಲ್ಲಿಯೂ ಅಂಥ ವಿಧಿವಾಕ್ಯಗಳಿಲ್ಲದ್ದರಿಂದ ಬ್ರಹ್ಮವಿದ್ಯೆಗೆ ಅಧಿಕಾರಿಗಳಾಗಲಾರರು.

ಸಮಾಧಾನ—ಉಪನಯನಾದಿ ಸಂಸ್ಕಾರಗಳಿಲ್ಲದಿದ್ದರೂ ವೀರಶೈವರಿಗೆ ಆಧ್ಯಾತ್ಮವಿದ್ಯಾಧಿಕಾರವನ್ನು ಕಲ್ಪಿಸುತ್ತೀವೆಂದರೆ-ಹಾಗೆ ಕಲ್ಪಿಸಲು ಸಾಧ್ಯವಿಲ್ಲ. ಏಕೆಂದರೆ—

ಶಂಕಾ—

"ಅಷ್ಟಮೇ ವರ್ಷೇ ಬ್ರಾಹ್ಮಣಮುಪನಯೀತ"
"ಏಕಾದಶೇ ಕ್ಷತ್ರಿಯಂ ದ್ವಾದಶೇ ವೈಶ್ಯಂ"

ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ, ಕ್ಷತ್ರಿಯನಿಗೆ ಹತ್ತನೆಯ ವರ್ಷದಲ್ಲಿ, ವೈಶ್ಯನಿಗೆ ಹನ್ನೆರಡನೆಯ ವರ್ಷದಲ್ಲಿ ಉಪನಯನ ಸಂಸ್ಕಾರಮಾಡಬೇಕೆಂದೂ, ಶೂದ್ರನಿಗೆ ಸಂಸ್ಕಾರವೇ ಇಲ್ಲವೆಂದೂ ಧರ್ಮಶಾಸ್ತ್ರವು ನಿರ್ಣಯಿಸಿರು

ವುದರಿಂದ ಅಕ್ಷರ ಗ್ರಹಣರೂಪವಾದ ಅಧ್ಯಯನದಿಂದ ಸಾಮಾನ್ಯವಾಗಿ ಅರ್ಥ ಜ್ಞಾನವಾಗುವ ಮೂಲಕ ವೇದೋಕ್ತಧರ್ಮಾನುಷ್ಠಾನವು ಮೂರುವರ್ಣದವರಿಗೆ ನ್ಯಾಯವಾದುದು. ಯಾವ ಸಂಸ್ಕಾರ ಗಂಧವೂ ಇಲ್ಲದ ವೀರಶೈವರು ಅಂಥ ವೇದಗಳಲ್ಲಿ ಹೇಳಲ್ಪಟ್ಟಿರುವ ಕರ್ಮಾನುಷ್ಠಾನವೊಂದನ್ನೂ ಅನುಷ್ಠಿಸದಿರುವುದರಿಂದ ಬ್ರಹ್ಮವಿದ್ಯಾಧಿಕಾರವು ಇವರಿಗೆ ಹೇಗೆತಾನೆ ಸಂಭವಿಸೀತು ?

ಸಮಾಧಾನ— ಅದೇಕೆ ? ವೀರಶೈವರಿಗೆ ಆಗಬೇಕಾದ ಶಿವದೀಕ್ಷಾ ಪೂರ್ವಕವಾದ ಲಿಂಗಧಾರಣಾದಿಗಳೆಲ್ಲವೂ ವೇದೋಕ್ತಗಳೇ ಆಗಿರುವುದರಿಂದ ಬ್ರಹ್ಮವಿದ್ಯಾಧಿಕಾರವು ಬಂದೇ ಬರುತ್ತದೆ.

ಶಂಕಾ— ಹಾಗಾದರೆ-ಲಿಂಗಧಾರಣವು ವೇದಗಳಲ್ಲಿ ಹೇಳಿದ್ದರಲ್ಲವೆ? ವೈದಿಕತ್ವವು ವೀರಶೈವರಿಗೆ ಸಿದ್ಧವಾಗಬೇಕು ? ಮಂತ್ರದಲ್ಲಾಗಲಿ ಬ್ರಾಹ್ಮಣದಲ್ಲಾಗಲಿ ಎಲ್ಲಿಯೂಲಿಂಗಧಾರಣವು ಹೇಳಲ್ಪಟ್ಟಿಲ್ಲವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬವೆ ತ್ರಿವರ್ಣಗಳಲ್ಲಿ ಸೇರದಿದ್ದರೂ ಅಂಥವರಿಗೂ ವೇದವಿದ್ಯಾಧಿಕಾರವನ್ನು ಹೇಳಬೇಕಾಗಿ ಬರುತ್ತದೆ, ಆದುದರಿಂದ ವೀರಶೈವಮತವು ವೈದಿಕಮತವಲ್ಲವಾದ್ದರಿಂದ ಈ ಮತವನ್ನವಲಂಬಿಸಿದವರೆಲ್ಲರೂ ವೇದಬಾಹ್ಯರೆಂದೇ ಸಿದ್ಧವಾಗುವಲ್ಲಿ ವೀರಶೈವ ಸರ್ವೋತ್ಕೃಷ್ಟತೆಯೆಂಬುದು ಎಲ್ಲಿಂದ ಬರಬೇಕು? ಗಗನಕುಸುಮಾಯಮಾನವೇ ಸರಿ.

ಸಮಾಧಾನ—ಒಂದು ಪಕ್ಷ ವೀರಶೈವರಿಗೆ ಬ್ರಾಹ್ಮಣಾದಿವರ್ಣಗಳಿಲ್ಲದಿದ್ದರೂ

ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ
ಸಮ್ಯಕ್ ಋಷಿಸಂಘ ಜುಷ್ಟಂ ||

ಎಂದು ಅತ್ಯಾಶ್ರಮೋಪನಿಷತ್ತಿನಲ್ಲಿ ಹೇಳಿರುವಂತೆ ಅತ್ಯಾಶ್ರಮಿಯು ಪರಮಶ್ರೇಷ್ಠನಾದ್ದರಿಂದ ವೀರಶೈವರು ಅಂಥ ಅತ್ಯಾಶ್ರಮಾವಲಂಬಿಗಳಾದ್ದರಿಂದ ಬ್ರಹ್ಮ ವಿದ್ಯಾಧಿಕಾರವುಂಟೆಂದು ಹೇಳಬಹುದಲ್ಲವೆ ?

ಶಂಕಾ—

"ಆಶ್ರಮಃ ಏಷಾಮಸ್ತೀತಿ ಆಶ್ರಮಿಣಃ, ಆಶ್ರಮಿಣಃ ಅತಿಕ್ರಾಂತಾಃ ಅತ್ಯಾಶ್ರಮಿಣಃ"

ಎಂಬ ಸಮಾಸಾನುಸಾರವಾಗಿ ಕೆಲವು ಕಾಲ ಪ್ರಾಪ್ತವಾದ ಬ್ರಹ್ಮಚರ್ಯಾದ್ಯಾಶ್ರಮಗಳಲ್ಲಿದ್ದು, ಅನುಷ್ಠಾನನಿರತನಾಗಿ ಅನಂತರ ಆಯಾಯ ಅಶ್ರಮಗಳನ್ನು ಅತಿಕ್ರಮಿಸಿದವನಿಗೆ(ಅತ್ಯಾಶ್ರಮಿ)ಯೆಂಬ ಹೆಸರುಬರಬೇಕಾಗಿರುವುದರಿಂದ ವೀರಶೈವರಿಗೆ ಪೂರ್ಣಭಾವಿಯಾಗಿ ಆಶ್ರಮ ವ್ಯವಹಾರವೇ ಇಲ್ಲದ ಮೇಲೆ(ಅತ್ಯಾಶ್ರಮಿ)ಯೆಂಬ ಹೆಸರಾದರೂ ಹೇಗೆತಾನೆ ಬಂದೀತು ? ಇದಲ್ಲದೆ ವೀರಶೈವರು ಶಿವದೀಕ್ಷೆಯನ್ನು ಪಡೆದಮೇಲೆ ಶ್ರುತಿಸ್ಮೃತಿ ಪುರಾಣೇತಿಹಾಸ ಪ್ರಸಿದ್ಧಗಳಾಗಿರುವ ರಜಸ್ಸ್ವಲಾದಿ ಪಂಚಸೂತಕಾದಿಗಳನ್ನು ಆಚರಿಸುವುದಿಲ್ಲ. ಹೀಗೆ ಶಾಸ್ತ್ರವಿರುದ್ಧವಾಗಿ ನಡೆಯುವುದರಿಂದ ಬ್ರಾಹ್ಮಣರಿಗಿಂತ ಕ್ಷತ್ರಿಯರು, ಕ್ಷತ್ರಿಯರಿಗಿಂತ ವೈಶ್ಯರು, ವೈಶ್ಯರಿಗಿಂತ ಶೂದ್ರರು, ಶೂದ್ರರಿಗಿಂತ ಸಂಕರಜಾತಿಯವರು, ಅವರಿಗಿಂತ ವೀರಶೈವರು ಕೀಳುಜಾತಿಗೆ ಸೇರಿದವರೆಂದು ಶಾಸ್ತ್ರದೃಷ್ಟಿಯಿಂದ ವ್ಯವಸ್ಥೆಗೊಳಿಸಿರುವಾಗ ವೀರಶೈವರು ಉತ್ಕೃಷ್ಟರೆಂದು ಹೇಳಿಕೊಳ್ಳುತ್ತ ತಮ್ಮತಮ್ಮ ಅಂತರಂಗದಲ್ಲಿ ಸಂತೋಷಪಡಬಹುದಲ್ಲದೆ ಪ್ರಮಾಣಸಿದ್ಧವಾದ ಉತ್ಕೃಷ್ಟತ್ವವನ್ನು ಎಂದೂ ಪಡೆಯಲಾರರು. ಎಂಬ ಆಕ್ಷೇಪವುದಿಸಲಾಗಿ—

ಸಮಾಧಾನ—ಓ ವಾದಿಯೇ! ತರ್ಕ್ಕ ಯುಕ್ತಿಗಳೂ ಪ್ರಮಾಣಗಳೂ ಇಲ್ಲದ್ದರಿಂದಲ್ಲವೆ, ವೀರಶೈವರಿಗೆ ಉತ್ಕೃಷ್ಟತೆ ಇಲ್ಲವೆಂಬುದು ? ಹಾಗಾದರೆ- ಯುಕ್ತಿಗಳಿಲ್ಲದ್ದರಿಂದ ವೀರಶೈವರಿಗೆ ಉತ್ಕೃಷ್ಟತೆಯಿಲ್ಲವೆಂಬರ್ಥವೊ, ಅಥವಾ ಪ್ರಮಾಣಗಳಿಲ್ಲವಾದ್ದರಿಂದಲೊ, ಯುಕ್ತಿಪ್ರಮಾಣಗಳೆರಡೂ ಇಲ್ಲದ್ದರಿಂದಲೊ ಎಂದು ನಿನ್ನ ವಾದದಲ್ಲಿ ಮೂರು ವಿಕಲ್ಪಗಳುದಿಸುತ್ತವೆ. ಇವುಗಳಲ್ಲಿ ಪ್ರಮಾಣಗಳ ಸಹಾಯವಿಲ್ಲದೆ ಬರೇ ಯುಕ್ತಿಗಳು ಲೌಕಿಕಸಂಬಂಧವಾದ ಧನಕನಕಾದಿ ಉತ್ಕೃಷ್ಟತೆಗೆ ಸಾಧನಗಳಾಗಬೇಕಲ್ಲದೆ ಅಲೌಕಿಕ (ವೈದಿಕ)ಉತ್ಕೃಷ್ಟತೆಯಲ್ಲಿ ಸಾಧನವಾಗಲಾರವೆಂದು ಶಾಸ್ತ್ರಕಾರರ ಅಭಿಪ್ರಾಯವಿರುವುದರಿಂದ ಮೊದಲನೆಯ ಪಕ್ಷವು ಯುಕ್ತವಲ್ಲ,

"ಆದಿತ್ಯೋ ಯೂಪಃ ಯಜಮಾನಃ ಪ್ರಸ್ತರಃ"
ಅಗ್ನಿರ್ವೈ ಬ್ರಾಹ್ಮಣಃ ಅಪಶವೋ ಅನ್ಯೇ ಗೋ ಅಶ್ವೇಭ್ಯಃ"

ಯಜ್ಞಶಾಲೆಯಲ್ಲಿರುವ ಹತ್ತಿರಿಹಿಡಿದು ಸುಣಾವುಮಾಡಿದ ಮರದ ತುಂಡಿಗೆ ಯೂಪವೆಂದು ಕರೆಯುತ್ತಾರೆ. ಇಂಥ ಮರದ ತುಂಡೇ ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯನು, ಹೋಮದ ಪ್ರಸ್ತರವೆ (ದರ್ಭಮುಷ್ಟಿ)ಯಜಮಾನನು. ಅಗ್ನಿಯೇ ಬ್ರಾಹ್ಮಣನು, ಗೋ ಅಶ್ವಗಳ ಹೊರತು ಬೇರೆ ಪಶುಗಳು ಪಶುಗಳೇ ಅಲ್ಲವು. ಮುಂತಾದ ಪೂರ್ವೋತ್ತರಮೀಮಾಂಸಾನ್ಯಾಯವಿಲ್ಲದ ಶಾಸ್ತ್ರವಾಕ್ಯಗಳು (ಪ್ರಮಾಣಗಳು) ಪ್ರತ್ಯಕ್ಷ ವಿರೋಧವಾದ್ದರಿಂದ ಎರಡನೆಯ ಪಕ್ಷವು ಸಹ ಯುಕ್ತವಾಗಿಲ್ಲವು, ಅನಂತ ಪ್ರಮಾಣಗಳು ಯುಕ್ತಿಗಳು ಪರಮಾಪ್ತ ಪರಮೇಶ್ವರನಿಂದ ಪ್ರಣೀತಗಳಾದ ಆಗಮಪ್ರಮಾಣಗಳು ಪ್ರಕಾಶಿಸುತ್ತಿರುವುದರಿಂದ ಮೂರನೆಯ ಪಕ್ಷವು ಸಹ ಯುಕ್ತವಲ್ಲ. ಅಂಥ ಪ್ರಮಾಣಗಳಾವುವೆಂದರೆ-

ಸ್ಕಾಂದಪುರಾಣಾಂತರ್ಗತಶಂಕರಸಂಹಿತೆಯಲ್ಲಿ—

ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ ।
ಪಶುಭ್ಯೋಪಿ ನರಾಶ್ಶ್ರೇಷ್ಠಾಃ ತೇಷು ಶ್ರೇಷ್ಠಾದ್ವಿಜಾತಯಃ ॥
ದ್ವಿಜಾತಿಷ್ವಧಿಕಾ ವಿಪ್ರಾಃ ವಿಪ್ರೇಷು ಕ್ರತುಬುದ್ಧಯಃ ।
ಕ್ರತುಬುದ್ಧಿಷು ಕರ್ತಾರಸ್ತೇಭ್ಯಸ್ಸನ್ಯಾಸಿನೋಧಿಕಾಃ ॥
ತೇಷು ವಿಜ್ಞಾನಿನಶ್ಶ್ರೇಷ್ಠಾ ಸ್ತೇಷು ಶಂಕರಪೂಜಕಾಃ ।
ತೇಷು ಶ್ರೇಷ್ಠಾ ಮಹಾಭಾಗ ಮಮಲಿಂಗಾಂಗಸಂಗೀನಃ ॥
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ ಭವೇತ್ ।
ತಸ್ಮಾದಪ್ಯಧಿಕೊ ನಾಸ್ತಿ ತ್ರಿಷು ಲೋಕೇಷು ಸರ್ವದಾ ॥
ಸ ವಂದ್ಯಸ್ಸರ್ವದಾ ಪೂಜ್ಯಃ ಸಂಸಾರವಿಜಿಗೀಷುಭಿಃ ।
ತಸ್ಮೈದೇಯಂ ತತೋಗ್ರಾಹ್ಯಂ ಸ ಚ ಪೂಜ್ಯೋ ಯಥಾಹ್ಯಹಂ ॥

ಹುಳುಗಳಿಗಿಂತ ದುಂಬಿಗಳಿಗೂ ಪಕ್ಷಿಗಳಿಗೂ ಅರಿವು ಹೆಚ್ಚು, ಅವುಗಳಿಗಿಂತ ಗೋವು ಮುಂತಾದ ಪಶುಗಳಿಗೆ ಅರಿವು ಹೆಚ್ಚು, ಅವುಗಳಿಗಿಂತ ಮಾನವ

ನಿಗೆ ಅರಿವು ಹೆಚ್ಚು, ಆ ಮಾನವರಲ್ಲಿ ದ್ವಿಜರು, ಅವರಲ್ಲಿ ಶಾಸ್ತ್ರಜ್ಞರು, ಅವರಲ್ಲಿ ಯಜ್ಞಮಾಡಿದವನೂ, ಅವರಲ್ಲಿ ಯಜ್ಞಕರ್ತನೂ ಅವರಲ್ಲಿ ಸನ್ಯಾಸಿಗಳು ಅವರಲ್ಲಿ ಬ್ರಹ್ಮಜ್ಞಾನಿಗಳು ಶ್ರೇಷ್ಠರು. ಆ ಬ್ರಹ್ಮಜ್ಞಾನಿಗಿಂತ ಶಿವಲಿಂಗಧಾರಿಗಳಿಗೆ ಅರಿವು ಹೆಚ್ಚು, ಆಲಿಂಗಾಂಗಿಗಳೊಳಗೆ ಷಡಂಗಗಳಲ್ಲಿ ಷಡ್ವಿದಭಕ್ತಿಯಿಂದ ಷಡ್ಲಿಂಗೋಪಾಸಕರಾದ ಷಟ್‌ಸ್ಥಲ ಬ್ರಹ್ಮಿಗಳಿಗೆ ಅರಿವು (ಜ್ಞಾನಶಕ್ತಿಯು) ಹೆಚ್ಚು, ಹೀಗೆ ಷಟ್‌ಸ್ಥಲಾತ್ಮಕ ಬ್ರಹ್ಮಸಾಕ್ಷಾತ್ಕಾರದಿಂದ ಅನಾದಿಕಾಲದಿಂದ ರೂಢಮೂಲವಾಗಿ ಬೆಳೆದಿರುವ ಆಣವಾದಿ ತ್ರಿಮಲಗಳ ಆಚ್ಛಾದನೆಯಿಂದ ಅನಾತ್ಮವಸ್ತುಗಳಾದ ದೇಹ ಇಂದ್ರಿಯ ಮನಃ ಪ್ರಾಣ ಬುಧ್ಯಾದಿಗಳಲ್ಲಿ ಮಾಡುತ್ತಿರುವ ಅಹಂತಾಬುದ್ಧಿಯು ತೊಲಗಿ ವಾಮದೇವಾದಿ ಮಹಾ ವೇದಾಂತಿಗಳ ಅನುಸಂಧಾನದಂತೆ ಆತ್ಮವಸ್ತುವಿನಲ್ಲಿ ವಿಶ್ವಾಕಾರವಾದ ಪರಿಪೂರ್ಣಾಹಂಭಾವ ರೂಪವಾದ ಲಿಂಗಾಂಗಸಾಮರಸ್ಯಸಿದ್ಧಿಯುಂಟಾಗುವದು, ಇವನು ಷಟ್‌ಸ್ಥಲ ಬ್ರಹ್ಮಿಯೆಂದೂ ಶಿವಯೋಗಿಯೆಂದೂ ಜಂಗಮನೆಂದೂ ವೀರಶೈವನೆಂದೂ ಅತಿವರ್ಣಾಶ್ರಮಿಯೆಂದೂ ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತವೆ. ಶಿವನು ಅನಾದಿಮುಕ್ತನು, ಶಿವಜ್ಞಾನಿಗಳು ಪ್ರಸಾದಮುಕ್ತರು, ಇವರಿಗೆ ಸಮಾನನಾದವನು ತ್ರಿಲೋಕದಲ್ಲಿಯೂ ಇಲ್ಲ. ಇವರೇ ಸರ್ವವಂದ್ಯರು ಪೂಜ್ಯರು.

ಶಂಕಾ—ಅಯ್ಯಾ ಸಿದ್ಧಾಂತಿಯೆ ! ಯಾವ ವರ್ಣಗಳಲ್ಲಿಯೂ ಸೇರದವರಾದ್ದರಿಂದ ವೀರಶೈವರು ಉತ್ಕೃಷ್ಟರಾಗಲಾರರೆಂದು ನಾವು ಮಾಡಿದ ಪೂರ್ವಪಕ್ಷಕ್ಕೆ ತಕ್ಕ ಸಮಾಧಾನ ಹೇಳದೆ "ಪ್ರಜ್ಞಯಾಧೀಕಾಃ" ಎಂದು ಪ್ರಾರಂಭಿಸಿ ಪ್ರಾಣಿಗಳಲ್ಲಿರುವ ಒಂದಕ್ಕೊಂದು ಜ್ಞಾನ ತಾರತಮ್ಯವನ್ನು ತೋರಿಸುತ್ತ ಉತ್ಕೃಷ್ಟತೆಯನ್ನೂ ಅಪಕರ್ಷತೆಯನ್ನು ತೋರಿಸುವುದು ಸಂಗತವಲ್ಲ.

ಸಮಾಧಾನ—ಹಾಗಲ್ಲ, ವರ್ಣಾಶ್ರಮಗಳಲ್ಲಿ ಪ್ರಾಕೃತವರ್ಣಾಶ್ರಮವೆಂತಲೂ ಅಪ್ರಾಕೃತ ವರ್ಣಾಶ್ರಮವೆಂತಲೂ ಎರಡುವಿಧ. ಇವೆರಡರಲ್ಲಿ ಅಪ್ರಾಕೃತವರ್ಣಾಶ್ರಮಾವಲಂಬಿಗಳೇ ಪರಮಶ್ರೇಷ್ಠರು. ವೀರಶೈವರು ಅಪ್ರಾಕೃತವರ್ಣಾಶ್ರಮಾವಲಂಬಿಗಳೆಂದು ಶಿವಾಗಮಗಳೂ ಶ್ರುತಿಗಳೂ ಘೋಷಿಸುತ್ತವೆ.

ಸುಪ್ರಭೇದಾಗಮದಲ್ಲಿ–

ಅಸ್ತಿ ಸಚ್ಚಿತ್ಸುಖಾಕಾರ ಮಲಕ್ಷಣಪದಾಸ್ಪದಂ ।
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷದೂಷಣಂ ॥

ಸಚ್ಚಿದಾನಂದಸ್ವರೂಪನೂ ಲಕ್ಷಾತೀತನೂ ವಿಕಲ್ಪರಹಿತನೂ ನಿರಾಕಾರನೂ ದೋಷರಹಿತನೂ ಎಂದು ಆರಂಭಿಸಿ ವಿಷ್ಣು ಬ್ರಹ್ಮರುದ್ರರೆಂಬ ತ್ರಿಮೂರ್ತ್ಯತೀತನೂ ಆದ ಪರಶಿವನನ್ನು ಪ್ರತಿಪಾದಿಸುತ್ತ ಮುಂದೆ—

ಶಿವಾಭಿದಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ ।
ಸ್ವರೂಪಮಾದದೇ ಕಿಂಚಿತ್ ಸುಖಸ್ಫೂರ್ತಿವಿಜೃಂಭಿತಂ ॥

ಶಿವಾದಿ ಭೂಮ್ಯಂತವಾದ ಮೂವತ್ತಾರು ತತ್ವಗಳನ್ನು ಮೀರಿದ ಮಹಾಲಿಂಗವೆಂಬ ಅಭಿಧಾನವುಳ್ಳ ಪರಶಿವಬ್ರಹ್ಮನು ಲೀಲಾರ್ಥವಾಗಿ ಅಖಂಡ ಜಗತ್ತನ್ನು ನಿರ್ಮಿಸಿ ವಿನೋದಿಸಬೇಕೆಂಬ ಇಚ್ಛೆಯುಳ್ಳವನಾಗಿ ಸುಖಸ್ಫೂರ್ತಿಯಿಂದ ವಿಜೃಂಭಿತವಾದ ಒಂದಾನೊಂದು ರೂಪವನ್ನು ಧರಿಸಿದನು. ಇತ್ಯಾದಿ ಪ್ರಮಾಣಗಳಿಂದ ಪರಶಿವಬ್ರಹ್ಮನು ಲೀಲಾಮಾತ್ರದಿಂದ ಸೃಷ್ಟಿಮಾಡುವುದರಲ್ಲಿ ಅಭಿಮುಖನಾದನು.

ದಿವ್ಯಮಪ್ರಾಕೃತಂ ನಿತ್ಯಂ ನೀಲಕಂಠಂ ತ್ರಿಲೋಚನಂ ।
ಚಂದ್ರಾರ್ಧಶೇಖರಂ ಶುದ್ಧಂ ಶುದ್ಧಸ್ಫಟಿಕಸನ್ನಿಭಂ ॥

ಮುಂತಾದ ಪ್ರಮಾಣಗಳು ಆ ಪರಶಿವ ಅಂಶಭೂತರಾದ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿಮೂರ್ತಿಗಳಿಂದ ಉಪಾಸಿಸಲ್ಪಟ್ಟ ಸ್ವರೂಪವನ್ನು ತೋರಿಸುತ್ತ ಅಪ್ರಾಕೃತ ಗುಣಗಳಿಗೆ ಆಧಾರವಾಗಿಯೂ ನಿತ್ಯಮಂಗಲಸ್ವರೂಪವಾಗಿಯೂ ಸಮಸ್ತಲೋಕ ನಿರ್ಮಾಣದಲ್ಲಿ ಉಪಾದಾನವೂ ನಿಮಿತ್ತವೂ ಆಗಿರುವ ಒಂದಾನೊಂದು ಶಕ್ತಿಯು ಆ ಪರಶಿವಬ್ರಹ್ಮದೊಳುಂಟೆಂದು ಹೇಳಿ ಅಂಥ ಅಚಿಂತ್ಯವಾದ ಶಕ್ತಿ ಸಹಾಯದಿಂದ

ಯೋ ದೇವಾನಾಂ ಪ್ರಥಮಂ ಪುರಸ್ತಾತ್ ವಿಶ್ವಾಧಿಕೋ ರುದ್ರೋ ಮಹರ್ಷಿಃ । ಹಿರಣ್ಯಗರ್ಭಂ ಪಶ್ಯತ ಜಾಯಮಾನಂ ಸ ನೋ

ದೇವಶ್ಶುಭಯಾ ಸ್ಮೃತ್ಯಾ ಸಂಯುನಕ್ತು ॥

—ಮಹಾನಾರಾಯಣ

ಮಹರ್ಷಿಃ-ಸಕಲ ಮಂತ್ರಕರ್ತನಾದ, ಯಃ ರುದ್ರಃ-ಯಾವ ರುದ್ರನು, ವಿಶ್ವಾಧಿಕಃ-ಚೇತನಾಚೇತನರೂಪವಾದ ಪ್ರಪಂಚಕ್ಕಿಂತಲೂ, ಅಧಿಕಃ-ಸರ್ವಜ್ಞತ್ವ ಸರ್ವನಿಯಾಮಕತ್ವಾದಿಗಳಿಂದ ಶ್ರೇಷ್ಠನೊ, ಪರಬ್ರಹ್ಮವಾಚ್ಯನಾದ ಆ ರುದ್ರನು, ಸರ್ವೇಷಾಂ ದೇವಾನಾಂ-ಇಂದ್ರಾದಿ ಸಮಸ್ತ ದೇವತೆಗಳೊಳಗೆ, ಪ್ರಥಮಂ ಪುರಸ್ತಾತ್-ಮೊದಲನೆಯವನಾದ, ಜಾಯಮಾನಂ ಹಿರಣ್ಯಗರ್ಭಂ ಹಿರಣ್ಯಗರ್ಭನೆಂಬ ಬ್ರಹ್ಮನನ್ನು ಹುಟ್ಟಿಸಿ, ಪಶ್ಯತ-ಸೃಷ್ಟಿಸಮಯದಲ್ಲಿ ಸಮಸ್ತ ಜ್ಞಾನಗಳಿಗೆ ಮೂಲಾಧಾರಗಳಾದ ವೇದಗಳನ್ನು ಉಪದೇಶಿಸಬೇಕೆಂಬ ಅನುಗ್ರಹದೃಷ್ಟಿಯಿಂದ ನೋಡಿದನೋ, ಸಃ ದೇವಃ-ಅಂಥ ಪರಮಗುರುವಾದ ರುದ್ರನು, ನಃ-ನಮ್ಮನ್ನು, ಜನನಮರಣರೂಪವಾದ ಸಂಸಾರಸಾಗರದಿಂದ ನಿವೃತ್ತಿಗೊಳಿಸಿ ವೇದಾಂತಸಾರಭೂತ ಸಾಮರಸ್ಯರೂಪವಾದ, ಶುಭಯಾ ಸ್ಮೃತ್ಯಾ-ಜ್ಞಾನಸಿದ್ಧಿಯೊಡನೆ, ಸಂಯೋಜಯತು-ಸೇರಿಸುವಂತೆ ಅನುಗ್ರಹಿಸಲಿ ಎಂದು ಮಹಾನಾರಾಯಣೋಪನಿಷತ್ತು ಪರಶಿವನಿಂದ ಚತುರ್ಮುಖಬ್ರಹ್ಮನ ಉತ್ಪತ್ತಿಯನ್ನು ತೋರಿಸಿ ಮುಂದೆ—

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ॥

ಸೃಷ್ಟ್ಯಾರಂಭದಲ್ಲಿ ಪರಶಿವನು ಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ವೇದಗಳನ್ನು ಉಪದೇಶಮಾಡಿ ಎಲೈ ಬ್ರಹ್ಮನೆ! ಇನ್ನು ನೀನು ಜಗತ್ತನ್ನು ಸೃಷ್ಟಿಸೆಂದು ಅನುಜ್ಞೆಯಿತ್ತನು, ಆಗ ಆ ಬ್ರಹ್ಮನು ಮಾಯಾವೃತನಾದ್ದರಿಂದ ಮಹಾಪ್ರಭೋ! ಜಗತ್ತನ್ನು ಹೇಗೆ ಸೃಷ್ಟಿಸಬೇಕೆಂಬುದೇ ನನಗೆ ಗೊತ್ತಾಗಲಿಲ್ಲ. ಮೊದಲು ನೀನು ಸೃಷ್ಟಿಸಿ ತೋರಿಸಬೇಕೆಂದು ಪುನಃ ಬ್ರಹ್ಮನು ಪ್ರಾರ್ಥಿಸಲಾಗಿ ಪರಶಿವನು ಕೇವಲ ತನ್ನ ಚಿಚ್ಛಕ್ತಿಯ ಪೂರ್ಣಾಂಶದಿಂದ ಪ್ರಕೃತಿಯ ಸಂಬಂಧವಿಲ್ಲದಂತೆ ರೇಣುಕ ದಾರುಕಾದಿ ಮಹಾಪ್ರಮಥರನ್ನು ಸೃಷ್ಟಿಸಿದನು.

ಸಸರ್ಜಾತ್ಮಸಮುಪ್ರಖ್ಯಾನ್ ಸರ್ವಜ್ಞಾನ್ ಸರ್ವಶಕ್ತಿಕಾನ್ ।
ಪ್ರಬೋಧಪರಮಾನಂದ ಪರಿವಾಹಿತ ಮಾನಸಾನ್ ॥
ಪ್ರಮಥಾನ್ ವಿಶ್ವನಿರ್ಮಾಣ ಪ್ರಳಯಾದಿ ವಿಧಿಕ್ಷಮಾನ್ ।
ಸೃಷ್ಟ್ವಾ ಪ್ರಮಥವರ್ಗೇಷು ವರ್ಣಾಶ್ರಮ ಪರಿಕ್ರಮಾನ್ ॥
ಅಪ್ರಾಕೃತಸದಾಚಾರಾನುಪಾದಿಶದಥ ಪ್ರಭುಃ ।
ತಸ್ಮಾತ್ ತದ್ಗೋತ್ರಜಾಸ್ಸರ್ವೇ ಶಿವಭಕ್ತಾ ಧೃತವ್ರತಾಃ ॥

ಎಂದು ಶಿವಾಗಮಗಳು ಅಪ್ರಾಕೃತ ಸೃಷ್ಟಿವೈಭವವನ್ನು ಸಾರುತ್ತ ಅಂಥ ಶಿವಸೃಷ್ಟಿಗೊಳಪಟ್ಟಿರುವ ಪ್ರಮಥರಿಂದ ಸ್ಥಾಪಿತವಾದ ವೀರ ಮತದ ಉತ್ಪತ್ತಿಯನ್ನು ತೋರಿಸಿದ್ದರಿಂದ ಪ್ರಾಕೃತವಾದ ತ್ರೈವರ್ಣಿಕೋ ಗಿಂತಲೂ ಅಪ್ರಾಕೃತ ವೀರಶೈವಸೃಷ್ಟಿಯನ್ನು ಹೇಳಿರುವುದರಿಂದ ಬ್ರಾಹ್ಮ ವರ್ಣದವರಿಗಿಂತ ಶಿವನಿಂದ ಮೊದಲು ಹುಟ್ಟಿದ ರೇಣುಕಾದಿ ಮಹಾಪ್ರ ಧರ್ಮಾವಲಂಬಿಗಳಾದ ವೀರಶೈವರು ಪರಮಶ್ರೇಷ್ಠರೆಂದು ಸ್ಪಷ್ಟವಾಗುತ್ತದೆ.

ಶಂಕಾ—ಹಾಗಾದರೆ ವೀರಶೈವ ಸಿದ್ಧಾಂತ ಪ್ರಕಾರವಾಗಿ ಅಷ್ಟಾವ ಪಂಚಾಚಾರಗಳ ಅನುಷ್ಠಾನದಲ್ಲಿ ಅಗ್ರಗಣ್ಯನಾದ ಪರಮೇಶ್ವರನಾಜ್ಞೆಯ ನಂದೀಶನ ಅವತಾರಿಯಾಗಿ ಭೂಮಿಗವತರಿಸಿದ ಶ್ರೀ ಬಸವೇಶ್ವರನು ಪ್ರಾ ಧರ್ಮಾವಲಂಬಿಯಾದ ಬ್ರಾಹ್ಮಣರ ಕುಲದಲ್ಲಿ ಜನಿಸಿದ ಮಾಧವನ ಧ ಪತ್ನಿಯಾದ ಮಾದಾಂಬಿಕೆಯ ಗರ್ಭದಲ್ಲಿ ಉದಿಸಿದನು, ಎಂಟು ವರ್ಷಗ ವರೆಗೂ ತಂದೆತಾಯಿಗಳ ಮನೆಯಲ್ಲಿ ವಾಸವಾಗಿದ್ದು ಅಲ್ಲಿಂದ ಬ್ರಹ್ಮಸೃಷ್ಟಿ ಳಪಟ್ಟ ಪ್ರಾಕೃತ ಬ್ರಾಹ್ಮಣ ಧರ್ಮವನ್ನು ಬಿಟ್ಟು ಶಿವಸೃಷ್ಟವಾದ ಅಪ್ರಾ ವೀರಶೈವ ಧರ್ಮವನ್ನು ಅವಲಂಬಿಸಿದನೆಂದು ಬಸವೇಶ್ವರ ಪುರಾಣಾದಿಗ ಹೇಳಲ್ಪಟ್ಟಿರುತ್ತದೆಯಾದುದರಿಂದ ಅಂಥ ಬಸವೇಶ್ವರನುಸಹ ಮೊದಲು ಪ್ರಾ ಬ್ರಾಹ್ಮಣಾಚಾರಗಳಲ್ಲಿ ಆಸಕ್ತನಾಗಿದ್ದನೆಂದು ಸ್ಪಷ್ಟವಾಗುತ್ತಿರುವಲ್ಲಿ ತಾನೆ ವೀರಶೈವರಿಗೆ ಶ್ರೇಷ್ಠತ್ವವುಂಟಾದೀತು ?

ಸಮಾಧಾನ—ಬಸವೇಶ್ವರ ಪುರಾಣದಲ್ಲಿ—

ಭವದ್ಭವನ ದೇಹಲೀ ಬಹುಲ ತಂಡುದಂಡಾಹತಿ
ತ್ರುಟನ್ಮುಕುಟಕೋಟಿಭಿರ್ಮಘವದಾದಿಭಿರ್ಭೂಯತೇ ।
ಭಜೇಮ ಭವದಂತಿಕಂ ಪ್ರಕೃತಿಮೇತ್ಯ ಪೈಶಾಚಿಕೀಂ
ಕಿಮಿತ್ಯಮರಸಂಪದಃ ಪ್ರಮಥನಾಥ ನಾಥಾಮಹೇ ॥

ಕೈಲಾಸದೊಳು ಶಿವನೊಡ್ಡೋಲಗದಲ್ಲಿ ದ್ವಾರಪಾಲಕನಾದ ನಂದೀಶ್ವರನು ವೇತ್ರಧಾರಿ (ಬೆತ್ರವನ್ನು ಹಿಡಿದುಕೊಂಡು)ಯಾಗಿ ಕಿಕ್ಕಿರಿದು ಒಬ್ಬರೊಬ್ಬರ ಮೇಲೆ ಶಿವಸಭೆಗೆ ನುಗ್ಗುತ್ತಿರುವ ಇಂದ್ರ ಬ್ರಹ್ಮಾದಿದೇವತೆಗಳನ್ನೂ ಗಂಧರ್ವ, ಸಿದ್ಧ, ಸಾಧ್ಯ ವಿದ್ಯಾಧರ, ಕಿನ್ನರ, ಕಿಂಪುರುಷರನ್ನೂ ದಂಡದಿಂದ ತಡೆಗಟ್ಟುತ್ತ ಕ್ರಮನರಿತು ಅವರವರ ಸ್ಥಾನಗಳಲ್ಲಿ ಕುಳ್ಳಿರುಸುತ್ತ ಒಡ್ಡೋಲಗವನ್ನು ಬಹಳ ಶಿಸ್ತಿನಿಂದ ಸಾಗಿಸುತ್ತಿರುವ ಪ್ರಮಥಾಧಿಪನಾದ ನಂದಿಕೇಶ್ವರನೆ, ನಿನಗೆ ಶರಣಾಗತನಾಗುತ್ತೇನೆ.

ಭೋ ಭೋ ದಿಕ್ಪತಯಃ ಪ್ರಯಾತ ಪುರತಃ ।
ಖಂ ಮುಂಚತಾಂಭೋಮುಚಃ । ಪಾತಾಳಂ ವ್ರಜ
ಮೇದಿನೀಂ ಪ್ರವಿಶತ ಕ್ಷೋಣೀತಲಂ ಪನ್ನಗಾಃ ।
ಬ್ರಹ್ಮನ್ಮುನ್ನಯ ದೂರಮಾತ್ಮಭವನಂ ನಾಥಸ್ಯ ನೋ
ನೃತ್ಯತಃ
ಶಂಭೋಃ ಸಂಕಟಮೇತದಿತ್ಯವತು ನಃ ಪ್ರೋತ್ಸಾರಣಂ
ನಂದಿನಃ ॥

ಎಲೈ ದಿಕ್ಪತಿಗಳಿರಾ ? ಮುಂದಕ್ಕೆ ಪ್ರಯಾಣ ಬೆಳೆಯಿಸಿರಿ, ಎಲೈ ಮೇಘಗಳಿರಾ ? ಆಕಾಶವನ್ನು ಮುಸಗಬೇಡಿರಿ, ಎಲೈ ಸರ್ಪಗಳಿರಾ ? ನಿಮ್ಮ ನಿಮ್ಮ ಸ್ಥಾನವನ್ನು ಸೇರಿರಿ, ನೀವು ಮೇದಿನಿಯನ್ನು ಪ್ರವೇಶಿಸಿರಿ, ನೀವು ಕ್ಷೋಣೀತಲಕ್ಕೆ ಹೋಗಿರಿ, ಎಲೈ ಬ್ರಹ್ಮನೆ ! ನಿನ್ನ ಸ್ಥಾನದಲ್ಲಿ ಕುಳಿತುಕೊ, ಎಂದು ಶಿವನೊಡ್ಡೋಲಗದೊಳು ವೇತ್ರಧಾರಿಯಾದ ನಂದೀಶನು ಆಯಾಯ ದೇವದಾನವ ಮಾನವಾದಿಗಳನ್ನು ಅಲ್ಲಲ್ಲಿ ಬಹುಶಿಸ್ತಿನಿಂದ ಸಾಗಗೊಳಿಸುತ್ತಿರುವ ಶಿವನ ತಾಂಡವವು ನಮ್ಮನ್ನು ರಕ್ಷಿಸಲಿ, ಹೀಗೆ ನಂದಿಕೇಶ್ವರನು ಪ್ರಪಂಚವನ್ನು

ನಿಗ್ರಹಿಸುತ್ತಲೂ ಅನುಗ್ರಹಿಸುತ್ತಲೂ ಬಹುಚಾತುರ್ಯದಿಂದ ಕೈಲಾಸ
ವಿನೋದಿಸುತ್ತಿರುವಷ್ಟರಲ್ಲಿ ಭೂಲೋಕದಲ್ಲಿ ಮಾಧವನೆಂಬ ಓರ್ವ ಶ್ರೀ
ಬ್ರಾಹ್ಮಣನು—

ಮಹೀಸುರಃ ಕಶ್ಚನ ಮಾಧವಾಖ್ಯೋ
ಮಹೀತಲೇ ಮಾಂ ಪ್ರತಿ ಪುತ್ರಕಾಂಕ್ಷೀ ।
ತಪಸ್ಯತಿ ತ್ವದ್ವ್ರತಮಸ್ಯ ಪತ್ನೀ
ತನೋತಿ ಚ ತ್ವದ್ಗತಚಿತ್ತವೃತ್ತಿಃ ।
ಪುತ್ರತ್ವಮಾಸಾದ್ಯ ತಯೋಃ ಪೃಥಿವ್ಯಾಂ
ಶ್ರೀವೀರಮಾಹೇಶ್ವರ ತತ್ರ ದಾರ್ಢ್ಯಂ ।
ವಿಧೇಹಿ ವಿದ್ವನ್ ವಿವಿಗಧೈರ್ವಿಹಾರೈಃ
ಪುತ್ರಸ್ಯ ಪಾಷಂಡ ಪಥಃ ಪ್ರವೃತ್ತಾನ್ ॥

ಎಂದು ಪುರಾಣದಲ್ಲಿ ಹೇಳಿರುವಂತೆ ಪುತ್ರಕಾಂಕ್ಷಿಯಾಗಿ ನಂದೀಶ್ವರನನ್ನು ಕುರಿತು ಘೋರ ತಪವನ್ನಾಚರಿಸಿದನು. ಆವನ ಅಸ್ಖಲಿತವಾದ ದೃಢಭಕ್ತಿ ಮೆಚ್ಚಿ ಶಿವನಪ್ಪಣೆವಿಡಿದು ಮಾಧವನ ಧರ್ಮಪತ್ನಿಯು ಗರ್ಭಾಂಬುಧಿಯಿಂ ಬಸವನೆಂಬ ಹೆಸರಿನಿಂದ ಜನಿಸಿ ಉಪನಯನಾದಿ ಪ್ರಾಕೃತಧರ್ಮಗಳನ್ನು ತ್ಯಜಿಸಿ ಅಪ್ರಾಕೃತ (ವೀರಶೈವ) ಶಿವಧರ್ಮಗಳನ್ನು ಅವಲಂಬಿಸಿ ನಾಸ್ತಿಕಮತ ಗಳನ್ನೆಲ್ಲಾ ಖಂಡಿಸಿ ಆಸ್ತಿಕ ಧರ್ಮಗಳನ್ನು ಸ್ಥಾಪಿಸಿದನು.

ಶಂಕರಸಂಹಿತೆಯಲ್ಲಿ

ಯದಾ ಯದಾ ಹಿ ಧರ್ಮಸ್ಯ ಹಾನಿಶ್ಶೈವಸ್ಯ ಜಾಯತೇ ।
ತದಾ ತದಾವತಾರೋಽಯಂ ಗಣೇಶಾನಾಂ ಮಹೀತಲೇ ॥

ಶಿವಧರ್ಮವು ಲೋಕದಲ್ಲಿ ಎಂದು ಅಳಿಸಿಹೋಗುತ್ತದೆಯೊ ಅಂದು ಗಣೇಶಾದಿ ಪ್ರಮಥರು ಒಂದೊಂದು ಅವತಾರವನ್ನೆತ್ತುವರೆಂಬ ವ್ಯಾಸೋಕ್ತಿ ಯಿಂದಲೂ ಧರ್ಮವನ್ನು ಸ್ಥಾಪಿಸುವ ಮೂಲಕ ಲೋಕಾನುಗ್ರಹಕ್ಕಾಗಿ ಮಲಿನ ವಾಗಿರುವ ವೀರಶೈವ ಧರ್ಮವನ್ನು ಪುನಃ ಉದ್ಧರಿಸುವುದಕ್ಕಾಗಿ ಪ್ರಮಥರು

ಒಂದೊಂದು ಅವತಾರವನ್ನೆತ್ತಬೇಕಾಗಿರುವುದರಿಂದ ನಶಿಸಿಹೋಗಿರುವ ವೀರ ಶೈವಧರ್ಮವನ್ನು ಉಜ್ಜೀವನಗೊಳಿಸಬೇಕೆಂಬ ಇಚ್ಛೆಯಿಂದ ಪ್ರಮಥರು ಮಹೀ ತಲದಲ್ಲಿ ಅವತಾರ ಮಾಡುವರು. ಹೀಗೆ ಪ್ರಾಕೃತವೂ ನಶ್ವರವೂ ಆದ ಜಾತ್ಯಾದಿ ನಿಯಮಗಳನ್ನುಲ್ಲಂಘಿಸಿ ಅನೇಕ ಗಣವರ್ಯರು ಅವತಾರಮಾಡಿರು ತ್ತಾರೆ.

ಇದರಂತೆ ಅದ್ವೈತ ಸಿದ್ಧಾಂತಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಸಹ

ಶಂಕರಶ್ಶಂಕರಸ್ಸಾಕ್ಷಾದ್ವ್ಯಾಸೋ ನಾರಾಯಣಸ್ಮೃತಃ ।
ಚತುರ್ಭಿಸ್ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ ॥

ಎಂದು ಭವಿಷ್ಯತ್ಪುರಾಣವಚನದಿಂದಲೂ ಶ್ರೀ ಶಂಕರರು ಸಾಕ್ಷಾತ್ ಪರಮೇಶ್ವರಾವತಾರಮೂರ್ತಿಗಳಾಗಿದ್ದರೂ ನಿಷಿದ್ಧವಾದ ಕೇರಳದೇಶದಲ್ಲಿ ಹುಟ್ಟಿ ಮಹಾತ್ಮರೆನಿಸಿಕೊಂಡರು. ಇದರಂತೆ ಆದಿಶೇಷನಾದ ಪತಂಜಲಿಯು ಗೋಣಿಕಾ ಎಂಬ ಬ್ರಾಹ್ಮಣಸ್ತ್ರೀಯಲ್ಲಿ ಲೋಕಾನುಗ್ರಹಕ್ಕಾಗಿ ಏಳುವರ್ಷದ ಬಾಲಕರೂಪದಿಂದ ಅಂಜಲಿ (ಕೈಬೊಗಸೆ)ಯಲ್ಲಿ ಬಿದ್ದು ಯೋಗಶಾಸ್ತ್ರಪ್ರವರ್ತ ಕನಾಗಿ ಪತಂಜಲಿ ಎಂದು ಖ್ಯಾತಿಪಡೆದನೆಂದು ಚಿದಂಬರಸಂಹಿತೆಯಲ್ಲಿ ಹೇಳಲ್ಪ ಟ್ಟಿರುತ್ತದೆ.

ಮತ್ತು ವಜ್ರಸೂಚ್ಯುಪನಿಷತ್ಕಾರರು ಋಷ್ಯಶೃಂಗನೆಂಬುವನು ಮೃಗಿ (ಹೆಣ್ಣು ಜಿಂಕೆ)ಯಲ್ಲಿ ಹುಟ್ಟಿದನು. ಕೌಶಿಕನು ದರ್ಭೆಯಲ್ಲಿ ಹುಟ್ಟಿದನು. ಗೌತಮನು ಮೊಲದಪೃಷ್ಠದಲ್ಲಿ ಹುಟ್ಟಿದನು. ಜಾಂಬುಕನು ಜಂಬೂಕಿ (ಕೋತಿ)ಯಲ್ಲಿ ಹುಟ್ಟಿದನು. ವಶಿಷ್ಠನು ಊರ್ವಶಿಯಲ್ಲಿಯೂ, ವಾಲ್ಮೀಕಿಯು ಹುತ್ತದಲ್ಲಿಯೂ ವ್ಯಾಸನು ಬೇಡರಹುಡುಗಿಯಲ್ಲಿಯೂ ಅಗಸ್ತ್ಯನು ಕುಂಭ ದಲ್ಲಿಯೂ ಹುಟ್ಟಿದರೆಂದು ಹೇಳಲ್ಪಟ್ಟಿರುತ್ತದೆ. ಇದಲ್ಲದೆ ವಿಶ್ವಾಮಿತ್ರನು, ಕ್ಷತ್ರಿಯನು, ನಾರದನು ದಾಸೀಪುತ್ರನೆಂದು ಪ್ರಸಿದ್ಧವಾಗಿದೆ. ಹೀಗಿದ್ದರೂ ನಿರ್ದೋಷಿಗಳೇ ಆಗಿದ್ದಾರೆ.

ಇದರಂತೆ ವಿಷ್ಣು ಮುಂತಾದ ದೇವತೆಗಳು ಸಹ ಲೋಕಾನುಗ್ರಹಕ್ಕಾಗಿ ಭೂಲೋಕದಲ್ಲಿ ಹೀನಜಾತಿಗಳಲ್ಲಿ ಅವತಾರವನ್ನೆತ್ತಿದರೂ ಅವರಿಗೆ ಯಾವ ದೋಷ ಕಳಂಕವೂ ಇಲ್ಲ.

ಅದರಂತೆ ಬಸವೇಶ್ವರನು ಪ್ರಾಕೃತಜಾತಿಯಲ್ಲಿ ಹುಟ್ಟಿದ್ದರೂ ಪರಮೇಶ್ವರನಿಂದ ನಿರಧಿಕರಣದೀಕ್ಷೆಯನ್ನು ಪಡೆ (ಶಾಂಭವಲಿಂಗಧಾರಣ)ದು ಅಪ್ರಾಕೃತ (ವೀರಶೈವ) ಪ್ರಮಥಧರ್ಮಾವಲಂಬಿಯಾದನು. ಆದುದರಿಂದ ಶ್ರೀ ಬಸವೇಶ್ವರನು ನಂದೀಶ್ವರನ ಅವತಾರಮೂರ್ತಿಯಾದುದರಿಂದ ಲೋಕಾನುಗ್ರಹಕ್ಕಾಗಿ ನಿಕೃಷ್ಟಕುಲದಲ್ಲಿ ಜನ್ಮವೆತ್ತಿದ್ದರೂ ವಾದಿಯು ಹೇಳುವಂತೆ ಯಾವ ದೋಷಲೇಶವು ಸಂಭವಿಸುವುದಿಲ್ಲ. ಇದಲ್ಲದೆ—

ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋಽ ಜಾಯತ ॥

ವಿರಾಟ್ಪುರುಷನ ಮುಖದಿಂದ ಬ್ರಾಹ್ಮಣನು, ತೋಳುಗಳಿಂದ ಕ್ಷತ್ರಿಯನೂ, ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ ಹುಟ್ಟಿದರೆಂದು ಶ್ರುತಿಗಳು ಹೇಳುತ್ತವೆ. ಹೀಗೆ ಶ್ರುತಿಸ್ಮೃತೀತಿಹಾಸಗಳಲ್ಲಿ ಹೇಳುವಂತೆ ಪ್ರಮಥಧರ್ಮಗಳನ್ನನುಷ್ಠಿಸುತ್ತ ಚಿತ್ತಪರಿಪಾಕಾವಸ್ಥೆಯನ್ನು ಪಡೆದು ವೈರಾಗ್ಯದಿಂದ ಪ್ರಾಕೃತ ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿ ಅಪ್ರಾಕೃತ ಅತಿವರ್ಣಾಶ್ರಮಧರ್ಮಗಳನ್ನವಲಂಬಿಸಬೇಕೆಂಬುದೇ ಸಿದ್ಧಾಂತವು, ಇಂಥ ಪ್ರಾಕೃತಧರ್ಮಗಳನ್ನು ತ್ಯಜಿಸಿ ಅಪ್ರಾಕೃತ ಧರ್ಮಗಳನ್ನು ಅವಲಂಬಿಸಿದ್ದುದರಿಂದ ಪರಮೇಶ್ವರನ ತಾಲ್ವೋಷ್ಠಪುಟಗಳಿಂದ ಸ್ಪಷ್ಟವಾಗಿ ಹೊರಹೊಮ್ಮಿದ ಕಾಮಿಕಾದಿ ಇಪ್ಪತ್ತೆಂಟು ಶಿವಾಗಮಗಳಲ್ಲಿ ಹೇಳಿರುವಂತೆ ಲಿಂಗಧಾರಣರೂಪ ಶಾಂಭವದೀಕ್ಷೆಯನ್ನು ಪಡೆದು ಅಷ್ಟಾವರಣಾದಿ ಆಯಾಯ ಧರ್ಮಗಳನ್ನು ಅನುಷ್ಠಿಸಬೇಕು.

ಶಂಕಾ—ಆದರೆ ಮುಮುಕ್ಷುಗಳಿಗೆ ವೇದವಿದ್ಯೆಯು ಅತ್ಯವಶ್ಯಕವಾದುದರಿಂದ ಅಂಥ ವೇದದಲ್ಲಿ ಹೇಳಲ್ಪಟ್ಟಿರುವ ಅಗ್ನಿಷ್ಟೋಮ, ಅತಿರಾತ್ರ, ಜ್ಯೋತಿಷ್ಟೋಮ ಮುಂತಾದ ಧರ್ಮಗಳನ್ನು

"ಸತ್ರಿಭಿರ್ವೇಧೈರ್ವಿಧೀಯತೇ"

ಎಂದು ಆಪಸ್ತಂಭದಲ್ಲಿ ಹೇಳಿರುವಂತೆ ಶಿವಾಗಮಗಳಲ್ಲಿ ಅಂಥ ಅಗ್ನಿಷ್ಟೋಮಾದಿ ಧರ್ಮಗಳನ್ನು ಹೇಳದೆ ಇದ್ದರೂ ಬ್ರಾಹ್ಮಣರು ಸಾಮಾನ್ಯವಾಗಿ ಅನುಷ್ಠಿಸಬೇಕಾಗಿರುವ ಅಗ್ನಿಷ್ಟೋಮಾದಿ ಧರ್ಮಗಳು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವುದರಿಂದ ವಿರೋಧವಿಲ್ಲವೆಂದು ಹೇಳುತ್ತೇವೆಂದರೆ—

ಸಮಾಧಾನ—ಹಾಗೆ ಶಿವಾಗಮಗಳಲ್ಲಿ ಆಲಯ ಪ್ರತಿಷ್ಠಾದಿಗಳು ಹೇಳಲ್ಪಟ್ಟಿದ್ದರೂ ಅವುಗಳೆಲ್ಲ ವೀರಶೈವರಿಗೆ ಸಂಬಂಧಪಟ್ಟಿಲ್ಲವು. ಅವೇ ಶಿವಾಗಮಗಳ ಉತ್ತರ ಭಾಗದಲ್ಲಿ ವೀರಶೈವರು ಅವಶ್ಯವಾಗಿ ಅನುಷ್ಠಿಸಬೇಕಾದ ಪಂಚಾಚಾರಗಳು ಅಷ್ಟಾವರಣಾದಿಗಳೂ, ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು (ಷಟ್‌ಸ್ಥಲ) ಸ್ಥಲಗಳ ಅನುಷ್ಠಾನಕ್ರಮಗಳೂ ಮುಂತಾದ ಮುಕ್ತಿಸಾಧನಧರ್ಮಗಳು ಹೇಳಲ್ಪಟ್ಟಿರುತ್ತವೆ. ಯಾವ ಯಾವ ಸ್ಥಲದಲ್ಲಿ ಯಾವ ಯಾವ ಧರ್ಮಗಳು ಹೇಳಲ್ಪಟ್ಟಿರುತ್ತವೆಯೋ ಅಲ್ಲಲ್ಲಿ ಅವುಗಳನ್ನು ತಿಳಿಯುವುದೂ ಅದರಂತೆ ಅನುಷ್ಠಿಸುವುದೂ ಅವಶ್ಯಕವಾಗಿದೆ, ಇವುಗಳಿಗೆ ಭಿನ್ನಗಳಾದ ಧರ್ಮಗಳನ್ನು ಅನುಷ್ಠಿಸುವುದು ಅವರವರ ಆಚಾರವ್ಯವಹಾರಗಳಿಗೆ ವಿರುದ್ಧವಾದವುಗಳನ್ನು ಬಿಡಬೇಕೆಂದು ಸಿದ್ಧವಾಗುತ್ತದೆ. ಹೀಗಿರುವಾಗ ವೀರಶೈವರಿಗೆ ಗರ್ಭಾದಾನಾದಿ ಸಂಸ್ಕಾರರಹಿತರಾದ್ದರಿಂದಲೂ ಪ್ರಾಜಾಪತ್ಯಾದಿ ವೇದವ್ರತಗಳಿಲ್ಲದ್ದರಿಂದಲೂ ಶ್ರೇಷ್ಠತ್ವವುಂಟಾಗದೆಂದು ವಾದಿಯು ಆಕ್ಷೇಪಿಸುವುದು ಯುಕ್ತವಾದುದಲ್ಲ, ಏಕೆಂದರೆ—ಅಪ್ರಾಕೃತಸೃಷ್ಟಿಕ್ರಮದ ವಿಚಿತ್ರತೆಯನ್ನು ತೋರಿಸಿರುವುದರಿಂದ ವೀರಶೈವರು ಧರ್ಮದಿಂದ ಅಪ್ರಾಕೃತಸೃಷ್ಟಿಗೆ ಒಳಪಟ್ಟಿರುವ ಗೋತ್ರಪ್ರವರ್ತಕರಾದ ರೇಣುಕಾದಿ ಗಣಗೋತ್ರಾನುಯಾಯಿಗಳೇ ಹೊರತು ಋಷಿಗೋತ್ರಾನುಯಾಯಿಗಳಲ್ಲವಾದ್ದರಿಂದ ಪ್ರಾಜಾಪತ್ಯ, ಅಗ್ನಿಷ್ಟೋಮಾದಿ

ಧರ್ಮಗಳನ್ನು ಅನುಷ್ಠಿಸಬೇಕಾದುದಿಲ್ಲ. ಮತ್ತು ಇವರಿಗೆ ಆ ಧರ್ಮಗಳಿಂ ದುಂಟಾಗುವ ಸ್ವರ್ಗಾದಿ ಅಪೇಕ್ಷೆಯೂ ಇಲ್ಲ. ಇದೇ ಅಭಿಪ್ರಾಯವನ್ನು

ಸಿದ್ಧಾಂತಶಿಖಾಮಣಿಯಲ್ಲಿ—

ವಿಶುದ್ಧಾಃ ಪ್ರಾಕೃತಾಶ್ಚೇತಿ ದ್ವಿವಿಧಾ ಮಾನುಷಾಃ ಸ್ಮೃತಾಃ।
ಶಿವಸಂಸ್ಕಾರಿಣಶ್ಶುದ್ಧಾಃ ಪ್ರಾಕೃತಾ ಇತರೇ ಮತಾಃ॥
ವರ್ಣಾಶ್ರಮಾದಿ ಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ।
ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ॥
ಶಿವೋಕ್ತಧರ್ಮನಿಷ್ಠಾ ತು ಶಿವಾಶ್ರಮ ನಿಷೇವಿಣಾಂ।
ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಸ್ಮೃತಃ॥

ಮಾನವರಲ್ಲಿ ಅಪ್ರಾಕೃತಗಣಗೋತ್ರದ ಮಾನವರೆಂತಲೂ ಪ್ರಾಕೃತ ಋಷಿಗೋತ್ರದ ಮಾನವರೆಂತಲೂ ಎರಡು ಪ್ರಕಾರ. ಇವೆರಡರಲ್ಲಿ ಶಿವಸಂಸ್ಕಾರಿಗಳೇ ಅಪ್ರಾಕೃತರು. ಶಿವಸಂಸ್ಕಾರವಿಲ್ಲದವರೇ ಪ್ರಾಕೃತರು, ವರ್ಣಾಶ್ರಮಗಳಲ್ಲಿ ಶಿವನಿಂದ ಹೇಳಲ್ಪಟ್ಟಿರುವ ವರ್ಣಾಶ್ರಮಧರ್ಮಗಳು. ಚತುರ್ಮುಖ ಬ್ರಹ್ಮನಿಂದ ಹೇಳಲ್ಪಟ್ಟ ವರ್ಣಾಶ್ರಮಧರ್ಮಗಳು. ಇವೆರಡರಲ್ಲಿ ಶಿವ ಸಂಸ್ಕಾರಗಳಿ ಅಪ್ರಾಕೃತರು. ಬ್ರಹ್ಮಸಂಸ್ಕಾರಿಗಳೇ ಪ್ರಾಕೃತರು. ಇವೆರಡು ಭೇದವನ್ನು ಶ್ರೀ ರೇಣುಕಭಗವತ್ಪಾದರು ಸ್ಪಷ್ಟಪಡಿಸಿರುತ್ತಾರೆ.

ಇದಲ್ಲದೆ ವೀರಶೈವರು ಗೋತ್ರ ಸೂತ್ರಗಳಿಲ್ಲದ್ದರಿಂದ ಹೇಗೆತಾನೆ ಉತ್ಕೃಷ್ಟರಾಗುವರೆಂಬ ಆಪಾದನೆಯಂತೂ ಕೇವಲ ವಿಚಾರವಿಲ್ಲದ ಮಾತಾಗಿದೆಯೆ ಹೊರತು ವಾಸ್ತವವಲ್ಲ. ಏಕೆಂದರೆ-ವೀರಶೈವರಲ್ಲಿಯು ಸಹ ಈಶ್ವರನ ಸದ್ಯೋಜಾತಾದಿ ಐದು ಮುಖಗಳಿಂದ ಉದ್ಭವರಾದ ಪ್ರಮಥ ಶ್ರೇಷ್ಠರೆನಿಸಿದ ರೇಣುಕ, ದಾರುಕ, ಘಂಟಾಕರ್ಣ, ಗಜಕರ್ಣ, ವಿಶ್ವಕರ್ಣರೆಂಬ ಐದುಜನ ಗೋತ್ರ ಪ್ರವರ್ತಕರು, ವೇದಾಧ್ಯಯನ ಮುಂತಾದ ಬ್ರಹ್ಮವಿದ್ಯಾಧಿಕಾರವು ಪ್ರಾಕೃತರಿಗಿರುವಂತೆ ಅಪ್ರಾಕೃತರಿಗೂ ಇರುತ್ತವೆ. ಆದುದರಿಂದ ವೀರಶೈವರಿಗೆ ಗೋತ್ರ ಸೂತ್ರಗಳಿಲ್ಲವೆಂಬ ವಾದಿಯು ವಾದಕ್ಕೆ ಎಷ್ಟೂ ಅವಕಾಶವಿಲ್ಲ.

ಪ್ರಾಕೃತಬ್ರಾಹ್ಮಣ್ಯಗಿಂತ ಅಪ್ರಾಕೃತ ಬ್ರಾಹ್ಮಣ್ಯದಲ್ಲಿ ಒಂದು ವಿಧವಾದ ವೈಶಿಷ್ಟ್ಯವನ್ನು ಶೈವಾಗಮಗಳು ತೋರಿಸಿರುತ್ತವೆ. ಇದಲ್ಲದೆ ಮೊದಲು ಪ್ರಾಕೃತ ಬ್ರಾಹ್ಮಣಾದಿವರ್ಣಗಳಲ್ಲಿಯೂ ಪ್ರಾಕೃತಬ್ರಹ್ಮಚರ್ಯಾದಿ ಆಶ್ರಮ ಗಳಲ್ಲಿಯೂ ಇದ್ದು ಅತಿಶಯಧರ್ಮ ವಿಶೇಷಾವಲಂಬನದಿಂದ ಪೂರ್ವದ ಪ್ರಾಕೃತವರ್ಣಗಳನ್ನೂ ಆಶ್ರಮಗಳನ್ನೂ ಅತಿಕ್ರಮಿಸಿದವನು ಯಾವನೋ ಅವನು ಅತಿವರ್ಣಾಶ್ರಮಿಯೆನಿಸುವನು. ಸ್ವಭಾವತಃ ಮೊದಲುವರ್ಣಗಳೇ ಇಲ್ಲದವನು ಅತಿಕ್ರಮಿಸುವುದೆಂತು ? ಎಂದು ವಾದಿಯು ಆಪಾದಿಸಿರುವುದು ಸಹ ಅವಿಚಾರಿತರಮಣೀಯವಾಗಿದೆ. ಹೇಗೆಂದರೆ-ವೀರಶೈವರಲ್ಲಿ ಪ್ರಾಕೃತ ವರ್ಣಾಶ್ರಮವಿಲ್ಲದಿದ್ದರೂ ಅಪ್ರಾಕೃತ (ಶಿವ) ವರ್ಣಾಶ್ರಮಗಳಿರುತ್ತವೆ. ಧರ್ಮಾನುಷ್ಠಾನದಿಂದ ಚಿತ್ತವು ಪರಿಪಕ್ವವಾದಂತೆಲ್ಲ ಮುಂದುಮುಂದಣ ಸೋಪಾನಗಳನ್ನೇರುವುದರಿಂದ ಆಯಾಯ ಸಾಮಾನ್ಯ ಧರ್ಮಗಳನ್ನು ಅತಿ ಕ್ರಮಿಸಲೇಬೇಕಾಗುವುದು. ಸರ್ವಾಧಾರವಾದ ಶಿವಭಕ್ತಿಯಾದರೊ-

ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ
ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ ॥

ಅನಂತ ಜನ್ಮಗಳನ್ನೆತ್ತಿ ಶ್ರೌತಕರ್ಮಗಳನ್ನು ಸ್ಮಾರ್ತಕರ್ಮಗಳನ್ನೂ ಆಚರಿಸಿ ಪಾಪಗಳನ್ನೆಲ್ಲಾ ನಿರ್ಮೂಲಗೊಳಿಸಿರುವವನಿಗೆ ಮಾತ್ರ ಶಿವಭಕ್ತಿಯು ದಿಸುವದು. ಎಂಬ ಪ್ರಮಾಣಾನುಸಾರವಾಗಿ ಜನ್ಮಾಂತರದಲ್ಲಿ ಆಶ್ರಮಾನು ವರ್ತನದ ಅತಿಕ್ರಮಗಳು ಸಂಭವಿಸಬಹುದು.

ಶಂಕಾ—ಹಾಗಾದರೆ-ಎಲೈ ಸಿದ್ಧಾಂತಿಯೆ ! ನೀನು ಹೇಳಿದ ಪ್ರಮಥ ರಾದರೊ ಶಿವನಿಂದ ಸೃಷ್ಟರಾದುದರಿಂದ ನಿತ್ಯಮುಕ್ತರಾಗಿರುವರಲ್ಲವೆ ? ಇಂಥ ಪರಶಿವಸ್ವರೂಪಿಗಳಾದ ಪ್ರಮಥರಿಗೆ ಗೋತ್ರಪ್ರವರ್ತಕರೆಂದು ಹೇಗೆತಾನೆ ಹೇಳುವದು ?

ಸಮಾಧಾನ—ಅಗಸ್ತ್ಯವಶಿಷ್ಠಾದಿಗಳಂತೆ ಲೋಕಾನುಗ್ರಹಕ್ಕೋಸ್ಕರ ಭೂಲೋಕದಲ್ಲಿಯೂ ವೀರಶೈವ ಸಂಪ್ರದಾಯವು ವಿಚ್ಛಿನ್ನವಾಗದೆ ಬೆಳೆಯಬೇ

ಕೆಂಬ ಇಚ್ಛೆಯಿಂದ ಶ್ರೀ ರೇಣುಕಾದಿ ಮಹಾಪ್ರಮಥರು ವಂಶಪ್ರವರ್ತಕರಾದ ರೆಂದು ಹೇಳುವೆವು.

ಶಂಕಾ—ಹಾಗೆ ರೇಣುಕಾದಿಗಳಿಗೆ ವಂಶಪ್ರವರ್ತಕತ್ವವನ್ನು ಒಪ್ಪುವುದಾದರೆ ಪರಿಗ್ರಹಮಾಡಲೇಬೇಕಾಗುವುದು. ಹಾಗೆ ರೇಣುಕಾದ್ಯಾಚಾರ್ಯರು ಸ್ತ್ರೀ ಪರಿಗ್ರಹ ಮಾಡಿದ್ದರೆಂದು ಒಪ್ಪಿಕೊಳ್ಳುವುದಾದರೆ ಶಿವನಿಂದ ಸೃಷ್ಟಿಸಲ್ಪಟ್ಟ ಸ್ವೇಚ್ಛಾಕಲ್ಪಿತ ಅಪ್ರಾಕೃತ ದಿವ್ಯಶರೀರ ಧಾರಿಗಳೂ ರಾಗದ್ವೇಷಾದಿಗಳನ್ನು ಸಮೂಲನಾಶಗೊಳಿಸಿದವರೂ ನಿತ್ಯ ಮುಕ್ತರೂ ಎನಿಸಿರುವ ಇವರಿಗೆ ಯಾವ ಕರ್ಮಗಳ ಅಪೇಕ್ಷೆಯೂ ಇಲ್ಲ. ಸ್ತ್ರೀಪರಿಗ್ರಹವೂ ಸಹ ಇವರಿಗಿಲ್ಲವೆಂದೇ ಸಿದ್ಧವಾಗುತ್ತದೆ. ಆದುದರಿಂದ ವಂಶೋತ್ಪತ್ತಿಯು ಇವರಿಗೆ ಇಲ್ಲವೆಂದೇ ಸಿದ್ಧಿಸುತ್ತದೆ. ಆದ್ದರಿಂದ ಆಚಾರ್ಯರಿಗೆ ಗೋತ್ರಪ್ರವರ್ತಕರೆಂದು ಹೇಗೆ ಹೇಳುವದು ?

ಸಮಾಧಾನ—ದಹರವಿದ್ಯಾಪ್ರಕರಣದಲ್ಲಿ,

"ಅಥಯದಿ ಸ್ತ್ರೀಲೋಕಕಾಮೋ ಭವತಿ"

ಮುಂತಾದ ಶ್ರುತಿವಾಕ್ಯಗಳಿರುವಂತೆ ಪ್ರಮಥರು ನಿತ್ಯಮುಕ್ತಾತ್ಮರೂ ಅನಾದಿ ಮುಕ್ತರೂ ಬ್ರಹ್ಮಾರಾಮರಾಗಿದ್ದರೂ ಸಹ ಅವರಿಗೆ ಸರ್ವಸ್ವಾತಂತ್ರ್ಯ ವಿರುವುದೆಂಬುದನ್ನು ತೋರಿಸುವುದಕ್ಕಾಗಿ ಶ್ರೀ ರೇಣುಕಾದಿ ಮಹಾಚಾರ್ಯರಿಗೆ ಲೀಲಾರ್ಥವಾಗಿ ಸ್ತ್ರೀಪರಿಗ್ರಹವು ಕಲ್ಪಿಸಲ್ಪಡಬಹುದಲ್ಲದೆ ರಾಗದ್ವೇಷಮೋಹಾದಿಗಳಿಂದ ಕಲ್ಪಿಸಲ್ಪಡಲಾಗದು.

ಶಂಕಾ—ಹಾಗಾದರೆ ಪ್ರಮಥರು ಲೀಲಾರ್ಥವಾಗಿ ಸ್ತ್ರೀಪರಿಗ್ರಹ ಮಾಡಿದ್ದರೆಂದು ಎಲ್ಲಿ ಹೇಳಲ್ಪಡುತ್ತದೆಂಬ ಶಂಕೆಯುದಿಸಿದರೆ—

ಸಮಾಧಾನ—ನಂದಿಕೇಶ್ವರನೆಂಬ ಪ್ರಮಥನಿಗೆ "ಸುಯಶಾ" ಎಂಬ ಪತ್ನಿಯಿದ್ದಳೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿರುವುದಲ್ಲದೆ ಮಂತ್ರಗಳಲ್ಲಿಯೂ ಹೇಳಲ್ಪಟ್ಟಿರುತ್ತದೆ.

ಸಪ್ತಪಾಕಯಜ್ಞದ ಈಶಾನಬಲಿಯಲ್ಲಿ ಚತುಶ್ಚತ್ವಾರಿಂಶದ್ಬಲಿ ಪ್ರಕ್ಷೇಪ ಪ್ರಕರಣದಲ್ಲಿ :

ಗ್ರಹಪೋಽಪಸ್ಪೃಶೋ ಗ್ರಹಪಾಯ ಸ್ವಾಹಾ ।
ಗ್ರಹಪ್ಯ ಪಸ್ಪೃಶೋ ಗ್ರಹಪ್ಯೈ ಸ್ವಾಹಾ ॥
ದ್ವಾರಾಪ್ಯುಪಸ್ಪೃಶೋ ದ್ವಾರಾಪ್ಯೈ ಸ್ವಾಹಾ ।

ಈ ಮಂತ್ರದಲ್ಲಿರುವ ದ್ವಾರಾಪಪದಕ್ಕೆ ನಂದೀಶ್ವರದೆಂದರ್ಥವು. "ದ್ವಾರಾಪಸ್ಯ ಸ್ತ್ರೀ ದ್ವಾರಾಪೀ" ದ್ವಾರಪನ ಹೆಂಡತಿಯಾದ "ಸುಯಶಾದೇವಿ" ಎಂಬ ಅರ್ಥವು. ಇಲ್ಲಿ ದ್ವಾರಾಪೀ ಶಬ್ಧವು "ಪುಂಯೋಗಾದಾಖ್ಯಾಯಾಂ" ಎಂಬ ವ್ಯಾಕರಣ ಸೂತ್ರಾನುಸಾರವಾಗಿ ದ್ವಾರಾಪಪದಕ್ಕೆ ಙೀಪ್‌ಪ್ರತ್ಯಯ ಬಂದು ದ್ವಾರಾಪೀ ಎಂಬ ರೂಪಸಿದ್ಧಿಯಾಗಿರುತ್ತದೆ. ಆದುದರಿಂದ ಗೋತ್ರ ಪ್ರವರ್ತಕರಾದ ಸ್ವೇಚ್ಛಾಕಲ್ಪಿತ ದಿವ್ಯದೇಹಧಾರಿಗಳಾದ ರೇಣುಕಾದ್ಯಾಚಾರ್ಯ ರಿಗೆ ಲೀಲಾಮಾತ್ರದಿಂದ ಸ್ತ್ರೀಪರಿಗ್ರಹಮೂಲಕ ಗೋತ್ರಪರಂಪರೆಯನ್ನಾದರೂ ಕಲ್ಪಿಸಬಹುದು.

ಶಂಕಾ—ಹಾಗಲ್ಲ, ಗೋತ್ರಪ್ರವರ್ತಕರೆನಿಸಿಕೊಳ್ಳುವ ಪ್ರಮಥರಲ್ಲಿ ಯಾವುನಾದರೂ ಒಬ್ಬನಿಗೆ ವೇದಮಂತ್ರಗಳಿಂದ ಸಿದ್ಧವಾಗಿದ್ದರೂ ಸ್ತ್ರೀಪರಿ ಗ್ರಹವು ಶ್ರೀ ರೇಣುಕ ದಾರುಕ, ಏಕೋರಾಮ ಪಂಡಿತಾರಾಧ್ಯರಿಗೆ ಸ್ತ್ರೀಪರಿ ಗ್ರಹವು ಸಿದ್ಧವಾಗಲಿಲ್ಲ. ಎಂದು ಪೂರ್ವಪಕ್ಷಿಯು ಆಕ್ಷೇಪಿಸಲಾಗಿ—

ಸಮಾಧಾನ—ಓ ಪೂರ್ವಪಕ್ಷಿಯೆ ! ಆಲಿಸು, ಗೋತ್ರಪ್ರವರ್ತಕರಲ್ಲಿ ಸ್ತ್ರೀಪರಿಗ್ರಹದಿಂದ ಮಕ್ಕಳು ಮರಿಮಕ್ಕಳು ಮುಂತಾದ ಸಂತತಿಗೆ ಹೇಗೆ ಗೋತ್ರ ಪರಂಪರೆ ಇರುತ್ತದೆಯೋ ಹಾಗೆ ಮದುವೆಮಾಡಿಕೊಳ್ಳದಿದ್ದರೂ ಪ್ರವಾಹಾಕಾರ ವಾಗಿ ಶಿಷ್ಯ ಪ್ರಶಿಷ್ಯ ಪರಂಪರೆಯಿಂದ ಗೋತ್ರಪ್ರವರ್ತಕತ್ವವು ಬರುತ್ತದೆ. ಆದ್ದರಿಂದ ವಿಶ್ವಾಮಿತ್ರನು ಬ್ರಾಹ್ಮಣವಂಶದಲ್ಲಿ ಹುಟ್ಟದೆ ಕ್ಷತ್ರಿಯಕುಲದಲ್ಲಿ ಜನಿಸಿದ್ದರೂ

"ಪುರೋಹಿತಸ್ಯ ಪ್ರವರೇಣ ರಾಜಾ ಪ್ರವರಂ ವೃಣೀತ"

ಎಂದು ಆಪಸ್ತಂಭಸೂತ್ರದಲ್ಲಿ ಹೇಳಿರುವಂತೆ ಪುರೋಹಿತರಾದ ತನ್ನ ಕುಲಗುರುಗಳ ಗೋತ್ರವನ್ನು ವರಿಸಲಲ್ಲವೆ ? ಆದುದರಿಂದ ಗೋತ್ರಪ್ರವರ್ತಕರು ಸ್ತ್ರೀಪರಿಗ್ರಹವನ್ನು ಮಾಡಲೇಬೇಕೆಂಬ ನಿರ್ಬಂಧವೇನೂ ಇಲ್ಲ. ಕರಜಾತ (ಉಪದಿಷ್ಟ)ರಾದ ಶಿಷ್ಯಪ್ರಶಿಷ್ಯಾದಿಗಳಿಗೂ ಗೋತ್ರ ಪ್ರವರ್ತಕತ್ವವು ಬರುವುದರಲ್ಲಿ ಯಾವ ಆತಂಕವೂ ಇಲ್ಲ. ಆದುದರಿಂದ

ರೇಣುಕೋ ರೇವಣೋ ರುದ್ರೋ ಮುನಿರ್ನೀಲೋ ಮಹೇಶ್ವರಃ ।
ಘಂಟಾಸಿದ್ಧಶ್ಚ ಸಾರಂಗೋ ವೃದ್ಧೋಽಗಸ್ತ್ಯಗುರುರ್ಗುರುಃ ॥
ತ್ರಿಶಿಖೋಽಷ್ಟಜಟಃ ಪಂಚವರ್ಣಕಃಸಿದ್ಧಶಾಸನಃ ।
ಇತ್ಯಾದಯೋ ಮಹಾಭಾಗಾ ಮಹಾಪುರುಷಸಂಭವಾಃ ॥

ಇತ್ಯಾದಿ ಶಿವಾಗಮಗಳಲ್ಲಿ ಹೇಳಿರುವಂತೆ ರೇವಣ, ರುದ್ರಮುನಿ, ನೀಲ, ಮಹೇಶ್ವರ ಘಂಟಾಸಿದ್ಧ, ಸಾರಂಗ, ಅಗಸ್ತ್ಯ, ತ್ರಿಶಖ, ಅಷ್ಟಜಟ, ಪಂಚವರ್ಣಕ, ಸಿದ್ಧಶಾಸನ ಎಂಬ ಆಚಾರ್ಯರು ಮೂಲಗೋತ್ರಪ್ರವರ್ತಕರಾದ ಭಗವತ್ಪಾದರೇಣುಕಾಚಾರ್ಯರ ಶಿಷ್ಯಕೋಟಿಗೆ ಸೇರಿದವರು.

ದಾರುಕೋ ಮರುಲೋ ಮಾಯುಶ್ಚಾಳವಾಂಡೋ ಮಹಾತಪಃ ।
ಜೋತಿರ್ಮೂರ್ತಿರ್ಗುರುಶ್ಚಿಕ್ಕೋ ವ್ಯಾಘ್ರಕಂಥೋ ಬೃಹದ್ವದಃ ॥
ನಾರಕಂಥಃ ಪತ್ಸ್ಯಕಂಥೋ ಮುಕ್ತಕಂಥೋ ಮಹಾಮುನಿಃ ॥
ಏಕಾದಶಶಿಖೋ ಯೋಗೀ ಮಲ್ಲಿಕಾರ್ಜುನನಾಮವಾನ್ ॥

ಎಂಬ ಪ್ರಮಾಣಾನುಸಾರವಾಗಿ ಮರುಲ, ಮಾಯು, ಆಳವಾಂಡ, ಜ್ಯೋತಿರ್ಮೂತಿ, ಗುರುವಾದ ಚಿಕ್ಕ, ವಾಘ್ರಕಂಥ, ಬೃಹದ್ವಥ, ನಾರಕಂಥ, ಪತ್ಸ್ಯಕಂಥ, ಮುಕ್ತಕಂಥ, ಮಹಾಮುನಿ, ಇವರೆಲ್ಲರೂ ಮೂಲಗೋತ್ರ ಪ್ರವರ್ತಕರಾದ ಭಗವತ್ಪಾದದಾರುಕಾಚಾರ್ಯರ ಶಿಷ್ಯಕೋಟಿಗೆ ಸೇರಿದವರು.

ಘಂಟಾಕರ್ಣಸ್ತಥೈಕಶ್ಚ ರಾಮೋ ಮುಂಡೀ ಗುಹೇಶ್ವರಃ ।
ಸುತಾರಸ್ತಾರಕೋ ಮುಕ್ತಾನೂಪುರಶ್ಚ ಪುರಾಣಕಃ ॥

ಘಂಟಾಕರ್ಣ, ಏಕೋರಾಮ, ಮುಂಡಿ, ಗುಹೇಶ್ವರ, ಸುತಾರ, ತಾರಕ, ಮುಕ್ತಾ, ನೂಪುರ, ಪುರಾಣಕ ಎಂಬ ಆಚಾರ್ಯರು ಮೂಲಗೋತ್ರೋತ್ಪಾದಕರಾದ ಭಗವಾನ್ ಏಕೋರಾಮಾರಾಧ್ಯರ ಶಿಷ್ಯಕೋಟಿಗೆ ಸೇರಿದವರು.

ಗಜಕರ್ಣಸ್ತ್ರಿರಂಗುಷ್ಠೋ ಮಂಚಣಃ ಸಂಗಮೋಽವ್ಯಯಃ |
ಕಲ್ಯಾಣಪಂಡಿತಃ ಕೇಶೀ ಮಾಧವಃ ಶ್ರೀಪತಿಃ ಪ್ರಭುಃ ||
ಮಲ್ಲಿಕಾರ್ಜುನ ಇತ್ಯಾದ್ಯಾ ವಾಮದೇವ: ಮುಖೋದ್ಗತಾಃ||

ಗಜಕರ್ಣ, ತ್ರಿರಂಗುಷ್ಠ, ಮಂಚಣ, ಸಂಗಮ, ಅವ್ಯಯ ಕಲ್ಯಾಣ ಪಂಡಿತ, ಕೇಶೀ, ಮಾಧವ, ಶ್ರೀಪತಿ, ಪ್ರಭು, ಮಲ್ಲಿಕಾರ್ಜುನ ಇವರೆಲ್ಲರೂ ಮೂಲ ಭಗವತ್ಪಾದಪಂಡಿತಾರಾಧ್ಯರ ಶಿಷ್ಯಪರಂಪರೆಗೆ ಸೇರಿದವರು. ಹೀಗೆ ಸ್ತ್ರೀಪರಿಗ್ರಹವಿಲ್ಲದಿದ್ದರೂ ಶಿಷ್ಯಮೂಲಕವಾಗಿ ಸೂತ್ರಗೋತ್ರಪ್ರವರಾದಿಗಳು ಸಿದ್ಧಿಸುತ್ತವೆ.

ಶ್ರೀ ರೇಣುಕಾದಿ ಆಚಾರ್ಯರಿಗೆ ಸ್ತ್ರೀಪರಿಗ್ರಹವಿಲ್ಲದಿದ್ದರೂ ಲೀಲಾಮಾತ್ರದಿಂದ ಉತ್ಪಾದ್ಯ ಉತ್ಪಾದಕಭಾವವಾಗಲಿ, ಗುರುಶಿಷ್ಯ ಸಂಪ್ರದಾಯದಿಂದಾಗಲಿ, ಗೋತ್ರ ಪ್ರವರ್ತಕತ್ವವು ಶಿವಾಗಮಗಳಲ್ಲಿ ವಿವರಿಸಲ್ಪಟ್ಟಿರುತ್ತದೆ. ಆದುದರಿಂದ ವೀರಶೈವರಿಗೆ ಪ್ರಾಕೃತವರ್ಣಾಶ್ರಮಗಳಾಗಲಿ ಋಷಿಗೋತ್ರಗಳಾಗಲಿ ಇಲ್ಲದಿದ್ದರೂ ಶಿವಸೃಷ್ಟವಾದ ಅಪ್ರಾಕೃತವರ್ಣಾಶ್ರಮಗಳೂ ಗಣಗೋತ್ರಪ್ರವರಾದಿಗಳೂ ಇರುವುದರಿಂದ ಉತ್ಕೃಷ್ಟತೆಯು ಸ್ವತಸ್ಸಿದ್ಧವಾಗಿರುತ್ತದೆ.

ಶಂಕಾ—ವೀರಶೈವರು ಅತ್ಯಾಶ್ರಮಿಗಳೆಂದು ಹೇಳುವುದು ಸಾಧುವಾದುದಲ್ಲ. ಏಕೆಂದರೆ—ಅತ್ಯಾಶ್ರಮಿಯೆನಿಸಬೇಕಾದರೆ ಮೊದಲು ಬ್ರಹ್ಮಚರ್ಯಾದ್ಯಾಶ್ರಮಗಳನ್ನೂ ವರ್ಣಧರ್ಮಗಳನ್ನೂ ಪಾಲಿಸಬೇಕು. ಅತ್ಯಾಶ್ರಮಿ ಶಬ್ದದಲ್ಲಿ ಸೇರಿದ 'ಅತಿ' ಎಂಬ ಶಬ್ದಕ್ಕೆ ಅತಿಕ್ರಾಂತ ಎಂಬ ಅರ್ಥವಿರುವುದರಿಂದ ವರ್ಣಾಶ್ರಮಧರ್ಮಗಳನ್ನು ಅನುಷ್ಠಿಸುತ್ತ ಬಂದಹಾಗೆಲ್ಲ, ಅವುಗಳೆಲ್ಲ ಕ್ಷಣಿಕ ಸುಖಗಳನ್ನು ಕೊಡುವುವಲ್ಲದೆ ನಿತ್ಯಸುಖವನ್ನೀಯಲಾರವೆಂಬ ತುಚ್ಛಬುದ್ಧಿಯುಂಟಾಗಿ ಆ ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿದವನೇ ಅತಿವರ್ಣಾಶ್ರಮಿ

ಯೆನಿಸುವನು. ಹೀಗಿದ್ದರೂ ವೀರಶೈವರಲ್ಲಿ ಅಂಥ ವರ್ಣಾಶ್ರಮವ್ಯವಹಾರವೇ ಇಲ್ಲವಾದ್ದರಿಂದ ಇವರಿಗೆ ಅತಿವರ್ಣಾಶ್ರಮಿಗಳೆಂದು ಹೇಳುವುದೆಂತು ?

ಸಮಾಧಾನ— ಎಲೈ ಪೂರ್ವಪಕ್ಷಿಯೇ ? ಸಾವಧಾನದಿಂದಾಲಿಸು "ಸ್ವತಿ ಪೂಜಾಯಾಂ" ಸು, ಅತಿ, ಎಂಬ ಅವ್ಯಯಗಳು ವ್ಯಾಕರಣರೀತಿಯಾಗಿ ಪೂಜಾರ್ಥದಲ್ಲಿಯೂ ಇವೆ. ಮತ್ತು "ತು ಹಿ ಚ ಸ್ಮ ಹ ವೈ ಪಾದಪೂರಣೇ ಪೂಜನೇಸ್ವತಿ" ಎಂದು ಅಮರಕೋಶಕಾರರು ಸಹ "ಅತಿ" ಶಬ್ದಕ್ಕೆ ಪೂಜಾ ಎಂಬ ಅರ್ಥವನ್ನು ಒಪ್ಪಿರುವುದರಿಂದಲೂ "ಅತ್ಯಾಶ್ರಮಿ" ಎಂಬ ಶಬ್ದದಲ್ಲಿರುವ "ಅತಿ" ಎಂಬ ಶಬ್ದವು ಹಿಂದಿನ ವರ್ಣಾಶ್ರಮಧರ್ಮಗಳನ್ನು ಅತಿಕ್ರಮಿಸುವ ದೆಂಬ ಅರ್ಥವನ್ನು ಬಿಟ್ಟು ಪೂಜಾರ್ಥಕತ್ವವನ್ನು ನಾವು ಅಂಗೀಕರಿಸಿರುವುದ ರಿಂದ ಅತ್ಯಾಶ್ರಮಿಶಬ್ದವು "ಅತಿಶಯಿತಃ ಆಶ್ರಮಃ ಅತ್ಯಾಶ್ರಮಃ, ಸಃ ಏಷಾಮ ಸ್ತೀತಿ ಅತ್ಯಾಶ್ರಮಿಣಃ" ಎಂಬ ಸಮಾಸಾನುಗುಣವಾಗಿ ಬಹಳ ಉತ್ಕೃಷ್ಟ ವಾಗಿ ಪೂಜಿತವಾದ ಆಶ್ರಮಧರ್ಮವುಳ್ಳವರಾದ್ದರಿಂದ ವೀರಶೈವರು ಅತ್ಯಾಶ್ರಮಿ ಗಳೆನಿಸಿದರು. "ಪಂಕಜ" ಎಂಬ ಶಬ್ದವು ಕೆಸರಿನಲ್ಲಿ ಹುಟ್ಟಿದ್ದರಿಂದ ಪಂಕಜ ಎಂಬ ಹೆಸರು ಬಂದಿದ್ದರೂ ಕೇವಲ ಅವಯವಶಕ್ತಿಯಿಂದ ಕಪ್ಪೆ ತೃಣ ಮುಂತಾ ದವುಗಳೆಂದು ಅರ್ಥವಾದರೂ "ಯೋಗಾದ್ರೂಢಿರ್ಬಲೀಯಸೀ" ಎಂಬ ನ್ಯಾಯಾ ನುಸಾರವಾಗಿ ಅವಯವಾರ್ಥಕ್ಕಿಂತ ರೂಢ್ಯರ್ಥವು ಪ್ರಬಲವಾದುದರಿಂದ 'ಪಂಕಜ' ಎಂಬ ಶಬ್ದವು 'ಕಮಲ' ಎಂಬ ಅರ್ಥವನ್ನು ಕೊಡುವುದಲ್ಲವೆ ಬೇರೆ ಅರ್ಥದಲ್ಲಿ ಅದಕ್ಕೆ ಶಕ್ತಿಯಿಲ್ಲ. ಇದರಂತೆ ವೀರಶೈವ ಸಿದ್ಧಾಂತದಲ್ಲಿ 'ಅತಿ ವರ್ಣಾಶ್ರಮಿ' ಎಂಬಲ್ಲಿರುವ 'ಅತಿ' ಎಂಬ ಅವ್ಯಯಕ್ಕೆ ಅತಿಶಯಪೂಜಿತ ಎಂಬ ಅರ್ಥವನ್ನು ಅಂಗೀಕಾರಮಾಡಿದ್ದರಿಂದ ಶಿವಸೃಷ್ಟಿಗೊಳಪಟ್ಟಿರುವ ಪ್ರಮಥ (ಅಪ್ರಾಕೃತ) ಧರ್ಮಗಳೆಂದು ಅರ್ಥಮಾಡಬೇಕಲ್ಲದೆ ಬ್ರಹ್ಮಸೃಷ್ಟಿಗೆ ಸೇರಿದ ಪ್ರಾಕೃತ ಧರ್ಮವೆಂದು ಅರ್ಥಮಾಡಬಾರದು. ಆದುದರಿಂದ ವೀರಶೈವರಿಗಿರುವ ಅತ್ಯಾಶ್ರಮಿ ಪದವು ಅತಿಶಯಪೂಜ್ಯವಾದ ಅಪ್ರಾಕೃತವರ್ಣಾಶ್ರಮ ಧರ್ಮ ವುಳ್ಳುದೆಂದು ಶಿವಾಗಮಗಳಲ್ಲಿ ಉಕ್ತವಾಗಿದೆ.

ಅತಿವರ್ಣಾಶ್ರಮೀ ಪ್ರೋಕ್ತೋ ಗುರುಸ್ಸರ್ವಾಧಿಕಾರಿಣಾಂ।
ಅನ್ಯೇಷಾಂ ನ ಭವೇಚ್ಛ್ರೇಷ್ಠೋ ಯಥಾಹಂ ಪುರುಷೋತ್ತಮಃ ॥

ಅತಿವರ್ಣಾಶ್ರಮೀ ಸಾಕ್ಷಾತ್ ಗುರೂಣಾಂ ಗುರುರುಚ್ಯತೇ ।
ಪಂಚಾಕ್ಷರೀ ಪರಾ ವಿದ್ಯಾ ಶಿವಜ್ಯೋತಿರವಾಪ್ತಯೇ ॥
ಓಂಕಾರಃ ಪ್ರಣವಸ್ಸೋಕ್ತೋ ವಿದ್ಯಾನಾಂ ಬೀಜಮುತ್ತಮಂ ।
ತತ್ತ್ವಾನ್ಯಶೇಷತತ್ತ್ವಾನಿ ಪ್ರಣವೇನ ವಿಶೋಧಯೇತ್ ॥
ಸಿತೇನೋದ್ಧೂಳಯೇದ್ದೇಹಮಗ್ನಿರಿತ್ಯಾದಿ ಮಂತ್ರಕೈಃ ।
ವಿಚಿಂತಯೇತ್ ಸ್ವಾತ್ಮನಿ ಶಂಭುಮೀಶಂ ॥
ಶಿವಂ ಪರಂ ಶಾಂತಮನನ್ಯಸಹಾಯಂ ।
ಭಸ್ಮಾಂಗಮಾವಿಷ್ಕೃತ ಸರ್ವದೀಪ್ತಿ-
ಮತ್ಯಾಶ್ರಮಾಚಾರಮಿಮಂ ವದಂತಿ ॥
ಲಿಂಗಂ ಶಿವೋ ಭವೇತ್ ಕ್ಷೇತ್ರಮಂಗಸಂಯೋಗ ಆಶ್ರಯಃ ।
ತಸ್ಮಾಲ್ಲಿಂಗಾಂಗ ಸಂಯುಕ್ತಃ ಸೋಽಪಿ ಚಾತ್ಯಾಶ್ರಮೀ ಭವೇತ್ ॥
ಏತದ್ವೇದ ಶಿರೋನಿಷ್ಠಃ ಪ್ರಾಹ ಪಾಶುಪತಂ ಮುನೇ ।
ಏತಚ್ಛಿರೋವ್ರತಂ ಪ್ರಾಹುಃ ಕೇಚಿದತ್ಯಾಶ್ರಮಂ ಬುಧಾಃ ॥
ಕೇಚಿನ್ಮಹಾವ್ರತಂ ಪ್ರಾಹುಃ ಕೇಚಿತ್ ಶಾಂಭವಮೈಶ್ವರಂ ॥

ಎಂಬ ಶಿವಾಗಮವಚನಾನುಸಾರವಾಗಿ "ಅಗ್ನಿರಿತಿಭಸ್ಮ" ಮುಂತಾದ ಮಂತ್ರ ದಿಂದ ಅಭಿಮಂತ್ರಿಸಿದ ಭಸ್ಮೋದ್ಧೂಳನ ತ್ರಿಪುಂಡ್ರಧಾರಣ ರುದ್ರಾಕ್ಷಧಾರಣ ಪ್ರಣವಸಹಿತ ಮಹಾ ಪಂಚಾಕ್ಷರೀಜಪ ಪರಶಿವಧ್ಯಾನದಿಂದೊಡಗೂಡಿದ ಶಿವ ಲಿಂಗ ಪೂಜಾವಿಶಿಷ್ಟವಾದ ಲಿಂಗಾಂಗಸಂಬಂಧವೇ ಅತ್ಯಾಶ್ರಮ ಧರ್ಮವೆನಿಸು ತ್ತದೆ. ಇಂಥ ಅತ್ಯಾಶ್ರಮವುಳ್ಳವನೇ ಅತ್ಯಾಶ್ರಮಿಯೆನಿಸಿಕೊಳ್ಳುತ್ತಾನೆ. ಇದಕ್ಕೇನೇ ಪಾಶುಪತವ್ರತವೆಂತಲೂ ಶಿರೋವ್ರತವೆಂತಲೂ ಅತ್ಯಾಶ್ರಮವೆಂ ತಲೂ ಮಹಾವ್ರತವೆಂತಲೂ ಶಾಂಭವವ್ರತವೆಂತಲೂ ಐಶ್ವರವ್ರತವೆಂತಲೂ ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಹೇಳಿರೋಣದರಿಂದ ವೀರಶೈವರು ಅತ್ಯಾಶ್ರಮಿ ಶಬ್ದವಾಚ್ಯರಾದುದರಿಂದ ಸರ್ವೋತ್ಕೃಷ್ಟರೆಂದು ಸಿದ್ಧವಾಯಿತು.

ಶಂಕಾ—ಹಾಗಾದರೆ–ಓ ವೀರಶೈವ ಸಿದ್ಧಾಂತಿಯೇ! ನೀನು ಹೇಳಿದಂತೆ "ಅತಿಶಯಿತಃ ಆಶ್ರಮಃ ಅತ್ಯಾಶ್ರಮಃ, ಅತ್ಯಾಶ್ರಮಃ ಏಷಾಮಸ್ತೀತಿ ಅತ್ಯಾ ಶ್ರಮಿಣಃ" ಎಂದು ಸಮಾಸಮರ್ಯಾದೆಗನುಸರಿಸಿ ಆಶ್ರಮಪದದ ಹಿಂದಿರುವ

ಪ್ರಾಶಸ್ತ್ಯಬೋಧಕವಾದ "ಅತಿ" ಶಬ್ದವು ಆಶ್ರಮ ಎಂಬ ಧರ್ಮದಲ್ಲಿಯೂ ಆಶ್ರಮಿ ಎಂಬ ಧರ್ಮಿಯಲ್ಲಿಯೂ ಅನ್ವಯಿಸುವುದರಿಂದ ಪ್ರಶಸ್ತವಾದ ಆಶ್ರಮವುಳ್ಳವರೆಂದು ಅರ್ಥವು ಸಿದ್ಧವಾದಮೇಲೆ ಅಂಥ ಪ್ರಶಸ್ತಾಶ್ರಮಧರ್ಮಗಳಾದರೂ ಶ್ರುತಿಸ್ಮೃತಿಕಲ್ಪ ಸೂತ್ರಾದಿಗಳಲ್ಲಿ ಹೇಳಲ್ಪಟ್ಟಿರುತ್ತವೆ. ಅವುಗಳಲ್ಲಿ ಉಕ್ತವಾದ ನಲವತ್ತು ಸಂಸ್ಕಾರಗಳಲ್ಲೊಂದೂ ವೀರಶೈವರಲ್ಲಿಲ್ಲದ್ದರಿಂದ ವೀರಶೈವರು ಅತ್ಯಾಶ್ರಮಿಗಳೆಂದು ಹೇಳುವದು ಅಸಂಗತವೇ ಸರಿ.

ಸಮಾಧಾನ—ಎಲೈ ಪೂರ್ವಪಕ್ಷಿಯೇ! ಸಾವಧಾನದಿಂದಾಲಿಸು

ಅತಿವರ್ಣಾಶ್ರಮಾಚಾರಾಃ ಸಂಭವಂತ್ಯೂರ್ಧ್ವವಕ್ತ್ರತಃ ।
ತೇ ವೈ ಸಾಕ್ಷಾತ್ ಮಹಾದೇವಾ ವೋದಂತೇ ಹ್ಯಾಗಮೇಷುಚ॥

ಎಂದು ಕ್ರಿಯಾಸಾರವೆಂಬ ಭಾಷ್ಯಕಾರಿಕೆಯಲ್ಲಿ ಹೇಳಿದ ಆಗಮವಚನದ ಪರ್ಯಾಲೋಚನೆಯಿಂದ ಶಿವನ ಊರ್ಧ್ವಮುಖದಿಂದ ಹುಟ್ಟಿದ ಶಿವಾಗಮಗಳಲ್ಲಿ ವೀರಶೈವರು ಅನುಷ್ಠಿಸಬೇಕಾದ ಪಂಚಾಚಾರ ಅಷ್ಟಾವರಣ ಷಟ್‌ಸ್ಥಲ ಲಿಂಗಾಂಗ ಸಾಮರಸ್ಯ ಮುಂತಾದ ಅತ್ಯಾಶ್ರಮಧರ್ಮಗಳು ಸಂಪೂರ್ಣವಾಗಿ ಹೇಳಲ್ಪಟ್ಟಿರುತ್ತವೆ. ಇಂಥ ಮುಕ್ತಿಸಾಧನಗಳಾದ ಧರ್ಮಗಳು ಪ್ರಾಕೃತರೆನೆಸಿದ ಬ್ರಾಹ್ಮಣಾದಿಗಳಲ್ಲಿಲ್ಲ. ಅಪ್ರಾಕೃತವೆನಿಸಿದ ವೀರಶೈವಭಕ್ತಕುಲದಲ್ಲಿ ಮಾತ್ರ ಯಥಾಯೋಗ್ಯವಾಗಿ ನಿಯಮವನ್ನತಿಕ್ರಮಿಸದೆ ಕಂಡುಬರುವುದರಿಂದ ವೀರಶೈವರೇ ಅತ್ಯಾಶ್ರಮಿಗಳೆಂದು ಸಿದ್ಧವಾಗುತ್ತದೆ. ಇವರನ್ನಧಿಕರಿಸಿಯೇ ಮಂತ್ರೋಪನಿಷತ್ತು ಸಹ ಬೋಧಿಸಿರುತ್ತದೆ, ಇದಲ್ಲದೆ

ಪಂಚಾಸ್ಯಪಂಚಮುಖಾದ್ಯತೋ ಜಾತಾಸ್ತತೋಧಿಕಾಃ ।
ಪಂಚಮಾಸ್ಸರ್ವವರ್ಣೇಭ್ಯೋ ಮದ್ಭಕ್ತಾ ಮತ್ಪ್ರಿಯಾಸ್ಸದಾ॥

ಈಶ್ವರನ ಐದನೆಯ ಮುಖವೆನಿಸಿದ ಈಶಾನಮುಖದಿಂದ ಜನಿಸಿರುವುದರಿಂದ ಪಂಚಮಮುಖೋದ್ಭೂತರೇ ಸರ್ವವರ್ಣಗಳಿಗಿಂತಲೂ ಶ್ರೇಷ್ಠರು. ಅವರೇ ನನ್ನ ಭಕ್ತರು. ಅವರೇ ನನಗೆ ಪ್ರೇಮಾಸ್ಪದರು, ಎಂದು ಕಾಮಿಕಾಗಮವಚನವಿರುವುದರಿಂದ ಆ ಪ್ರಾಕೃತರಾದ ವೀರಶೈವರಿಗೆ ಸರ್ವೋತ್ಕೃಷ್ಟತೆಯು ನಿರ್ವಿವಾದವಾದುದು.

ಶೈವವೆಂಬ ಮಹಾವೃಕ್ಷದಲ್ಲಿ ಸಾಮಾನ್ಯ, ಮಿಶ್ರ, ಶುದ್ಧ, ವೀರ ಎಂದು ನಾಲ್ಕು ಶಾಖೆಗಳೊಳಗೆ ಪ್ರಧಾನಶಾಖೆಯೆನಿಸಿದ ವೀರಶೈವರಲ್ಲಿ ಸಾಮಾನ್ಯ ವೀರಶೈವ, ವಿಶೇಷ ವೀರಶೈವ, ನಿರಾಭಾರವೀರಶೈವ ಎಂದು ಆಚಾರಭೇದದಿಂದಲೂ, ಅನುಭವಭೇದದಿಂದಲೂ ಮೂರುಪ್ರಕಾರ ಶ್ರವಣ, ಕೀರ್ತನ, ಪಾದಸೇವನ, ಧ್ಯಾನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ ಎಂಬ ನವವಿಧ ಭಕ್ತಿಯುಳ್ಳವರಾಗಿ ಪ್ರಾಕೃತಗಳಾದ ಕೃಚ್ಛ್ರ ಚಾಂದ್ರಾಯಣ ಮುಂತಾದ ವ್ರತಗಳನ್ನನುಷ್ಠಿಸದೆ ಶಿವನಿಗೋಸ್ಕರ ಶರೀರವನ್ನು ಶೋಷಿಸುವುದೇ ತಪವು. ಅಗ್ನಿಷ್ಟೋಮಾದಿ ಯಾಗಗಳನ್ನನುಷ್ಠಿಸದೆ ಅವುಗಳಿಗೆ ಬದಲಾಗಿ ಶಿವಾರ್ಚನಾನುಕುಲವಾದ ವ್ಯಾಪಾರವೇ ಕರ್ಮವು, ಜ್ಯೋತಿಷ್ಟೋಮಾದಿ ಯಾಗಗಳನ್ನು ಪ್ರತಿಪಾದಿಸುವ ವೇದಭಾಗಗಳನ್ನು ಬಿಟ್ಟು ಪ್ರಣವಪಂಚಾಕ್ಷರೀ ಶ್ರೀರುದ್ರ ಮುಂತಾದ ಶಿವನನ್ನು ಪ್ರತಿಪಾದಿಸುವ ವೇದಮಂತ್ರಾಭ್ಯಾಸವೆ ಜಪವು. ಶಿವೇತರ ದೇವತೆಗಳ ಸ್ವರೂಪಪಚಿಂತನೆಯಲ್ಲಿ ಆಸಕ್ತರಾಗದೆ ಶಿವೈಕ ವಿಷಯಕವಾದ ಅವಿಚ್ಛಿನ್ನ ಅನುಸಂಧಾನವೆ ಧ್ಯಾನವು. ಭಿನ್ನಭಿನ್ನ ಶಾಸ್ತ್ರಗಳಲ್ಲಿ ಪ್ರತಿಪಾದಿತವಾದ ತತ್ವ ವಿಚಾರದಲ್ಲಿ ವಿಮುಖನಾಗಿ ಕಾಮಿಕಾದ್ಯಾಗಮಗಳಲ್ಲಿ ಪ್ರಧಾನವಾದ ಭಕ್ತಾದಿ ಷಟ್‌ಸ್ಥಲಬೋಧವೇ ಜ್ಞಾನವು, ಇವುಗಳೇ ವೀರಶೈವರು ಅನುಷ್ಠಿಸುವ ಪಂಚಮಹಾಯಜ್ಞಗಳು, ಇಂಥ ಪಂಚಮಹಾಯಜ್ಞಗಳಲ್ಲಿ ನಿಷ್ಠರಾದ ವೀರಶೈವಂಗೆ ತಮ್ಮ ತಮ್ಮ ಅಂಗುಷ್ಠಾಗ್ರಪರಿಮಿತಿಯಾಗಿರುವ ಹೃತ್ಕಮಲಕರ್ಣಿಕಾ (ದಹರಾಕಾಶ) ಮಧ್ಯದಲ್ಲಿ ಪ್ರಾಣಲಿಂಗವೆಂಬ ಹೆಸರುಳ್ಳ ಚಿತ್ಸೂರ್ಯನನ್ನು ಕುರಿತು ಮಾನಸಾನುಸಂಧಾನವೆ ಸಂಧ್ಯಾವಂದನೆಯು, ಪ್ರಾಣಲಿಂಗರೂಪವಾದ ಮಹಾಗ್ನಿಯಲ್ಲಿ ಏಕಾಗ್ರವಾದ ಮನಸ್ಸೆಂಬ ಸಾಧನದಿಂದ ಸಬ್ಧಸ್ಪರ್ಶಾದಿ ವಿಷಯುಗಳೆಂಬ ಆಜ್ಯಾದಿ ಹವಿಸ್ಸನ್ನು ಸಮರ್ಪಿಸುತ್ತಿರುವುದೇ ಹೋಮವು. ಇಂಥ ಜ್ಞಾನಯಜ್ಞರೂಪವಾದ ಅಪ್ರಾಕೃತ ಧರ್ಮನಿಷ್ಠರಾದ ವೀರಶೈವರಿಗೆ ಸತ್ಯ, ಕ್ಷಮಾ, ದಯಾ, ಶೌಚ, ನಿಯಮ, ಮಾರ್ದವ, ತಪಸ್ಸು ತ್ಯಾಗ, ಬ್ರಹ್ಮಚರ್ಯ, ಸಂತುಷ್ಟಿ, ಆರ್ಜವ ಎಂಬ ಹನ್ನೊಂದು ಧರ್ಮಗಳುದಿಸುವುವಲ್ಲದೆ, ಭಕ್ತರಲ್ಲಿ ಕಾಮ, ಅಧರ್ಮಿಗಳಲ್ಲಿ ಕ್ರೋಧ, ಶಿವಾರ್ಚನೆಯಲ್ಲಿ ಲೋಭ, ಶಿವನಲ್ಲಿ ಮೋಹ, ಭಕ್ತರಲ್ಲದವರಲ್ಲಿ ಮದ, ಶಿವಭಕ್ತಿಯಿಂದ ಚ್ಯುತರಾದವರಲ್ಲಿ ಮಾತ್ಸರ್ಯ. ಹೀಗೆ ವಿಷಯುಭೇದದಿಂದ ಅರಿಷಡ್ವ

ರ್ಗಗಳನ್ನು ವಿನಿಯೋಗಿಸುವ ಶಕ್ತಿಯುಳ್ಳವರಾಗುವರು. ಇದಲ್ಲದೆ ಗುರುಲಿಂಗ ಜಂಗಮರಿಗೋಸ್ಕರವಾಗಿ ಪಾಕಮಾಡಬೇಕಲ್ಲದೆ ಆದ್ಮಾರ್ಥವಾಗಿ ಮಾಡಲಾ ಗದು: ಪರಮಪತಿವ್ರತೆಯರಾದ ಸ್ತ್ರೀಯರು ಲಿಂಗಧಾರಿಗಳಾದ ದಾಸಿಯರನ್ನೇ ಸೇವೆಗಿರಿಸಿಕೊಳ್ಳಬೇಕು. ಪತಿಯಾದ ಪುರುಷನು ಲಿಂಗಧಾರಿಗಳಾದ ಭೃತ್ಯ ರನ್ನೇ ಸೇವೆಗಿರಿಸಿಕೊಳ್ಳಬೇಕು. ಲಿಂಗಮುದ್ರಾಂಕಿತಗಳಾದ ಗೃಹಗಳಲ್ಲಿಯೇ ವಾಸಮಾಡಬೇಕು. ಲಿಂಗಾಂಕಿತಗಳಾದ ಕ್ಷೇತ್ರಗಳಲ್ಲಿ ಬೆಳೆದ ಧಾನ್ಯದಿಂದಲೇ ಜೀವಿಸಬೇಕು. (ಲಿಂಗಧಾರಿಗಳಾದ ಕ್ಷೇತ್ರಗಳಲ್ಲಿ ಬೆಳೆದ ಧಾನ್ಯದಿಂದಲೇ ಜೀವಿ ಸಬೇಕು.) ಲಿಂಗಧಾರಿಗಳಾದ ಶಿವಭಕ್ತರಿಗೆ ಬೆಳ್ಳಿ ಬಂಗಾರ ವಸ್ತ್ರಾಲಂಕಾರ ಗಳನ್ನು ದಾನ ಮಾಡಬೇಕು. ಭಸ್ಮಸ್ಪರ್ಶನಪೂರ್ವಕವಾಗಿ ಸ್ವೀಕರಿಸಿದ ಪರಿ ಶುದ್ಧದ್ರವ್ಯಗಳಿಂದ ಗುರುಲಿಂಗಜಂಗಮಾರ್ಚನೆ ಮಾಡಬೇಕು. ದಾಸಭಾವ, ವೀರದಾಸಭಾವ, ಭೃತ್ಯಭಾವ, ವೀರಭೃತ್ಯಭಾವ, ಸಮಯಭಾವ, ಕಲಾವಸ್ಥಿ ಭಾವ ಎಂಬ ಆರುವಿಧ ಸಜ್ಜನತ್ವವನ್ನು ಪಡೆದಿರಬೇಕು. ಗುರುವಿನಲ್ಲಿ ಶಿವಾ ಭಿನ್ನಜ್ಞಾನ, ಇಷ್ಟಲಿಂಗದಲ್ಲಿ ಮನೋಲಯ, ಜಂಗಮನಲ್ಲಿ ಆನಂದಾನುಭವ, ಏಕಾದಶಪ್ರಸಾದ ಪರಿಜ್ಞಾನ, ದಶವಿಧಪಾದೋದಕಸ್ವೀಕಾರ, ಭಕ್ತಿನಿರ್ವಹಣ ಗಳೆಂಬ ಆರು ವಿಧ ವ್ರತಾಚರಣೆಯುಳ್ಳವರಾಗಿರಬೇಕು. ಲಿಂಗಾಚಾರ, ಸದಾ ಚಾರ, ಭೃತ್ಯಾಚಾರ, ಶಿವಾಚಾರ, ಗಣಾಚರಣಗಳೆಂಬ ಪಂಚಾಚಾರಗಳಿಂದ ಕೂಡಿರಬೇಕು. ಅಕ್ರೋಧ, ಸತ್ಯವಚನ, ಕ್ಷಮಾ, ಭವಿಭಕ್ತವಿಭೇದನ, ಅನುಗ್ರಹ, ಸತ್ಪಾತ್ರದ್ರವ್ಯಾರ್ಪಣಗಳೆಂಬ ಷಡ್ವಿಧ ಶೀಲವಂತರಾಗಿರಬೇಕು. ಅಕ್ರೋಧ, ಗುರುಶುಶ್ರೂಷೆ, ಶೌಚ, ಆಹಾರಲಾಘವ, ಅಪ್ರಮಾದಗಳೆಂಬ ಪಂಚನಿಯಮಗಳನ್ನು ಪಾಲಿಸಬೇಕು. ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಪ್ರಸಾದಿ ಪ್ರಸಾದ, ಅಪ್ಯಾಯನಪ್ರಸಾದ, ಸಮಯ ಪ್ರಸಾದ, ಜ್ಞಾನೇಂದ್ರಿಯರಹಿತ ಪ್ರಸಾದ, ಅಂತಃಕರಣರಹಿತ ಪ್ರಸಾದ, ಸದ್ಭಾವಿಪ್ರಸಾದ, ಸಮ್ಮತಪ್ರಸಾದ, ಜ್ಞಾನಪ್ರಸಾದಪಳೆಂಬ ಏಕಾದಶಪ್ರಸಾದ ಸ್ವೀಕಾರದಲ್ಲಿ ನಿಷ್ಠೆಯುಳ್ಳವಿನಾಗಿರಬೇಕು. ಗುರುಪಾದೋದಕ, ಲಿಂಗಪಾದೋ ದಕ, ಜಂಗಮಪಾದೋದಕ, ಮಜ್ಜನೋದಕ, ಸ್ಪರಿಷನೋದಕ, ಅವಧಾನೋ ದಕ, ಸತ್ಯೋದಕ, ಅವಧಾರಣೋದಕ, ಅಪ್ಯಾಯನೋದಕ, ನಿರ್ಮಾಲ್ಯೋ ದಕ ಎಂಬ ಅಂತರಂಗಿಕವಾದ ದಶವಿಧ ಪಾದೋದಕ ಸೇವನಾಸಕ್ತನಾಗಿರಬೇಕು

ಪುತತ್ವರೂಪವಾದ ಮಹಾಲಿಂಗೈಕ್ಯಾನುಸಂಧಾನವೇ ಭೂತಿಯು, ಅಂಥ ಮಹಾಲಿಂಗದಲ್ಲಿ ಮನಸ್ಸನ್ನು ಲಯಗೊಳಿಸಿ ಪರಬ್ರಹ್ಮಾತ್ಮಕ ಶಿವೇತರವಸ್ತು ವುಂಟೆಂಬ ವಿಜಾತೀಯ ಜ್ಞಾನ ತಿರಸ್ಕಾರಪೂರ್ವಕ ಚರಾಚರ ಪ್ರಪಂಚವೆಲ್ಲವೂ ಶಿವಸ್ವರೂಪವಾಗಿದೆ ಎಂಬ ಸಜಾತೀಯಜ್ಞಾನಪ್ರವಾಹವೇ ಸ್ನಾನವು. ಸತ್ವಗುಣ ರಜೋಗುಣ, ತಮೋಗುಣಗಳಿಂದುಂಟಾದ ಕಾರ್ಯರೂಪ ಹೇಯಪ್ರಪಂಚಸ್ಪರ್ಶನ ವಿಲ್ಲದುದೇ ತ್ರಿಪುಂಡ್ರಧಾರಣವು. ಹೀಗೆ ಅಂತಃಸ್ನಾನ, ಅಂತರುದ್ಧೂಳನ ಧಾರಣನಿಷ್ಠನಾಗಿಯೂ ಸ್ಥೂಲ (ಬಾಹ್ಯ)ಗಳಾದ ಕಲ್ಪ, ಉಪಕಲ್ಪ, ಅನುಕಲ್ಪ ರೂಪಗಳಾದ ಕ್ರಿಯಾಭೇದದಿಂದುಂಟಾದ ಭೂತಿ, ಭಸ್ಮ, ಭಸಿತ, ಕ್ಷಾರ, ರಕ್ಷಾ, ವುಂಬ ಐದು ಹೆಸರುಗಳುಳ್ಳ ವಿಭೂತಿಯ ಸ್ನಾನೋದ್ಧೂಳನ ಧಾರಣಾದಿ ಗಳನ್ನು ವಿಧ್ಯುಕ್ತವಾಗಿ ಆಚರಿಸುವವನಾಗಿಯೂ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂಬ ಹದಿನಾಲ್ಕು ಇಂದ್ರಿಯಗಳಿಗೆ ಆಯಾಯ ಇಂದ್ರಿಯಗೊಳಕವೃತ್ತಿಗಳಾದ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗಗಳೆಂಬ ಮುಖಗಳಲ್ಲಿ ಕ್ರಮದಿಂದ ಸಂಶಯ, ನಿಶ್ಚಯ, ಗರ್ವ, ಸ್ಮರಣ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ವಚನ, ಆದಾನ, ಗಮನ, ವಿಸರ್ಗ ಆನಂದಗಳೆಂಬ ಹದಿನಾಲ್ಕು ವಿಷಯಗಳನ್ನು ಕ್ರಮವರಿತು ಆಯಾಯ ಲಿಂಗಗಳ ಪ್ರಸಾದಾನುಭವ ಸಂಪಾದನಾರ್ಥವಾಗಿ ಸಮರ್ಪಣಂಗೈಯುತ್ತಿರುವುದೇ ಆಂತರಿಕಗಳಾದ ಹದಿನಾಲ್ಕು ಮುಖದ ರುದ್ರಾಕ್ಷ ಗಳನ್ನು ಧರಿಸುವುದಲ್ಲದೆ, ಪರಮೇಶ್ವರನ ಸೂರ್ಯ ಚಂದ್ರ ಅಗ್ನಿರೂಪಗಳಾದ ಮೂರು ಕಣ್ಣುಗಳಿಂದ ಸುರಿದ ಜಲಬಿಂದುಗಳೆಂಬ ಮುವತ್ತೆಂಟು ಭೇದವುಳ್ಳ ಸ್ಥೂಲ ರುದ್ರಾಕ್ಷಗಳನ್ನು ವಿಧ್ಯುಕ್ತವಾಗಿ ಕಂಠಾದಿಸ್ಥಾನಗಳಲ್ಲಿ ಧರಿಸುವವ ನಾಗಿಯೂ ನಮಶ್ಶಬ್ದವಾಚ್ಯವೆನಿಸಿದ (ಅರ್ಥ) ಅಂಗಕ್ಕೂ (ಶುದ್ಧಜೀವ) ಶಿವ ಶಬ್ದವಾಚ್ಯನೆನಿಸಿದ ಲಿಂಗಕ್ಕೂ (ಶಿವ) ಆಯಶಬ್ದದ ವಾಚ್ಯವೆನಿಸಿದ ಏಕತ್ವ (ಸಾಮರಸ್ಯ) ರೂಪವಾದ ಅನುಸಂಧಾನವೆ ಪಂಚಾಕ್ಷರಿಯ ಆಂತರಿಕ ಜಪವೆನಿ ಸುವದು. ಅಕಾರಾದಿ ಕ್ಷಕಾರಾಂತವಾದ ಮಾತೃಕಮಾಲಾ ಸ್ಥಾನಾಪನ್ನವಾದ, ಗಣನೆಗೆ ಸುಲಭವಾಗಿರುವ, ಕಿರಣರೂಪವಾದ, ರುದ್ರಾಕ್ಷಮಾಲೆಯನ್ನು ಹಿಡಿದು ಕೊಂಡು ಮಂತ್ರಕ್ಕೂ ಮಾಲೆಗೂ ಸಮ್ಮೇಳನಗೊಳಿಸಿ, ಮಾನಸ, ಉಪಾಂಶು,

ವಾಚಕ ಎಂಬ ತ್ರಿವಿಧವಿಧಾನದಿಂದ ಜಪಿಸುತ್ತಿರುವುದೇ ಬಾಹ್ಯ ಜಪವೆನಿಸು ವದು. ಇಂಥ ಎರಡು ವಿಧ ಜಪಗಳನ್ನು ಆಚರಿಸುತ್ತಿರುವುದೇ ವೀರಶೈವ ನಿತ್ಯನಿಯಮಾವಳಿಯು.

ಇನ್ನು, ಸತ್, ಚಿತ್, ಆನಂದ ಎಂಬ ಧರ್ಮಗಳಲ್ಲಿ ಭೂತ ಭವಿಷ್ಯ ದ್ವರ್ತಮಾನಕಾಲಗಳಲ್ಲಿ ಅಬಾಧಿತವಾದ ಸತ್ತ್ವವೇ ಗುರುವು. ಮತ್ತೊಂದು ಪ್ರಕಾಶವನ್ನು ಅಪೇಕ್ಷಿಸದೆ ಎಲ್ಲವನ್ನು ಬೆಳಗುತ್ತಿರುವ ಚಿತ್ತೇ ಲಿಂಗವು. ಶಬ್ದಾದಿ ವಿಷಯಾನಂದಗಳೆಲ್ಲಕ್ಕೂ ವಿಶ್ರಾಂತಿಸ್ಥಾನವಾದ ಅಖಂಡಾನಂದವೇ ಆಂತರಿಕ ಜಂಗಮವು, ಕಂಥಾ ಕಮಂಡಲ ಮುಂತಾದ ಸ್ಥೂಲ ಪಂಚಮುದ್ರಾಂಕಿತನಾಗಿ ಸಂಚರಿಸುವವನೇ ಜಂಗಮನು. ಪ್ರಾಗಭಾವಕ್ಕೂ ಧ್ವಂಸಕ್ಕೂ ಪ್ರತಿಯೋಗಿ ಯಲ್ಲ, ನಿತ್ಯತ್ವವೇ ಅಂತರಂಗ ಪ್ರಸಾದವೆನಿಸುವದು. ಗುರುಭುಕ್ತಶೇಷ, ಲಿಂಗಭುಕ್ತಶೇಷ, ಜಂಗಮಭುಕ್ತಶೇಷಗಳೇ ಬಾಹ್ಯ ಪ್ರಸಾದವೆನಿಸುವದು. ಈ ತ್ರಿವಿಧ ಪ್ರಸಾದಗಳಲ್ಲಿ ಗುರುಭುಕ್ತಶೇಷವೇ ಶುದ್ಧಪ್ರಸಾದವು. ಲಿಂಗಭುಕ್ತ ಶೇಷವೇ ಸಿದ್ಧಪ್ರಸಾದವು. ಜಂಗಮಭುಕ್ತಶೇಷವೇ ಪ್ರಸಿದ್ಧಪ್ರಸಾದವು. ಆಕಾಶ ದಂತೆ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ಪರಿಪೂರ್ಣ(ವಿಭು)ತ್ವವೇ ಅಭ್ಯಂತರ ಪಾದೋದಕವು. ಗುರು, ಲಿಂಗ, ಜಂಗಮರೂಪವಾದ ತ್ರಿವಿಧ ಪಾದೋದಕವೇ ಬಾಹ್ಯಪಾದೋದಕವು. ಇಂತಹ ಮಾನಸಾನುಸಂಧಾನದಿಂದೊಡಗೂಡಿದ ಆಚಾರಧರ್ಮಾನುಷ್ಠಾನದಲ್ಲಿ ನಿರತನಾಗಿ ವೇಧಾ, ಮಂತ್ರ, ಕ್ರಿಯೆ, ಎಂಬ ಮೂರು ಶಿವದೀಕ್ಷೆಗಳಿಂದ ಪರಿಶುದ್ಧನಾಗಿ ಗುರುಲಿಂಗ ಜಂಗಮರಲ್ಲಿ ಏಕತ್ವಾನು ಸಂಧಾನವೇ ಯೋಗಾಂಗವು. ಪರಮೋಪಾದೇಯವಾದ ಅಂತಹ ಗುರುಲಿಂಗ ಜಂಗಮರ ಭುಕ್ತಶೇಷಸ್ವೀಕಾರದಿಂದ ಅನವರತ ಸುಖಪರಿಣಾಮವೇ ಭೋಗಾಂ ಗವು. ಗುರು ಲಿಂಗ ಜಂಗಮರಿಗೆ ವಂಚನೆಯಿಲ್ಲದೆ ತನು ಮನೋಧನಗಳನ್ನು ಅರ್ಪಿಸುವುದೇ ತ್ಯಾಗಾಂಗವು. ಇಂಥ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಗೆ ತ್ಯಾಗಾಂಗ ಭೋಗಾಂಗ ಯೋಗಾಂಗ ಸ್ವರೂಪವನ್ನು ಸಂಪಾದಿಸಿ ಈ ಮೂರು ಶರೀರಗಳಲ್ಲಿ ಕ್ರಮವಾಗಿ ಇಷ್ಟ, ಪ್ರಾಣ, ಭಾವ ಎಂಬ ಅಭಿಧಾನವುಳ್ಳ ಲಿಂಗ ಗಳನ್ನು ಧರಿಸಬೇಕು. ಇವುಗಳಲ್ಲಿ ಸಕಲರೂಪವಾದುದರಿಂದ ಕಣ್ಣಿಗೆ ಗೋಚರ ವಾಗುವ ಪೀಠ. ಖಂಡಿಕಾವರಣ ಗೋಮುಖ ವರ್ತುಲ, ಯೋನಿಸ್ಥಾನ

ಗೋಳಕ ಎಂಬ ಆರು ಅವಯವವುಳ್ಳುದೇ ಇಷ್ಟಲಿಂಗವು. ಶಿವಸಾಕ್ಷಾತ್ಕಾರದಿಂದ ಅನೇಕ ಜನ್ಮಗಳಲ್ಲಿ ಮಾಡಿದ ಸಂಚಿತಕರ್ಮ, ಮುಂದೆ ಬರುವ ಇಗಾಮಿಕರ್ಮರೂಪಗಳಾದ ಅನಿಷ್ಟಗಳನ್ನೆಲ್ಲ ಅಳಿದು ಮಾಯಾಪಾಶವಿಚ್ಛೇದಪೂರ್ವಕ ಮಹಾಲಿಂಗೈಕ್ಯರೂಪ ಇಷ್ಟಾರ್ಥವನ್ನುಂಟುಮಾಡುವುದರಿಂದ ಇಷ್ಟವೆಂಬ ಅಭಿದಾನವನ್ನು ಪಡೆದ ಗುರುದತ್ತವಾದ ಲಿಂಗವನ್ನು (ಇಷ್ಟಲಿಂಗ) ತ್ಯಾಗಾಂಗವೆಂಬ ಹೆಸರನ್ನು ಪಡೆದ ಸ್ಥೂಲಶರೀರದ ಕಂಠಾದಿ ಆರುಸ್ಥಾನಗಳಲ್ಲಿ ಅವುದಾದರೊಂದು ಸ್ಥಾನದಲ್ಲಿ ಧರಿಸಿದ್ದು ಸ್ಥೂಲಗಳಾದ ಭಸ್ಮ ಗಂಧಾದ ಷೋಡಶೋಪಚಾರಗಳಿಂದ ಅರ್ಚಿಸುತ್ತಿರುವುದೇ ಬಾಹ್ಯ ಇಷ್ಟಲಿಂಗಾರಾಧನೆಯು.

ಕುಂಭಕ ಶಬ್ದ ವಾಚ್ಯವಾದ ಪ್ರಾಣವಾಯುವಿನ ನಿರೋಧದಿಂದ ಬೆನ್ನುಮೂಳೆಯೊಳಗಿರುವ ಇಪ್ಪತ್ತೊಂದು ಗ್ರಂಥಿ (ಗಂಟು)ಗಳನ್ನು ಸಡಲಿಸುತ್ತ ಸಂಸಾರದಶೆಯಲ್ಲಿ ಬಾಳೆಯ ಮೋತಿಯಂತೆ ಅಧೋಮುಖವಾಗಿರುವ ಕುಂಡಲಿನೀನಾಡಿಯನ್ನು ಊರ್ಧ್ವಮುಖವನ್ನಾಗಿ ಮಾಡಿ ಹೃದಯಸ್ಥಾನದಲ್ಲಿರುವ ಹನ್ನೆರಡು ದಳದ ಅನಾಹುತ ಹೃತ್ಕಮಲಕರ್ಣಿಕಾಮಧ್ಯದಲ್ಲಿ ಅವರವರ ಹೆಬ್ಬೆರಳಿನ ತುದಿಯ ಆಕಾರದಷ್ಟು ಪರಿಮಿತಿಯುಳ್ಳ ಹವಳದಂತೆ ಹೊಳೆಯುತ್ತಿರುವ ಪ್ರಾಣಶಕ್ತಿಯಿಂದೊಡಗೂಡಿದ ಚಿತ್ಸ್ವರೂಪವೇ ಪ್ರಾಣಲಿಂಗವು. ಇದು ಮನಸ್ಸಿಗೆ ಮಾತ್ರ ವೇದ್ಯವಾದುದಲ್ಲದೆ ಸಕಲ ನಿಷ್ಕಲಾತ್ಮಕವಾದುದು. ಇಂಥ ಅನಾಹತ ಚಕ್ರವೆಂಬ ರತ್ನಪೀಠದಲ್ಲಿ ಮೂರ್ತಮಾಡಿದ ಪ್ರಾಣಲಿಂಗಕ್ಕೆ ಕ್ಷಮೆಯೆಂಬ ಜಲದಿಂದ ಅಭಿಶೇಕಮಾಡಿ, ಜಡಾಜಡವಿವೇಕವೆಂಬ ವಸ್ತ್ರವನಾಚ್ಛಾದಿಸಿ, ಸತ್ಯವಚನವೆಂಬ ಆಭರಣವ ಧರಿಸಿ, ಐಹಿಕ ಆಮುಷ್ಮಿಕ ಭೋಗಗಳಲ್ಲಿ ಇಚ್ಛಾನಿವೃತ್ತಿಯೆಂಬ (ವೈರಾಗ್ಯ) ಪುಷ್ಪಮಾಲೆಯ ಸಮರ್ಪಿಸಿ, ಶಿವಾತಿರಿಕ್ತ ವಿಷಯಾಂತರದಲ್ಲಿ ವಿಮುಖತೆಯನ್ನು ಪಡೆದು ಮನೋಲಯರೂಪವಾದ ಸಮಾಧಿಯೆಂಬ ಗಂಧವ ಧರಿಸಿ, ನಾನು (ಅಹಮಿತಿ) ಎಂಬ ಸ್ವಾಭಿಮಾನ ತ್ಯಾಗರೂಪವಾದ ನಿರಹಂಕಾರವೆಂಬ ಅಕ್ಷತವನಿಕ್ಕಿ, ದೃಢತರ ವಿಶ್ವಾಸರೂಪವಾದ ಶ್ರದ್ಧೆಯೆಂಬ ಧೂಪವ ಬೀಸಿ, ಮೂಲಜ್ಞಾನವನ್ನು ಭೇದಿಸುವ ಅಖಂಡಾಕಾರವಾದ ಜ್ಞಾನವೆಂಬ ದೀಪವ ಬೆಳಗಿ, ಭ್ರಾಂತಿಮೂಲಕವಾದ ಪ್ರಾಪಂಚಿಕ ವ್ಯವಹಾರಶೂನ್ಯವೆಂಬ ನೇವೇದ್ಯವನರ್ಪಿಸಿ, ಲೌಕಿಕಸಂಬಂಧವಾದ ಶಬ್ದ

ವ್ಯವಹಾರ ತ್ಯಾಗರೂಪವಾದ ಮೌನವೆಂಬ ಘಂಟಾನಾದವನ್ನು ಮಾಡಿ, ಗಂಧಾದಿ ವಿಷಯಾರ್ಪಣರೂಪವಾದ ತಾಂಬೂಲವ ನೀಡಿ ಸಾಂಸಾರಿಕ ಪುತ್ರ ಮಿತ್ರ ಕಳತ್ರಾದಿ ವಿಷಯಜಾಲ ನಿವೃತ್ತಿಯೆಂಬ ಪ್ರದಕ್ಷಿಣೆಗೈದು, ಚರಾಚರ ಜಗತ್ತೆಲ್ಲ ಶಿವಸ್ವರೂಪಾತ್ಮಕ ಬುದ್ಧಿಯೆಂಬ ನಮಸ್ಕಾರವನೆಸಗುತ್ತ, ಹೀಗೆ ಭಾವಕಲ್ಪಿತಗಳಾದ ಹದಿನಾರು ವಿಧ ಆಂತರಿಕ ಪವಿತ್ರೋಪಚಾರಗಳಿಂದ ಆರಾಧಿಸುತ್ತಿರುವುದೇ ಪ್ರಾಣಲಿಂಗಪೂಜೆಯು. ಯೋಗಾಂಗದಲ್ಲಿ ನಿರ್ಗುಣನೂ ನಿರಾಕಾರನೂ ನಿಷ್ಕಲನೂ ಪರಾತ್ಪರನೂ ತೃಪ್ತಿರೂಪನೂ ಆದ ಭಾವಲಿಂಗವನ್ನು ಮನೋಲಯಗೊಳಿಸಿ ಶಿವೋऽಹಂ ಎಂಬ ತಾದಾತ್ಮ್ಯ ಬುದ್ಧಿಯಿಂದಿರುವುದೇ ಭಾವಲಿಂಗಾರಾಧನೆಯು.

ಈ ಲಿಂಗತ್ರಯವು ಮೂಲಪ್ರಣವದ ಪ್ರಕಾಶವೆ ವಿಗ್ರಹವಾಗುಳ್ಳ ಶಿವ ತತ್ವವು ಬೇರೆ ಕಾರಣಗಳನ್ನು ಅಪೇಕ್ಷಿದೆ ತಾನೇ ಪ್ರಕಾಶಿಸುವುದರಿಂದ ಸ್ವಯಂ ಪ್ರಕಾಶಿಸುವ ವಸ್ತುವು, ತನಗಿಂತಲೂ ಬೇರೆ ಮತ್ತೊಂದು ಕಾರಣವನ್ನು ಅಪೇ ಕ್ಷಿಸದೆ ತಾನೇ ಎಲ್ಲವನ್ನೂ ಸೃಷ್ಟಿಸುವುದರಿಂದ ಸ್ವತಂತ್ರವೆನಿಸುವದು, ಬೇರೆ ಮತ್ತೊಂದು ಆಶ್ರಯವನ್ನು ಅಪೇಕ್ಷಿಸದೆ ತಾನೊಬ್ಬನೇ ಎಲ್ಲಕ್ಕೂ ಆಶ್ರಯನಾ ಗಿರುವನು. ಇಂಥ ಸರ್ವಾಧಿಕ್ಕಾನವಾದ ಮಹಾಲಿಂಗವನ್ನೇ—

ಸರ್ವೇಷಾಂ ಸ್ಥಾನಭೂತತ್ವಾಲ್ಲಯಭೂತತ್ವತಸ್ತಥಾ ।
ತತ್ತ್ವಾನಾಂ ಮಹದಾದೀನಾಂ ಸ್ಥಲಮಿತ್ಯಭಿಧೀಯತೇ ॥

ಎಂಬ ಆಗಮ ಪ್ರಮಾಣಾನುಸಾರವಾಗಿ ಸ್ಥಲವೆಂದು ಕರೆಯುತ್ತಾರೆ.

ಇನ್ನು ಅಂಗಲಿಂಗಗಳ ಉತ್ಪತ್ತಿಕ್ರಮವೇತೆಂದೊಡೆ, ವಾಯುಸಂಬಂಧವೇ ಇಲ್ಲದಿರುವ ಕಾಲದಲ್ಲಿ ಶಾಂತವಾಗಿರುವ ಮಹಾಸಮುದ್ರದಲ್ಲಿ ಭಾವಿತರಂಗೋ ತ್ಪತ್ತಿ ಸೂಚಕವಾಗಿ ಮೊದಲು ಒಂದಾನೊಂದು ಲಹರಿಯು ಉತ್ಪನ್ನವಾಗು ವುದು. ಇದರಂತೆ ಆ ಪರಶಿವನೊಳು ತಾನೊಬ್ಬನೇ ಪೂಜ್ಯಭಾವವನ್ನೂ ಪೂಜಕಭಾವವನ್ನೂ ಹೊಂದಿ ಸಗುಣಾನಂದ ಲೀಲಾರಸಾನುಭವೇಚ್ಛಾರೂಪ ವಾದ (ಈಷಚ್ಛಲನ) ಲಹರೀ (ಜಲಪರಿವರ್ತನೆ) ವಿಶೇಷವುಂಟಾಯಿತು. ಇಂಥ

ಇಚ್ಛಾವಿಶೇಷರೂಪವಾದ ಸ್ಫುರಣದಿಂದ ಅತ್ಯಂತ ಸಮರಸವಾಗಿರುವ ಸ್ವತಂತ್ರ ಪ್ರಕಾಶತ್ವಾಂಶದಲ್ಲಿ ಒಂದು ಭಾಗದೊಳು ಉತ್ತಮಕರ್ತೃತ್ವದ ಸ್ವಭಾವಕ್ಕೆ ಸ್ವಲ್ಪಮಟ್ಟಿಗೆ ವಿಯೋಗವುಂಟಾಗುವುದರಿಂದ ಆ ಶಿವತತ್ವವು ನ್ಯೂನಾಧಿಕಭಾವ ದಿಂದ ಎರಡು ಭಾಗಗಳಾದವು. ಅವುಗಳಲ್ಲಿ ಅಧಿಕ ಭಾವವನ್ನು ಹೊಂದಿದ ಸ್ವಪ್ರಕಾಶತ್ವಾಂಶದಲ್ಲಿ ಪ್ರತಿಫಲನಕ್ರಮದಿಂದ ಪ್ರವೇಶಿಸಿ ಸ್ಫುರಿಸುತ್ತಿರುವ ಮೂಲ ಪ್ರಣವಾತ್ಮಕವಾದ ಶಿವತತ್ವವೇ ಲಿಂಗತತ್ವವೆನಿಸಿತು. ನ್ಯೂನಾಭಾವ ವನ್ನು ಹೊಂದಿರುವ ಸ್ವಪ್ರಕಾಶತ್ವಾಂಶದಲ್ಲಿ ಪ್ರತಿಫಲಿಸಿರುವ ಶಿವತತ್ವವೇ ಅಂಗ ತತ್ವವೆನಿಸಿತು ಈ ಕ್ರಮವು.

ಸ್ವಶಕ್ತಿಕ್ಷೋಭಮಾತ್ರೇಣ ಸ್ಥಲಂ ತದ್ವಿವಿಧಂ ಭವೇತ್ ।
ಏಕಂ ಲಿಂಗಸ್ಥಲಂ ಪ್ರೋಕ್ತಮನ್ಯದಂಗಸ್ಥಲಂ ಸ್ಮೃತಂ ॥

ಎಂಬ ಶಿವಾಗಮವಚನದಿಂದ ಸ್ಪಷ್ಟವಾಗುತ್ತದೆ, ಇಂತಹ ಅಂಗಲಿಂಗ ಗಳಲ್ಲಿ ಪ್ರತಿಫಲನರೂಪವಾದ ಲಿಂಗತತ್ವವು ಭಾವಲಿಂಗ, ಪ್ರಾಣಲಿಂಗ, ಇಷ್ಟ ಲಿಂಗಗಳೆಂಬ ಮೂರು ವಿಭಾಗವನ್ನು ಪಡೆಯಿತು. ಆ ವಿಭಾಗಗಳಲ್ಲಿ ಪುನಃ ಒಂದೊಂದರಲ್ಲಿ ಎರಡೆರಡಾಗಿ ಭಾವಲಿಂಗದಲ್ಲಿ ಮಹಾಲಿಂಗ, ಪ್ರಸಾದಲಿಂಗ ಎಂಬುದಾಗಿಯೂ, ಪ್ರಾಣಲಿಂಗದಲ್ಲಿ ಜಂಗಮಲಿಂಗ ಶಿವಲಿಂಗ ಎಂಬುದಾಗಿಯೂ ಇಷ್ಟಲಿಂಗದಲ್ಲಿ ಗುರುಲಿಂಗ ಆಚಾರಲಿಂಗವೆಂಬುದಾಗಿಯೂ ಹೀಗೆ ಲಿಂಗಸ್ಥಲವು ಷಡ್ವಿಧವಾಯಿತು. ಆ ಶಿವತತ್ವದೊಳಗಿರುವ ಸ್ವತಂತ್ರ ಸ್ವಪ್ರಕಾಶತ್ವರೂಪವಾದ ಶಕ್ತಿಯುಸಹ ಮೊದಲನೆಯದಾದ ಮಹಾಲಿಂಗದಲ್ಲಿ ಕಾರ್ಯಕಾರಣರೂಪವಾದ ಸೂಕ್ಷ್ಮಪ್ರಪಂಚಕ್ಕೆ ಉಪಾದಾನ ಕಾರಣರೂಪವಾಗಿರುವ "ಚಿಚ್ಛಕ್ತಿ" ಎಂಬ ಪರ್ಯಾಯನಾಮವನ್ನು ಪಡೆದಿರುವ ಪ್ರಣವರೂಪವಾದ ಶಾಂತ್ಯತೀತೋತ್ತರಕಲಾರೂಪವನ್ನು ಪಡೆವುದು. ಎರಡನೆಯದಾದ ಪ್ರಸಾದ ಲಿಂಗದಲ್ಲಿ ಆನಂದರೂಪವಾದ "ಪರಾಶಕ್ತಿ" ಎಂಬ ಪರ್ಯಾಯನಾಮವನ್ನು ಪಡೆದ ಯಕಾರರೂಪವಾದ ಶಾಂತ್ಯತೀತ ಕಲಾರೂಪವನ್ನು ಪಡೆದವು. ಜಂಗಮ ಎಂಬ ಮೂರನೆಯ ಲಿಂಗದಲ್ಲಿ ಸೃಷ್ಟ್ಯುನ್ಮುಖತೆ ರೂಪವಾದ "ಆದಿಶಕ್ತಿ" ಎಂಬ ಪರ್ಯಾಯನಾಮವನ್ನು ತಾಳ್ದು ವಾಕಾರರೂಪವಾದ ಶಾಂತಿಕಳಾರೂಪ

ವನ್ನು ಪಡೆವುದು. ನಾಲ್ಕನೆಯದಾದ ಶಿವಲಿಂಗದಲ್ಲಿ ಸೂಕ್ಷ್ಮಕ್ರಿಯಾರೂಪವಾದ "ಇಚ್ಛಾಶಕ್ತಿ" ಎಂಬ ಪರ್ಯಾಯನಾಮವನ್ನು ಹೊಂದಿ ಶಿಕಾರರೂಪ ವಿದ್ಯಾಕಲಾರೂಪವನ್ನು ಪಡೆವುದು. ಐದನೆಯದಾದ ಗುರುಲಿಂಗದಲ್ಲಿ ಬಹಿರ್ಮುಖವಾದ "ಜ್ಞಾನಶಕ್ತಿ" ಎಂಬ ಪರ್ಯಾಯನಾಮವನ್ನು ಹೊಂದಿ ಮಕಾರ ರೂಪವಾದ ಪ್ರತಿಷ್ಠಾಕಲಾರೂಪವನ್ನು ಪಡೆವುದು. ಆರನೆಯದಾದ ಆಚಾರ ಲಿಂಗದಲ್ಲಿ ಸ್ಥೂಲಪ್ರಯತ್ನರೂಪವಾದ "ಕ್ರಿಯಾಶಕ್ತಿ" ಎಂಬ ಪರ್ಯಾಯ ನಾಮವನ್ನು ಹೊಂದಿ ನಕಾರರೂಪವಾದ ನಿವೃತ್ತಿಕಲಾರೂಪವನ್ನು ಪಡೆವುದು. ಹೀಗೆ ಶಿವದೊಳಗಿರುವ ಅಪೃಥಕ್ ಸಿದ್ಧವಾದ ಶಕ್ತಿಯು ಆರು ರೂಪಗಳಿಂದ ಆರುಲಿಂಗಗಳನ್ನಾಶ್ರಯಿಸಿತು.

ಮಹಾಲಿಂಗವು ಸರ್ವಪದಾರ್ಥಾನುಸಾಧಾನಯೋಗ್ಯವಾದ ಹೃದಯ ರೂಪವಾದುದರಿಂದ ಶುದ್ಧಾನುಸಂಧಾತೃರೂಪವಾದ ಗೋಪ್ಯಮುಖವೆನಿಸಿತು. ಮಿಕ್ಕ ಪ್ರಸಾದಾದಿ ಐದುಲಿಂಗಗಳು ಕ್ರಮದಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪದಾರ್ಥಗಳನ್ನು ಗ್ರಹಿಸುತ್ತಿರುವ ಈಶಾನ, ತತ್ಪುರುಷ, ಅಘೋರ ವಾಮದೇವ, ಸದ್ಯೋಜಾತ ಎಂಬ ಪಂಚಮುಖಗಳೆನಿಸಿದವು. ಹೀಗೆ ಆರು ವಿಧವಾಗಿ ಪರಿಣಮಿಸಿದ ಲಿಂಗತತ್ವವು ಸಮುದ್ರತರಂಗನ್ಯಾಯದಿಂದ ಅಭೇದ ದಲ್ಲಿ ಪರ್ಯವಸಿತವಾಗಿ ಭೇದವನ್ನು ಪ್ರಧಾನಮಾಡಿ ಶುದ್ಧಾನುಸಂಧಾತೃರೂಪ ವಾಗಿರುವುದರಿಂದ ಮುಮುಕ್ಷುಗಳ ಅನುಗ್ರಹಕ್ಕೆ ಕಾರಣವಾಗಿ ಉಪಾಸ್ಯ ವೆನಿಸಿತು.

ಇನ್ನು ಅಂಗತತ್ವದ ಸ್ವರೂಪವೇನೆಂದರೆ-ನ್ಯೂನೀಭಾವನನ್ನು ಹೊಂದಿ ರುವ ಸ್ವಪ್ರಕಾಶತ್ವಾಂಶದಲ್ಲಿ ಪ್ರತಿಸ್ಫುರಿಸಿದ ಅಂಗಸ್ಥಲವು ಸಹ, ಯೋಗಾಂಗ ಭೋಗಾಂಗ ತ್ಯಾಗಾಂಗ ಎಂದು ಮೂರುವಿಧವಾಗಿರುವುದು. ಇವುಗಳಲ್ಲಿ ಯೋಗಾಂಗವೆಂಬುದು ಸ್ವಸ್ವರೂಪಕ್ಕೂ ಗುರು ಲಿಂಗ ಜಂಗಮರಿಗೂ ಭೇದ ವಿಲ್ಲದೆ ಐಕ್ಯವಿರುವುದೆಂಬ ಅನುಸಂಧಾನವುಳ್ಳದು. ಭೋಗಾಂಗವು-ಗುರು ಲಿಂಗ ಜಂಗಮಾರ್ಪಿತವಾದ ಪ್ರಸಾದವನ್ನು ಸ್ವೀಕಾರಮಾಡಿ ಶರೀರದಲ್ಲಿ ಸುಖ ಪರಿಣಾಮಾನುಸಂಧಾನರೂಪಭೋಗವುಳ್ಳದು. ತ್ಯಾಗಾಂಗವು-ಗುರುಲಿಂಗ

ಜಂಗಮರಲ್ಲಿ ಅವಂಚನೇಯತ್ವಬುದ್ಧಿಯನ್ನೂ, ತನು ಮನೋಧನಗಳನ್ನೂ ಸಮರ್ಪಿಸಬೇಕೆಂಬ ದೃಢ ಅನುಸಂಧಾನವುಳ್ಳುದ್ದು. ಆದುದರಿಂದ ಯೋಗಾಂಗ ಭೋಗಾಂಗ, ತ್ಯಾಗಾಂಗ ಎಂಬ ಶಬ್ದಗಳು ಅನ್ವರ್ಥ ಸಂಜ್ಞೆಯುಳ್ಳವು ಗಳಾಗಿವೆ.

ಈ ಮೂರು ಸ್ಥಲಗಳಲ್ಲಿ ಯೋಗಾಂಗವು-ಐಕ್ಯಸ್ಥಲ, ಶರಣಸ್ಥಲವೆಂದೂ ತ್ಯಾಗಾಂಗವು-ಮಹೇಶ್ವರ ಸ್ಥಲ, ಭಕ್ತಸ್ಥಲವೆಂದೂ ಎರಡೆರಡು ಭೇದವನ್ನು ಪಡೆಯಿತು. ಹೀಗೆ ಅಂಗಸ್ಥಲವು ಆರುವಿಧವಾಗಲು ಶಿವನೊಳಗಿರುವ ಶಕ್ತಿಯು ಸಹ ಪ್ರವೃತ್ತಿಮಾರ್ಗದಿಂದ ನಿವೃತ್ತಿ ಮಾರ್ಗಕ್ಕಿಳಿದು ನ್ಯೂನಭಾವ ವವನ್ನು ಹೊಂದಿ, ಕ್ರಮದಿಂದ ಸಮರಸಭಕ್ತಿ, ಆನಂದಭಕ್ತಿ, ಅನುಭವಭಕ್ತಿ, ಅವಧಾನಭಕ್ತಿ, ನೈಷ್ಠಿಕೀಭಕ್ತಿ, ಶ್ರದ್ಧಾಭಕ್ತಿ, ಎಂದು ಷಡ್ವಿಧ ಭಕ್ತಿರೂಪವನ್ನೂ ಭಾವ, ಜ್ಞಾನ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತರೂಪವಾದ ಷಡ್ವಿಧ ಅಂತಃಕರಣರೂಪವನ್ನೂ ಶ್ರೋತ್ರ, ತ್ವಕ್, ಚಕ್ಷುಸ್ಸು, ರಸನೆ, ಘ್ರಾಣ ಎಂದು ಜ್ಞಾನೇಂದ್ರಿಯ ರೂಪವನ್ನೂ ಆ ಜ್ಞಾನೇಂದ್ರಿಯಗಳ ವಿಷಯಗಳೆನಿಸಿದ ಶಬ್ದ, ಸ್ಪರ್ಶ, ರೂಪ, ರಸ, ಗಂಧ, ತೃಪ್ತಿರೂಪ ಷಟ್ಪದಾರ್ಥರೂಪವನ್ನೂ ಅವುಗ ಳನ್ನು ರಚಿಸುವ ಷಡಕ್ಷರೀರೂಪತ್ವವನ್ನೂ ಸದ್ಭಾವ, ಸುಜ್ಞಾನ, ಸುಮನ, ನಿರಹಂಕಾರ, ಸುಬುದ್ಧಿ, ಸುಚಿತ್ತ ಎಂಬ ಷಡ್ವಿಧಹಸ್ತರೂಪತ್ವವನ್ನೂ ಹೊಂದಿ ಅಂಗತತ್ವವೆನಿಸುವುದು. ಹಾಗೆ ಆರು ಪ್ರಕಾರವಾದ ಅಂಗತತ್ವವೆಂಬ ಷಟ್‌ಸ್ಥಲವೇ ಪರಶಿವನ ಲೀಲಾಶಕ್ತಿಯಿಂದ ಕಲ್ಪಿಸಲ್ಪಟ್ಟ ಸಂಕುಚಿತ ಕ್ರಿಯಾಸಕ್ತಿ, ಜ್ಞಾನಶಕ್ತಿ ಸ್ವಭಾವವುಳ್ಳುದಾದರೂ ಸೂಕ್ಷ್ಮರೂಪ ವಾಗಿಯೂ ಮಾನಸವಾಗಿಯೂ ಇರುವ ಆಕಾಶಾದಿ ಉಪಾಧಿಗಳಿಂದ ಕೂಡಿ ರುವ ಪ್ರಯುಕ್ತ ಊರ್ಧ್ವಸೃಷ್ಟಿರೂಪವಾದ ವಿಭಾಗವೆಂಬ ಕಾರಣದಿಂದ ಏರ್ಪಟ್ಟಿರುವ ಭೇದವನ್ನು ಪ್ರಧಾನವಾಗಿಟ್ಟುಕೊಂಡು ಶುದ್ಧವಿದ್ಯಾಪ್ರಮಾತೃ ರೂಪವಾಗಿರುವುದರಿಂದ ಪರಶಿವಾನುಗ್ರಹಕ್ಕೆ ಪಾತ್ರವಾಗಿರುವ ಉಪಾಸಕವಸ್ತು ವೆನಿಸಿತು. ಇದರ ಫಲಿತಾಂಶವೇನೆಂದರೆ-ಲಿಂಗತತ್ವಕ್ಕೆ ಶರಣತತ್ವವು ಅಂಗ ವಾಗಿಯೂ ಶರಣನಿಗೆ ಲಿಂಗವು ಪ್ರಾಣವಾಗಿಯೂ ಇರುವುದರಿಂದ ಇವೆರಡಕ್ಕೂ ಬೀಜವೃಕ್ಷನ್ಯಾಯದಿಂದ ಪರಸ್ಪರ ಸಾಮರಸ್ಯವುಫಲಿತವಾಗುವದು. ಸೂಕ್ಷ್ಮ

ವಾದ ಬೀಜವೇ ಮಹಾವೃಕ್ಷರೂಪವಾಗಿಯೂ ಆ ವೃಕ್ಷವೇ ಸೂಕ್ಷ್ಮ ಬೀಜವಾಗಿಯೂ ಪರಿಣಮಿಸುವುದರಿಂದ ಅವುಗಳಿಗೆ ಪರಸ್ಪರ ಸಾಮರಸ್ಯವುಂಟಲ್ಲವೆ? ಹೀಗೆ ಅನಾದಿಕಾಲದಿಂದಲೂ ಇದು ಅನುಭವಸಿದ್ಧವಾದುದರಿಂದ ಶರಣನೇ ಲಿಂಗವು. ಲಿಂಗವೇ ಶರಣನು ಎಂಬುದೇ ಶಿವಸಿದ್ಧಾಂತವು.

೧) ಶಿವಾತಿರಿಕ್ತಗಳಾದ ಸಮಸ್ತ ತತ್ವಗಳೂ ಪರಶಿವನ ವಿಮರ್ಶ ಶಕ್ತಿಯಲ್ಲಿ ಅಂತರ್ಭಾವವಾಗಿರುವುದರಿಂದ ಇಂಥ ಶರಣನು ವಿಮರ್ಶಶಕ್ತಿಯೊಡನೆ ಅಭೇದವನ್ನು ಪಡೆದಿರುವನು. ಅನಾದಿಯಾದ ಅಣವಮಲದಿಂದ ಈ ಶರಣನ ಜ್ಞಾನಶಕ್ತಿಯು ಬಹಳವಾಗಿ ಸಂಕುಚಿತವಾದುದರಿಂದ ಇವನು ಸ್ವಕೀಯವಾದ ತನ್ನ ವಿಮರ್ಶಸ್ವರೂಪತ್ವವನ್ನು ತಿಳಿಯಲಿಲ್ಲ. ಸದ್ಗುರುವಿನ ಕಟಾಕ್ಷದಿಂದುಂಟಾದ ಉಪದೇಶಬಲದಿಂದ ಇವನ ಜ್ಞಾನಶಕ್ತಿಯು ಸಂಕೋಚತೆಯು ಎಂದು ಪರಿಹೃತವಾಯಿತೋ, ಆಗಲೇ ಈ ಶರಣನು "ಅಹಂಪರಶಿವವಿಮರ್ಶಾಭಿನ್ನೋಽಸ್ಮಿ" ಎಂಬ ಪ್ರತ್ಯಭಿಜ್ಞೆ (ಪುನಸ್ಸ್ಮರಣೆ) ಉಂಟಾಗುವುದು. ಇಂತಹ ಪ್ರತ್ಯಭಿಜ್ಞೆಯೆಂಬುದು ಗುರೂಪದೇಶರೂಪವಾದ ಶ್ರವಣವನ್ನು ಹೊಂದಿದ ಇವನಿಗೆ (ಶರಣನಿಗೆ) ಮನ ಇಂದ್ರಿಯದಿಂದಲೆ ಉಂಟಾಗುವುದಾದ ಪ್ರಯುಕ್ತ ಮನಸ್ಸೆಂಬ ಈ ಜ್ಞಾನೇಂದ್ರಿಯ ಪ್ರಣವರೂಪವಾದ ಮಹಾಲಿಂಗದಲ್ಲಿ ಅಭೇದವನ್ನು ಪಡೆವನು.

೨) ಇನ್ನು ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ, ನಾಸಿಕೆ ಎಂಬ ಐದು ಬಾಹ್ಯೇಂದ್ರಿಯಗಳೊಳಗೆ ಒಂದೊಂದು ಇಂದ್ರಿಯವು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ವಿಷಯಗಳಲ್ಲಿ ಒಂದೊಂದು ವಿಷಯವನ್ನು ಮಾತ್ರ ಗ್ರಹಿಸಬಲ್ಲುದಾದ ಪ್ರಯುಕ್ತ, ಶಬ್ದಗ್ರಹಣಕ್ಕೆ ಸಾಧನವಾದ ಶ್ರೋತ್ರೇಂದ್ರಿಯವು ಅಂತರ್ಮುಖವಾಗಿ ನಾದ, ಸುನಾದ, ನಿನಾದ, ಮಹಾನಾದವೆಂಬ ಕ್ರಮವನ್ನೂ ಆಚಾರ್ಯವಾಕ್ಯ, ಶಾಸ್ತ್ರವಿವಕ್ಷೆ, ಅಧ್ಯವಸಾನ, ಉಕ್ತಿ ಎಂಬ ಕ್ರಮವನ್ನೂ ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ಕ್ರಮವನ್ನೂ ಅನುಸರಿಸಿ ನಾಲ್ಕು ವಿಧ ಶಬ್ದವೃತ್ತಿಯನ್ನು ಗ್ರಹಿಸುತ್ತ ಅನುಗ್ರಹರೂಪ ಪ್ರಸಾದಕ್ಕೆ ಕಾರಣವಾದ್ದರಿಂದ ಶ್ರೋತ್ರವೆಂಬೀ ಜ್ಞಾನೇಂದ್ರಿಯವು ಯಕಾರರೂಪವಾದ ಪ್ರಸಾದ ಲಿಂಗದಲ್ಲಿ ಅಭೇದವನ್ನು ಪಡೆವುದು.

೩) ಹೀಗೆ ಶರಣನ ತ್ವಗಿಂದ್ರಿಯವು ಶರೀರದ ಸರ್ವಭಾಗವನ್ನೂ ವ್ಯಾಪಿಸಿ, ಶೀತಸ್ಪರ್ಶ, ಉಷ್ಣಸ್ಪರ್ಶ, ಅನುಷ್ಣಾಶೀತಸ್ಪರ್ಶಗಳೆಂಬ ಸಮಸ್ತ ಸ್ಪರ್ಶಗಳ ಗ್ರಹಣಕ್ಕೂ ಸಾಧನವಾಗಿರುವುದರಿಂದ ತ್ವಕ್ ಎಂಬ ಜ್ಞಾನೇಂದ್ರಿಯವು ಪಾ ಕಾ ರ ರೂ ಪ ವಾ ದ ಜಂಗಮಲಿಂಗದೊಡನೆ ಅಭೇದವನ್ನು ಪಡೆವುದು.

೪) ಅಖಂಡವಾದ ಮಹಾಪ್ರಕಾಶವೇ ನೇತ್ರಗೋಳಕವನ್ನು ಪ್ರವೇಶಿಸಿ ಸಮಸ್ತ ರೂಪಗಳ ಗ್ರಹಣಕ್ಕೂ ಸಾಧನವಾದ ನೇತ್ರವೆಂಬ ಈ ಜ್ಞಾನೇಂದ್ರಿಯವು ಶಿಕಾರ ರೂಪವಾದ ಶಿವಲಿಂಗದೊಡನೆ ಅಭೇದವನ್ನು ಪಡೆವುದು.

೫) ಸದ್ಗುರುವೇ ಷಡಕ್ಷರೀಮಂತ್ರ ಮೂರ್ತಿಮಯನಾದುದರಿಂದ ಇಂಥ ಷಡಕ್ಷರೀ ಮಂತ್ರವೇ ಕಷಾಯ, ಮಧುರ, ಲವಣ, ಕಟು, ತಿಕ್ತ, ಆಮ್ಲ ಎಂಬ ಷಡ್ರಸಸ್ವರೂಪತ್ವವನ್ನು ಹೊಂದಿರುವುದರಿಂದ ಇಂಥ ಮಂತ್ರೋಚ್ಚಾರಣೆಗೂ ಷಡ್ರಸರೂಪತ್ವವನ್ನು ಹೊಂದಿರುವುದರಿಂದ ಇಂಥ ಮಂತ್ರೋಚ್ಚಾರಣೆಗೂ ಷಡ್ರಸಾಸ್ವಾದನೆಗೂ ರಸನೇಂದ್ರಿಯವೇ ಸಾಧನವಾದುದರಿಂದ ರಸನೇಂದ್ರಿಯವೆಂಬ ಜ್ಞಾನೇಂದ್ರಿಯು ಮಕಾರರೂಪವಾದ ಗುರುಲಿಂಗದೊಡನೆ ಅಭೇದವನ್ನು ಪಡೆವುದು.

೬) ಈ ಶರಣನ ಘ್ರಾಣೇಂದ್ರಿಯವು, ಇಡಾ ಪಿಂಗಳಾ ಎಂಬ ಪ್ರಧಾನ ನಾಡಿಗಳ ದ್ವಾರಾ ಪ್ರಾಣವಾಯುವಿನ ಸಂಚಾರಕ್ಕೆ ಸಾಧನವಾದುದರಿಂದ ಸತ್ಕರ್ಮಾಚರಣೆಗೆ ಕಾರಣವಾದ ಶರೀರದ ಪರಿಸಿದ್ಧಿಗೋಸ್ಕರ ಆಚರಿಸಬೇಕಾದ ರೇಚಕ ಪೂರಕ ಕುಂಭಕರೂಪವಾದ ಪ್ರಾಣಾಯಾಮದ ಆಚರಣೆಗೆ ಮುಖ್ಯ ಸಾಧನವಾದ ಘ್ರಾಣವೆಂಬ ಜ್ಞಾನೇಂದ್ರಿಯವೇ ನಕಾರರೂಪವಾದ ಆಚಾರ ಲಿಂಗದಲ್ಲಿ ಅಭೇದವನ್ನು ಪಡೆವುದು. ಹೀಗೆ ಲಿಂಗ ಲಕ್ಷಣವನ್ನು ಅರಿಯಬೇಕು.

೧] ಆಮೇಲೆ ಗುರು ಲಿಂಗ ಜಂಗಮರಲ್ಲಿ ಭೇದಭಾವನೆಯಿಲ್ಲದೆ ಭಸ್ಮ

ರುದ್ರಾಕ್ಷಾದಿ ಶಿವಲಾಂಛನಗಳಲ್ಲಿಯೂ ಶಿವಭಕ್ತರಲ್ಲಿಯೂ ನಿರತಿಶಯ ಪ್ರೀತಿ ರೂಪವಾದ ಭಕ್ತಿಯನ್ನು ಪಡೆದಿರುವನೇ ಭಕ್ತನೆನಿಸುವನು.

೨] ಪರಶಿವನೇ ಗುರುಸ್ವರೂಪನಾಗಿಯೂ ಲಿಂಗಸ್ವರೂಪನಾಗಿಯೂ ಜಂಗಮಸ್ವರೂಪನಾಗಿಯೂ ಆಗಿರುವನೆಂಬ ದೃಢಭಾವನೆಯಿಂದ ಉಪಾಸಿಸುವವನೇ ಮಹೇಶ್ವರನೆನಿಸಿಕೊಳ್ಳುವನು.

೩] ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ, ಮಂತ್ರ ಎಂಬ ಅಷ್ಟಾವರಣಗಳಲ್ಲಿಯೂ ಶಿವಾಚಾರ, ಸದಾಚಾರ ಲಿಂಗಾಚಾರ, ಭೃತ್ಯಾಚಾರ, ಗಣಾಚಾರಗಳೆಂಬ ಪಂಚಾಚಾರಗಳಲ್ಲಿಯೂ ಯಾವಾಗಲೂ ವಿಸ್ಮೃತಿ ಪಡೆಯದೆ ಸಾವಧಾನದಿಂದಿರುವನೇ ಪ್ರಸಾದಿಯೆನಿಸುವನು.

೪] ವಾತ ಪಿತ್ತ ಶ್ಲೇಷ್ಮಗಳೆಂಬ ಧಾತುವೈಷಮ್ಯದಿಂದ ಜ್ವರಾದಿ ಉಪದ್ರವಗಳುಂಟಾಗಿದ್ದರೂ ಪಾದೋದಕಪ್ರಸಾದರೂಪವಾದ ದಿವ್ಯೌಷಧಿಯನ್ನು ಬಿಟ್ಟು ಇನ್ನುಳಿದ ಲೌಕಿಕೌಷಧಿಯನ್ನು ಸೇವಿಸದೆ ಲಿಂಗವೇ ಪ್ರಾಣವು. ಪ್ರಾಣವೇ ಲಿಂಗವು. ಎಂಬ ಅನುಸಂಧಾನವುಳ್ಳವನೇ ಪ್ರಾಣಲಿಂಗಿಯೆನಿಸುವನು.

೫] ಲಿಂಗದಲ್ಲಿ ಪತಿತ್ವಭಾವನೆಯನ್ನೂ ತನ್ನಲ್ಲಿ ಸತೀತ್ವ ಭಾವನೆಯನ್ನು ಪಡೆದು ಹೆಂಡತಿಯಾದವಳಿಗೆ ಮತ್ತೊಬ್ಬ ಹೆಂಡತಿಯಿಲ್ಲ" ಎಂಬ ನ್ಯಾಯಾನುಸಾರವಾಗಿ ತಾನೆ ಹೆಂಡತಿಯಾದುದರಿಂದ ಸಂಸಾರ ಸಂಬಂಧವನ್ನು ನಿರಾಕರಿಸಿ ಸ್ವೇಚ್ಛಭಕ್ತ್ಯೊಡಗೂಡುವುದರಿಂದುಂಟಾದ ನಿರತಿಶಯಾನಂದದಿಂದ ಪರಿಪೂರ್ಣವಾಗಿ ಪ್ರವೃತ್ತಿಮಾರ್ಗವನ್ನು ತ್ಯಜಿಸಿ, ಕೇವಲ ನಿವೃತ್ತಿಮಾರ್ಗದಲ್ಲಿ ನಡೆಯುತ್ತ ಜ್ಞಾನಭಕ್ತಿ ವೈರಾಗ್ಯಗಳಿಂದ ಕೂಡಿರುವವನೇ ಶರಣನೆನಿಸುವನು.

ತದ್ಯಥಾ ಸಂಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರಂ । ಏವಮೇವಾಯಂ ಪುರುಷಃ

ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ

ಎಂದು ಬೃಹದಾರಣ್ಯಕದಲ್ಲಿ ಉಕ್ತವಾಗಿರುವಂತೆ ತಾನು ಸತಿ, ಲಿಂಗವೇ ಪತಿ ಎಂಬ ಭಿನ್ನಾಕಾರವಾದ ಜ್ಞಾನವನ್ನು ಮೀರಿ ಸಕಲ ವಿಕಲ್ಪಗಳಲ್ಲಿ ವಿಮುಖನಾಗಿ "ಸರ್ವಂ ಶಿವಮಯಂ ಜಗತ್" ಎಂಬ ಶಿವಾಗಮವಾಕ್ಯಾನುಸಾರವಾಗಿ ಕಾಣುವ ಪ್ರಪಂಚವೆಲ್ಲವೂ ಶಿವನೆಂಬ ದೃಢಭಾವನೆಯುಳ್ಳವನಾಗಿ ಶಿಖಿಕರ್ಪೂರಗಳಂತೆ ಅಂತರ್ಮುಖವಾದ ಮಹಾಲಿಂಗದಲ್ಲಿ ಏಕತ್ವವನ್ನು ಪಡೆದವನೇ ಐಕ್ಯಸ್ಥಲಿಯೆನಿಸುವನು. ಹೀಗೆ ಅರಿಯುವುದೇ ಅಂಗಸ್ಥಲದ ಲಕ್ಷಣವಾಗಿದೆ. ಇದರಂತೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಸ್ಥಲಗಳನ್ನಾಶ್ರಯಿಸಿದ ಆಚಾರ ಭೇದದಿಂದ ಭಿನ್ನಗಳಾದ ಷಡ್ವಿಧ ಭಕ್ತಾದಿ ಉಪಾಸಕರಿಗೂ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಷಡ್ವಿಧ ಉಪಾಸ್ಯಸ್ಥಲ (ಲಿಂಗ)ಗಳಿಗೂ ಸಂಬಂಧವನ್ನರಿಯಬೇಕು. ಈ ವಿಷಯದಲ್ಲಿ

ಶಂಕರಸಂಹಿತಾವಚನಗಳು

ಆಚಾರಲಿಂಗ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಂ |
ನಿವೃತ್ತಿಕಲಯೋಪೇತಂ ಗಂಧಗ್ರಹಣಸಾಧನಂ ||
ಗುರುಲಿಂಗಂಚ ಜ್ವಾಖ್ಯಂ ಮಹೇಶಸ್ಥಲ ಸಂಶ್ರಯಂ |
ವಿದ್ಯಾಕಲಾಸಮಾಯುಕ್ತಂ ರೂಪಗ್ರಹಣಸಾಧನಂ ||
ತ್ವಗಾಖ್ಯಂ ಜಂಗಮಂ ಲಿಂಗಂ ಪ್ರಾಣಲಿಂಗಸ್ಥಲಾಶ್ರಯಂ |
ಶಾಂತ್ಯಾಖ್ಯ ಕಲಯಾ ಯುಕ್ತಂ ಸ್ಪರ್ಶಗ್ರಹಣಸಾಧನಂ ||
ಪ್ರಸಾದಲಿಂಗಂ ಶ್ರೋತ್ರಾಖ್ಯಂ ಶರಣಸ್ಥಲಸಂಶ್ರಯಂ |
ಶಾಂತ್ಯತೀತ ಕಲೋಪೇತಂ ಶಬ್ದಗ್ರಹಣಸಾಧನಂ ||
ಮಾನಸಂ ತು ಮಹಾಲಿಂಗಮೈಕ್ಯಸ್ಥಲಸಮಾಶ್ರಯಂ |
ಶಾಂತ್ಯತೀತೋತ್ತರೋಪೇತಂ ಸರ್ವಗ್ರಹಣಸಾಧನಂ |||

ಇಲ್ಲಿ ಮನಸ್ಸೇ ಮೊದಲಾದ ಜ್ಞಾನೇಂದ್ರಿಯಗಳು ಶಬ್ದಾದಿರೂಪವಾದ ವಿಷಯಗ್ರಹಣಕ್ಕೆ ಸಾಧನಗಳಾದ್ದರಿಂದ ಕರಣಕಾರಕಗಳೆಸಿಕೊಳ್ಳುವವೆ ಹೊರತು ಕರ್ತೃಕಾರಕನೆನಿಸಿಕೊಳ್ಳಲಾರವು. ಶ್ರೋತೃತ್ವ, ಸ್ಪ್ರಷ್ಟೃತ್ವ, ದ್ರಷ್ಟೃತ್ವ, ರಸಯಿತೃತ್ವ, ಘ್ರಾತೃತ್ವ, ಸ್ವಭಾವವುಳ್ಳ ಚೇತನಸ್ವರೂಪವಾದ ಲಿಂಗರೂಪಿಯಾದ ಪರಶಿವನಿಗೆ ಶ್ರೋತವ್ಯ, ಸ್ಪ್ರಷ್ಟವ್ಯ, ದ್ರಷ್ಟವ್ಯ, ರಸಯಿತವ್ಯ, ಘ್ರಾತವ್ಯವಾದ ಶಬ್ದಸ್ಪರ್ಶ ರೂಪ ರಸ ಗಂಧಗಳ ಶ್ರವಣ ಸ್ಪರ್ಶನ ದರ್ಶನ ಸ್ವಾಧನ ಘ್ರಾಣನಗಳೆಂಬ ಕಾರ್ಯಗಳಿಗೆ ಈ ಜ್ಞಾನೇಂದ್ರಿಯಗಳೇ ಸಾಧನವಾದುದರಿಂದ ಸಾಧನಗಳು ಸಾಧಕನ ಸ್ವಾಧೀನಗಳಾಗಿಯೇ ಕೆಲಸಮಾಡತಕ್ಕವುಗಳಾಗಿವೆಯಲ್ಲದೆ ಸ್ವತಂತ್ರಗಳಲ್ಲವಾದುದರಿಂದ ಸರ್ವ ಕರ್ತೃತ್ವ ವಿಶಿಷ್ಟವಾದ ಚೇತನಾತ್ಮಕವಾದ ಲಿಂಗಕ್ಕೆ ಯಾವಾಗಲೂ ಅಧೀನವಾಗಿರುವ ಈ ಜ್ಞಾನೇಂದ್ರಿಯಗಳಿಗೆ ಲಿಂಗರೂಪತ್ವವನ್ನು ವ್ಯಪದೇಶಮಾಡಿರುವದು ಸಮಂಜಸವೇ ಆಗಿವೆ, ಈ ವಿಷಯದಲ್ಲಿ

ಸ್ಕಾಂದಾಂತರ್ಗತ ಶಂಕರ ಸಂಹಿತಾವಚನಗಳು
ಸದಾಚಾರಶ್ಶಿವೇ ಭಕ್ತಿರ್ಲಿಂಗೇ ಜಂಗಮ ಏಕಧೀಃ ।
ಲಾಂಛನೇ ಶರಣೇ ಭಕ್ತೈರ್ಭಕ್ತಸ್ಥಲಮನುತ್ತಮಂ ॥
ಪರಸ್ತ್ರಿಯರಂ ಪರಾರ್ಥಂಚ ವರ್ಜಯೇದ್ಭಾವಶುದ್ಧಿಮಾನ್ /
ಲಿಂಗನಿಷ್ಠಾನಿಯುಕ್ತಾತ್ಮಾ ಮಾಹೇಶ್ವರಮಹಾಸ್ಥಲಂ ॥
ಲಿಂಗಾರ್ಪಿತಪದಾರ್ಥಸ್ಯ ಸುಖಂ ಭುಕ್ತ್ವಾ ಸಮಾಹಿತಃ ।
ಅನರ್ಪಿತ ವಿವರ್ಜೀಚ ಪ್ರಸಾದಸ್ಥಲಮುತ್ತಮಂ ॥
ವಾಯೌ ಪ್ರಾಣಾತ್ಮಕೇ ಲಿಂಗಂ ಲಿಂಗೇ ಪ್ರಾಣಸ್ಸಮಾಹಿತಃ ।
ಸುಖದುಖದ್ವಯಂ ನಾಸ್ತಿ ಪ್ರಾಣಲಿಂಗಿಸ್ಥಲಂ ಭವೇತ್ ॥
ಸತಿರ್ಲಿಂಗಂ ಸತೀಚಾಹಮಿತಿ ಯುಕ್ತಃ ಸ್ವಯಂ ಪ್ರಭುಃ ।
ಪ್ರಾಪಂಚಿಕ ಸುಖಂ ನಾಸ್ತಿ ಶರಣಸ್ಥಲಮುತ್ತಮಂ ॥
ಷಡೂರ್ಮಯೋ ಷಡ್ಭಾವಾಶ್ಚ ನಾಸ್ತಿ ಚಾಷ್ಟವಿಧಾರ್ಚನಂ ॥
ನಿರ್ಭಾವೋ ನಿಜಲಿಂಗೈಕ್ಯಃ ಶಿಖಿಕರ್ಪೂರಯೋಗವತ್ ॥

ಇಂತಹ ಅಂಗಸ್ಥಲವು ಲಿಂಗಸ್ಥಲದಲ್ಲಿಯೇ ಅಂತರ್ಗತವಾದುದರಿಂದ ಲಿಂಗಸ್ಥಲವೆಂಬುದು ಏಕಾದಶಸಂಖ್ಯೆಯುಳ್ಳುದಾಗುವುದು. ಹೇಗೆಂದರೆ— ಶಾಂತ್ಯತೀತೋತ್ತರ ಕಲೆಯೊಡನೆ ಕೂಡಿರುವ ಮಹಾಸಾದಾಖ್ಯಮಹಾಲಿಂಗವು ಒಂದು ಲಿಂಗವೆನಿಸುವುದು.

ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗ, ಎಂಬ ಪಂಚಲಿಂಗಗಳಲ್ಲಿರುವ ಶಾಂತ್ಯತೀತಕಲಾ, ಶಾಂತಿಕಲಾ, ವಿದ್ಯಾಕಲಾ, ಪ್ರತಿಷ್ಠಾಕಲಾ, ನಿವೃತ್ತಿಕಲಾ ಎಂಬ ಐದು ಕಲೆಗಳು ಐದು ಲಿಂಗಗಳಾಗಿ ವ್ಯವಹರಿಸಲ್ಪಡುತ್ತವೆ. ಶಿವ ಸಾದಾಖ್ಯ, ಮೂರ್ತಿಸಾದಾಖ್ಯ, ಕರ್ಮ ಸಾದಾಖ್ಯ. ಕರ್ತೃಸಾದಾಖ್ಯ, ರೂಪಸಾದಾಖ್ಯ, ಎಂಬೈದು ಸಾದಾಖ್ಯಗಳು ಐದು ಲಿಂಗಗಳಾಗಿ ವ್ಯವಹರಿಸಲ್ಪಡುತ್ತವೆ. ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಹನ್ನೊಂದು ಲಿಂಗಗಳೆಂದು ವ್ಯವಹರಿಸುವದು ವೀರಶೈವಸಿದ್ಧಾಂತದ ಸಂಕ್ಷೇಪ ಕಥೆಯು.

ಅನಂತರದಲ್ಲಿ ತರಂಗರಹಿತವಾದ ಮಹಾಸಮುದ್ರಕ್ಕೆ ಹೋಲಿಸಿರುವ ನಿಷ್ಕಲ ಘನಲಿಂಗರೂಪ ಪರಶಿವತತ್ವಕ್ಕೆ ಮಹಾಲಿಂಗವೆಂಬುದು ಮಾನಸವೆಂಬ ಅಂತರ್ಮುಖವಾಗಿರುವದು, ಮಿಕ್ಕ ಪ್ರಸಾದಾದಿ ಪಂಚಲಿಂಗಗಳು ಐದು ಬಾಹ್ಯಮುಖಗಳಾಗಿರುವವು. ಶಿವ ಸಾದಾಖ್ಯ, ಮೂರ್ತಿಸಾದಾಖ್ಯ, ಕರ್ಮ ಸಾದಾಖ್ಯ, ಕರ್ತೃಸಾದಾಖ್ಯ, ರೂಪಸಾದಾಖ್ಯಗಳೆಂಬ ಪಂಚಸಾದಾಖ್ಯಗಳು "ಈಶಾನ, ತತ್ಪುರುಷ, ಅಘೋರ, ವಾಮದೇವ ಸದ್ಯೋಜಾತ" ಎಂಬ ಪರ್ಯಾಯನಾಮಗಳನ್ನು ಹೊಂದಿವೆಯೆಂಬುದೆ ಮುಖ್ಯ ತಾತ್ಪರ್ಯ.

ಪರಶಿವನಿಗೆ ಸ್ಥೂಲಜಗನ್ನಿರ್ಮಾಣರೂಪವಾದ ವಿನೋದರಸ ವಿಶೇಷವನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾದ ಕಾಲದಲ್ಲಿ ಆಚಾರಲಿಂಗದಲ್ಲಿರುವ ಕ್ರಿಯಾಶಕ್ತಿಯೆಂಬ ಪರ್ಯಾಯನಾಮವುಳ್ಳ ನಿವೃತ್ತಿಕಲೆಯಿಂದ ಮಾಯಾತತ್ವವೆಂಬ ಒಂದು ತತ್ವವಿಶೇಷವುಂಟಾಯಿತು. ಇದು ಮಿಥ್ಯೆಯಲ್ಲ. ಪ್ರಕೃತಿ ಪ್ರಧಾನ ಎಂಬ ಪರ್ಯಾಯನಾಮವುಳ್ಳುದಾಗಿಯೂ ಪಾರಮಾರ್ಥಿಕ ವಸ್ತುವಾಗಿಯೂ ಪರಮಾತ್ಮನಿಗೆ ವಿನೋದೋಪಕರಣವಾಗಿಯೂ ಅತ್ಯಾಶ್ಚರ್ಯಕರ

ಗಳಾದ ವಸ್ತುಗಳನ್ನು ಸೃಷ್ಟಿಸುವ ಸಾಮರ್ಥ್ಯವುಳ್ಳದಾಗಿಯೂ ಪರಶಿವನ ಸಂಕಲ್ಪವನ್ನು ಮೀರದಿರುವಂಥದಾಗಿಯೂ ಆಗಿರುವ ತತ್ವ ವಿಶೇಷವಾಗಿರುವದು ಈ ತತ್ವವು ಸತ್ವ, ರಜಸ್ಸು, ತಮಸ್ಸು ಎಂಬ ಗುಣತ್ರಯಾತ್ಮಕವಾಗಿರುವದು. ಮಹತ್ತತ್ವ, ಅಹಂಕಾರತತ್ವ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳು. ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳು ಮನಸ್ಸು ಎಂಬ ಏಕಾದಶೇಂದ್ರಿಯಗಳು, ಪೃಥಿವಿ, ಜಲ, ಅಗ್ನಿ, ವಾಯು ಆಕಾಶಗಳೆಂಬ ಪಂಚಭೂತಗಳು, ಈ ಇಪ್ಪತ್ತಮೂರು ತತ್ವಗಳಿಗೆ ಮೂಲ ಕಾರಣವೂ ಆಗಿದೆ,

ಪ್ರಕೃತಿಶಬ್ದ ವಾಚ್ಯವಾದ ಇಂಥ ಮಾಯಾತತ್ವದಲ್ಲಿ ಅಡಗಿರುವ ಸತ್ವಾದಿ ಗುಣಗಳೊಳಗೆ ಸತ್ವಗುಣದಲ್ಲಿ ಸ್ಫುರಿಸಿರುವ ಶುದ್ಧಚೈತನ್ಯವನ್ನು ರುದ್ರನೆಂದೂ ರಜೋಗುಣದಲ್ಲಿ ಸ್ಫುರಿಸುವ ಚೈತನ್ಯವನ್ನು ಬ್ರಹ್ಮನೆಂದೂ ತಮೋಗುಣದಲ್ಲಿ ಸ್ಫುರಿಸುವ ಚೈತನ್ಯವನ್ನು ವಿಷ್ಣುವೆಂದೂ ವ್ಯವಹರಿಸುತ್ತಾರೆ. ಈ ಮೂರರಲ್ಲಿ ವಹ್ನಿ, ಸೂರ್ಯ, ಸೋಮ ಎಂಬುವರು ಅಂತರ್ಗತರಾಗಿರುತ್ತಾರೆ. ಮತ್ತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂಬ ನಾಲ್ಕು ವರ್ಣಗಳು. ರುದ್ರ ವಿಷ್ಣು, ಬ್ರಹ್ಮ ಎಂಬ ಮೂವರಲ್ಲಿಯೆ ಅಂತರ್ಗತವಾಗಿರುವುದರಿಂದ ಇವರಿಂದಲೇ ಅವು ಉತ್ಪನ್ನಗಳಾದವು.

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।

ಎಂದು ಗೀತಾಕಾರರು ಸಹ ಒಪ್ಪಿರುತ್ತಾರೆ. ಮೂರು ಗುಣಗಳಿಂದ ನಾಲ್ಕು ವರ್ಣಗಳ ಉತ್ಪತ್ತಿಯು ಸಂಭವಿಸಲಾರದೆಂದು ಶಂಕಿಸಲು ಅವಕಾಶವಿಲ್ಲ. ಏಕೆಂದರೆ—

"ವಿಶ್ವಾಧಿಕೋ ರುದ್ರೋ ಮಹರ್ಷಿಃ"
"ಪುರುಷೋ ವೈ ರುದ್ರಸ್ಸನ್ ಮಹೋ ನಮೋ ನಮಃ"

ಮುಂತಾದ ಶ್ರುತಿವಚನಗಳಿಂದ ರುದ್ರನಿಗೆ ಸರ್ವಾಧಿಕತ್ವವೂ ವೇದಪ್ರಸ್ಫುಲತ್ವರೂಪವಾದ ಬ್ರಾಹ್ಮಣತ್ವವೂ ಗೊತ್ತಾಗುವುದರಿಂದ ನಿರ್ಮಲವಾದ

ಸ್ಫಟಿಕದ ಸಾದೃಶ್ಯವು ರುದ್ರನಿಗಿರುವುದರಿಂದ ಸತ್ವಗುಣವು ಪ್ರತಿಫಲಿತ ಚೈತನ್ಯ ರೂಪನಾಗಿ ಮಹರ್ಷಿಯಾಗಿ ಇರುವ ರುದ್ರನೇ ಬ್ರಾಹ್ಮಣನೆನಿಸಿಕೊಂಡಿರುವುದರಿಂದ ಅಂಥ ರುದ್ರನ ಕೇವಲ ಸತ್ವಾಂಶದಿಂದ ಬ್ರಾಹ್ಮಣೋತ್ಪತ್ತಿಯು ಸಂಭವಿಸಬಹುದು. ರಜೋಗುಣ ತಮೋಗುಣಗಳೆರಡನ್ನೂ ಕೆಳಗೆ ತುಳಿದು ಸತ್ವಗುಣವೊಂದೇ ಪ್ರಾಮುಖ್ಯವನ್ನು ಪಡೆದು ನಿಲ್ಲುವುದರಿಂದ ಆಗ ಬ್ರಾಹ್ಮಣ್ಯವು ಉತ್ಪನ್ನವಾಗುವುದು. ರಜೋಗುಣ ಮಿಶ್ರಿತವಾದ ಸತ್ವಗುಣದಲ್ಲಿ ಪ್ರತಿಫಲಿಸಿರುವ ಚೈತನ್ಯವು ವಿಷ್ಣುವೆನಿಸಿ ಜನ್ಯಶಬ್ದಕ್ಕೆ ಭಾಗಿಯಾದ್ದರಿಂದ ರಜೋಗುಣದೊಡನೆ ಸಮಪ್ರಾಧಾನ್ಯವನ್ನು ಪಡೆದಿರುವ ವಿಷ್ಣುವಿನ ಸತ್ವಾಂಶದಿಂದ ಕ್ಷತ್ರಿಯತ್ವಜಾತಿಯು ಉತ್ಪನ್ನವಾಯಿತು. ತಮೋಗುಣವು ತಿರಸ್ಕಾರ ಪಡೆದಂತೆ ಅದರ ಜತೆಗೆ ರಜೋಗುಣವೂ ತಿರಸ್ಕಾರವನ್ನು ಪಡೆಯಬೇಕಾದುದು ಅವಶ್ಯಕವಾಗಿದ್ದರೂ ಹಾಗೆ ತಿರಸ್ಕೃತವಾಗವೆ ರಜೋಗುಣವೂ ಸತ್ವಗುಣದ ಜತೆಯಲ್ಲಿ ಪ್ರಾಬಲ್ಯಹೊಂದಿದ ಕಾರಣ-ಕೇವಲ ಸತ್ವಪ್ರಧಾನವಾದ ಬ್ರಾಹ್ಮಣ್ಯಕ್ಕಿಂತಲೂ ರಜಸ್ಸತ್ವೋಭಯ ಪ್ರಧಾನವಾದ ಕ್ಷತ್ರಿಯತ್ವವು ಅಪಕರ್ಷತೆಯನ್ನು ಪಡೆವುದು, ರಜೋಗುಣದಿಂದ ಕೂಡಿದ ತಮೋಗುಣದಲ್ಲಿ ಪ್ರತಿಫಲಿಸಿರುವ ಚೈತನ್ಯವು ಬ್ರಹ್ಮನೆನಿಸಿಕೊಂಡಿರುವುದರಿಂದ ಇಂಥ ಬ್ರಹ್ಮಾಂಶದಿಂದ ವೈಶ್ಯತ್ವವು ಉತ್ಪನ್ನವಾಗುತ್ತದೆ. ಸತ್ವಗುಣವು ತಿರಸ್ಕೃತವಾಗಿ ತಮೋಗುಣವು ತಿರಸ್ಕಾರಪಡೆಯದೆ ರಜೋಗುಣದ ಜತೆಗೆ ಈ ತಮೋಗುಣವು ಪ್ರಾಧಾನ್ಯವನ್ನು ಪಡೆದಿರುವ ಕಾರಣ ರಜಸ್ಸತ್ವೋಭಯ ಪ್ರಧಾನವಾದ ಕ್ಷತ್ರಿಯತ್ವಕ್ಕಿಂತಲೂ ರಜಸ್ತಮ ಉಭಯ ಪ್ರಧಾನವಾದ ವೈಶ್ಯತ್ವವು ನಿಕೃಷ್ಟತೆಯನ್ನು ಪಡೆದಿರುವುದು.

ಕೇವಲ ತಮೋಗುಣದಲ್ಲಿ ಪ್ರತಿಫಲಿಸಿರುವ ಚೈತನ್ಯವು ಇಂದ್ರನೆನಿಸಿಕೊಂಡಿರುವುದರಿಂದ ಇಂಥ ಇಂದ್ರಾಂಶದಿಂದ ಶೂದ್ರತ್ವವುಂಟಾಯಿತು. ಸತ್ವಗುಣ ರಜೋಗುಣಗಳೆರಡೂ ಅತ್ಯಂತ ತಿರಸ್ಕಾರವನ್ನು ಪಡೆದು ತಮೋಗುಣವೇ ಪ್ರಧಾನವಾದ ಕಾರಣ, ರಜಸ್ತಮ ಉಭಯ ಪ್ರಧಾನವಾದ ವೈಶ್ಯತ್ವಕ್ಕಿಂತಲೂ ಕೇವಲ ತಮಃ ಪ್ರಧಾನವಾದ ಶೂದ್ರತ್ವವು ಅಪಕೃಷ್ಟತೆಯನ್ನು ಪಡೆಯಿತು.

ಸಂಕರಾಸ್ಸರ್ವದೇವಾಸ್ತು ವೃಷಶಚ್ಚ ಪುರಂದರಃ
ಪಿತಾಮಹಸ್ತು ವೈಶ್ಯಸ್ಸ್ಯಾತ್ ಕ್ಷತ್ರಿಯಃ ಪರಮೋ ಹರಿಃ ।

ಬ್ರಾಹ್ಮಣೋ ಭಗವಾನ್ ರುದ್ರಸ್ಸರ್ವೇಷಾಮುತ್ತಮೋತ್ತಮಃ
ಬ್ರಹ್ಮಭೂತಸ್ಯ ರುದ್ರಸ್ಯ ಬ್ರಾಹ್ಮಣ್ಯಂ ನೈವ ಹೇತುಜಂ ||

ರುದ್ರ, ವಿಷ್ಣು, ಬ್ರಹ್ಮ, ಇಂದ್ರ ಈ ನಾಲ್ಕುದೇವತೆಗಳನ್ನು ಬಿಟ್ಟು ಉಳಿದ ದೇವತೆಗಳು ಸಂಕರಜಾತಿಗೆ ಸೇರಿದವರೆಂದು ಪಾರಾಶರ್ಯೋಪಪುರಾಣವು ಈ ವಿಷಯದಲ್ಲಿ ಪ್ರಮಾಣವಾಗಿರುತ್ತದೆ.

ಶಂಕಾ—ಆದರೆ, ಪುರಾಣಗಳಲ್ಲಿ ವಿಷ್ಣುವು ಸಾತ್ವಿಕನೆಂತಲೂ ರುದ್ರನು ತಾಮಸನೆಂತಲೂ ಹೇಳಿರುವಲ್ಲಿ ವಿಷ್ಣುವಿಗೆ ತಾಮಸತ್ವವನ್ನು ಹೇಳುವುದೆಂತು ?

ಸಮಾಧಾನ—ಭಾಗವತದಲ್ಲಿ

ಸತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈ
ರ್ಯುಕ್ತಂ ಪರಃ ಪುರುಷ ಏಕ ಇಹಾಸ್ಯ ಧತ್ತೇ ।
ಸ್ಥಿತ್ಯಾದಯೇ ಹರಿವಿರಿಂಚಿ ಹರೇತಿ ಸಂಜ್ಞಾಃ ||

ಮತ್ತು ಅದೇ ಭಾಗವತದ ಅಷ್ಟಮಸ್ಕಂಧದಲ್ಲಿ

ನ ತೇ ಗಿರಿತ್ರಾಖಿಲ ಲೋಕಪಾಲ
ವಿರಿಂಚಿ ವೈಕುಂಠ ಸುರೇಂದ್ರಗಮ್ಯಂ ।
ಜ್ಯೋತಿಃ ಪರಂ ಯತ್ರ ರಜಸ್ತಮಶ್ಚ
ಸತ್ವಂ ನ ಯದ್ಬ್ರಹ್ಮ ನಿರಸ್ತಭೇದಂ ||

ಎಂಬ ಪ್ರಮಾಣಾನುಸಾರವಾಗಿ ಮೊದಲನೆಯ ಶ್ಲೋಕದಲ್ಲಿ ಸತ್ವ, ರಜಸ್ಸು, ತಮಸ್ಸು ಎಂಬ ಪ್ರಕೃತಿಯ ಮೂರು ಗುಣಗಳನ್ನು ಕ್ರಮದಿಂದ ತೋರಿಸಿ ಸ್ವಭಾವತಃ ಗುಣರಹಿತನಾದ ಪರಮಪುರುಷನು ಪ್ರಾಕೃತವಾದೀ ಮೂರುಗುಣಗಳನ್ನು ತನ್ನ ಗುಣಗಳೆಂದು ಅಭಿಮಾನಿಸುತ್ತ ಸತ್ವಗುಣಾಭಿಮಾನಿಯಾದಾಗ "ಹರಿ" ಎಂಬ ಸಂಜ್ಞೆಯನ್ನೂ ರಜೋಗುಣಾಭಿಮಾನಿಯಾದಾಗ

"ವಿರಿಂಚಿ" ಎಂಬ ಸಂಜ್ಞೆಯನ್ನು ತಮೋಗುಣಾಭಿಮಾನಿಯಾದಾಗ "ಹರ" ಎಂಬ ಸಂಜ್ಞೆಯನ್ನೂ ವಹಿಸಿದನು. ಏಕೆ ಇಂಥ ಹೆಸರನ್ನು ವಹಿಸಿದನು ? ಎಂಬ ಆಕ್ಷೇಪಕ್ಕೆ ಪರಿಹಾರವನ್ನು ತೋರಿಸುವುದಕ್ಕಾಗಿ "ಸ್ಥಿತ್ಯಾದಯೇ" ಎಂಬ ಪದವು ಉಕ್ತವಾಗಿರುವದು. ಇಲ್ಲಿ ಆದಿಶಬ್ದದಿಂದ ಸೃಷ್ಟಿಯೂ ಸಂಹಾರವೂ ವಿವಕ್ಷಿತವಾಗಿರುವವು. ಅಂದರೆ-ಯಥಾಕ್ರಮವಾಗಿ ಸ್ಥಿತಿ ಕಾರ್ಯಕ್ಕೋಸ್ಕರ ವಾಗಿ ಸತ್ವಗುಣಾಭಿಮಾನಿಯಾಗಿ ಹರಿಸಂಜ್ಞೆಯನ್ನು ಸಂಹಾರ ಕಾರ್ಯಕ್ಕೋಸ್ಕರವಾಗಿ, ತಮೋಗುಣಾಭಿಮಾನಿಯಾಗಿ ಹರಸಂಜ್ಞೆಯನ್ನು ವಹಿಸುವನು. ಎಂದು ತೋರುವುದರಿಂದ ವಿಷ್ಣುವಿಗೆ ಸಾತ್ವಿಕತ್ವವು ಪಾಲನೋಪಾದಿಯು ಯುಕ್ತವೆಂದೂ ರುದ್ರನಿಗೆ ತಾಮಸೋಪಾದಿಯು ಯುಕ್ತವೆಂದೂ ಸ್ಪಷ್ಟ ವಾಗುತ್ತದೆ.

ಎರಡನೆಯ ಶ್ಲೋಕದಿಂದ ವಿಷ್ಣುವಿಗೆ ತಾಮಸತ್ವವೂ ರುದ್ರನಿಗೆ ಸಾತ್ವಿಕತ್ವವೂ ಸ್ವಾಭಾವಿಕವೆಂಬುದೂ ಗೊತ್ತಾಗುತ್ತದೆ. ಹೇಗೆಂದರೆ-ದೇವಾಸುರರಲ್ಲರೂ ಒಟ್ಟುಗೂಡಿ ಸಮುದ್ರವನ್ನು ಕಡೆಯುತ್ತಿರುವ ಸಮಯದಲ್ಲಿ ಅಮೃತವನ್ನು ಪಡೆಯಬೇಕೆಂಬ ಇಚ್ಛೆಯಿಂದ ಮಂದರಪರ್ವತವೆಂಬ ಕಡೆಗೋಲಿಗೆ ವಾಸುಕಿ (ಸರ್ಪ) ಎಂಬ ಹಗ್ಗವನ್ನು ಸುತ್ತಿ ಕಡೆಯುತ್ತಿರಲಾಗಿ ಆ ಸಮುದ್ರದಲ್ಲಿ ಕಾಲಕೂಟವೆಂಬ ಮಹಾವಿಷವು ಉದ್ಭವಿಸಿ ಲೋಕವನ್ನೆಲ್ಲಾ ಸುಡುತ್ತಿರುವುದನ್ನು ನೋಡಿ ಭಯಭ್ರಾಂತರಾದ ದೇವದಾನವಾದಿಗಳು ಪರಶಿವನಿಗೆ ಶರಣಾಗತರಾದರು ಆಗ ಬ್ರಹ್ಮನು "ನ ತೇ ಗಿರಿತ್ರ" ಎಂದು ಸ್ತುತಿಸಿರುವನು. ಇಲ್ಲಿಯೂ ಪೂರ್ವಾರ್ಧದಲ್ಲಿರುವ, ವಿರಿಂಚಿ, ವೈಕುಂಠ, ಸುರೇಂದ್ರ ಎಂಬ ಮೂರು ಪದಗಳಿಂದಲೂ ಕ್ರಮವಾಗಿ ಬ್ರಹ್ಮ ವಿಷ್ಣು ರುದ್ರ ಎಂಬ ಮೂವರು ವಿವಕ್ಷಿತರಾಗಿರುವರು. ಉತ್ತರಾರ್ಧದಲ್ಲಿಯೂ ಇದೇ ಕ್ರಮವನ್ನನುಸರಿಸಿ ಅವರವರ ಸ್ವಾಭಾವಿಕ ಗುಣಗಳನ್ನು ಹೇಳುವಾಗ "ರಜಃ, ತಮಃ, ಸತ್ವಂ" ಎಂಬುದಾಗಿ ಗುಣಗಳನ್ನು ನಿರ್ದೇಶಿಸಿರುವುದರಿಂದ ಬ್ರಹ್ಮನಿಗೆ ರಜೋಗುಣವೂ ವಿಷ್ಣುವಿಗೆ ತಮೋಗುಣವೂ, ರುದ್ರನಿಗೆ ಸತ್ವಗುಣವೂ ಸ್ವಾಭಾವಿಕವಾಗಿರುವುದಲ್ಲದೆ ಉಪಾಧಿಕೃತವಲ್ಲವೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ವಿಷ್ಣು ರುದ್ರ ಇವರಿಬ್ಬರ ಬಣ್ಣಗಳೇ ಅವರಲ್ಲಿರುವ ಗುಣವಿಶೇಷವನ್ನು ತೋರಿಸುತ್ತವೆ. ಈ ವಿಷಯದಲ್ಲಿ

ಸ್ಕಾಂದಪುರಾಣವು

ಶೌಕ್ಲ್ಯಂ ಸತ್ವಗುಣಾಜ್ಜಾತಂ ರಾಗೋ ಜಾತೋ ರಜೋಗುಣಾತ್ ।
ಕಾರ್ಷ್ಣ್ಯಂ ತಮೋಗುಣಾಜ್ಜಾತಮಿತಿ ವಿಂದ್ಯಾತ್ಸಮಾಸತಃ ॥
ಯಸ್ಯ ಮಾಯಾಗತಂ ಸತ್ವಂ ಶರೀರಂ ಸ್ಯಾತ್ತಮೋಗುಣಃ ।
ಸಂಹಾರಾಯ ತ್ರಿಮೂರ್ತಿನಾಂ ಸ ರುದ್ರಸ್ಸ್ಯಾನ್ನ ಚಾಪರಃ ॥
ತಥಾ ಯಸ್ಯ ತಮಸ್ಸಾಕ್ಷಾಚ್ಛರೀರಂ ಸಾತ್ವಿಕೋ ಗುಣಃ ।
ಪಾಲನಾಯ ತ್ರಿಮೂರ್ತೀನಾಂ ಸ ವಿಷ್ಣುಸ್ಸ್ಯಾನ್ನ ಚಾಪರಃ ॥

ಸತ್ವಗುಣದಿಂದ ಬಿಳುಪು. ರಜೋಗುಣದಿಂದ ಕೆಂಪು, ತಮೋಗುಣದಿಂದ ಕಪ್ಪು ಉತ್ಪನ್ನವಾದವು ಎಂಬುದೇ ಮೊದಲನೆಯ ಪದ್ಯದ ಅರ್ಥವು. ತ್ರಿಮೂರ್ತಿಗಳೊಳಗೆ ಯಾವನಿಗೆ ಸತ್ವಗುಣವೇ ಸ್ವಭಾವಸಿದ್ಧವಾಗಿರುವುದರಿಂದ ಶರೀರವು ಸಾತ್ವಿಕನಾಗಿದ್ದು ಸಂಹಾರಕಾರ್ಯಕ್ಕೋಸ್ಕರ ತಮೋಗುಣವು ಆರೋಪಿತವಾಗಿರುವುದೋ ಅಂಥವನು ರುದ್ರನೇ ಆಗಿರುವುನಲ್ಲದೆ ಮತ್ತೊಬ್ಬನಲ್ಲ. ಎಂಬುದೇ ಎರಡನೆಯ ಪದ್ಯದ ಅರ್ಥವು.

ತ್ರಿಮೂರ್ತಿಗಳೊಳಗೆ ಯಾವನೊಬ್ಬನಿಗೆ ತಮೋಗುಣವೇ ಸ್ವಾಭಾವಿಕವಾಗಿರುವುದರಿಂದ ಶರೀರವೂ ತಾಮಸವಾಗಿರುವುದ, ಮತ್ತು ರಕ್ಷಣಕಾರ್ಯಕ್ಕೋಸ್ಕರ ಸತ್ವಗುಣವು ಯಾವನೊಬ್ಬನಿಗೆ ಆರೋಪಿತವಾಗಿರುವುದೋ ಅಂಥವನು ವಿಷ್ಣುವೇ ಆಗಿರುವುನಲ್ಲದೆ ಮತ್ತೊಬ್ಬನಲ್ಲ. ಎಂಬುದೆ ಮೂರನೆಯ ಪದ್ಯದ ಅರ್ಥವು.

ಶೈವಾಗಮಗಳಲ್ಲಿ ಪತಿ, ಪಶು, ಪಾಶ ಎಂಬ ಮೂರು ಪದಾರ್ಥಗಳು ಪ್ರತಿಪಾದಿತಗಳಾಗಿವೆ. ಇವುಗಳಲ್ಲಿ ಅನಾದಿಮುಕ್ತನಾಗಿಯೂ ಪೂರ್ಣವಾದ ದೃಕ್‌ಶಕ್ತಿ ಕ್ರಿಯಾಶಕ್ತಿಗಳುಳ್ಳವನಾಗಿಯೂ ಮಂತ್ರಮಯ ಪಂಚಮೂರ್ತಿಯುಳ್ಳವನಾಗಿಯೂ ಇರುವ ಶಿವನೇ ಪತಿಯೆನಿಸುವನು.

ಅಣುರೂಪವಾದ ಜೀವರಾಶಿಯೆಲ್ಲವೂ ಪಶುವೆನಿಸುವದು. ಈ ಚೇತನ

ಸಮೂಹದಲ್ಲಿ ಸಕಲ, ಪ್ರಳಯಾಕಲ, ವಿಜ್ಞಾನಾಕಲ ಎಂಬ ಜೀವರಾಶಿಗಳೂ ಪಶುಪದಾರ್ಥದಲ್ಲಿಯೇ ಅಂತರ್ಭಾವವಾಗಿವೆ.

ಮಲ, ತಿರೋಧಾಯಕಶಕ್ತಿ, ಕರ್ಮ, ಮಾಯೆ, ಬಿಂದು ಎಂದು ಪಾಶವು ಐದು ವಿಧ. ಬಿಂದು, ಮಾಯೆ ಇವೆರಡರಿಂದ ಹುಟ್ಟಿದ ಶುದ್ಧಾಶುದ್ಧ ರೂಪವಾದ ತತ್ವಗಳೂ ಭುವನಗಳೂ ಭೂತಗಳೂ ಅವುಗಳ ಪರಿಣಾಮಾಂತರಗಳೆಲ್ಲ ಪಾಶಪದಾರ್ಥಗಳಲ್ಲಿಯೇ ಅಂತರ್ಭಾವವು. ಮೂರು ಪ್ರಕಾರವಾದ ಪಶುಗಳೊಳಗೆ ವಿಜ್ಞಾನಾಕಲ, ಪ್ರಳಯಾಕಲ ಎಂಬುವ ಜೀವರಿಗೂ ಕ್ರಮವಾಗಿ ವಿಜ್ಞಾನಕೇವಲ, ಪ್ರಳಯಕೇವಲ ಎಂಬ ಪರ್ಯಾಯನಾಮಗಳಿರುತ್ತವೆ.

ಬ್ರಹ್ಮಾದಿ ಕೀಟಪರ್ಯಂತವಾಗಿ ನಿಖಿಲ ಚೇತನಗಳೂ "ಸಕಲ" ಎನಿಸಿಕೊಂಡಿರುವುದರಿಂದ ಇವಕ್ಕೆ ಮಲ, ಕರ್ಮ, ಮಾಯೆ ಎಂಬ ಬಂಧತ್ರಯವುಂಟು. ಪ್ರಳಯದಲ್ಲಿ ಇವನು ಕಲಾಶೂನ್ಯನಾಗುತ್ತಾನೆ. ಸಕಲರಿಗೂ ಪ್ರಳಯಾಕಲರಿಗೂ ಮಾಯಾ ಸಂಬಂಧವು ಸಾಕ್ಷಾತ್ ಸಂಭವಿಸುವುದಿಲ್ಲವಾದುದರಿಂದ ಮಾಯಾ ಕಾರ್ಯವಾದ ಕಲೆಯ ಸಂಬಂಧದಿಂದ ಇವರಿಗೆ ಮಾಯಾ ಸಂಬಂಧವನ್ನು ಹೇಳಬೇಕು. ಆದರಲ್ಲಿ ಕಲಾಸಂಬಂಧವು ಇರುವುದರಿಂದ ಇವರು ತ್ರಿಮಲಿಗಳೆನಿಸಿಕೊಳ್ಳುವರು. ವಿಷ್ಣುವಿಗೆ ಕಲಾಸಂಬಂಧವಿಲ್ಲವಾದ್ದರಿಂದ ಮಾಯಾಸಂಬಂಧವಿಲ್ಲ. ಆದ್ದರಿಂದ ಮಲ, ಕರ್ಮ ಎಂಬ ಎರಡರಿಂದಲೇ ಇವನು ದ್ವಿಮಲಿಯೆನಿಸುವನು. ವಿಷ್ಣುವಿಗಿಂತಲೂ ಉತ್ತಮನಾದ ರುದ್ರನೇ ವಿಜ್ಞಾನಾಕಲ ಅಥವಾ ವಿಜ್ಞಾನ ಕೇವಲ ಎನಿಸಿಕೊಳ್ಳುವುದರಿಂದ ಇವನಿಗೆ ಮಲ, ಕರ್ಮ, ಕಲಾಸಂಬಂಧವು ಇಲ್ಲ. ಆದರೆ ಯಾವಾಗಲೂ ಜ್ಞಾನಿಯೆನಿಸಿಕೊಂಡಿರುವ ಇವನಿಗೆ ಜಗತ್ಸಂಹಾರಕಾರ್ಯಕ್ಕೋಸ್ಕರ ಮಾಯಾ ಸಂಬಂಧಮಾತ್ರವೇ ಇರುವುದರಿಂದ ಇವನು ಏಕಮಲಿಯೆನಿಸಿಕೊಳ್ಳುತ್ತಾನೆ. ಗ್ರಂಥಕಾರರ ಅಭಿಪ್ರಾಯವಾದರೂ ತ್ರಿಮಲಿ, ದ್ವಿಮಲಿ, ಏಕಮಲಿ ಎಂಬ ಪದಗಳಲ್ಲಿ ಸೇರಿರುವ ಮಲಶಬ್ದವು ಬಂಧವಾಚಕವಲ್ಲದೆ ಮಲ ಎಂಬ ಮುಖ್ಯಾರ್ಥವಾಚಕವಲ್ಲ. "ಪಾಶಃಪಂಚವಿಧಃ" ಎಂದು ಪಾಶಗಳಲ್ಲಿ ಮಲವೆಂಬುದೊಂದು ಸೇರಿಕೊಂಡಿರುವುದರಿಂದ ಐದಕ್ಕೂ ಮಲರೂಪತ್ವವು ಸಂಭವಿಸುವುದಿಲ್ಲ.

ಮತ್ತು ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂಬ ಸ್ಥಲವಿಶೇಷ ರೂಪಗಳಾದ ಚಿತ್ಪ್ರಕಾಶಗಳು ಕ್ರಮದಿಂದ ಮಂತ್ರ, ಮಂತ್ರೇಶ್ವರ, ಮಂತ್ರ ಮಹೇಶ್ವರ ಎಂಬ ಹೆಸರನ್ನು ಪಡೆಯುತ್ತವೆ. ತ್ಯಾಗಾಂಗ ಪ್ರಕಾಶವು ಕರ್ಮ ವೆಂಬ ಒಂದೇ ಒಂದು ಮಲದ ವಾಸನಾಮಾತ್ರದೊಡನೆ ಕೂಡಿರುವುದರಿಂದ ಮಂತ್ರವೆನಿಸಿಕೊಳ್ಳುವುದು: ಭೋಗಾಂಗ ಪ್ರಕಾಶವು ಕರ್ಮಮಲವಾಸನೆಯ ಕ್ಷಯದಲ್ಲಿ ಅಭಿಮುಖತೆಯನ್ನು ಪಡೆದಿದ್ದರಿಂದ ಮಂತ್ರೇಶ್ವರನೆನಿಸಿಕೊಳ್ಳು ವದು. ಯೋಗಾಂಗಪ್ರಕಾಶವು ಕರ್ಮಮಲವಾಸನಾ ಶೂನ್ಯತೆಯನ್ನು ಪಡೆದಿರುವುದರಿಂದ ಮಂತ್ರಮಹೇಶ್ವರನೆನಿಸಿಕೊಳ್ಳುವುದು. ಈ ಪ್ರಕಾರವಾಗಿ "ಸಕಲ, ಪ್ರಳಯಾಕಲ, ವಿಜ್ಞಾನಾಕಲ, ತ್ಯಾಗಾಂಗಪ್ರಕಾಶ, ಭೋಗಾಂಗ ಪ್ರಕಾಶ, ಯೋಗಾಂಗಪ್ರಕಾಶ" ಎಂಬ ಆರು ಚೇತನರು ಪ್ರಮಾತೃಗಳೆನಿಸಿ ಕೊಳ್ಳುವರು.

ನಿಷ್ಕಲವಾದ ಘನಲಿಂಗಪ್ರಕಾಶವಾದರೋ ಮಲಸಂಬಂಧವಿಲ್ಲದೆ ಯಾವಾಗಲೂ ಸಂಪೂರ್ಣವಾಗಿ ವಿಶ್ವಾಕಾರವಾದ ಅಹಂತಾ ಸ್ಫುರಣಸ್ವರೂಪವೇ ಆಗಿರುವುದೆಂದು ವಿವೇಕದಿಂದ ಅರಿಯಬೇಕು.

ಇಲ್ಲಿ—ಅನ್ಯೋನ್ಯಾಭಾವರೂಪವಾದ ಲಕ್ಷಣವುಳ್ಳ ಭೇದಪ್ರಪಂಚರೂಪ ವಾದ ಮಾಯಾತತ್ವದ ಕಾರ್ಯವರ್ಗದಲ್ಲಿ ಸೇರಿರುವ ಅಂಗತತ್ವವೇ ಪುರುಷತತ್ವ ವೆಂಬ ಸಂಜ್ಞೆಯನ್ನು ಪಡೆದು ಇಪ್ಪತ್ತೈದನೆಯ ತತ್ವವೆಂದು ಹೇಳಿಸಿಕೊಳ್ಳು ತ್ತದೆ.

ಇಲ್ಲಿ ಮನಸ್ಸು, ಬುದ್ಧಿ, ಅಹಂಕಾರ ಎಂಬ ಮೂರು ಅಂತಃಕರಣಗಳು, ಶ್ರೋತ್ರ, ತ್ವಕ್, ಚಕ್ಷುಸ್ಸು,ರಸನೆ, ಘ್ರಾಣವೆಂಬ ಜ್ಞಾನೇಂದ್ರಿಯ ಪಂಚಕವೂ ಸಾತ್ವಿಕಾಹಂಕಾರದ ಕಾರ್ಯವಾಗಿದೆ. ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳು ರಾಜಸಾಹಂಕಾರದ ಕಾರ್ಯವಾ ಗಿದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳು. ಪ್ರಥಿವಿ ಅಪ್, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳೂ ತಮೋ ಗುಣಗಳ ಕಾರ್ಯವೆಂದು ಅರಿಯಬೇಕು. ಇಲ್ಲಿ

"ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ"

ಎಂಬ ಭಗವದ್ಗೀತೆಯಲ್ಲಿ ಹೇಳಿರುವಂತೆ ಅನೇಕ ಜನ್ಮಗಳನ್ನೆತ್ತಿ ಶಿವ ಪೂಜಾದಿ ಸತ್ಕರ್ಮಗಳನ್ನಾಚರಿಸಿ ಅವುಗಳ ಸಾಮರ್ಥ್ಯದಿಂದ ವೀರಶೈವ ಭಕ್ತ ಕುಲದಲ್ಲಿ ಜನ್ಮವ ಧರಿಸಿ ಗುರುಕಟಾಕ್ಷಕ್ಕೆ ಭಾಗಿಯಾಗಿ ಇಷ್ಟಲಿಂಗಧಾರಣಾತ್ಮಕ ಶಿವದೀಕ್ಷೆ ಪಡೆದು ಉಪಾಸನಾದ್ವಾರಾ ಭಕ್ತಾದಿ ಷಟ್‌ಸ್ಥಲಜ್ಞಾನಸಿದಿಯನ್ನು ಪಡೆದು ಮುಕ್ತಾತ್ಮನಾಗುವದು. ಇಂಥ ಲಕ್ಷಣಗಳಿಂದೊಡಗೂಡಿರುವ ಷಟ್‌ಸ್ಥಲಾತ್ಮಕ ಬ್ರಹ್ಮಸ್ವರೂಪವನ್ನು ಗುರೂಪದೇಶಬಲದಿಂದ ತಿಳಿದಿರುವ ಶರಣನಿಗೆ ಮಹಾಲಿಂಗ ರೂಪವಾದ ಅಂತರ್ಮುಖದಿಂದಲೂ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ರೂಪಗಳಾದ ಐದು ಬಾಹ್ಯ ಮುಖಗಳಿಂದಲೂ ಉದ್ಭವಿಸಿದ ಜ್ಯೋತಿಸ್ಸು, ಬಿಂದು, ಅರ್ಧಚಂದ್ರ, ಕುಂಡಲ ದಂಡ, ತಾರಕ ಎಂಬ ಆರು ವಿಧ ಆಕಾರಗಳನ್ನು ಹೊಂದಿದ ಷಡಕ್ಷರೀ ಮಂತ್ರದಲ್ಲಿರುವ ಆರು ಅಕ್ಷರಗಳೇ ಪೃಥಿವ್ಯಾದಿ ಪಂಚಭೂತಗಳ ಸಮಷ್ಟಿರೂಪವಾಗಿ ಪರಿಣಮಿಸಿರುವುದರಿಂದ ಅಂಥ ಶರಣನ ಅಂಗದಲ್ಲಿ ಷಟ್‌ಪ್ರಣವರೂಪವಾದ ಇಷ್ಟಲಿಂಗವು ಸ್ಥಿರವಾಗಿ ನೆಲೆಗೊಂಡಿರುವದು.

ಲಿಂಗದ ಪೀಠದಲ್ಲಿ ಆಚಾರಲಿಂಗವೂ, ಖಂಡಿಕಾವರಣವಲ್ಲಿ ಗುರುಲಿಂಗವೂ, ಪರ್ತುಲದಲ್ಲಿ ಶಿವಲಿಂಗವೂ, ಗೋಮುಖದಲ್ಲಿ ಜಂಗಮಲಿಂಗವೂ, ಯೋನಿಯಲ್ಲಿ ಪ್ರಸಾದಲಿಂಗವೂ, ಗೋಳಕದಲ್ಲಿ ಮಹಾಲಿಂಗವೂ, ಹೀಗೆ ಆರು ಲಿಂಗಗಳು ಪ್ರಕಾಶಿಸುತ್ತಿರುವವು. ಇದಲ್ಲದೆ ಅಂಥ ಶಿವಶರಣನ ದೇಹದಲ್ಲಿ ಪೀಠಾದಿ ಗೋಳಕಪರ್ಯಂತವಾದ ಆರು ಭಾಗಗಳಾಗಿ ನೆಲೆಗೊಳ್ಳುವವು.

ಈ ವಿಷಯಗಳೆಲ್ಲ ಮನಸ್ಸಿನಲ್ಲಿ ದೃಢಪಡಬೇಕಾದರೆ ಮುಂದೆ ಬರುವ ಷಟ್ಕ ಕ್ರಮವನ್ನರಿಯಬೇಕು. ಅಂಗಸ್ಥಲಷಟ್ಕ, ಲಿಂಗಸ್ಥಲಷಟ್ಕ, ಶಕ್ತಿಷಟ್ಕ ಭಕ್ತಿಷಟ್ಕ, ಹಸ್ತಷಟ್ಕ, ಗ್ರಾಹ್ಯಷಟ್ಕ, ಮಂತ್ರಾಕ್ಷರಷಟ್ಕ, ಇಂದ್ರಿಯಷಟ್ಕ, ಎಂಬಿವು ಎಂಟು ಷಟ್ಕವು.

೧. ಇವುಗಳೊಳಗೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವು ಅಂಗಸ್ಥಲಷಟ್ಕವು.

೨. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ, ಮಹಾಲಿಂಗ ಎಂಬುವೇ ಲಿಂಗಸ್ಥಲಷಟ್ಕವು.

೩. ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿ ಎಂಬುವೇ ಶಕ್ತಿಷಟ್ಕವು.

೪. ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭವಭಕ್ತಿ, ಆನಂದಭಕ್ತಿ, ಸಮರಸಭಕ್ತಿ ಎಂಬುವೇ ಭಕ್ತಿಷಟ್ಕವು.

೫. ಸುಚಿತ್ತಹಸ್ತ, ಸುಬುದ್ಧಿಹಸ್ತ, ನಿರಹಂಕಾರಹಸ್ತ, ಸುಮನೋ ಹಸ್ತ, ಸುಜ್ಞಾನಹಸ್ತ, ಸದ್ಭಾವಹಸ್ತ ಎಂಬುವೇ ಹಸ್ತಷಟ್ಕವು.

೬. ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿ ಎಂಬುವೇ ಗ್ರಾಹ್ಯ ವಿಷಯಷಟ್ಕವು.

೭. ನಕಾರ, ಮಕಾರ, ಶಿಕಾರ, ವಾಕಾರ, ಯಕಾರ, ಓಂಕಾರ, ಎಂಬುವೇ ಮಂತ್ರಷಟ್ಕವು.

೮. ಘ್ರಾಣೇಂದ್ರಿಯ, ರಸನೇಂದ್ರಿಯ, ಚಕ್ಷುರಿಂದ್ರಿಯ, ತ್ವಗಿಂದ್ರಿಯ ಶ್ರೋತ್ರೇಂದ್ರಿಯ, ಮನ ಇಂದ್ರಿಯ ಎಂಬುವೇ ಇಂದ್ರಿಯ ಷಟ್ಕವು.

ಈ ಎಂಟು ಷಟ್ಕಗಳೊಳಗೆ ಒಂದೊಂದು ಷಟ್ಕದಲ್ಲಿಯೂ ಸೇರಿರುವ ಆರು ಪದಾರ್ಥಗಳಿಗೆ ಅವುಗಳ ಸ್ಥಾನಕ್ರಮಗಳನ್ನು ಅತಿಕ್ರಮಿಸದಂತೆ ಯಥಾ ಸಂಖ್ಯಾನುಸಾರವಾಗಿ ಸಂಬಂಧವನ್ನು ಏರ್ಪಡಿಸಿಕೊಂಡರೆ ಹಿಂದಿನ ವಿಷಯ ವೆಲ್ಲಾ ಸ್ಪಷ್ಟವಾಗುತ್ತದೆ. ಹೇಗೆಂದರೆ—

೧. ಕ್ರಿಯಾಶಕ್ತಿಯಿಂದ ಕೂಡಿದ ಆಚಾರಲಿಂಗಕ್ಕೆ ಶ್ರದ್ಧಾಭಕ್ತಿಯುಕ್ತ

ನಾಗಿ ಸುಚಿತ್ತವೆಂಬ ಹಸ್ತದಿಂದ ಗಂಧ ಪದಾರ್ಥವನ್ನು ತೆಗೆದುಕೊಂಡು ನಕಾರ ಮಂತ್ರವನ್ನು ಸ್ಮರಿಸುತ್ತ ಘ್ರಾಣೇಂದ್ರಿಯರೂಪವಾದ ಮುಖದಲ್ಲಿ ಸಮರ್ಪಿಸಿ ಭುಕ್ತಶೇಷ (ಪ್ರಸಾದ)ವನ್ನು ಸೇವಿಸಿ ಸುಖಪರಿಣಾಮಿಯಾಗುವನೇ ಭಕ್ತಸ್ಥಲಿಯೆನಿಸುವನು,

೨. ಜ್ಞಾನಶಕ್ತಿಯೊಡಗೂಡಿರುವ ಗುರುಲಿಂಗಕ್ಕೆ ನಿಷ್ಠಾಭಕ್ತಿಯೊಡನೆ ಸುಬುದ್ಧಿಯೆಂಬ ಹಸ್ತದಲ್ಲಿ ರಸಪದಾರ್ಥವನ್ನು ಗ್ರಹಿಸಿ ಮಕಾರಮಂತ್ರವನ್ನು ಸ್ಮರಿಸುತ್ತ ಜಿಹ್ವೇಂದ್ರಿಯರೂಪವಾದ ಮುಖದಲ್ಲಿ ಸಮರ್ಪಿಸಿ ಭುಕ್ತಾವಶಿಷ್ಟವಾದ ಆ ಪ್ರಸಾದವನ್ನು ಭುಂಜಿಸಿ ನಿತ್ಯಸುಖಪರಿಣಾಮಿಯಾಗುವನೇ ಮಹೇಶ್ವರಸ್ಥಲಿಯೆನಿಸುವನು.

೩. ಇಚ್ಛಾಶಕ್ತಿಯುತವಾದ ಶಿವಲಿಂಗಕ್ಕೆ ಸಾವಧಾನಭಕ್ತಿಯುತನಾಗಿ ನಿರಹಂಕಾರವೆಂಬ ಹಸ್ತದಿಂದ ರೂಪಪದಾರ್ಥವನ್ನು ತೆಗೆದುಕೊಂಡು ಶಿಕಾರ ಮಂತ್ರವನ್ನು ಸ್ಮರಿಸುತ್ತ ನೇತ್ರವೆಂಬ ಮುಖದಲ್ಲಿ ಸಮರ್ಪಿಸಿ ಆ ಭುಕ್ತಶೇಷವಾದ ಪ್ರಸಾದವನ್ನು ಭೋಗಿಸುತ್ತ ಸುಖಪರಿಣಾಮಿಯಾಗುವನೇ ಪ್ರಸಾದಿಸ್ಥಲಿಯೆನಿಸುವನು

೪. ಆದಿಶಕ್ತಿಯಿಂದೊಡಗೂಡಿದ ಜಂಗಮಲಿಂಗಕ್ಕೆ ಅನುಭವಭಕ್ತಿಯುಕ್ತನಾಗಿ ಸುಮನಸ್ಸೆಂಬ ಹಸ್ತದಿಂದ ಸ್ಪರ್ಶಪದಾರ್ಥವನ್ನು ತೆಗೆದುಕೊಂಡು ವಾಕಾರಮಂತ್ರವನ್ನು ಸ್ಮರಿಸುತ್ತ ತ್ವಗಿಂದ್ರಿಯವೆಂಬ ಮುಖದಲ್ಲಿ ಸಮರ್ಪಿಸಿ ಭುಕ್ತಾವಶಿಷ್ಟವಾದ ಆ ಪ್ರಸಾದವನ್ನು ಸೇವಿಸಿ ನಿತ್ಯಸುಖಪರಿಣಾಮಿಯಾಗವನೇ ಪ್ರಾಣಲಿಂಗಿಸ್ಥಲಿಯೆನಿಸುವನು.

೫, ಪರಾಶಕ್ತಿಯಿಂದೊಡಗೂಡಿರುವ ಪ್ರಸಾದಲಿಂಗಕ್ಕೆ ಆನಂದ ಎಂಬ ಭಕ್ತಿಯೊಡನೆ ಸುಜ್ಞಾನವೆಂಬ ಹಸ್ತದಿಂದ ಶಬ್ದಪದಾರ್ಥವನ್ನು ಗ್ರಹಣಮಾಡಿ ಯಕಾರ ಮಂತ್ರವನ್ನು ಸ್ಮರಿಸುತ್ತ ಶ್ರೋತ್ರೇಂದ್ರಿಯ ಎಂಬ ಮುಖದಲ್ಲಿ ಸಮರ್ಪಿಸಿ ಭುಕ್ತಾವಶಿಷ್ಟವಾದ ಆ ಪ್ರಸಾದವನ್ನು ಸೇವಿಸಿ ನಿತ್ಯಸುಖಪರಿಣಾಮವುಳ್ಳವನೇ ಶರಣಸ್ಥಲಿಯೆನಿಸುವನು.

೬. ಚಿಚ್ಛಕ್ತಿಯುಕ್ತವಾದ ಮಹಾಲಿಂಗಕ್ಕೆ ಸಮರಸಭಕ್ತಿಯಿಂದೊಡಗೂಡಿ ಸದ್ಭಾವ ಎಂಬ ಹಸ್ತದಿಂದ ತೃಪ್ತಿಪದಾರ್ಥವನ್ನು ಗ್ರಹಣಮಾಡಿ ಪ್ರಣವಮಂತ್ರವನ್ನು ಸ್ಮರಿಸುತ್ತ ಮನೋರೂಪವಾದ ಮುಖದಲ್ಲಿ ಸಮರ್ಪಿಸಿ ಭುಕ್ತಾವಶಿಷ್ಟವಾದ ಆ ಪ್ರಸಾದವನ್ನು ಸೇವಿಸಿ ನಿತ್ಯಸುಖಪರಿಣಾಮಿಯಾಗುವನೇ ಐಕ್ಯಸ್ಥಲಿಯೆನಿಸುವನು.

ನಾಲ್ಕುದಳದ ಆಧಾರಚಕ್ರವೆಂಬ ರತ್ನಮಂಟಪದಲ್ಲಿ ಪೃಥ್ವೀತತ್ವಾಭಿಮಾನಿಯಾದ ಆಚಾರಲಿಂಗಕ್ಕೆ ಆನಂದವೆಂಬ ಜಲವನೆರೆದು ಸುಖವೆಂಬ ಸುಗಂಧವ ಲೇಪಿಸಿ ಚಿತ್ತವೆಂಬ ಅಕ್ಷತೆಯನ್ನಿಟ್ಟು ವ. ಶ. ಷ. ಸ. ಎಂಬ ನಾಲ್ಕು ಬೀಜಾಕ್ಷರಗಳೆಂಬ ಪೂಮಾಲೆಯಂಧರಿಸಿ, ಪೃಥ್ವಿಯ ಪೀತವರ್ಣವೆಂಬ ಜ್ಯೋತಿಯ ಬೆಳಗಿ, ಜಾಗ್ರದವಸ್ಥೆಯೆಂಬ ಪಿತಾಂಬರವನುಡಿಸಿ, ನಿಷ್ಕಾಮವೆಂಬ ಅಭರಣವನಲಂಕರಿಸಿ, ಸುಗಂಧವೆಂಬ ಧೂಪವಬೀಸಿ, ಭಕ್ತಿಯೆಂಬ ಭಕ್ಷ್ಯವ ನಿವೇದಿಸಿ ಶ್ರದ್ಧೆಯೆಂಬ ತಾಂಬೂಲವನರ್ಪಿಸುವುದೇ ಆಚಾರಲಿಂಗದ ಪೂಜೆಯು.

ಆರುದಳದ ಸ್ವಾಧಿಷ್ಠಾನವೆಂಬ ಸಿಂಹಾಸನದಲ್ಲಿ ಮಂಡಿಸಿರುವ ಜಲತತ್ವಾಭಿಮಾನಿಯಾದ ಗುರುಲಿಂಗಕ್ಕೆ ಪರಿಣಾಮವೆಂಬ ಉದಕದಿಂದ ಸ್ನಾನಮಾಡಿಸಿ ಆನಂದವೆಂಬ ಗಂಧವ ಲೇಪಿಸಿ, ಬುದ್ಧಿಯೆಂಬ ಅಕ್ಷತೆಯನಿಟ್ಟು ಲ, ಭ. ಮ. ಯ. ರ. ಲ. ಎಂಬ ಆರು ಬೀಜಾಕ್ಷರಗಳೆಂಬ ಪುಷ್ಪಮಾಲಿಕೆಯ ಧರಿಸಿ, ಸುವಾಸನೆಯೆಂಬ ಧೂಪವ ಬೀಸಿ, ಶ್ವೇತವರ್ಣವೆಂಬ ಕರ್ಪೂರವ ಬೆಳಗಿ, ಸ್ವಪ್ನಾವಸ್ಥೆಯೆಂಬ ಪೀತಾಂಬರವ ನುಡಿಸಿ ಆಕ್ರೋಪವೆಂಬ ಆಭರಣವನಿಕ್ಕಿ ಸುರುಚಿಯೆಂಬ ನೈವೇದ್ಯವನರ್ಪಿಸಿ, ನಿಷ್ಠೆಯೆಂಬ ತಾಂಬೂಲವನೀಡಿ ಆನಂದಿಸುತ್ತಿರುವುದೇ ಗುರುಲಂಗದ ಪೂಜೆಯು.

ಹತ್ತು ದಳದ ಮಣಿಪೂರಕವೆಂಬ ಪೀಠದಲ್ಲಿ ವಿರಾಜಿಸುತ್ತಿರುವ ತೇಜಸ್ತತ್ವಾಭಿಮಾನಿಯಾದ ಶಿವಲಿಂಗಕ್ಕೆ ಪರಮಾನಂದವೆಂಬ ಜಲವನೆರೆದು ನಿರಹಂಕಾರವೆಂಬ ಗಂಧವಲೇಪಿಸಿ ಅಹಂಕಾರವೆಂಬ ಅಕ್ಷತೆಯನ್ನಿಟ್ಟು,

ಡ. ಢ. ಣ. ತ. ಥ. ದ. ಧ. ನ. ಪ. ಫ. ಎಂಬ ಹತ್ತೆಸಳ ಮಾಲಿಕೆಯಧರಿಸಿ ಸದ್ವಾಸನೆಯೆಂಬ ಧೂಪವ ಬೀಸಿ, ರಕ್ತವರ್ಣವೆಂಬ ಕರ್ಪೂರವ ಹಚ್ಚಿ, ಸುಷುಪ್ತ್ಯವಸ್ಥೆಯೆಂಬ ವಸ್ತ್ರವ ಹೊದ್ದಿಸಿ, ನಿರ್ಮಲವೆಂಬ ಆಭರಣವತೊಡಿಸಿ ಸುರೂಪವೆಂಬ ನೇವೇದ್ಯವನರ್ಪಿಸಿ, ಅವಧಾನವೆಂಬ ತಾಂಬೂಲವನಿತ್ತು ಆನಂದಿಸುವುದೇ ಶಿವಲಿಂಗದ ಪೂಜೆಯು.

ಹನ್ನೆರಡುದಳದ ಅನಾಹತಚಕ್ರವೆಂಬ ಮಂಟಪದಲ್ಲಿ ಮೂರ್ತಿಗೊಂಡ ವಾಯುತತ್ವಾಭಿಮಾನಿಯಾದ ಜಂಗಮಲಿಂಗಕ್ಕೆ ಶಾಂತಿಯೆಂಬ ಜಲವನೆರೆದು ನಿರಹಂಕಾರವೆಂಬ ಗಂಧವಧರಿಸಿ ಕವರ್ಗ, ಚವರ್ಗ, ಟ. ಠ. ಎಂಬ ಹನ್ನೆರಡು ಬೀಜಾಕ್ಷರಗಳೆಂಬ ಪುಷ್ಪಮಾಲೆಯನರ್ಪಿಸಿ, ಸದ್ವಾಸನೆಯೆಂಬ ಧೂಪವ ಬೀಸಿ ಮಾಂಜಿಷ್ಠವರ್ಣವೆಂಬ ಕರ್ಪೂರವಹಚ್ಚಿ ತುರೀಯಾವಸ್ಥೆಯೆಂಬ ವಸ್ತ್ರವನಾಚ್ಛಾದಿಸಿ, ನಿರ್ಮೋಹವೆಂಬ ಆಭರವಣನಿಕ್ಕಿ ಸುಸ್ಪರ್ಶವೆಂಬ ನೈವೇದ್ಯವನರ್ಪಿಸಿ ಅನುಭವವೆಂಬ ತಾಂಬೂಲವ ನೀಡಿ ಭೇದಭಾವವಳಿದು ಆನಂದಿಸುವುದೆ ಜಂಗಮಲಿಂಗದ ಪೂಜೆಯು.

ಹದಿನಾರುದಳದ ವಿಶುದ್ಧಿಚಕ್ರವೆಂಬ ಪೀಠದಲ್ಲಿ ಶೋಭಿಸುತ್ತಿರುವ ಆಕಾಶತತ್ವಾಭಿಮಾನಿಯಾದ ಪ್ರಸಾದಲಿಂಗಕ್ಕೆ ಶಮವೆಂಬ ಜಲವನೆರೆದು ದಮವೆಂಬ ಗಂಧವ ಲೇಪಿಸಿ, ಶಾಂತಿಯೆಂಬ ಅಕ್ಷತೆಯನಿಟ್ಟು ಹದಿನಾರು ಸ್ವರಗಳೆಂಬ ಪುಷ್ಪಮಾಲೆಯ ಧರಿಸಿ, ಸದ್ವಾಸನೆಯೆಂಬ ಧೂಪವ ಬೀಸಿ ನೀಲವರ್ಣವೆಂಬ ಕರ್ಪೂರವ ಹಚ್ಚಿ ತುರೀಯಾತೀತಾವಸ್ಥೆಯೆಂಬ ವಸ್ತ್ರವಹೊದ್ದಿಸಿ ನಿರ್ವೈರವೆಂಬ ಆಭರಣವಧರಿಸಿ ಸುಶಬ್ದವೆಂಬ ನೈವೇದ್ಯವನರ್ಪಿಸಿ, ಆನಂದವೆಂಬ ತಾಂಬೂಲವ ನೀಡಿ, ಭೇದಭಾವವಡಗಿ ಆನಂದಿಸುತ್ತಿಹುದೇ ಪ್ರಸಾದಲಿಂಗದ ಪೂಜೆಯು.

ಎರಡು ದಳದ ಆಜ್ಞಾಚಕ್ರವೆಂಬ ರತ್ನಪೀಠದಲ್ಲಿರ್ಪ ಮಹಾಲಿಂಗಕ್ಕೆ ಆನಂದವೆಂಬ ಜಲವನೆರೆದು ಶಾಂತಿಯೆಂಬ ಗಂಧವಧರಿಸಿ ಸದ್ಭಾವನೆಂಬ ಅಕ್ಷತೆಯನಿಕ್ಕಿ ಹಂ. ಸಂ. ಎಂಬ ಬೀಜಾಕ್ಷರದ ಪೂಮಾಲಿಕೆಯನರ್ಪಿಸಿ, ಸದ್ವಾಸನೆಯೆಂಬ ಧೂಪವ ಬೀಸಿ ಮಾಣಿಕ್ಯವರ್ಣವೆಂಬ ಕರ್ಪೂರವಬೆಳಗಿ ನಿರವಸ್ಥೆ

ಯೆಂಬ ವಸ್ತ್ರ ಧರಿಸಿ ನಿರ್ಮಾಲ್ಯವೆಂಬ ಆಭರಣವ ಧರಿಸಿ, ತೃಪ್ತಿಯೆಂಬ ನೈವೇದ್ಯವನರ್ಪಿಸಿ, ಸಮರಸವೆಂಬ ತಾಂಬೂಲವನರ್ಪಿಸಿ ಶಿವ ತಾದಾತ್ಮ್ಯಳಿ ಬಲಿದು ಆನಂದಿಸುವುದೇ ಮಹಾಲಿಂಗದ ಪೂಜೆಯು.

ಹೀಗೆ ಭೋಜ್ಯವಾದ ಅನ್ನಾದಿಗಳು ಆಚಾರಲಿಂಗಕ್ಕೂ ಪೇಯವಾದ ಕ್ಷೀರಾದಿಗಳು ಗುರುಲಿಂಗಕ್ಕೂ, ಶಿವಲಿಂಗ, ಬಿಹಿಗೆ ಭಕ್ಷ್ಯಗಳಾದ ಕಡಬು, ಹೋಳಿಗೆ, ಉಂಡೆ ಮಂತಾದವು (ಅಪೂಪಪಟಕಾದಿ)ಗಳು ಜಂಗಮಲಿಂಗಕ್ಕೂ ಜೋಷ್ಯ. ಪೀಯೂಷಾದಿಗಳು ಪ್ರಸಾದಲಿಂಗಕ್ಕೂ ಲೇಹ್ಯರಸಾಯನಾದಿಗಳು ಮಹಾಲಿಂಗಕ್ಕೂ ಕ್ರಮವರಿತು ಸಮರ್ಪಿಸಿ ಅವಶಿಷ್ಟವಾದ ಆ ಪ್ರಸಾದವನು ಭೋಗಿಸುತ್ತ ಸುಖಪರಿಣಾಮವುಳ್ಳವನಾಗುತ್ತಾನೆ.

ಇನ್ನು ಮಿಶ್ರಾರ್ಪಣವಿಧಾನವೆಂತೆಂದೊಡೆ

ಆಚಾರಲಿಂಗದಲ್ಲಿ ಅಂತರ್ಗತವಾದ ಆಚಾರಲಿಂಗಕ್ಕೆ ಮೂಲಕಂದಾಡ್ಡಿ ಗಂಧ ಸಮರ್ಪಣವನ್ನೂ ಆಚಾರಲಿಂಗಾಂತರ್ಗತವಾದ ಗುರುಲಿಂಗಕ್ಕೆ ವೃಕ್ಷ ವಲ್ಕಲಾದಿ ಗಂಧಸಮರ್ಪಣವನ್ನೂ ಆಚಾರಲಿಂಗಾಂತರ್ಗತವಾಪ ಶಿವಲಿಂಗಕ್ಕೆ ಕುಟ್ಮಲಾದಿ (ಮೊಗ್ಗು) ಗಂಧಸರ್ಮಣವನ್ನೂ ಆಚಾರ ಲಿಂಗಾಂತರ್ಗತವಾದ ಜಂಗಮ ಲಿಂಗಕ್ಕೆ ಫಲಾದಿಗಂಧ ಸಮರ್ಪಣವನ್ನೂ ಆಚಾರಲಿಂಗಾಂತರ್ಗತ ಪ್ರಸಾದಲಿಂಗಕ್ಕೆ ಫಲಾದಿಗಂಧ ಸಮರ್ಪಣವನ್ನೂ ಆಚಾರಲಿಂಗಾಂತರ್ಗತ ಮಹಾಲಿಂಗಕ್ಕೆ ಸರ್ವಗಂಧವನ್ನೂ ಸಮರ್ಪಿಸಿ ಸುಖಪರಿಣಾಮಿಯಾಗುವನು.

ಗುರುಲಿಂಗಾಂತರ್ಗತವಾದ ಆಚಾರಲಿಂಗಕ್ಕೆ ಮಧುರ ರಸವನ್ನೂ, ಗುರು ಲಿಂಗಾಂತರ್ಗತವಾದ ಗುರುಲಿಂಗಕ್ಕೆ ಕಷಾಯರಸವನ್ನೂ ಗುರು ಲಿಂಗಾಂತರ್ಗತವಾದ ಶಿವಲಿಂಗಕ್ಕೆ ಕಟುರಸವನ್ನೂ ಗುರುಲಿಂಗಾಂತರ್ಗತವಾದ ಜಂಗಮಲಿಂಗಕ್ಕೆ ಆಮ್ಲರಸವನ್ನೂ ಗುರುಲಿಂಗಾಂತರ್ಗತವಾದ ಪ್ರಸಾದಲಿಂಗಕ್ಕೆ ತಿಕ್ತರಸವನ್ನೂ ಗುರುಲಿಂಗಾಂತರ್ಗತಮಹಾಲಿಂಗಕ್ಕೆ ಲವಣರಸವನ್ನೂ ಸಮ ರ್ಪಿಸಿ ಆ ಭುಕ್ತಶೇಷವನ್ನೂ ಸೇವಿಸಿ ಸುಖ ಪರಿಣಾಮಿಯಾಗುವನು.

ಶಿವಲಿಂಗಾಂತರ್ಗತವಾದ ಆಚಾರಲಿಂಗಕ್ಕೆ ಪೀತರೂಪವನ್ನೂ, ಶಿವಲಿಂ ಗಾಂತರ್ಗತವಾದ ಗುರುಲಿಂಗಕ್ಕೆ ಶ್ವೇತರೂಪವನ್ನೂ ಶಿವಲಿಂಗಾಂತರ್ಗತವಾದ

ಶಿವಲಿಂಗಕ್ಕೆ ಹರಿತರೂಪವನ್ನೂ ಶಿವಲಿಂಗಾಂತರ್ಗತವಾದ ಜಂಗಮಲಿಂಗಕ್ಕೆ ರಕ್ತರೂಪವನ್ನೂ ಶಿವಲಿಂಗಾಂತರ್ಗತವಾದ ಪ್ರಸಾದಲಿಂಗಕ್ಕೆ ನೀಲರೂಪವನ್ನೂ ಶಿವಲಿಂಗಾಂತರ್ಗತವಾದ ಮಹಾಲಿಂಗಕ್ಕೆ ಷಡ್ರಸವನ್ನೂ ಸಮರ್ಪಿಸಿ ಆ ಭುಕ್ತ ಶೇಷವನ್ನು ಸೇವಿಸಿ ಸುಖಪರಿಣಾಮಿಯಾಗುವನು.

ಪ್ರಸಾದಲಿಂಗಾಂತರ್ಗತವಾದ ಆಚಾರಲಿಂಗಕ್ಕೆ ತಾಳಮೃದಂಗಾದಿಗಳ ನಾದವನ್ನೂ ಪ್ರಸಾದಲಿಂಗಾಂತರ್ಗತವಾದ ಗುರುಲಿಂಗಕ್ಕೆ ತಂಬೂರಿ ವೀಣಾದಿ ತಂತ್ರೀನಾದವನ್ನೂ ಪ್ರಸಾದಲಿಂಗಾಂತರ್ಗತವಾದ ಶಿವಲಿಂಗಕ್ಕೆ ಡಂಡತಾಡಿತವಾದ ನಗಾರಿ ಮುಂತಾದ ವಾದ್ಯನಾದವನ್ನೂ ಪ್ರಸಾದಲಿಂಗಾಂತರ್ಗತವಾದ ಜಂಗಮಲಿಂಗಕ್ಕೆ ವೇಣಾಜನ್ಯನಾದವನ್ನೂ, ಪ್ರಸಾದಲಿಂಗಾಂತರ್ಗತವಾದ ಪ್ರಸಾದಲಿಂಗಕ್ಕೆ ಗೀತಾದಿನಾದವನ್ನೂ ಪ್ರಸಾದಲಿಂಗಾಂತರ್ಗತವಾದ ಮಹಾಲಿಂಗಕ್ಕೆ ಸಕಲನಾದಗಳನ್ನೂ ಸಮರ್ಪಿಸಿ ತತ್ಪ್ರಸಾದವನ್ನು ಸೇವಿಸಿ ನಿತ್ಯಸುಖ ಪರಿಣಾಮಿಯಾಗುವನು.

ಮಹಾಲಿಂಗಾಂತರ್ಗತವಾದ ಆಚಾರಲಿಂಗಕ್ಕೆ ಗಂಧತೃಪ್ತಿಯನ್ನೂ ಮಹಾಲಿಂಗಾಂತರ್ಗತವಾದ ಗುರುಲಿಂಗಕ್ಕೆ ರಸತೃಪ್ತಿಯನ್ನೂ ಮಹಾಲಿಂಗಾಂತರ್ಗತವಾದ ಜಂಗಮಲಿಂಗಕ್ಕೆಸ್ಪರ್ಶತೃಪ್ತಿಯನ್ನೂ ಮಹಾಲಿಂಗಾಂತರ್ಗತವಾದ ಪ್ರಸಾದಲಿಂಗಕ್ಕೆ ಶಬ್ದತೃಪ್ತಿಯನ್ನೂ ಮಹಾಲಿಂಗಾಂತರ್ಗತವಾದ ಮಹಾ ಸೇವಿಸಿ ನಿತ್ಯಸುಖಪರಿಣಾಮಿಯಾಗುವನು.

ಆಚಾರಲಿಂಗಕ್ಕೆ ಇಂದ್ರಿಯ ಮತ್ತು ಪದಾರ್ಥಗಳ ಸಂಯೋಗಕಾಲವನ್ನೂ, ಗುರುಲಿಂಗಕ್ಕೆ ವಿಷಯಜ್ಞಾನಕಾಲವನ್ನೂ. ಶಿವಲಿಂಗಕ್ಕೆ ವಿಷಯ ನಿಶ್ಚಯರೂಪಜ್ಞಾನ ಕಾಲವನ್ನೂ, ಜಂಗಮಲಿಂಗಕ್ಕೆ ವಿಷಯನಿಶ್ಚಯದಿಂದುಂಟಾದ ಸಂತೋಷಕಾಲವನ್ನೂ ಪ್ರಸಾದಲಿಂಗಕ್ಕೆ ನಿಶ್ಚಿತವಾದ ವಸ್ತು ಪ್ರಾಪ್ತಿ ಕಾಲವನ್ನೂ ಮಹಾಲಿಂಗಕ್ಕೆ ನಿಶ್ಚಿತವಾದ ವಸ್ತುಪ್ರಾಪ್ತಿಯ ಅನಂತರದಲ್ಲಿ

ಉಂಟಾಗುವ ಸುಖಾನುಭವದ ಕಾಲವನ್ನೂ ಸಮರ್ಪಿಸಿ ಲಿಂಗಭೋಗೋಪ ಭೋಗಿಯಾಗಿ ಪರಮಾನಂದಪೂರ್ಣನಾಗುವನು.

ಈ ಪ್ರಕಾರವಾಗಿ ಅರ್ಪಣವಿಧಾನವನ್ನರಿಯುವ ಶರಣನು ಜ್ಞಾನಸ್ವರೂಪನಾದ ಬ್ರಹ್ಮನಲ್ಲಿ ವಿಶ್ರಾಂತನಾಗಿರುವುದರಿಂದ ಆ ಶರಣನ ಶರೀರವೆಲ್ಲಾ ಮಂತ್ರಲಿಂಗರೂಪವೇ ಆಗಿರುತ್ತದೆಂದು ಶಿವಾಗಮವು ಘೋಷಿಸುತ್ತಿರುವದು. ಹೇಗೆಂದರೆ—

ಓಂಕಾರೋ ವದನಂ ದೇವಿ ನಮಃ ಕಾರೌ ಭುಜದ್ವಯಂ /
ಶಿಕಾರೋ ದೇಹಮಧ್ಯಂ ಸ್ಯಾದ್ವಾಯಕಾರೌ ಪದದ್ವಯಂ ||
ಪೀಠಂ ಜಾನ್ವಾದಿ ಪರ್ಯಂತಮಾನಾಭೇರ್ಮಧ್ಯಮಾರಿತಂ |
ಹೃದಯಾಂತಂ ವರ್ತುಲಂ ಸ್ಯಾತ್ ಕಂಠಾಂತಂ ಗೋಮುಖಂ ತಥಾ ||
ಭ್ರೂಮಧ್ಯಾಂತಂ ಲಿಂಗಕಂಠೋ ಮಸ್ತಕೋ ಲಿಂಗಮಸ್ತಕಃ |

ಎಲೈ ಪಾರ್ವತಿಯೆ ! ಇಂಥ ಲಿಂಗಭೋಗೋಪಭೋಗಿಯಾದ ಶಿವಶರಣನ ಶರೀರದಲ್ಲಿರುವ ಆರು ಅವಯವಗಳಲ್ಲಿ ಮುಖವು ಓಂಕಾರಸ್ವರೂಪವಾಗಿರುವದು. ಎರಡು ತೋಳುಗಳು "ನಮಃ" ಎಂಬ ಮಂತ್ರಾಕ್ಷರಸ್ವರೂಪಗಳಾಗಿರುವವು. ಕಂಠದಿಂದ ತೊಡೆಗಳವರೆಗೆ ಇರುವ ಶರೀರದ ಮಧ್ಯಭಾಗವು "ಶಿಕಾರ" ಎಂಬ ಮಂತ್ರಾಕ್ಷರಸ್ವರೂಪವಾಗಿರುವುದು. ಶರೀರದ ಕೆಳಗಿರುವ ಎರಡು ಪಾದಗಳು "ವಾ, ಯ" ಎಂಬ ಮಂತ್ರಾಕ್ಷರಸ್ವರೂಪಗಳಾಗಿರುವವು. ಪಾದದಿಂದ ಮೊಣಕಾಲಿನವರೆಗಿರುವ ಅವಯವವು ಲಿಂಗದ ಪೀಠವೆನಿಸುವದು. ಮೊಣಕಾಲಿನಿಂದ ಹೊಕ್ಕಳಿನವರೆಗಿರುವ ಅವಯುವು ಲಿಂಗದ ಮಧ್ಯವಾಗಿರುವದು, ಹೊಕ್ಕಳಿನಿಂದ ಎದೆವರೆಗೆ ಇರುವ ಅವಯುವವು ಲಿಂಗದ ವರ್ತುಲವಾಗಿರುವದು. ಎದೆಯಿಂದ ಕುತ್ತಿಗೆಯವರೆಗೆ ಇರುವ ಅವಯವವು ಲಿಂಗದ ಗೋಮುಖವಾಗಿರುವುದು. ಕುತ್ತಿಗೆಯಿಂದ ಹುಬ್ಬಿನವರೆಗೆ ಇರುವ ಅವಯವವು ಲಿಂಗದ ಕಂಠವಾಗಿರುವುದು. ಈ ಶರಣನ ಮಸ್ತಕವೇ ಲಿಂಗದ ಮಸ್ತಕವಾಗಿರುವದು.

ಹೀಗೆ ಶಿವಶರಣನ ಶರೀರವು ಸಹ ಮಂತ್ರಮಯ ಲಿಂಗರೂಪವೇ ಆದುದರಿಂದ ಇನ್ನು ಬೇರೆ ಅನುಷ್ಠಿಸಬೇಕಾದುದಾವುದೂ ಇಲ್ಲವು. ಹೀಗೆ ಶಿವಶರಣನು ಘನಲಿಂಗೈಕ್ಯಲೋಲನಾಗಿಯೂ ಅಖಂಡಾಮರ್ಶಪರಿಬೃಂಹಿತನಾಗಿಯೂ ಇರುವನು. ಇಂಥ ಷಟ್‌ಸ್ಥಲ ಸಿದ್ಧಿಯನ್ನು ಪಡೆದ ವೀರಶೈವನೇ ಸರ್ವೋತ್ಕೃಷ್ಟನು. ಇದೇ ಅಭಿಪ್ರಾಯವನ್ನು

ಕ್ರಿಮಿಕೀಟಪತಂಗೇಭ್ಯಃ— .....
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ ಭವೇತ್ ।
ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ ॥

ಎಂದು ಹಿಂದೆ ಹೇಳಿದ ಶಂಕರಸಂಹಿತಾವಚನದಂತೆ ಭಕ್ತಾದಿ ಷಡ್ವಿಧೋಪಾಸಕರು ಆಚಾರಾದಿ ಷಡ್ವಿಧಲಿಂಗಗಳ ಆರಾಧನೆಯಿಂದ ಷಟ್‌ಸ್ಥಲ ಬ್ರಹ್ಮಗಳೆಂದು ಹೇಳಿಸಿಕೊಳ್ಳುತ್ತಾರೆ. ಇವರಿಗೆ ಸಮಾನರು ಮೂರು ಲೋಕಗಳಲ್ಲಿಯೂ ಇಲ್ಲ. ಇವರೇ ಸರ್ವವಂದ್ಯರು, ಸರ್ವಪೂಜ್ಯರು, ಇವರೇ ಪ್ರಸಾದಮುಕ್ತರೆಂಬಲ್ಲಿಗೆ

ಕನ್ನಡ ವೀರಶೈವಾನಂದ ಚಂದ್ರಿಕೆಯ ವೀರಶೈವೋತ್ಕೃಷ್ಟತ್ವ ನಿರೂಪಣವೆಂಬ ಇಪ್ಪತ್ತುನಾಲ್ಕನೆಯ ಪ್ರಕರಣವುಳ್ಳ ವಾದಕಾಂಡವು ಪರಿಸಮಾಪ್ತವಾದುದು.

ಕನ್ನಡ ವೀರಶೈವಾನಂದ ಚಂದ್ರಿಕೆಯ ವೀರಶೈವೋತ್ಕೃಷ್ಟತ್ವ ನಿರೂಪಣೆಯು ಮುಗಿದುದು.

ಈ ಹಿಂದೆ ಉದಹರಿಸಿರುವ ಅಪ್ರಾಕೃತ ವೀರಶೈವಧರ್ಮವಾದ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಸಿದ್ಧಾಂತತೆಯಂ ೧೦೧ ಸ್ಥಲದ ನೀತಿ ಧರ್ಮದಂತೆಯು ಆದಿಯಿಂದಲು ಯಾರಸಹಾಯವು ಇಲ್ಲದೆ ನಿರಪೇಕ್ಷ ಬುದ್ಧಿಯಿಂದ ಪ್ರತಿದಿನದ ತ್ರಿಕಾಲ ಪೂಜಾ ನಿತ್ಯಾನೈಮಿತ್ತಿಕಾದಿ ಎಲ್ಲಾ ಸೇವೆಗೆಳನ್ನು ಏನೇ ಕಷ್ಟ ಬಂದರೂ ಸಹಿಸಿಕೊಂಡು ಮೂಲಪುರುಷ ವೃಷಾಚಾರ್ಯ ಪಂಚಿಕಂತೆ ಚನ್ನಮಲ್ಲಿಕಾರ್ಜುನದೇವರಿಡು ತಹಲ್‌ವರಿಗೆ ಮುಂದುವರಿಯುತ್ತಾ ಈ ವಂಶದವರು ಬರುತ್ತಿರುವಲ್ಲಿ ಮೂರನೂರಐವತ್ತು ವರ್ಷಗಳು ಕಳೆದನಂತರ ಪ್ರಭುಗಳಾದ ಶ್ರೀ ಮುಮ್ಮಡಿ ಕೃಷ್ಣರಾಜ ವಡೆಯರವರು 1818ರಲ್ಲಿ ದರ್ಶನಾರ್ಥವಾಗಿ ದಯಮಾಡಿಸಿದ್ದಾಗ, ಇಲ್ಲಿಯ ಪರಿಸ್ಥಿತಿಯನ್ನು ತಿಳಿದು ತಿಂಗಳಿಗೆ ಎರಡು ವರಹದಂತೆ ಹನ್ನೆರಡು ತಿಂಗಳಿಗೆ ಆಗುವ ಇಪ್ಪತ್ತುನಾಲ್ಕು ವರಹದ ತಸ್ತೀಕನ್ನು ಪಡಿತರದೀಪಾರಾದನೆಗೆಂದು ಸನ್ನದು ಮೂಲಕ ಅಪ್ಪಣೆ ಕೊಡಿಸಿದಾಗ ಆಗಿದ್ದ ನಮ್ಮ ಹಿರಿಯ ಸಿದ್ದಲಿಂಗದೇವರೆಂಬುವವರು ಮಹಾಪ್ರಭುಗಳಲ್ಲಿ ಈ ತಸ್ತೀಕಿನಿಂದ ನಮ್ಮಗಳ ಕುಟುಂಬದ ಜೀವನ ಮಹಾಸ್ವಾಮಿಯ ಪಡಿತರ ದೀಪಾರಾದನೆಯಾಗುವುದು ಕಷ್ಟವಾಗಿರುವುದಲ್ಲದೆ ಸರಕಾರದವರು ಪ್ರತಿವರ್ಷ ಪ್ರತಿಗ್ರಾಮದ ಜಮೀನುಗಳನ್ನು ಯಾವ ಗ್ರಾಮ ನೌಕರರೂ ಇಲ್ಲದೆ ಧಾನ್ಯ ರೂಪದ ಹೊಂಗುತ್ತಿಗೆ ಹರಾಜು ಮಾಡಿ ಸವಾಲ್‌ದಾರರಿಗೆ ಗ್ರಾಮನಿಲ್ಲಿಸಿ ಅವರು ಸಾಗುವಳಿದಾರರಿಂದ ವಸೂಲ್ಮಾಡಿಕೊಂಡು ದಿನಸಿಯನ್ನು ಸರಕಾರಕ್ಕೆ ಕೊಡುತ್ತಾರೆ. ಪ್ರತಿವರ್ಷ ಯಾರು ಯಾವ ಜಮೀನನ್ನಾದರೂ ಸಾಗು ಮಾಡಬಹುದು. ಯಾರಿಗೂ ಖಾಯಂ ನಾವು ಆದಿಯಿಂದ ಜಮೀನು ಸಾಗುವಳಿ ಮತ್ತು ಶಿಷ್ಯಾರ್ಚನೆಯಿಂದ ಸೇವೆ ಸಲ್ಲಿಸುತ್ತಾ ಬಂದಿರುತ್ತೇವೆ. ನಾವು ಅನುಭವಿಸುತ್ತಾ ಬಂದಿರುವ ಜಮೀನುಗಳನ್ನು ಖಾಯಂ ಮಾಡಿಸಿಕೊಡಬೇಕೆಂದು ಕೇಳಿಕೊಂಡದ್ದರಿಂದ ಶ್ರೀ ಮಹಾಪ್ರಭುಗಳು 1823ರಲ್ಲಿ ಇವರ ಕಂದಾಯದ ಜಮೀನಿರಲಿ, ವಾರಸಾಗುವಳಿ ಜಮೀನಿರಲಿ, ಅಥವಾ ಗುತ್ತಿಗೆ ಜಮೀನಾಗಿರಲಿ, ಎಂಟು ವರಹ, ಏಳು ಹಣಕ್ಕಾಗುವಷ್ಟು ಜಮೀನಿಗೆ ಲಿಂಗ

ಮುದ್ರಾಶೀಲ ಹಾಕಿಸಿ ಖಾಯಂ ಮಾಡಿಕೊಟ್ಟಂತೆ ಸದರೀ ಜಮೀನುಗಳನ್ನು ಅನುಭವಿಸುತ್ತಾ ಬಂದಿರುತ್ತೇವೆ.

ಲಿಂಗಮುದ್ರಾ ಶೀಲಾ ಹಾಕಿಸುವುದು. ವೀರಶೈವ ತತ್ವದ ಪ್ರಕಾರ ಗ್ರಂಥಗಳಲ್ಲಿದೆ. ಮತ್ತ್ಯಾವುದಕ್ಕೂ ಹಾಕಿರುವ ದಾಖಲೆಯಲ್ಲಿ ಮತ್ತು ಹದಿನೈದನೇ ಶತಮಾನದ ಅಂತ್ಯದಲ್ಲಿದ್ದು ಗುಬ್ಬಿ ಮಲ್ಲಣಾರ್ಯರೆಂಬುವವರು ಬರೆದಿರುವ ವೀರಶೈವಾಮೃತ ಮಹಾಪುರಾಣದ ಏಳನೇ ವ್ಯಾಲ್ಯುಯಂ 15ನೇ ಅಧ್ಯಾಯದಲ್ಲಿ ವೀರಶೈವ ಧರ್ಮದ ಶೀಲಗಳಲ್ಲಿ ಲಿಂಗಮುದ್ರ ಶಿಲಾ ಹಾಕುವುದು ಎಂದು ವುದಹರಿಸುವುದಲ್ಲದೆ ಭಾರತ ಯುದ್ಧದಲ್ಲಿ ಭೀಷ್ಮಾಚಾರ್ಯರು ಸರಳ ಮಂಚ ಏರಿ ಇಷ್ಟಾಮರಣಿಗಳಾಗಿ ಪ್ರಾಣತ್ಯಾಗ ಮಾಡುವಾಗ ಅರ್ಜುನನಿಗೆ ಕುಮಾರ ಶರೀರವನ್ನು ಸ್ಮಶಾಣವಲ್ಲದ ಜಾಗದಲ್ಲಿ ಸಂಸ್ಕಾರ ಮಾಡಬೇಕು ಅಪ್ಪಣೆ ಮಾಡಿದಾಗ ಸದರಿ ಶವವನ್ನು, ಅರ್ಜುನನು ಬೆನ್ನಿಗೆ ಕಟ್ಟಿಕೊಂಡು, ಸ್ಮಶಾಣವಲ್ಲದ ಜಾಗವನ್ನು ಹುಡುಕುತ್ತಾ ಹೊರಟಾಗ ಆಕಾಶವಾಣಿಯು ಇರುವ ಭೂಮಿಯಲ್ಲಾ ಸ್ಮಶಾಣವೇ ಆಗಿರುತ್ತೆ ಎಲ್ಲಿ ಲಿಂಗಮುದ್ರೆ ಶಿಲೆ ಹಾಕಿರುತ್ತದೆಯೋ ಅದು ಪವಿತ್ರ ಸ್ಥಾನವೆಂದು ನುಡಿದಾಗ ಅಂಥಾ ಜಾಗದಲ್ಲಿ ಸಂಸ್ಕಾರ ಮಾಡಿದರೆಂದು ಇತಿಹಾಸ ಇದರಲ್ಲಿ 8 ಪುಟದಲ್ಲಿರುತ್ತೆ. ಕಾರಣ ಇವೆಲ್ಲಾ ಮಠದ ಜಮೀನುಗಳಾಗಿರುತ್ತ ಈ ಜಮೀನುಗಳೇ ಸದರಿ ಸಿದ್ಧೇಶ್ವರ ಸ್ವಾಮಿಯವರ ಹೆಸರಿನಲ್ಲಿರುವುದಕ್ಕೆ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಸಂಕಲ್ಪ ಶಿವಯೋಗಕ್ಕೆ ವಯ ಮಾಡಿಸುವ ಪೂರ್ವ ಆಗಿದ್ದ ಮೂಲ ಪುರುಷರ ಪಚ್ಚದ ಚಿಟ್ಟಗ ದೇವರು ಇವರ ತಮ್ಮ ವುಪಶಾಕಾಧಿಕಾರಿಗಳಾದ ಪಚ್ಚೆ ದೇವರಿಗೆ ಚನ್ನಮಲ್ಲಿಕಾರ್ಜುನ ಪುರವರ್ಗ ಪಡೆದಿದ್ದ ಆ ಮುಂದೆ ಬರಬಹುದಾದ ಎಲ್ಲಾ ಆಸ್ತಿಯು ಕುಟುಂಬದ ಆಸ್ತಿಗಳೆಲ್ಲಾ ಶ್ರೀ ಸಿದ್ಧೇಶ್ವರರ ಹೆಸರಿನಲ್ಲಿಯೆ ಖಾತೆಯಾಗಿ ಮುಂದುವರಿಯುವುದಕ್ಕೆ ಶಿಲಾಲೇಕವೆ ಸಾಕ್ಷಿಯಾಗಿರುತ್ತೆ.

ಆಗಿನ ಕಾಲದಲ್ಲಿ ಈಗಿನಂತೆ ಗ್ರಾಮ ನೌಕರರಿರಲಿಲ್ಲ 1845ರಲ್ಲಿ ಗ್ರಾಮ ನೌಕರರ ಹಕ್ಕುದಾರಿ ಲೀಸ್ಟು ತರಿಸಿಕೊಂಡು 1865ರಲ್ಲಿ ರಿಜಿಸ್ಟರ್ ಹಕ್ಕು ಲೀಸ್ಟು ತಯಾರಾಗಿ, ಜಾರಿಯಲ್ಲಿರುತ್ತೆ. ಗ್ರಾಮದ ಜಮೀನೆಲ್ಲಾ ಸರ್ವೆ ಸೆಟ್ಲ್‌ಮೆಂಟ್ ರಿಕಾರ್ಡಿನಲ್ಲಿ ನಮ್ಮ ಜಮೀನುಗಳನ್ನು ಚಕ್ಕುಬಂದಿ ಹೊಳ

ಪಡಿಸಿ ನಮೂದು ಮಾಡಿ ಅಗ್ಗೆ ಭಾಗಮಾಡಿಕೊಂಡು ಅನುಭವಿಸುತ್ತಿ
ನಮ್ಮ ಹಿರಿಯರ ಹೆಸರುಗಳನೆಲ್ಲಾ ಅದರಲ್ಲಿ ನಮೂದಿಸಿರುತ್ತೆ ಸುತ್ತು ಈ
ಪ್ರತಿವರ್ಷದ ಜಮಾಬಂದಿ ಎಂಟನೆ ನಂಬರು, ಇನಾಂತಿಯಲ್ಲಿ ಸದರೀ ಜಮೀ
ಗಳನೆಲ್ಲಾ ಪ್ರತಿವರ್ಷ ನಮೂದು ಮಾಡಿ ಅರ್ಚಕರು, ಅನುಭವಿಸು
ಪೂಜಾ ಮಾಡಿಕೊಂಡು ಹೋಗುತ್ತಿರುತ್ತಾರೆ ಪರಬಾಷೆಯಾಗಿಲ್ಲವೆಂದು ಬರೆ
ತ್ತಿದ್ದಾರೆ. ಈ ಕಾರಣದಿಂದ ಸದರೀ ಜಮೀನುಗಳನ್ನು ಅನುಭವಿಸುತ್ತ
ಎಷ್ಟೋ ಉತ್ಪನ್ನವಿದ್ದರೂ ನಂಜನಗೂಡು, ಮೇಲುಕೋಟೆ, ಶ್ರೀರಂಗಪಟ್ಟಣ
ಚಾಮುಂಡೇಶ್ವರಿ ದೇವಸ್ಥಾನಗಳಂತೆ ಮ್ಯಾನುಯಲ್ ಮುಂತಾದವ
ಮಾಡಿಕೊಂಡು ತಮ್ಮ ಖರ್ಚುಗಳನ್ನು ನಿಗದಿ ಮಾಡಿಕೊಂಡಿರುವಂತೆಯಾಗ
ಸಂಸ್ಥಾನದ ಇನ್ನಿತರ, ಮೇಜರ್ ಇನ್‌ಸ್ಟಿಟ್ಯೂಟ್‌ಗಳಂತಾಗಲಿ ಯಾವ ಪ್ರ
ಲಘವನ್ನು ಹೊಂದುತ್ತಿಲ್ಲವೆಂಬುದು ಸಾಕ್ಷಿಯಾಗಿರುತ್ತೆ.

ಹೀಗೆ ಸಾಗಿ ಬರುತ್ತಿರುವುದರಲ್ಲಿ ಈ ಸೇವೆಯನ್ನು ನೋಡಿ ಸಹಿಸಲಾ
ದೆಯೂ ಇದರ ಆಡಳಿತವನ್ನು ತನ್ನ ಅಧೀನ ಮಾಡಿಕೊಳ್ಳಬೇಕೆಂಬ ಅಸೂ
ಯಿಂದ ಈವೂರ ನಾರಣಯ್ಯಂಗಾರಿಯೆಂಬುವರು, ಇದೇ ವೂರಲ್ಲಿದ್ದ ಕೆಲ
ಅಜ್ಞಾಜನ ಲಿಂಗಾಯಿತರಿಗೆ ಎತ್ತಿ ಕಟ್ಟಿ ಇದರ ಉತ್ಪನ್ನ ದುರುಪಯೋಗ
ಗುತ್ತೆ. ಇದನ್ನು ಸರಕಾರದಮೇನೇಜುಮೆಂಟಿಗೆ ತೆಗೆದುಕೊಳ್ಳಬೇಕೆಂ
ಮೈಸೂರು ದೇಶವನ್ನು ಆಳುತ್ತಿದ್ದ ಇಂಗ್ಲೀಷರ ಚೀಪ್ ಕಮೀಷನ್‌ರೆಂ
ರಿಗೆ ಅರ್ಜಿ ಕೊಡಿಸಿದರು.

ಅದನ್ನು ವಿಚಾರ ಮಾಡಿ 1845ನೇ ಇಸವಿ ಸೆಪ್ಟಂಬರ್ 27ನೇ ತಾ
ಕಿನಲ್ಲಿ ಇದು ಖಾಸಗಿ ಮಠ ಮತ ಸಂಬಂಧವಾದ ವಿಚಾರ ಇದಕ್ಕೆ ಸರಕಾ
ಕೈಹಾಕುವುದಿಲ್ಲವೆಂದು ಆರ್ಡರ್ ಮಾಡಿದ್ದು ಇದೇ ವಿಚಾರವನ್ನು ಕುರಿ
ಬಂದಅರ್ಜಿಗಳು ಅಂದರೆ 1845ನೇ ನವಂಬರ್, 1846 ಮಾರ್ಚಿ, 18
ಮಾರ್ಚಿ, 1865 1882, ಈ ಸಮಯಗಳಲ್ಲೂ ಹಿಂದಿನ ಆರ್ಡರ
ಉದಹರಿಸಿರುತ್ತಾರೆ. ಹಾಗು ಸಹಿಸಲಾರದೆ 1888ರಲ್ಲಿ ವಿಚಾರಣೆ ನ
ಇದರ ಮೇಲ್ವಿಚಾರವನ್ನು ಸದರಿ ನಾರಣಐಂಗಾರರಿಗೆ ಒಪ್ಪಿಸಿ ಮೇಲ

ರ್ಟು ಮಾಡಿರಲಾಗಿ ಸದರಿ ಮಠದ ಮೇಲ್ವಿಚಾರವು ಹಿಂದೆಯೆ ಫೈಸಲ್
ತ್ತದೆಂದು ಇದಕ್ಕೆ ಸರಕಾರವು ಕೈಹಾಕುವುದಿಲ್ಲವೆಂದು ಆರ್ಡರ್ ಆಗಿ
ಗ 15 ತಿಂಗಳು ನಾರಣಐಂಗಾರ್‌ರಲ್ಲಿದ್ದ ಕಾಲಕ್ಕೆ 500 ರೂ. ವಳಗೆ
ನ್ನ ಬಂದಿದ್ದು ಕರ್ಚು ಜಾರ ಉಳಿದ ಮೊಬಲಗನ್ನು ಅರ್ಚಕರಿಗೆ ಅಂಚಿಕೆ
ಕೊಟ್ಟಿರುತ್ತೇನೆಂದು 1903ನೇ ಅಕ್ಟೋಬರ್ ತಿಂಗಳಲ್ಲಿ ತಾವು ಕೊಟ್ಟ
ಕೆಯಲ್ಲಿ ಹೇಳಿದ್ದಾರೆ, ಅದೇ ಕಾಲದಲ್ಲಿ ನಮ್ಮ ಹಿರಿಯರು ಇದು ಸರ
ಕ್ಕೆ ಸೇರತಕ್ಕದ್ದಲ್ಲ ನಮ್ಮ ಖಾಸಗಿ ಮಠವೆಂದು ಹಿಂದೆಯೇ ತೀರ್ಮಾನ
ಗಿರುತ್ತೆಂದು ವಗೈರೆ ಕೈಫಿಯತು ಕೊಟ್ಟು 1903 ಇಸವಿ, ಅಕ್ಟೋಬರ್
ನೇ ತಾರೀಕಿನ ದಿನ ತಮ್ಮಲ್ಲಿದ್ದ ದಾಕಲಾತೆಗಳನ್ನೆಲ್ಲಾ ಹೆಜ್ಜಬಿಟ್ ಮಾಡಿ
ಆಗ್ಗೆ ವರ್ಷಕ್ಕೆ ಎರಡು ನೂರು ರೂಪಾಯಿಗಿಂತ ಹೆಚ್ಚಿಗೆ ಉತ್ಪನ್ನವಿಲ್ಲ
ರೂ ಬೆಲೆಬಾಳತಕ್ಕ ಯಾವ ನಗನಾಣ್ಯಗಳು ಇಲ್ಲದಿದ್ದರೂ ಇದು ಲಿಂಗ
ಷ್ಟೆಯ ಗುರಿಯಾಗಿರದೆ ಸಮಾದಿಯ ಗದ್ದುಗೆಯಾಗಿದ್ದರು. ಇದರ ಪರಂ
ಮೇನು ಅನ್ನುವುದನ್ನು ವಿಚಾರಮಾಡಿ ತಿಳಿದುಕೊಳ್ಳದೆ ಈ ಸ್ಥಾನವನ್ನು
ರದೊ ಸಲೆಯ ಉದ್ದೇಶದಿಂದಲೋ ಉತ್ಪನ್ನ ದುರುಪಯೋಗವಾಗು
ಮೂ ಸರಕಾರದ ಮೇನೆಜ್‌ಮೆಂಟಿಗೆ ತೆಗೆದುಕೊಂಡು ಇರುತ್ತೇವೆಂದು
ರುಮಾಡಿ ಸದರಿ ಗದ್ದುಗೆಯ ಮೇಲ್ವಿಚಾರವನ್ನು ಸದರಿ ನಾರ್ಣಯ್ಯಂಗಾ
ವಪ್ಪಿಸಿ ಮುಂದುವರಿಸಿದ್ದು. ತುಂಬಾ ವಿಷಾದಕರವಾಗಿರುತ್ತದೆ. ಸರ
ವರು ಮೇಲ್ವಿಚಾರಕ್ಕೆ ತೆಗೆದುಕೊಂಡನಂತರ ಯಾವ ವಿಧವಾದ ಸಹಾ
ನ್ನು ಪುರೋವೃದ್ಧಿಯನ್ನು ಕೋರದೆ ನಿರಾಕರಿಸುತ್ತಾರೆಂಬುದಕ್ಕೆ ಈ ಕೆಳಗಿನ
ಯುಗಳು ಸಾಕ್ಷಿಯಾಗಿವೆ,

1 ಸರಕಾರದ ಮೇನೇಜಮೆಂಟಿಗೆ ತೆಗೆದುಕೊಂಡಾಗ ಇಲ್ಲಿದ್ದ ಆಸ್ತಿ
ಬ್ದಾರಿ ಏನೆಂಬುದಕ್ಕೆ ಏನೇನು ಇತ್ತು ಅನ್ನುವುದಕ್ಕೆ ಯಾವ ದಾಖ
ಲು ಇಲ್ಲ. ಮತ್ತು ಸೆಕ್ಯುರಿಟಿ ಜಾಮೀನು ಮುಂತಾದ್ದು ಇರಲಿಲ್ಲ.

2 ಇಲ್ಲಿಯ ಪ್ರತಿವರ್ಷದ ಉತ್ಪನ್ನ ಕರ್ಚು ಉಳಿದ ಶಿಲ್ಕು ತಹಲ್
ಇರುವ ಹಣಎಷ್ಟು ಎಂಬುದಕ್ಕೆ ಯಾವ ದಾಖಲೆಯು ಇರುವುದಿಲ್ಲ ಹಣ
ಇದೆಯೆನ್ನುವುದು ಗೊತ್ತಾಗುವುದಿಲ್ಲ.

3 1912 ಇಸವಿಯಲ್ಲಿ ತಮ್ಮ ಮಠಕ್ಕೆ ಅಂಟಿಕೊಂಡಿದ್ದ ತಮ್ಮ
ಮನೆಯ ಸೂರಿನ ನೀರನ್ನು ಮಠದ ಆವರಣಕ್ಕೆ ತಿರುಗಿಸಿದಾಗ ತಕರಾರು ನಡೆ
ಸಿದ್ದಕ್ಕೆ ಸಂಬಂಧಪಟ್ಟ ಸೇವಕವರ್ಗದ 5 ಜನ ಗಂಡಸರು, 4 ಜನ ಹೆಂಗಸರು
9 ಜನರ ಮೇಲೆ ಕ್ರಿಮಿನಲ್ ಕೇಸ್ ಮಾಡಿ ಅವರನ್ನು ಎದುರಿಸಿ ತಮ್ಮ ಕಾರ್ಯ
ವನ್ನು ಸಾಧಿಸಿಕೊಂಡು ಸದರಿ ಎಂಚಿನ ನೀರುಮಠದ ಆವರಣದಲ್ಲಿ ಬೀಳುತ್ತಿರು
ವುದು ನಿಂನಿಗೂ ಇರೇತ್ತದೆ. ನಾರಣಯ್ಯಂಗಾರ್ಯರು.

4 1919ರಲ್ಲಿ ಸದರಿ ನಾರಣಐಯ್ಯಂಗಾರರ ಮಗ ಕೃಷ್ಣಯ್ಯಂಗಾರ್
ಇದಕ್ಕೆ ಪಾರುಪತ್ತೆಗಾರರಾದಾಗ ಮಠದ ಆವರಣಕ್ಕೆ ತಿರುಗಲು ತಮ್ಮ ಮನೆ
ಯಿಂದ ಒಂದು ಬಾಗಿಲನ್ನು ಹೊಡೆದು ಇದ್ದಾಗ ತಕರಾರು ನಡೆದು ಡಪ್ಯುಟಿ
ಕಮಿಷನ್ನರು ಇದನ್ನು ಮುಚ್ಚಬೇಕೆಂದು ಆರ್ಡರ್ ಮಾಡಿದ್ದರು ಈ ತಹಲ್
ವರಿಗೆ ಹಾಗೆಯೆ ಇರುತ್ತದೆ.

5 ಈ ಬಾಗಿಲ ಮುಂಭಾಗದಲ್ಲಿದ್ದ ಆಗ್ಗೆ ಸಾವಿರಾರು ರೂ.ಬೆಲೆ ಬಾಳು
ತ್ತಿದ್ದ ಆನೇಕೆರೆ ಮಂಟಪ ಎಂಬುದನ್ನು ದುರಸ್ತು ಮಾಡಲು ಇರಿಸಾವೆ ಸಿದ್ಧ
ಲಿಂಗಯ್ಯನವರು, ಆನೇಕೆರೆ ಶೋಟಪ್ಪನವರು, ಕೀಲಾರದ ಸಿದ್ದಲಿಂಗಯ್ಯ
ಎಂಬುವರು ಸದರಿ ಕಟ್ಟಡವನ್ನು ಮುಪತ್ತಾಗಿ ರಿಪೇರಿ ಮಾಡಿಶಲು ಪರ್ಮಿಷ
ಕೇಳಿದರೆ ಕೂಡಲೆ ಇಲ್ಲಾ.

6 ಸದರಿ ಆನೇಕೆರೆ ಕಟ್ಟಡವನ್ನು ಕಿತ್ತು ಈ ಜಾಗವನ್ನು ಖುಲ್ಲಾ
ಮಾಡಿ ಬೇರೆಕಡೆ ಕಟ್ಟಿಸುತ್ತೇವೆಂದು ಸದರಿ ಕೃಷ್ಣಯ್ಯಂಗಾರರ ಅಣ್ಣ ವರದ
ಯ್ಯಂಗಾರರು ಸರಕಾರಕ್ಕೆ ಅರ್ಜಿ ಕೊಟ್ಟಿದ್ದವರ ಮೇಲೆ ರಿಕಾರ್ಡು ನಡೆದಾಗ
ಕೇಳಲಿಕ್ಕೆ ಆಗುವುದಿಲ್ಲ ಇಲ್ಲಿಯೆ ರಿಪೇರಿ ಆಗಬೇಕೆಂದು ಕಮಿಟಿಯವರು
ನಡೆಸಿದ್ದರು ಸದರಿ ಕಟ್ಟಡವನ್ನು ಸದರಿಯವರ ಕೆಡವಿಸಿ ಜಾಗಖುಲ್ಲ ಮಾಡಿ
ದಾಗ ಕಮಿಟಿಯವರು ರಿಪೋರ್ಟು ಮಾಡಿದರು ಕೇಳಿದವರೆ ಇಲ್ಲ ಸದರಿ ಜಾಗ
ದಲ್ಲಿ ತಾವು ಮಾಡಿರುವ ಬಾಗಿಲಿನಿಂದ ದನದ ಕಸ, ಹುಲ್ಲು, ಸೌದೆ, ಊಟ
ದೆಲೆ ಮುಂತಾದವನ್ನು ಹಾಕಲು ಅನುಕೂಲಮಾಡಿಕೊಂಡ ವಿಚಾರದಲ್ಲಿ ಮತ್ತು

ಈ ಜಾಗದಲ್ಲಿ ಬಾಳೆ ತೋಟಮಾಡಿಕೊಂಡ ವಿಚಾರದಲ್ಲೂ ದಾಸೋಹಶಾಲೆಯ ಮುಂಭಾಗದಲ್ಲಿ ಅಸಹ್ಯಕರವಾದ ಗಲೀಜಾಗುತ್ತೆಂಬ ವಿಚಾರದಲ್ಲೂ ಕಮಿಟಿ ಯವರು ರಿಪೋರ್ಟು ಮಾಡಿದ್ದರು ಕೇಳುವವರು ಇಲ್ಲ ಈಗಲೂ ಹಾಗೆಯೇ ಇರುತ್ತೆ.

7 1927ನೇ ಇಸವಿಯಲ್ಲಿ ವೀರಶೈವ ಮಹಾಸಭೆಯವರು ಲಿಂಗಾಯತ್ ಪಾರುಪತ್ತೆಗಾರರನ್ನು ಮಾಡಿ ಐಂಗಾರರ ಪಾರುಪತ್ತೆಯನ್ನು ವಜಾ ಮಾಡಬೇಕೆಂದು ಠರಾವು ಪಾಸು ಮಾಡಿ ಸರಕಾರಕ್ಕೆ ತಿಳಿಸಿದಾಗ ಈತನು ಇರಲಿ ವಳಗೂ ಹೊರಗೂ ತಿರುಗತಕ್ಕ ಬಬ್ಬ ಲಿಂಗಾಯಿತ ಅಸಿಸ್ಟೆಂಟು ಪಾರು ಪತ್ತೆಗಾರರನ್ನು ಮಾಡಿರೆಂದು ಹುಕುಂ ಮಾಡಿ ಉತ್ಪನ್ನವೇ ಇಲ್ಲದಿದ್ದಾಗ ಇಬ್ಬರಿಗೆ ವೃಥಾ 5 ವರ್ಷ ಸಂಬಳ ಕೊಟ್ಟಿರುತ್ತಾರೆ.

8 1934ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ದಿವಾನ್ ಸಾಹೇಬ ರವರು ಖುದ್ದು ಸ್ಥಳಕ್ಕೆ ಬಂದು ಪರಾಂಬರಿಸಿ ಐಂಗಾರರ ಪಾರುಪತ್ಯವನ್ನು ತೆಗೆದು ಲಿಂಗಾಯತ್ ಪಾರುಪತ್ತೆಯನ್ನು ನೇಮಿಸಬೇಕೆಂದು ಹುಕುಂ ಮಾಡಿ ದಾಗ ರೂಲ್ಸಿಗೆ ವಿರೋಧವಾಗಿ ಸದರಿ ಕೃಷ್ಣಯ್ಯಂಗಾರರಿಗೆ 500 ರೂ. ಬೋನಸ್ಸು ಕೊಟ್ಟಿರುತ್ತಾರೆ.

9 ವಜ ಆಗಿದ್ದ ಕೃಷ್ಣಯ್ಯಂಗಾರರು ಮೇಲಿಂದ ಮೇಲೆ ತಕರಾರು ತಂದು ಕಾಡುತ್ತಿದ್ದಾಗ ಅನೇಕ ರಿಕಾರ್ಡು ನಡೆದರು, ಕೇಳುವವರೆ ಇಲ್ಲದೆ 116 ವರ್ಷದ ಕಾಟದಿಂದ ನೆಮ್ಮದಿಗೂ ಪುರೋಭಿವೃದ್ಧಿಗೂ ಭಂಗ ವಾಗಿ ಸೇವಕ ವರ್ಗದವರು ಎಷ್ಟೋ ಕಷ್ಟಗಳಿಗೆ ಗುರಿಯಾಗಿರುತ್ತಾರೆ ಕೊನೆಗೆ 1956ನೇ ಆಗಸ್ಟು ತಿಂಗಳಲ್ಲಿ ಟ್ರಿಬಿನಲ್ ಕೋರ್ಟಿನಿಂದ ಪರಿಹಾರ ದೊರೆತು ನೆಮ್ಮದಿಯಾಗುತ್ತಿದೆ.

10 ಮರ್ಕೋನ ಹಳ್ಳಿ ಜಲಾಶಯದಿಂದ ತೋಪು ಮೊಂತಾದ 49 ಎಕರೆ ಜಮೀನು ಮುಳಗಡೆಯಾದದ್ದಕ್ಕೆ ತಗ್ಗಿ ಕುಪ್ಪಕೆರೆ ಅಂಗಳದಲ್ಲಿ ತೋಟ

ಗ್ಋೋಸ್ಕರ 20 ಎಕರೆ ಜಮೀನನ್ನು ಸರಕಾರದವರು ಮುಫತ್ತಾಗಿ ಮಂಜೂರು ಮಾಡಿದ್ದರು ಸದರಿ ಕೃಷ್ಣಯಂಗಾರ್ಯರು ಖಾತೆ ಮಾಡಿ ಕಂದಾಯ ದಾಖಲು ಮಾಡಿದರೂ ಕಂದಾಯ ತೆಗೆದುಕೊಳ್ಳಲಿಲ್ಲ. ಅರಿಕೆ ಮಾಡಿದರೂ ಸರಕಾರ ದವರು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ಜಮೀನಿಗೆ ತೋಪು ಮತ್ತು ಉತ್ಪನ್ನ ಹೆಚ್ಚಿಸಲು 5000 ರೂ. ಸ್ವಂತ ಕರ್ಚಿನಿಂದ 1000 ತೆಂಗಿನ ಗಿಡವನ್ನು ಹಾಕಿಸುತ್ತೇವೆಂದು ಸದ್ಭಕ್ತರು ಸರಕಾರಕ್ಕೆ ಅರ್ಜಿ ಕೊಟ್ಟಾಗ ತೆಂಗಿನ ಗಿಡ ಕಟ್ಟಲು ಅವಕಾಶ ಕೊಡುವುದಿಲ್ಲ ಇತರೆ ನೆರಳಿನ ಗಿಡಗಳನ್ನು ಹಾಕಿರೆಂದು ಸರಕಾರದವರು ಎಂಡಾರ್ಸ್ ಮಾಡಿದರು, ಹಾಗೂ 1000 ರೂ. ಕರ್ಚಿನಿಂದ ಇತರ ಗಿಡಗಳನ್ನೆ ಹಾಕಿಸಿ ಕಪಾಡುತ್ತಿರುವಾಗ ಒಂದೇ ದಿನ ದನಕರುಗಳನ್ನು ನುಗ್ಗಿಸಿ ನಾಶ ಮಾಡಿದಾಗಲು ಯಾರು ವಿಚಾರ ಮಾಡಲಿಲ್ಲ,

11. ಸದರಿ ಮಠಕ್ಕೆ ಸಂಬಂಧಪಟ್ಟ ಆದಿಮೂಲ ಮಠಗಳಾದ ಗವಿ ಮಠ, ಚಿತ್ರಮಠ, ಮರ್ಕೋನಹಳ್ಳಿ ಜಲಾಶಯದಲ್ಲಿ ಮುಳಗಿದ್ದು ಅದರ ಅಕ್ವಿಜಿಷನ್ ಮೊಬಲಗು 10,000 ರೂ. ಗಳು ಸರಕಾರದಲ್ಲಿ ಡಿಪಾಜಿಟ್ ಇಟ್ಟಿರುವುದಕ್ಕೆ ಕಮಿಟಿಯವರು ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ವಸತಿಗೃಹವನ್ನು ಮಾಡಿಸಬೇಕೆಂದು ಅನೇಕಸಾರಿ ಸಿಫಾರಸ್ ಮಾಡಿದ್ದರೂ ಕೇಳಿದವರೇಯಿಲ್ಲ. ಇದನ್ನು ಬೇರೆ ಹಕ್ಕುದಾರದಿಂದ 1946ನೇ ಆಗಸ್ಟು 15ರ ದಿನ ಸಿದ್ಧಗಂಗಾ ಶ್ರೀಮಾನ್ ನಿರಂಜನ ಪ್ರಣವಸ್ವರೂಪಿಗಳಾದ ಶಿವ ಕುಮಾರಸ್ವಾಮಿಗಳು ಪೌರಾಪಟಣೆಯನ್ನು ಬರೆಸಿಕೊಂಡು ತಮಗೆ ಹಣ ಕೊಡಬೇಕೆಂದು ಕೇಳಿದಾಗ ತಕರಾರು ನಡೆಸಿ ಸಿವಿಲುಕೋರ್ಟ್ ಅಥಾರ್ಟಿ ಪಡೆದವರಿಗೆ ಸದರಿ ಮೊಬಲಗನ್ನು ಕೊಡಬೇಕೆಂದು ಸರಕಾರದ ತೀರ್ಮಾನ ವಾಗಿದ್ದಿತು, ಯಾವುದೋ ಮೋಸದ ರಿಕಾರ್ಡಿನಿಂದ ಮೂರುಸಾವಿರದ ಎರಡುನೂರು ರೂ ಗಳನ್ನು ಕರ್ಚು ಹಾಕಿಸಿರುವ ಬಾಬೆ ಸದರಿ ಕಾಪಿಯನ್ನು ಲಗತ್ತುಮಾಡಿ 27–2–59 ರಲ್ಲಿ ಕಮಿಷನ್ ಸಾಹೇಬರವರಿಗೆ ಕ್ರಮವಾದ ಅರ್ಜಿ ದಾಖಲ್ ಮಾಡಿದ್ದರೂ ತವಲ್‌ನವರಿಗೆ ಈ ವಿಚಾರವನ್ನು ಇತ್ಯರ್ಥ ಮಾಡಿದವರೇ ಇಲ್ಲ.

12. ಬಾರಿಬೆಲೆ ಬಾಳತಕ್ಕ ಪುರಾತನ ಕಾಲದಿಂದಲೂ ಬಂದಿರುವ ತೇರಿಗೆ ಉಲ್ಲು ಹಾಕಿಸುವುದು ಅಪಾಯಕರ. ಇದಕ್ಕೆ ತಗಡಿನಿಂದ ಮುಚ್ಚಳ ಹಾಕಿಸಬೇಕೆಂದು ಕ್ರಮ ಜರುಗಿಸಿ 7700 ರೂ.ಗಳನ್ನು ಇಂಜನಿಯರಿಂಗು ಡಿಪಾರ್ಟುಮೆಂಟಿಗೆ ಕೊಟ್ಟಿದ್ದು ತಹಲ್‌ವರವಿಗೆ ಏನಾಯಿತೆಂಬುದು 20 ವರ್ಷವಾದರೂ ಕೇಳಿದವರಿಲ್ಲ.

13. ಶ್ರೀ ಸ್ವಾಮಿಯವರ ಹೆಸರಿನ ಮೇಲೆ ಬೇಹಕ್ಕುದಾರರು ಹ್ಯಾಂ ಡುಬಿಲ್ಲುಗಳನ್ನು ಮಾಡಿಸಿ ಅಂಚಿ ಶ್ರೀ ಕ್ಷೇತ್ರಕ್ಕೆ ಬರತಕ್ಕ ಕಾಣಿಕೆ ಧನದಾನ್ಯ ಗಳನ್ನು ಮನಸ್ವಿ ವಸೂಲ್‌ಮಾಡುತ್ತಿರುವ ವಿಚಾರದಲ್ಲಿ ಶ್ರೀ ಜಯಬಸವ ಸ್ವಾಮಿಗಳೆಂಬುವರ ಮೇಲೆ ಕ್ರಮ ತೆಗೆದುಕೊಳ್ಳಲು ಪರ್ಮಿಷನ್ ಕೊಡಬೇ ಕೆಂದು ಕಮಿಟಿಯವರು ಸರಕಾರವನ್ನು ಕೇಳಿದಾಗ ತಾವೇ ಕ್ರಮ ತೆಗೆದು ಕೊಳ್ಳುವಹಾಗೆ ಹುಕುಂಮಾಡಿ ತಹಲ್‌ವರೆಗೆ ಯಾವ ಕ್ರಮವನ್ನು ಮಾಡದೆ ಮನಸ್ವಿ ದುರುಪಯೋಗವಾಗುತ್ತಿದೆ.

14. ಕರ್ಣಾಟಕದ 5 ಸಹಸ್ರಜನರು ಇದು ಮಠವೆಂದು ಮಾರ್ಪಾ ಡುಮಾಡಬೇಕೆಂದು ಅನೇಕ ಅರ್ಜಿಗಳನ್ನು ಕೊಟ್ಟಿದ್ದರು ಯಾವ ತನಿಖೆ ಯನ್ನು ಮಾಡದೆ ಟೆಂಪಲ್ ಎಂದೇ ತೀರ್ಮಾನಿಸಿದ್ದರಮೇಲೆ ಸಂಬಂಧಪಟ್ಟ ಅರಸಿಕೆರೆ ತಾಲ್ಲೂಕ್ ಹಾರನಳ್ಳಿ ಕೋಡಿಮಠದ ನಿ. ಪ್ರ. ಶ್ರೀ ನೀಲ ಲೋಚನ ಸ್ವಾಮಿಗಳು ಚೀಫ್ ಮಿನಿಸ್ಟರವರಿಗೆ ಅರ್ಜಿ ಹಾಕಿದ್ದು ಅವರು ಎನ್ ಕ್ವೈಯರಿಯಿಂದ ತಪಶೀಲ್ ರಿಪೋರ್ಟು ಮಾಡಬೇಕೆಂದು ಕೇಳಿದ್ದು ಸದರಿಯ ವರ ತನಿಖೆಯು ಕ್ರಮ ನಡೆದು ರಿಪೋರ್ಟು ಬಂದಿದ್ದರು. ಮೇಲಕ್ಕೆ ರಿಪೋರ್ಟು ಮಾಡದೆ ನಿರಾಕರಿಸಿರುತ್ತಾರೆ.

15. ಅಲ್ಲಿ ಕೆಲಸ ಮಾಡುತ್ತಿರುವ ಪಾರುಪತ್ತೇದಾರರು ಅನೇಕ ವಿಧ ದಿಂದ ದುರುಪಯೋಗಮಾಡುತ್ತಿದ್ದಾರೆ. ತನಿಖೆಯಿಂದ ಕ್ರಮಪಡಿಸಬೇಕೆಂದು ಅನೇಕ ಭಕ್ತರು ಸರಕಾರಕ್ಕೆ ಅರ್ಜಿ ಕೊಟ್ಟು ತಕ್ಕ ರಿಕಾರ್ಡು ನಡೆದು ಕಮೀ ಷನ್ನರಿಗೆ ರಿಪೋರ್ಟು ಹೋಗಿದ್ದರೂ ಸದರಿ ಪಾರುಪತ್ತೇದಾರರ ರಿಟ್ಟಿಗೆ

ಕಮಿಷನರ್‌ರವರು ಈತನ ಮೇಲಿನ ಆಪಾದನೆಯ ಪೂರುಪುಟ ರಿಪೋರ್ಟನ್ನು ಹೈಕೋರ್ಟಿಗೆ ಮಾಡಿದ್ದರೂ 63ನೇ ಏಪ್ರಿಲ್ 17 ರಿಂದ 20ರವರೆಗೆ ಕಮಿಷನ್ನಿನ ಆಫೀಸಿನವರೇ ತನಿಖೆನಡೆಸಿ ಅನೇಕ ಕುದುರ್ಪದುರ್ಗಗಳನ್ನೂ ದುರುಪಯೋಗವನ್ನು ನೋಟುಮಾಡಿಕೊಂಡು ಹೋಗಿದ್ದರೂ ತಹಲ್‌ವರಿಗೆ ಕ್ರಮ ಜರುಗಿಸಿ ಶುದ್ಧಿಮಾಡದಿರುವುದು ತುಂಬಾ ವಿಷಾಧಕರ.

16. ಸದರಿ ಗಡ್ಡುಗೆಯ ಪೂಜೆಯ ಸಹಾಯಕ್ಕೆಂದು . 6, 7 ಸಾವಿರ ಕರ್ಚಿನಿಂದ ಒಂದು ಹೂವಿನ ತೋಟವನ್ನು ಮಾಡಿಸಿ ಸಾಕಾದಷ್ಟು ಹೂವಿನ ಗಿಡಗಳನ್ನು ಹಾಕಿ ಅಭಿವೃದ್ಧಿಗೆ ತರುತ್ತಿರುವಲ್ಲಿ ಕಂಟ್ರಾಕ್ಟುದಾರನ ಫೈನಲ್ ಬಿಲ್ಲಿಗೆ ಕಮಿಷನ್ ರಿಪೋರ್ಟುಸಹ ಬಾರದೇ 20 ರೂ.ನ ಸಂಬಳದ ನೌಕರನನ್ನು ನೇಮಕಮಾಡಿ ಸದರಿ ಹೂವಿನ ತೋಟವನ್ನು ಮಿಷನ್ ನೀರಿನ ಸಹಾಯವಿದ್ದರೂ ಏನೊಂದು ಅಭಿವೃದ್ಧಿಗೆ ತರದೆ ನಾಶಮಾಡಿದ್ದನ್ನೂ ಕುರಿತು ಅನೇಕ ಅರ್ಜಿಗಳುನ್ನು ಕೊಟ್ಟರೂ ಕೇಳಿದವರೇ ಇಲ್ಲ. ಇರುವ ಮುಕ್ಕಾಲು ಎಕರೆ ಜಮೀನನ್ನು ಹುಲ್ಲುಗಾವಲು ಹರಾಜು ಕೇಳದರೆ ಹರಾಜಿಗೆ ಕೊಟ್ಟು 40 ರೂ. ಸವಾಲು ಬಂದು ಡಿಪಾಜಿಟ್ಟುನಲ್ಲಿದ್ದರೂ ಸಂಬಳವನ್ನು ಕೊಡುತ್ತಿದ್ದರೆ ತನಿಖೆಯನ್ನು ಮಾಡಿಲ್ಲ.

17. ಇಲ್ಲಿಯ ಸಾರ್ವಜನಿಕರ ಉಪಯೋಗಕ್ಕಾಗಿ ಅನೇಕ ಕೆಲಸಗಳ ಎಸ್ಟಿಮೇಟನ್ನು ಮಂಜೂರುಮಾಡಿಸಿದ್ದಗೂ ಸಿಲ್ಕಿದಲ್ಲಿ ಬೇಕಾದಷ್ಟು ಹಣವಿದ್ದರೂ ಜಾರಿಗೆತಂದು ಪುರೋಭಿವೃದ್ಧಿಯನ್ನು ತೋರಿರುವುದಿಲ್ಲ.

18. ಇಲ್ಲಿಯ ಪುರೋಭಿವೃದ್ಧಿಯನ್ನು ಭಕ್ತಾದಿಗಳು ಧರ್ಮಾರ್ಥವಾಗಿ ಮಾಡಿಸಬೇಕೆಂದು ಮುಂದೆ ಬಂದು ಔದಾರ್ಯದಿಂದ ಮಾಡಿಸಿದರೆ ಅವರುಗಳಮೇಲೆ ಕ್ರಮ ಜರುಗಿಸಿ ಮುಂದೆಂದೂ ಈ ಕೆಲಸಕ್ಕೆ ಬಾರದಂತೆ ಧರ್ಮಕ್ಕೂ, ಉತ್ಸಾಹಕ್ಕೂ ಭಂಗ ತರುತ್ತಿದ್ದಾರೆ.

19. ಇದೇ 65ನೇ ಇಸವಿ ಏಪ್ರಿಲ್ ಒಂದನೇ ತಾರೀಖಿನಿಂದ 15 ತಾರೀಕಿನವರೆಗೆ ನಡೆಯಬೇಕಾಗಿದ್ದ ಶ್ರೀ ರಥೋತ್ಸವದ ಕಾರ್ಯಕ್ರಮವು

ಎಲ್ಲಾ ವಿಧದಿಂದಲೂ ಜಾತ್ರೆ ಸೇರಿದ್ದರೂ ವೃಥಾ ಗೊಂದಳತಂದು ಎಲ್ಲಾ ಉತ್ಪನ್ನವನ್ನೂ ವಾಪಸ್‌ಕೊಟ್ಟು ಶ್ರೀ ಕ್ಷೇತ್ರಕ್ಕೆ 12,000 ರೂ. ಮೇಲಿನ ಲುಕ್ಸಾನುಮಾಡಿ ಸಿಕ್ಕಿದವರು ತಿಂದು ಆಕಿರುವುದನ್ನೂ, ಲುಕ್ಸಾನು ಆಗಿರುವುದನ್ನೂ ಕೇಳುವವರೇ ಇಲ್ಲ.

ಇನ್ನೂ ಅನೇಕ ಮುಖ್ಯ ವಿಷಯಗಳಿದ್ದರೂ ಇಷ್ಟಕ್ಕೇ ನಿಲ್ಲಿಸುತ್ತೇವೆ. ಬೇಕಾದರೆ ಮೇಲ್ಕಂಡ ವಿಷಯಗಳಿಗೆಲ್ಲಾ ರಿಕಾರ್ಡುಗಳನ್ನು ಹಾಜರು ಪಡಿಸುತ್ತೇವೆ. ಈ ಎಲ್ಲಾ ಕಾರಣಗಳಿಂದಲೂ ಈ ಕ್ಷೇತ್ರವು ಸರಕಾರದ ಮೇಲ್ವಿಚಾರಣೆಯಲ್ಲಿರುವುದರಿಂದ ಯಾವ ಪ್ರಯೋಜನವೂ ಆಗದೆ ನಮ್ಮ ಉತ್ಪನ್ನವೆ ಸಾಕಾದಷ್ಟು ಇದ್ದರೂ ಕ್ಷೇತ್ರದ ಪುರೆದೇಭಿವೃದ್ಧಿಗೋಸ್ಕರ ಯಾವ ಕೆಲಸವನ್ನೂ ಮಾಡದೆ ನಿರಾಕರಿಸುತ್ತಾ ಮೇಲುವಿಚಾರದ ಸಂಕೊಲೆಯಲ್ಲಿ ಹಾಕಿಕೊಂಡಿರುವುದು ಕ್ಷೇತ್ರದ ಪುರೋವೃದ್ಧಿಗೂ ನೆಮ್ಮದಿಗೂ ತುಂಬಾ ತೊಂದರೆಯಾಗಿರುತ್ತಲ್ಲದೆ ಯಾವ ಸಹಾಯ ಆಗಿರುವುದಿಲ್ಲ.

ಇಷ್ಟು ಉತ್ಪನ್ನ ಬಂದು ಶೇಕರವಾಗುತ್ತಿದ್ದರೂ ಬೇರೆ ಕಡೆಗಳಲ್ಲಿ ಒಂದು ಮಠವಾಗಲಿ ಯಾವ ಯಾವ ಖರ್ಚು ಪಾಠಶಾಲೆ, ಬೋರ್ಡಿಂಗ್, ಅನ್ನಸಂತರ್ಪಣೆ ಮುಂತಾದ ಸಾರ್ವಜನಿಕ ಹಿತದೃಷ್ಟಿ ಇಟ್ಟದ್ದು ಖರ್ಚಾಗುತ್ತಿದೆ ಇಲ್ಲಿ ಸರಕಾರದವರು ಮಾಡಿಕೊಂಡಿರುವ ಎಷ್ಟಾಬ್ಲಿಷ್‌ಮೆಂಟು ವಿನಹ ಈ ಧರ್ಮ ಸಂಸ್ಥೆಗೆ ಆಗಬೇಕಾದ ಕಾರ್ಯಕರ್ತವೇನೆಂಬುದನ್ನು ಯಾರೂ ಪರಿಸೀಲಿಸಿಲ್ಲ. ಆರುಕಾಸು ಮೂರುಕಾಸು ಕೂಡಿಹಾಕಿ ಶ್ರೀ ಸಿದ್ದಲಿಂಗ ಶಿವಯೋಗಿಗಳ ಕುಟುಂಬರಕ್ಷಣೆ ಯಾಗಬೇಕಾದ್ದಿಲ್ಲ. ಧರ್ಮಸಂಸ್ಥೆಗೆ ತಕ್ಕಂಥಾ ಯಾವ ಒಂದು ಕಾರ್ಯಾಲೋಚನೆಯಿಲ್ಲ. ಇಲ್ಲಿ ಆಚರಣೆ ಯಿಲ್ಲದಿರುವುದಕ್ಕೆ ಸಹಕರಿಸದೆ ವಿಚಾರಶೂನ್ಯರಾಗಿರುವುದಕ್ಕೆ ವಿಷಾದಪಡಬೇಕಾಗಿದೆ ಸಾರ್ವಜನಿಕ ಹಿತಚಿಂತನೆಯಿಂದ ಜನರಿಗೆ ಮಂದಟ್ಟಾದರೆ ತಮ್ಮ ತಮ್ಮ ಶಕ್ತಿನಿಾರ ಸಹಾಯಮಾಡಿ ಶ್ರೀ ಗುರುಕೃಪೆಗೆ ಪಾತ್ರರಾಗುವರಿದ್ದಾರೆ.

ಈ ಎಲ್ಲಾ ಕಾರಣದಿಂದ ಉದಾಸೀನತೆಯನ್ನು ಕಿರುಕೇಳವನ್ನು ನೋಡಿ ಇಡೀ ಬಿಜಾಪುರ ಬೆಳಗಾಂ ಮುಂತಾದ ಕಡೆ ಮೂರು ನಾಲ್ಕು ನೂರ ಮೈಲಿ

ಯಿಂದ ಬಂದು ಸೇವೆ ಮಾಡತಕ್ಕವರಿಗೆಲ್ಲ ನೆಮ್ಮದಿಗೆ ಭಂಗವಾಗುತ್ತೆಂದು ಯೋಚಿಸಿ ಗದುಗ, ಧಾರವಾಡ ಜಿಲ್ಲಾ, ಶಿವಮೊಗ್ಗ ಜಿಲ್ಲಾ, ಹಾಸನದ ಜಿಲ್ಲಾ ಮುಂತಾದ ಕಡೆಯುವರೆ ಸ್ವಹಸ್ತ ಪರಹಸ್ತಗಳಿಂದ ಶ್ರೀ ಕ್ಷೇತ್ರದ ನಿತ್ಯ ದಾಸೋಹಕ್ಕೆ ಅಗತ್ಯವಾಗಿ ಬೇಕಾಗಿರುವ ಧನದಾನ್ಯ ಪಾತ್ರೆಸನಾಸು ಅಡಿಗೆ ನೌಕರರು ಮುಂತಾದ ಏರ್ಪಾಡನ್ನಿಟ್ಟರುವುದನ್ನು ನೋಡಿ ಸಹಿಸಲಾರದೆ ಅಸೂಯೆಯಿಂದ ತೊಂದರೆ ಕೊಡುತ್ತಿದ್ದಾರೆ ಇದರ ಮೇಲ್ವಿಚಾರದ ಸ್ವಾತಂತ್ರವಿದ್ದಿದ್ದರೆ ಇದರ ಪ್ರಾಶಸ್ತ್ಯ ಮೂರು ಮಡಿ ಎಚ್ಚಾಗಬಹುದಾಗಿತ್ತು.

ಈ ಎಲ್ಲಾ ಕಾರಣದಿಂದಲೂ ನಾವು ನಿರಾಶ್ರಿತರಂತೆ ಅನೇಕ ಕಿರುಕುಳ ಬಂದರೂ ಅವುಗಳು ಪರಿಹಾರಕ್ಕೆ ಖರ್ಚು ಕಷ್ಟನಷ್ಟಗಳನ್ನು ಸ್ವತಃ ಅನುಭವಿಸುತ್ತಾ ಹೊಟ್ಟೆಗೆ ಆಹಾರವಿಲ್ಲದಿದ್ದರೂ ಹೊದಿಯಲಿಕ್ಕೆ ಬಟ್ಟೆಯಿಲ್ಲದಿದ್ದರೂ ನಾನಾ ವಿಧವಾದ ಲೋಕದಂಶೆ ವ್ಯಷ್ಮಾಸ್ನವಿಲ್ಲದಿದ್ದರೂ ಶ್ರೀಗುರು ಸೇವಾ ಕಾರ್ಯದಲ್ಲಿ ದಿನಕ್ಕೆ ತ್ರಿಕಾಲ ಪೂಜ-ವೀರಶೈವ ತತ್ವದ ಪ್ರಕಾರ ನಡೆಯುವುದಕ್ಕೆ ದಿನಕ್ಕೆ 10 ರೂಪಾಯಿನಮೇಲೆ ಖರ್ಚು ಬೇಕಾಗಿದೆ ನಮ್ಮ ಎಲ್ಲಾ ಕುಟುಂಬದ 140 ಜನರಿದ್ದರೂ ಯಾರನ್ನೂ ಕಾಡಿ ಬೇಡದೆ ನಿರಪೇಕ್ಷೆಯಿಂದ ಬರುತಕ್ಕ ಭಕ್ತಾದಿಗಳ ಇಂಗಿತ ಹಿತಚಿಂತನೆಯರಿತು ಪುರಾತನರು ಹಾಕಿಕೊಟ್ಟ ಹಾದಿಯಲ್ಲಿ ಸೇವೆ ಸಲ್ಲಿಸುತ್ತಾ ನಿರಾಶ್ರಿತರಂತೆ ಸಾಗುತ್ತಿದ್ದೇವೆ.

ಈ ಪರಂಪರೆಯವರು ಆದಿಯಿಂದ ತಯಾರಿಸಿ ಆಚರಿಸುತ್ತಿದ್ದ ಶಿಷ್ಯರ ಪಟ್ಟಿಯು ಮಠದಲ್ಲಿರುತ್ತೆ.

ಹೀಗೆ ಪರಂಪರೆಯಿಂದ ಅರನೂರು ವರ್ಷಗಳ ಹಿಂದಿನಿಂದಲೂ ಎಡಿಯೂರಲ್ಲಿ ವಂಶವೃಕ್ಷದಲ್ಲಿ ಕಂಡ ಮೂಲಪುರಷರಿಂದ ಸ್ಥಲದ ಆಚಾರ ಪೀಠದ ಶಾಖ ಮಠವಿದ್ದು ಆ ಮಠಕ್ಕೆ ಲೋಕಸಂಚಾರದಿಂದ ದಯಮಾಡಿಸಿದ, ನಿರಂಜನ ಗಣಾದೀಶ್ವರರಾದ ಸಿದ್ದಲಿಂಗ ಶಿವಯೋಗಿಗಳಿಗೆ ಮಠ ಕಟ್ಟಿಸಿ ಸದರಿ ಶಿವಯೋಗಿಗಳು ಈ ಮಠದಲ್ಲಿ ನಿರ್ವಿಕಲ್ಪ ಶಿವಯೋಗ ಸಮಾಧಿಸಿಸ್ತರಾದ್ದರಿಂವ ಈ ಎಡೆಯೂರು ಕ್ಷೇತ್ರವು ಅಪ್ರಾಕೃರ ವೀರಶೈವ ಸಂಪ್ರದಾಯದ ಕರ್ಮದಿಂದ ಶುದ್ದರನ್ನು ಮಾಡುವ ಆಚಾರ್ಯರು, ಜ್ಞಾನದಿಂದ ಲಿಂಗಾಂಗ ಸಾಮರಸ್ಯ ಮಾಡಿ

ಪುನೀತರನ್ನು ಮಾಡುವ ನಿರಂಜನ ಜಂಗಮರು ಉಭಯ ಶಾಖೆಯ ನಿರ್ಭೇದ ದಿಂದ ಕರ್ಮ ಮತ್ತು ಜ್ಞಾನಮಾರ್ಗದವು ಗಣ್ಯವುಗಮಸ್ಥಾನವಿದ್ದು ಸರ್ವರ ಆದರಕ್ಕೂ ಪಾತ್ರವಾದ ಪವಿತ್ರಸ್ಥಾನವಾಗಿರುತ್ತೆ.

ಶ್ರೀ ಸಿದ್ದಲಿಂಗ ಶಿವಯೋಗಿಗಳಿಂದ ಶೂನ್ಯ ಪೀಠದಿಂದ ಅಧಿಕಾರವನ್ನು ಪಡದೆ ಬೋಳಬಸವಾರ್ಯರು ತಮ್ಮ ಅಧಿಕಾರವನ್ನು ಗುಮ್ಮಳಾಪುರದ ಸಿದ್ಧವೀರ ಸ್ವಾಮಿಗಳಿಗೆ ಕೊಟ್ಟು ಮಧುಗಿರಿಯಬಳಿ ಸಿದ್ಧಾಪುರದಲ್ಲಿ ಸಮಾಧಿಸ್ತರಾದರು.

ಗುಳೂರು ಗುರುಸಿದ್ಧಾರ್ಯರು ತಮ್ಮ ವೃತ್ತರಾಧಿಕಾರವನ್ನು ವೃದ್ಧಾನಾರ್ಯ ರಿಗೆ ಕೊಟ್ಟು ಗೂಳೂರಿನಲ್ಲಿ ಸಮಾಧಿಸ್ತರಾದರು,

ಸಿದ್ಧವೀರ ಸ್ವಾಮಿಗಳು;ಗೂಳೂರು ಗುರುಸಿದ್ಧಾರ್ಯರಿಂಗೆ ತಮ್ಮ ವೃತ್ತರಾಧಿ ಕಾರ ಕೊಟ್ಟು ಗುಮ್ಮಳಾಪುರದಲ್ಲಿ ಸಮಾದಿಸ್ತರಾದರು.

ವೃದ್ಧಾನಾರ್ಯರು ಕಟಗೆಹಳ್ಳಿ ರಾಚೋಟಿ ಸ್ವಾಮಿಗಳಿಗೆ ಉತ್ತರಾಧಿ ಕಾರವನ್ನು ಕೊಟ್ಟು ಮಾಗಡಿಯಲ್ಲಿ ಸಮಾಧಿಸ್ತರಾದರು.

ಕಟಗೇಹಳ್ಳಿ ಸ್ವಾಮಿಗಳು ತಮ್ಮ ಅಧಿಕಾರವನ್ನು ನೋಡಸಿದ್ಧಲಿಂಗ ಸ್ವಾಮಿಗಳಿಗೆ ಕೊಟ್ಟು ಅವರ ಜೊತೆಯುವರಾದ ಮುರುಘಾಸ್ವಾಮಿಗಳ ಜೊತೆ ಮಾಡಿ ಡೆಲ್ಲಿಗೆ ಕಳುಹಿಸಿ ಕಿಳುವಳ್ಳಿಯಲ್ಲಿ ಸಮಾಧಿಸ್ತರಾದರೆಂತಲೂ ಅಲ್ಲಿಂದ ಮುಂದಕ್ಕೆ ಪರಂಪರೆಯಿಂದ ಬಂದಿದ್ದ ಶೂನ್ಯ ಸಿಂಹಾಸನದ ಶಿವಾನುಭವ ಪಟ್ಟಕ್ಕೆ ಮೂರು ಶಾಖೆಗಳಾಗಿ 1) ಮುರುಘಾ ಸಮಯದ ಮಠ ಚಿತ್ರದುರ್ಗ ದಲ್ಲೂ 2) ಚಿಲಾಳ ಸಮಯದ ಮಠ ದಂಬಳ ಮತ್ತು ಗದಗಿನಲ್ಲೂ 3) ಕುಮಾರ ಸಮಯದ ಮಠ ಇಸಳೂರು ಮತ್ತು ಕೆಳದೀ ಬಳಿ ಜಡೆದಲ್ಲೂ ಆದುವು ಎಂದು ನಿರಂಜನ ವಂಶಾರತ್ನಾಕರದಲ್ಲಿರುತ್ತೆ.

1. ಮುರುಘಾಸಮಯದ ಪರಂಪರೆ.

1. ಚನ್ನಬಸವಸ್ವಾಮಿಗಳು. 2. ತೋಂಟದ ಸಿದ್ಧೇಶ್ವರ ಸ್ವಾಮಿ ಗಳು. 3. ಬೋಳ ಬಸವೇಶ್ವರಸ್ವಾಮಿಗಳು, 4. ಸಿದ್ಧವೀರಸ್ವಾಮಿಗಳು, 5. ಗುಳೂರು ಗುಸುಸಿದ್ಧಸ್ವಾಮಿಗಳು. 6. ಗಗನದಾರ್ಯ ಸ್ವಾಮಿಗಳು. 7. ಕಟಗೇಹಳ್ಳಿ ಸಿದ್ಧವೀರಸ್ವಾಮಿಗಳು. 8. ಮುರುಘಾರಾಜೇಂದ್ರ ಸ್ವಾಮಿಗಳು.

9. ಇಮ್ಮಡಿ ಗುರುಸಿದ್ಧಸ್ವಾಮಿಗಳು. 10. ಸ್ವಾಧಿಚನ್ನಬಸವಸ್ವಾಮಿಗಳು 11. ಸಿರಹಟ್ಟಿ ಸಿದ್ಧಲಿಂಗಸ್ವಾಮಿಗಳು. 12 ಗುತುಪಾಪಸ್ವಾಮಿಗಳು. 13, ಮೂರುಸಾವಿರದ ಗುರುಪಾದಸ್ವಾಮಿಗಳು. 14. ಮೂರು ಸಾವಿರದ ಸಿದ್ಧಲಿಂಡಸ್ವಾಮಿಗಳು. 15. ವಪ್ಪತ್ತಿನ .ಚ ನ್ನ ವೀ ರ ಸ್ವಾ ಮಿ ಗ ಳು, 16. ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು, 17. ನಿಘಂಟಿನ ಸಿದ್ಧಬಸಟ ಸ್ವಾಮಿಗಳು. 18. ಸಣ್ಣಬರಹದ ರಾಚೋಟಿಸ್ವಾಮಿಗಳು, 19. ಸಾವಳಿ ಗುರುಶಾಂತಸ್ವಾಮಿಗಳು. 20. ಸಂಣಿಪಾದದ ಚನ್ನವೀರಸ್ವಾಮಿಗಳು. 21. ಮಹಲಿಂಗಸ್ವಾಮಿಗಳು. 22. ಹೆಬ್ಬಾಳ ರು ದ್ರ ಸ್ವಾ ಮಿ ಗಳು. 23. ಮುಪ್ಪನಸ್ವಾಮಿಗಳು. 24. ಜಯದೇವ ಸ್ವಾಮಿಗಳು. 25. ಜಯ ವಿಭವಸ್ವಾಮಿಗಳು. 26. ಮಲ್ಲಿಕಾರ್ಜುನ ಸ್ವಾಮಿಗಳು. ಹೀಗೆ ಬಳಿಪಿಡಿದು ಇಪ್ಪತ್ತಾರು ಮುರುಘಾ ಸಮಯದ ಸ್ವಾಮಿಗಳಾಗಿ ಚಿರಂತಿಗೆ ವಿಸ್ತಾರವಾಗಿದೆ ಮೂಲದಲ್ಲ ಸ್ವಲ್ಪ ಬದಲಾಲಣೆಯಿದೆ. ಚಿತ್ರದುರ್ಗದ ಪಟ್ಟದಲ್ಲರಿಯಿಂದ ಖಾತ್ರಿ ಪ್ರಭಾವವನ್ನು ನೋಡಬಹುದಾಗಿರುತ್ತೆ.

ಇನ್ನು ಚಿಲಾಳ ಸಮಯದ ಮುಂದುವರಿದ ಸ್ವಾಮಿಗಳು ನಿರಂಜನ ಜಂಗಮ ವಂಶಾವಳಿಯಿಂದ ಬಂದದ್ದು, 1. ತೋಂಟದ ಸಿದ್ಧಲಿಂಗಸ್ವಾಮಿ ಗಳು. 2, ಬೋಳಬಸವಾರ್ಯರು. 3. ಗುಳೂರ ಸಿದ್ಧವೀರಸ್ವಾಮಿಗಳು. 4. ವುದ್ಧಾನಾರ್ಯಸ್ವಾಮಿಗಳು. 5. ಹರಿಹರ ಸ್ವಾಮಿಗಳು, 6. ಬಿಕ್ಕಿಕದ ಬಸವಲಿಂಗಸ್ವಾಮಿಗಳು. 7. ಕಟಿಗೆಹಳ್ಳಿ ರಾಚೋಟಿಸ್ವಾಮಿಗಳು. 8. ಕೌದಿ ಮಹಂತಸ್ವಾಮಿಗಳು. 9. ಅರ್ಧನಾರೀಶ್ವರಸ್ವಾಮಿಗಳು. 10. ಈಸುರ ನಂ ದೀ ಶ್ವ ರ ಸ್ವಾ ಮಿ ಗ ಳು, 11. ಮಗ್ಗದ ತೋಂಟದಾರ್ಯ ಸ್ವಾಮಿಗಳು. 12. ಸದಾಶಿವಸ್ವಾಮಿಗಳು. 13. ಮಹಂತಸ್ವಾಮಿಗಳು. 14. ವೃದ್ಧ ತೋಂಟಧಾರ್ಯಸ್ವಾಮಿಗಳು. 15 ಮೃತ್ಯುಂಜಯ ಸ್ವಾಮಿಗಳು. 16. ಸಿದ್ಧೇಶ್ವರ ಸ್ವಾಮಿಗಳು. 17. ಗುರುಬಸವಸ್ವಾಮಿಗಳು. ಹೀಗೆ ಪರಂಪರೆ ಶಾಖ ಮಠಗಳು ಮುಂದುವರಿಯುತ್ತಿವೆ. ಗದುಗಿನ ನಿರಂಜನ ಜಂಗಮ ವಂಶಾವಳಿ ನೋಡಿದರೆ ಇವರೆಲ್ಲರ ಪ್ರಭಾವ ಸಮಾಧಿಸ್ಥಲ ಸಹ ತಿಳಿಯುತ್ತೆ.

ಇನ್ನು ಕುಮಾರ ಸಮಯ ಪರಂಪರೆಯು.

1' ನೋಡಸಿದ್ಧಲಿಂಗಸ್ವಾಗಳು. 2. ಕು ಮಾ ರ ಸ್ವಾ ಮಿ ಗ ಳು 3. ಸಿದ್ಧ ಬಸವಸ್ವಾಮಿಗಳು. ಹೀಗೆ ಬಳಿವಿಡಿದು [ಬೆಳಗಾಂ ಧಾರವಾಡ ಜಿಲ್ಲೆಗಳಲ್ಲಿಯೂ, ಹಾಸನ ಜಿಲ್ಲೆ ಕೋಡಿ ಮಠ ಮುಂತಾದ ಕಡೆಯಲ್ಲೂ ಅನೇಕ ಸ್ವಾಮಿಗಳಾಗಿ ಮಠಗಳಾಗಿರುತ್ತವೆ. ಇದನ್ನೆಲ್ಲಾ [ನಿರಂಜನ ವಂಶ ರತ್ನಾಕರದಲ್ಲಿ ವಿಷದವಾಗಿ ನೋಡಬಹುದು,

ಹೀಗೆ ಸಿದ್ಧಲಿಂಗ ಶಿವಯೋಗಿಗಳಿಂದ ಮುಂದುವರಿದು ವಿಸ್ತಾರವಾಗಿ ಇಂದಿಗೂ ಈ ಮೂರು ಸಂಸ್ಥಾನ ಮಠಗಳು ಮಹತ್ವದಲ್ಲಿರುವುದನ್ನು ನೋಡ ಬಹುದು ಈ ಎಲ್ಲಾ ಪರಂಪರೆಗೂ ಶ್ರೀ ನಿರಂಜನ ಪರಾಜಂಗಮರಾದ ಸಿದ್ಧ ಲಿಂಗ ಶಿವಯೋಗಿಗಳೇ ಮೂಲರಿದ್ದು ಇವಕ್ಕೆಲ್ಲಾ ಎಡಿಯೂರು ನಿರ್ವಿಕಲ್ಪ ಶಿವಯೋಗ ಸಮಾಧಿ ಗದ್ದುಗೆಯೇ ಕರ್ತೃ ಸ್ಥಾನವಾಗಿ ಆರಾಧನೆಗೆ ಯೋಗ್ಯ ಪವಿತ್ರ ಸ್ಥಾನವಾಗಿರುತ್ತೆಂದು ಹೇಳಲು ಯಾವ ಸಂದೇಹವೂ ಇಲ್ಲ.

|| ಶಿವಂ, ಭೂಯಾತ್ ||

